ಶಾಂತನಾಯಕ

ಕೊಂಯ್ಯ ಮತ್ತು ಧೋತ್ರ



ಶ್ರೀಕುವೆಂಪು ನೂರು ನಮನ

ಕೊಂಯ್ಯ ಮತ್ತು ಧೋತ್ರ

ಕಥಾಸಂಕಲನ

ಶಾಂತನಾಯ್ಕ

ಸಿವಿಜಿ ಪಬ್ಲಿಕೇಷನ್ಸ್
ಬೆಂಗಳೂರು

SRIKUVEMPU NOORU NAMANA

KȮMYA MATTU DHOTRA

A Collection of Short Stories

Written by
Shanthanaika
Lecturer
Maharaja College
Mysore

Published by
CVG Publications
No. 70, 2nd Main Road,
Jabbar Block, Vyalikaval
Bangalore-560 003
Phone : 080-23313400

Pages : xvi+88=104 First Impression : 2004
Price : Rs. **90/-**

D.T.P. by
Chandragiri Graphics
Cover Page Design: *Pundalika Kalliganur*
Bangalore
Phone: 22712299

Printed by
Shakthi Printers & Publishers,
No. 277, 5th Cross,
Vidhana Soudha Extn.,
Kavidhama Nagar, Laggere
Bangalore-560 058.
Phone: 080-22712264

ನಾಡಿನ ಪುಣ್ಯದ ಪೂರ್ವದಿಗಂತದಿ
ನವ ಅರುಣೋದಯ ಹೊಮ್ಮುತಿದೆ!
ಚಿರನೂತನ ಚೇತನದುತ್ಸಾಹದಿ
ನವೀನ ಜೀವನ ಚಿಮ್ಮುತಿದೆ!

ಕುವೆಂಪು

ಸಂಪಾದಕರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಗ್ರಹಾರ ಕೃಷ್ಣಮೂರ್ತಿ
ಡಾ. ಕೆ.ಸಿ. ಶಿವಾರೆಡ್ಡಿ
ರಾಮಲಿಂಗಪ್ಪ ಟಿ. ಬೇಗೂರು

ಸಂಚಾಲಕರು

ಸಿವಿಜಿ ಚಂದ್ರು

ಶ್ರೀ ಕುವೆಂಪು
ನೂರು ನಮನ

ಇಪ್ಪತ್ತನೆಯ ಶತಮಾನದ ಪ್ರಾರಂಭದ ದಶಕಗಳಿಂದಲೂ ಕನ್ನಡ ಶ್ರೀಸಾಮಾನ್ಯನನ್ನು ವಿಶ್ವಮಾನವ ಚೈತನ್ಯವನ್ನಾಗಿ ಪರಿವರ್ತಿಸುವ ಮಹಾಕಾಯಕದಲ್ಲಿ ತೊಡಗಿಕೊಂಡು ದೊಡ್ಡ ಕನಸು ಕಂಡವರು ಶ್ರೀಕುವೆಂಪು ಅವರು. ಅವರ ಅಂದಿನ ಆಂತರ್ಯದ ಅಭೀಪ್ಸೆ ಕೈಗೂಡದಿರಲಿಲ್ಲ. ಕನ್ನಡಿಗರು ಈ ಶತಮಾನವನ್ನು ಕುವೆಂಪು ಶತಮಾನವೆಂದೇ ಗುರುತಿಸತೊಡಗಿರುವುದು ಅದಕ್ಕೆ ಸಾಕ್ಷಿಯಾಗಿದೆ. ಅನೇಕ ಕ್ಷೇತ್ರಗಳಲ್ಲಿ ಜಾಗತಿಕ ಮಟ್ಟದಲ್ಲಿ ಕನ್ನಡದ ಚೈ ತನ್ಯ ತನ್ನ ಹೆಜ್ಜೆಗುರುತುಗಳನ್ನು ಮೂಡಿಸಿದೆಯೆಂಬ ಹೆಮ್ಮೆ ಶ್ರೀಕುವೆಂಪು ಅವರ ಚೇತನಕ್ಕೆ ಸಲ್ಲಬೇಕು. ಇಷ್ಟಾದರೂ ಇಂದು ಮಹಾಕವಿ ಶ್ರೀಕುವೆಂಪು ತಮ್ಮ ಎದೆಗೂಡಲ್ಲಿಟ್ಟು ಕಾಪಾಡಿದ ಕನ್ನಡಕ್ಕೆ ಅನೇಕ ಆತಂಕಗಳು ಎದುರಾಗಿರುವುದು ಸುಳ್ಳಲ್ಲ. ಕನ್ನಡ ಶ್ರೀಸಾಮಾನ್ಯನ ದಿನನಿತ್ಯದ ಬದುಕು ಗುಣಾತ್ಮಕವಾದ ಬದಲಾವಣೆಯನ್ನು ಕಾಣದೆ ದಿಕ್ಕೆಟ್ಟಿರುವ ಪರಿಸ್ಥಿತಿಗೆ ನಮ್ಮ ರಾಜಕಾರಣ, ಸಾಮಾಜಿಕ ವ್ಯವಸ್ಥೆ ಎಷ್ಟರಮಟ್ಟಿಗೆ ಕಾರಣವೊ ಅಷ್ಟರಮಟ್ಟಿಗೆ ಕವಿ, ಕಾದಂಬರಿಕಾರ, ಲೇಖಕರಾದ ನಾವೂ ಕಾರಣರೆಂಬುದನ್ನು ಮರೆಯಲಾಗದು. ಶ್ರೀಕುವೆಂಪು ಅವರ ಶತಮಾನೋತ್ಸವವನ್ನು ಆಚರಿಸುತ್ತಿರುವ ನಾವು ಈಗ ಹೊಸ ಸಂಕಲ್ಪವನ್ನು ಕೈಗೊಳ್ಳುವುದರ ಮೂಲಕ ಅವರು ಕಂಡಿದ್ದ ಕನಸುಗಳನ್ನು ಪೂರೈಸಬೇಕಾಗಿದೆ. ಮನಸ್ಸು ಮಾಡಿದರೆ ಅದಕ್ಕೆ ಸಿದ್ಧ ಎಂಬುದನ್ನು ಸಾಧಿಸಿ ತೋರಿಸಿರುವುದೇ ಇಲ್ಲಿ ನೂರು ಮಂದಿ ಲೇಖಕರು ಸೇರಿ ಶ್ರೀಕುವೆಂಪು ಅವರಿಗೆ ಅರ್ಪಿಸಿರುವ ಗ್ರಂಥ ಕುಸುಮಗಳು. ಎಳೆಯ ಬರಹಗಾರರಿಂದ ಮೊದಲ್ಗೊಂಡು ಹಿರಿಯ ಬರಹಗಾರರ ವರೆಗೆ ತಮ್ಮ ತಮ್ಮ ಸಾಹಿತ್ಯ ಪ್ರಕಾರಗಳಲ್ಲಿ ಪರಿಣತಿಯನ್ನು ಪಡೆದಿರುವ, ಪಡೆಯುತ್ತಿರುವ ಎಲ್ಲರೂ ಸಂತೋಷದಿಂದ ಈ ಕೆಲಸದಲ್ಲಿ ಒಂದಾಗಿದ್ದಾರೆ. ಇದೇ ಕಾಲಘಟ್ಟದ ಮತ್ತೊಬ್ಬ ಮಹಾಕವಿ ದಾರ್ಶನಿಕ ಶ್ರೀ ಬೇಂದ್ರೆಯವರ 'ನೂರು ಮರ ನೂರು ಸ್ವರ' ಎಂಬ ಮಾತು ಈ ಗ್ರಂಥಾರ್ಪಣದ ಸಂದರ್ಭದಲ್ಲಿ ನಮಗೆ

ನೆನಪಾಗುತ್ತಿದೆ. ತೀರಾ ಎಳೆಯರನ್ನು ಬಿಟ್ಟರೆ ಉಳಿದೆಲ್ಲ ಲೇಖಕರು ಮಹಾಕವಿ ಕುವೆಂಪು ಅವರ ಕಾಲಘಟ್ಟದಲ್ಲೇ ಈ ನಾಡಿನಲ್ಲಿ ಬದುಕುತ್ತ ಅವರು ಉಸಿರಾಡಿದ ಗಾಳಿಯನ್ನು ಇವರೂ ಉಸಿರಾಡಿದ್ದಾರೆ. ಅವರ ಚೈತನ್ಯದಾಯಕ ಉತ್ಸಾಹ, ಶಕ್ತಿ, ಸಂಕಲ್ಪಗುಣ ಎಲ್ಲವೂ ನಮ್ಮಲ್ಲಿ ವೃದ್ಧಿಸಿ ಕನ್ನಡಬದುಕನ್ನು ಶ್ರೀಮಂತಗೊಳಿಸುವ ಕೆಲಸದಲ್ಲಿ ತೊಡಗಿಕೊಳ್ಳುವುದಕ್ಕೆ ಪ್ರೇರಕವಾಗಲಿ ಎಂಬುದು ಈ ಸಾಹಸದ ಹಿಂದಿರುವ ಸದಾಶಯ.

ಕನ್ನಡ ಪ್ರಕಟಣಾ ಪ್ರಪಂಚದಲ್ಲಿ ಇದೊಂದು ಮಹಾ ಸಾಹಸ. ಸರ್ಕಾರಿ ಸಂಸ್ಥೆಗಳು, ಸರ್ಕಾರ ಇಂಥ ಸಾಹಸಗಳನ್ನು ಮಾಡಿವೆಯಾದರೂ, ಒಂದು ಖಾಸಗಿ ಪ್ರಕಟಣಾ ಸಂಸ್ಥೆ ಏಕಕಾಲಕ್ಕೆ ನೂರು ಲೇಖಕರ ನೂರು ಪುಸ್ತಕಗಳನ್ನು ಪ್ರಕಟಿಸಿ ಬಿಡುಗಡೆ ಮಾಡುತ್ತಿರುವುದನ್ನು ಮಹಾಸಾಹಸವೆನ್ನದೆ ಮತ್ತೇನೆನ್ನಬೇಕು? ಸಿವಿಜಿ ಪಬ್ಲಿಕೇಷನ್ಸ್ ಇಂಥ ಸಾಹಸವನ್ನು ಕನ್ನಡದ ಮೇರು ಲೇಖಕರಾದ ಶ್ರೀಕುವೆಂಪು ಅವರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಕೈಗೊಂಡಿದೆ. ಶ್ರೀಕುವೆಂಪು ಅವರಿಗೆ ಕನ್ನಡದ ನೂರು ಮಂದಿ ಲೇಖಕರು ತಮ್ಮ ಗ್ರಂಥಗಳ ಮೂಲಕ ಇಲ್ಲಿ ನಮನ ಸಲ್ಲಿಸಿದ್ದಾರೆ. ಸಿವಿಜಿ ಪಬ್ಲಿಕೇಷನ್ಸ್ ಇಂಥ ವಿಶಿಷ್ಟ ಪ್ರಯೋಗದ ಮೂಲಕ ಮೇರು ಕವಿಯೊಬ್ಬನಿಗೆ ತನ್ನ ಸಮುದಾಯ ಸಲ್ಲಿಸುತ್ತಿರುವ ಗೌರವ ಕಾರ್ಯಕ್ಕೆ ಕೈಜೋಡಿಸುವ ಮೂಲಕ ತಮ್ಮ ಪ್ರಕಾಶನ ಸಂಸ್ಥೆಯ ಅಸ್ತಿತ್ವವನ್ನು ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ಅರ್ಥಪೂರ್ಣಗೊಳಿಸಿಕೊಳ್ಳುತ್ತಿದೆ. ಪ್ರಕಾಶಕ ಮಿತ್ರರಾದ ಶ್ರೀ ಸಿವಿಜಿ ಚಂದ್ರು, ಅವರ ಮಡದಿ ಶ್ರೀಮತಿ ಗಿರಿಜಾ ಚಂದ್ರು ಅವರಿಗೆ ನಾವು ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಶಾಂತನಾಯ್ಕ ಶಿರಗಾನಹಳ್ಳಿ ಕತೆ ಮತ್ತು ನಾಟಕಗಳ ರಚನೆಯಲ್ಲಿ ಸಿದ್ಧಹಸ್ತರಾಗುತ್ತಿದ್ದಾರೆ. ಅವರು ನಗರ ಕೇಂದ್ರಿತ ಬದುಕನ್ನು ಬದಿಗಿಟ್ಟು ಇದುವರೆಗೂ ಜನಸಮುದಾಯಕ್ಕೆ ಸಿಕ್ಕದ ಸಣ್ಣಪುಟ್ಟ ಸಮುದಾಯಗಳ ಬದುಕನ್ನು ಅನಾವರಣ ಮಾಡುವ ದಿಕ್ಕಿನಲ್ಲಿ ತೊಡಗಿದ್ದಾರೆ. ಇಲ್ಲಿರುವ ಕತೆಗಳು ಲಂಬಾಣಿ ಜನಾಂಗದ ವಿವಿಧ ಜೀವನಕ್ರಮಗಳನ್ನು ಬದುಕಿನ ನಂಬಿಕೆಗಳನ್ನು ಆಧುನಿಕ ಸಮಾಜಕ್ಕೆ ಹೊರಳುತ್ತಿರುವ ಬಗೆಗಳನ್ನು ಚಿತ್ರಿಸುತ್ತವೆ. ಈ ಕತೆಗಳ ಅನಾವರಣದಲ್ಲಿ ಕತೆಗಾರ ಶಾಂತನಾಯ್ಕ ಜೀವನ ಪ್ರೀತಿಯ ಸಫಲತೆಯನ್ನೂ ಅದರ ವಿಫಲತೆಯನ್ನೂ ಚಿತ್ರಿಸುತ್ತಿದ್ದಾರೆ. ಈ ಜನಾಂಗದ ಪುಟ್ಟ ಪ್ರಪಂಚದ ವಿಸ್ಮಯಗಳನ್ನು ಕತೆಗಳ ಮೂಲಕ ನಿರೂಪಿಸುತ್ತ ತಾನೊಬ್ಬ ಸೂಕ್ಷ್ಮ ಕಥಾನಿರೂಪಕನೆಂಬುದನ್ನು ಸ್ಥಿರಗೊಳಿಸುತ್ತಿದ್ದಾರೆ. ನಾವೆಲ್ಲ ಕುತೂಹಲ ಹಾಗೂ ವಿಸ್ಮಯದ ಕಣ್ಣುಗಳಿಂದ ಓದಬಹುದಾದ ಕತೆಗಳನ್ನು ಈ ಕತೆಗಾರ 'ಶ್ರೀ ಕುವೆಂಪು ನೂರು ನಮನ' ಮಾಲಿಕೆಗಾಗಿ ನೀಡಿದ್ದಾರೆ. ಕತೆಗಾರರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಸಂಪಾದಕರು

ಅರ್ಪಣೆ

ಭಾವಜೀವಿ

ಮಾನ್ಕೇರಿ ಎಂ.ಕೆ.ನಾಯ್ಕ

ಅವರಿಗೆ

ನಿಮ್ಮೊಂದಿಗೆರಡು ಮಾತು

ಎಲ್ಲೊ ಒಂದೆಡೆ ಕೇಂದ್ರೀಕೃತವಾಗಿದ್ದ ನೋವು ಅಕ್ಷರಗಳಾಗಿ ಹರ್‍ಕೊಂಡ್ ಬಂದು ಕತೆಗಳಾಗಿವೆ. ನನ್ನ ಸುತ್ತಲ ಪರಿಸರದಲ್ಲಿ ಕಂಡುಂಡ ಬದುಕಿನ ತುಣುಕುಗಳು ತಾಕತಾಳಿ ಎಂಬಂತೆ ಸಮೀಕರಣಗೊಂಡಿರುವುದರಲ್ಲಿ ಆಶ್ಚರ್ಯವೇನಿಲ್ಲಾ. ಹಾಗಂತ ಕತೆಗಳು ಒಬ್ಬ ವ್ಯಕ್ತಿ, ಸ್ಥಿತಿ, ಪಾಡು, ಕುರಿತು ಬರದಂತಹವಲ್ಲಾ, ಹಾಗೇನಾದರು Co-insidence ಆಗಿದ್ದರೆ ಅವು ನನ್ನ ಕಾಡಿದ ನೆನಪುಗಳೇ ವಿನಃ ವೈಯಕ್ತಿಕವಾಗಿ ಯಾರ ಬದುಕನ್ನು ಕುರಿತು ಬರೆದಂತಹವಲ್ಲಾ. ನಮ್ಮ ನಡುವಿನ ನಂಬಿಕೆಗಳು ಎಷ್ಟೋ ಸಂದರ್ಭಗಳಲ್ಲಿ ಮತ್ತೊಬ್ಬರ ಬದುಕಿಗೆ ಮುಳುವಾಗುತ್ತವೆ. ಬಡತನ ಅಮಾಯಕರನ್ನು ಯಾವ ಹಂತಕ್ಕೆ ಕೊಂಡೊಯ್ಯುತ್ತದೆ ಎಂಬುದು ನನ್ನನ್ನ ಬಹಳವಾಗಿ ಕಾಡಿತ್ತು. ಅದರಿಂದ ಬಿಡುಗಡೆಯನ್ನು ಪಡೆಯಲು ನನ್ನ ಪರಿಸರದೊಳಗೆ ಸಂಭವಿಸಿರಬಹುದಾದ ಘಟನೆಗಳ ಆಳಕ್ಕೆ ಹೋಗಿ ಅವುಗಳಿಂದ ಬಿಡುಗಡೆ ಪಡೆಯಲು ಕತೆಗಳನ್ನ ಬರೆದಿದ್ದೇನೆ. ಇವು ನಿಮ್ಮನ್ನ ಕಾಡಿದರೆ ಬರೆದದ್ದು ಸಾರ್ಥಕವಾದೀತು.

ಬಹುತೇಕ ಪ್ರಕಟಿತ ಕತೆಗಳು, ಪ್ರಕಟಗೊಳ್ಳುತ್ತಿವೆ. ಸಂಯುಕ್ತ ಕರ್ನಾಟಕ, ಕನ್ನಡಮ್ಮ, ಹೊಸತು, ತರಂಗ, ಉತ್ಥಾನ, ಮುಂಬೈನ ಅಕ್ಷಯಮಾಸಪತ್ರಿಕೆ, ಹೀಗೆ ಹಲವು ಕಡೆ ಪ್ರಕಟಣೆ ಸಹಕಾರ ನೀಡಿದ ಸಂಪಾದಕರುಗಳಿಗೆ, ೧೦೦ ಪುಸ್ತಕ ಪ್ರಕಟಿಸುತ್ತಿರುವ ಸಿವಿಜಿ ಪಬ್ಲಿಕೇಷನ್ನಿನ ಗೆಳೆಯ ಚಂದ್ರು ಅವರಿಗೆ, ಪ್ರೊ. ಸಿ. ನಾಗಣ್ಣ, ಡಾ.ಜಿ.ಆರ್. ತಿಪ್ಪೇಸ್ವಾಮಿ, ಶ್ರೀ ಜಿ.ಕೆ. ರವೀಂದ್ರಕುಮಾರ್ ಮತ್ತಿತರರಿಗೆ ಹುತ್ಪೂರ್ವಕ ಧನ್ಯವಾದಗಳು.

ಪುಟ್ಟಪ್ರಪಂಚದೊಳಗಿನ ವಿಸ್ಮಯಗಳ ಬೆನ್ನು ಹತ್ತಿ

ಕಥೆಗಾರರಾಗಿ, ಕವಿಯಾಗಿ, ನಾಟಕಕಾರರಾಗಿ, ಶಾಂತನಾಯ್ಕ ಶಿರಗಾನಹಳ್ಳಿ ಈಗಾಲೇ ಓದುಗ ವರ್ಗಕ್ಕೆ ಚಿರಪರಿಚಿತರಾಗಿದ್ದಾರೆ. ಮುಖ್ಯವಾಹಿನಿಯ ಬದುಕನ್ನು ಬದಿಗಿಟ್ಟು ಇದುವರೆಗೆ ಒಟ್ಟು ಜನಸಮುದಾಯಕ್ಕೆ ಸಿಲುಕಿರದ ಜೀವನ ಕ್ರಮವನ್ನು ಅನಾವರಣ ಮಾಡುವ ಕಾಯಕದಲ್ಲಿ ಶಾಂತನಾಯ್ಕ ತೊಡಗಿದ್ದಾರೆ. ಹಾಗಾಗಿ, ತಮ್ಮ ಶೋಧಕ್ಕೆ ಸೂಕ್ಷ್ಮ ದೃಷ್ಟಿಯ ಒತ್ತಾಸೆಯನ್ನು ಪಡೆದುಕೊಳ್ಳುತ್ತಾ, ಪ್ರದೇಶ ಭಾಷೆಯ ಕುಸುರಿಯನ್ನು ನೆಚ್ಚಿ ಮುಂದುವರಿಯುತ್ತಿದ್ದಾರೆ. ಮೂಲತಃ ಇವರು ನಾಟಕಕಾರರಾಗಿರುವುದರಿಂದ ಸಹಜವಾಗಿಯೇ ಕಥೆಗಳಲ್ಲೂ ನಾಟಕೀಯ ಸನ್ನಿವೇಶಗಳನ್ನು ಸೃಷ್ಟಿಸಿಕೊಂಡು ಸುಲಲಿತವಾಗಿ ಹರಿಯುವ ಸಂಭಾಷಣೆಗಳ ಮೂಲಕ ಕಥೆಗಳನ್ನು ಮುಂದು ಮುಂದಕ್ಕೆ ದಾಟಿಸುತ್ತಾರೆ.

ಪ್ರಸ್ತುತ ಸಂಕಲನದಲ್ಲಿ ಹತ್ತು ಕಥೆಗಳಿದ್ದು- ಇದರಲ್ಲಿ 'ಮಂಚವೆಂಬ ಮಾಯಾಕನ್ನಡಿ', 'ಕೊಂಯ್ಯ ಮತ್ತು ಧೋತ್ರ', 'ಬೂದುಗನ ಪ್ಲಾಸ್ಟಿಕ್ ಬೂಟುಗಳು', 'ಕೊನೆಯ ಸಾಕ್ಷಿ', 'ಜೋಗ್ಯಾ ಮತ್ತು ಬೆದರು', 'ಶರೀರ ಗೂಡು ಹೋಗದ ಮುನ್ನ'ಪ್ರಮುಖ ಕಥೆಗಳಾಗಿವೆ.

'ಮಂಚವೆಂಬ ಮಾಯಾ ಕನ್ನಡಿಯಲ್ಲಿ' ಪೀಕ್ಲಿ ಕಥಾನಾಯಕಿ. ಮಂಜಾಪುರವೆಂಬ ಗ್ರಾಮದಲ್ಲಿ ತಾನು ಹೊಂದಿರುವ ಅತಿ ವಿಶಿಷ್ಟವಾದ ಮಂಚದ ಕಾರಣದಿಂದ ಪ್ರಸಿದ್ಧಳದವಳು. ಎಲ್ಲರೂ ಆ ಮಂಚಕ್ಕಾಗಿ ಹಾತೊರೆಯುತ್ತಾರೆ. ಮಂಚದ ಮಹಿಮೆಯೋ ಏನೋ ಅವಳು ಗಂಡನಾದ ಜೋಕನಾಯ್ಕನಿಂದ ದೂರವಾಗಿ ಲಂಗೂರ್‌ಸಾಬನನ್ನು ಪ್ರೀತಿಸಿ ಅವನಿಂದ ಮೂರು ಮಂದಿ ಹೆಣ್ಣು ಮಕ್ಕಳನ್ನು ಪಡೆಯುತ್ತಾಳೆ. ಆ ಹೆಣ್ಣು ಮಕ್ಕಳಿಗೆ ಮದುವೆ ಮಾಡುವ ಕಾಲಕ್ಕೆ ಅವಳ ಮಂಚ ಸುಸ್ಥಿತಿಯಲ್ಲಿರುವುದಿಲ್ಲ. ತನ್ನ ಕೊನೆಯ ಮಗಳು ನಿಮ್ಮಿಯನ್ನು ಗೌಡನ ಸಹವಾಸಕ್ಕೆ ಒಗ್ಗಿಸಿ ತನ್ಮೂಲಕ ಮಂಚವನ್ನು ದುರಸ್ತಿ ಮಾಡಿಸಿಕೊಳ್ಳಬೇಕೆಂಬ ಹವಣಿಕೆ ಅವಳದು. ಆದರೆ ಅವಳ ಆಸೆ ನೆರವೇರುವುದಿಲ್ಲ. ಮಂಚದಿಂದ ಮತ್ತೆ ಸಕಲ ಸುಖಗಳನ್ನೂ ಅನುಭವಿಸುತ್ತೇನೆ ಎಂಬ ಕನವರಿಕೆಯಲ್ಲಿ ಅವಳು ಇರುವಲ್ಲಿಗೆ ಕಥೆ ಮುಕ್ತಾಯವಾಗುತ್ತದೆ. ಒಂದರ್ಥದಲ್ಲಿ ಶಾಂತನಾಯ್ಕ ಈ ಕಥೆಯಲ್ಲಿ ಮಾಂತ್ರಿಕ ವಾಸ್ತವತೆಯನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿರುವ ಸೂಚನೆಗಳು ಕಂಡು ಬರುತ್ತವೆ. ಹಾಗೆ ನೋಡಿದರೆ 'ಮಂಚ' ಕನ್ನಡ ಸಾಹಿತ್ಯಸಂದರ್ಭದಲ್ಲಿ ದೇವನೂರು ಮಹಾದೇವರ 'ಕುಸುಮಬಾಲೆ' ಕಾದಂಬರಿಯಲ್ಲಿ ಶಕ್ತಿಯುತ ರೂಪಕವಾಗಿ ಹಲವು ಭೂಮಿಕೆಗಳನ್ನು ನಿಭಾಯಿಸಿದೆ. ಆದರೆ ಈ ತರಹದ

ವ್ಯಾಪ್ತಿಯನ್ನು ಇಲ್ಲಿ ಮಂಚಕ್ಕೆ ಕೊಡಲು ನಾಯ್ಕರು ಪ್ರಯತ್ನಿಸಿಲ್ಲವಾದರೂ ಹೊಸ ಆಯಾಮವನ್ನು ಹುಡುಕುವ ಪ್ರಯತ್ನವನ್ನಂತೂ ಮಾಡಿದ್ದಾರೆ.

'ಕೊಂಯ್ಯ ಮತ್ತು ಧೋತ್ರ' ದಲಿತ ಜೀವನವನ್ನು ಹತ್ತಿರದಿಂದ ಕಾಣಲು ಪ್ರಯತ್ನಿಸುವ ಕಥೆ. ಕೊಂಯನೇ ಕಥೆಯ ನಾಯಕ. ಈತ ಬಡವ ಮತ್ತು ದಲಿತರವ. ದಲಿತರಲ್ಲೇ ಉಚ್ಚ-ನೀಚವೆಂಬ ತಾರತಮ್ಯ ಇರುವುದರಿಂದ ಕಡೆಗೆ ಕಥೆಗಾರರು ಇಲ್ಲಿ ನಮ್ಮ ಗಮನ ಸೆಳೆದಿದ್ದಾರೆ. ಯಂಕಪ್ಪ ಪರಿಶಿಷ್ಟ ಪಂಗಡಕ್ಕೆ ಸೇರಿದ ವ್ಯಕ್ತಿ. ದೃಷ್ಟಿ ಧೋರಣೆಯಲ್ಲಿ ಸ್ವಲ್ಪ ಸುಧಾರಿಸಿದವ. ಅಗಸರ ಜಾತಿಗೆ ಸೇರಿದ ದೋಂಡಿಯದೊಂದು ನಂಬಿಕೆ, ಸತ್ತವರ ಮನೆಯ ಸೀರೆ ಅಥವಾ ಧೋತ್ರವನ್ನು ಅಗಸರು ಉಟ್ಟರೆ ಸತ್ತವರ ಆತ್ಮ ಸ್ವರ್ಗಕ್ಕೆ ಸೇರುವುದಾಗಿ ಅವಳ ತರ್ಕ. ಯಂಕಪ್ಪನ ಅಜ್ಜ ಸತ್ತಿರುತ್ತಾನೆ; ಆದರೆ ದೋಂಡಿಯ ವಾದವನ್ನು ಅವನು ಒಪ್ಪುವುದಿಲ್ಲ; ಸ್ವರ್ಗ-ನರಕವೆಂಬುದು ಕಪೋಲಕಲ್ಪಿತ ಎಂದು ಹೆಗಳೆಯುತ್ತಾನೆ. ಈ ನಡುವೆ ಅವನ ಮನೆಯ ಧೋತ್ರ ನಾಪತ್ತೆಯಾಗಿರುತ್ತದೆ. ಆ ಧೋತ್ರಕ್ಕಾಗಿ ದೋಂಡಿ ಪೀಡಿಸುತ್ತಾಳೆ. ಆದರೆ ಅದು ಯಾರಿಗೂ ಸಿಕ್ಕಲೊಲ್ಲದು. ಕೊಂಯ್ಯ ಅದೇ ಧೋತ್ರ ಉಟ್ಟುಕೊಂಡು ಊಟಕ್ಕೆ ಬರುತ್ತಾನೆ. ಯಂಕಪ್ಪನ ಮಾವ ಕೊಂಯನ ಉದ್ಧಟತನ ಮತ್ತು ಕಳ್ಳತನಕ್ಕಾಗಿ ಅವನ ಮೈಮೇಲೆ ಕೈ ಮಾಡುತ್ತಾನೆ. ಕೊಂಯ ಉಟ್ಟುಕೊಂಡಿರುವ ಧೋತ್ರವನ್ನು ತೆಗೆದುಕೊಂಡು ಹೋಗಿ ಸುಡುಗಾಡಿನಲ್ಲಿ ಸುಟ್ಟರೆ ಮಾತ್ರ ಕ್ಷೇಮವೆಂದು ದೋಂಡಿ ಸಾರುತ್ತಾಳೆ. ಆ ಪ್ರಕಾರ ಕೊಂಯ್ಯನನ್ನು ವಿವಸ್ತ್ರವನ್ನಾಗಿಸುವ ಪ್ರಸಂಗದಿಂದ ನಾನಾ ತರಹದ ಜಗಳ ಮತ್ತು ವೈಷಮ್ಯಕ್ಕೆ ನಾಂದಿಯಾಗಿ ದಲಿತರೊಳಗೇ ತಾರತಮ್ಯದ ಲೆಕ್ಕಾಚಾರ ಹೇಗೆ ಆಗುತ್ತದೆ ಎಂಬ ನಿಜದ ಸುತ್ತ ಕಥೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ.

'ಜೋಗ್ಯಾ ಮತ್ತು ಬೆದರು' ಕಥೆಯಲ್ಲಿ ಜಡೆ ಕೂದಲಿನ ಜೋಗ್ಯಾ ಗೌಡರ ಹೊಸಮನೆ ಮಹಡಿಯ ಮೇಲೆ ಸ್ಥಾಪಿಸಲ್ಪಟ್ಟ ಬೆದರುಗೊಂಬೆಯ ದಿರಿಸು ನೋಡಿ ಆಸೆ ಪಟ್ಟು ಆಸೆಯನ್ನು ಹತ್ತಿಕ್ಕಲಾರದೆ ಮಹಡಿ ಏರಿ ಬೆದರುಗೊಂಬೆಯ ಅಂಗಿಯನ್ನು ತೆಗೆದುಕೊಳ್ಳುವ ಪ್ರಸಂಗದಲ್ಲಿ ಜೋಗ್ಯನನ್ನ ಗೌಡ ಚೆನ್ನಾಗಿ ಥಳಿಸಿ ಅವನ ಜಡೆಮಂಡೆಯನ್ನು ಬೋಳಿಸಿ ಹಾಕಿಸುತ್ತಾನೆ. ಜಡೆ ಮಂಡೆಯನ್ನು ಬೋಳಿಸುವ ಕ್ರಿಯೆಯನ್ನು ಅವರಾರೂ ಕಂಡು ಕೇಳರಿಯರು, ಈ ಘಟನೆಯಿಂದ ಉಳಿದವರು ತತ್ತರಿಸಿಹೋಗುವಾಗ ಅದುವರೆಗೆ ಸ್ನಾನವನ್ನೇ ಕಾಣದ ಘಾಸಿಗೊಂಡಿದ್ದ ಜೋಗ್ಯಾ ಹೇನು, ಸೀರುಗಳಿಂದ ಮುಕ್ತನಾಗಿ ಹಗರವಾಗುತ್ತಾನಲ್ಲದೆ ಅವನ ಹೊಸ ಸ್ಥಿತಿ ಅವನಿಗೆ ಲವಲವಿಕೆಯನ್ನು ತರುತ್ತದೆ. ಜೋಗ್ಯನ ಲಾಗಾಯ್ತಿನ ಜಡೆ ಮಂಡೆಯನ್ನು ಬೋಳಿಸುವುದರ ಮೂಲಕ ಲೇಖಕರು ಹೊಸ ಸಾಧ್ಯತೆಳ ಕಡೆ ಗಮನ ಸೆಳೆಯುತ್ತಾರೆ. 'ಶರೀರ ಗೂಡು ಹೋಗದ ಮುನ್ನ' ಏಡ್ಸ್ ರೋಗದ ಬಗ್ಗೆ ಧ್ಯಾನಿಸಿ ಬರೆದ ಕಥೆಯಾದರೆ, 'ಕೊನೆಯ ಸಾಕ್ಷಿ'ಯಲ್ಲಿ ಘಟಿಸುವ ಒಂದು ಅವಘಡವನ್ನೇ ಕೇಂದ್ರದಲ್ಲಿಟ್ಟುಕೊಂಡು ಹಲವು ಕೋನಗಳಿಂದ ಸನ್ನಿವೇಶವನ್ನು ಕಥೆಗಾರರು ವೀಕ್ಷಿಸಿದ್ದಾರೆ.

ಒಂದು ಹುಲ್ಲುಕಡ್ಡಿಯಾಗಲಿ, ಒಂದು ಮರಳಿನ ಕಣವಾಗಲಿ, ಒಂದು ಸೂರ್ಯನ ಕಿರಣವೇ ಆಗಲಿ ಶಾಂತನಾಯ್ಕ ಅವುಗಳ ಸುತ್ತ ಕಥೆ ಹೆಣೆದು ಸೈ ಎನ್ನಿಸಿಕೊಳ್ಳಬಲ್ಲ ಪರಿಣತಿಯನ್ನು ಸಧಿಸಿದ್ದಾರೆ. 'ನಿಮಗೆ ತಿಳಿಯದ ಲೋಕವೊಂದನ್ನು ಕಾಣಿಸುತ್ತೇನೆ, ಬನ್ನಿ' ಎಂದು ಓದುಗರಿಗೆ ಆಹ್ವಾನ ನೀಡಿ ಅವರನ್ನು ಕೈ ಹಿಡಿದು ಕರೆದುಕೊಂಡು ಹೋಗಿ ಆ ಅಪರಿಚಿತ ಪ್ರಪಂಚವನ್ನು ತೋರಿಸುತ್ತಾರೆ; ಓದುಗರಿಗೆ ನಿರಾಶೆಯಾಗುವುದಿಲ್ಲ. ಇವರ ಕಲ್ಪನೆ ನಮ್ಮಗುಣಗಳಿಂದ ಕೂಡಿದ್ದು ಇವರು ಬಾಗಿಸಿದ ಹಾಗೆ ಬಾಗುತ್ತದೆ. ಗೆರೆ ಹಾಕಿದಂತೆ ಆದಿ, ಮಧ್ಯ ಮತ್ತು ಅಂತ್ಯದ ಬಗ್ಗೆ ಚಿಂತಿಸಿ ಬರೆಯುವವರ ಮಾರ್ಗವನ್ನನುಸರಿಸದೆ ಶಾಂತನಾಯ್ಕರು ಬಿಟ್ಟ ಬಾಣದ ತರಹ ಬರೆಯುತ್ತಿದ್ದಾರೆ. ಅನೂಹ್ಯವಾದದ್ದರ ಆಧಾರದಿಂದಲೇ ವಿನ್ಯಾಸಗಳನ್ನು ಪಡೆಯುವ ಇವರ ಕುಶಲತೆ ಈ ತಲೆಮಾರಿನ ಪ್ರಮುಖ ಕಥೆಗಾರರ ಸಾಲಿನಲ್ಲಿ ಇವರನ್ನು ನಿಲ್ಲಿಸಿದೆ ಎಂದರೆ ಉತ್ಪ್ರೇಕ್ಷೆಯಾಗದು. ಇವರಿಗೆ ಎಲ್ಲ ಶುಭಗಳನ್ನು ಕೋರುತ್ತೇನೆ.

-ಪ್ರೊ. ಸಿ. ನಾಗಣ್ಣ

ಪರಿವಿಡಿ

ಮಂಚವೆಂಬೊ ಮಾಯಾಕನ್ನಡಿ

ಮೂಲಿಯೊಳಗ ಮುರದು ಬಿದ್ದಿದ್ದ ಮಂಚ ಪೀಕಿಲಿ ಮನಸ ಕೆಡಿಸಿತ್ತು. ಒಂದ ಘಳಗಿ ಬಿಟ್ಟ ಬಿಡದಂಗ ಅದನ್ನೆ ದಿಟ್ಟಿಸಿದ್ಲು ಮನಸಿಗ ಸಮಾಧಾನ ಆಗದೆ ಎದ್ದ ಹೊರಗ ಬಂದು ಬೇನಮರದ ಕೆಳಗ ಗಾಳಿಗ ಕುಂತ್ಲು. ಸೊಂಟದಾಗ ಸಿಗಸಿದ್ದ ನಸಿಪುಡಿ ಡಬ್ಬಿ ತಗದು ಎಡಗೈಯಾಗ ಒಂದ ಚುಟುಕಿ ತಗೊಂಡು ತುಟಿ ಅಗಲಿಸಿ ಎಡಕೊಮ್ಮೆ ಬಲಕೊಮ್ಮೆ ತಿಕ್ಕಿ ದವಡೆ ಮೇಲಿದಿದ್ದನ್ನ 'ಫು' ಅಂತ ಊದಿ ಕತ್ಲಾಗಿದ್ಕ ಅಡ್ಡಾದ್ಲು. ಹಾಳ ಮನಸು ತಡಿಲಾರದೆ ತನ್ನ ಹರೆಯದ ದಿನಕ್ಕೆ ಎಳ್ಕೊಂಡ ಹೋತು. ಹನ್ನೆಲ್ಡ ಅನೋದ್ರಾಗ ಮೈನೆರತು ಮಂದಿ ಕಣ್ಣಿಗ ಹಬ್ಬವಾಗಿ ನಿಂತ ಪೀಕ್ಲಿ ಉದ್ದಕ್ಕ ಕೆಂಪ ಕೆಂಪಗ ಒಳ್ಳೆ ರಸಪೂರು ಮಾನಹಣ್ಣಿನಂಗ ತುಂಬಿಕೊಂಡ್ಲು, ಹತ್ತ ಹನೆಲ್ಡ ಮಕ್ಕಳು, ಧೋ ಅಂತ ಸುರಿಯೋ ಮುಂಗಾರು- ಹಿಂಗಾರು ಇರೋ ಐದ ಎಕರಿ ಅಡವಿ ಹೊಲದಾಗ ಬರಿ ಜೇಕು, ಕೋಲಾಣೆ ಬಿಟ್ಟ ಏನೇನು ಬೇಳಿತಾನೆ ಇರ್ಲಿಲ್ಲಾ ಊರೂರು ತಿರಗಿ ಕೂಲಿ ಮಾಡೊ ಕೊಂಡಾನಾಯ್ಕ ಮತ್ತ ಅವನ ಹೇಣ್ತಿ ಜಿಂಪಿಗ ಮಗಳು ಪೀಕ್ಲಿ ಮದವಿ ಸವಾಲಾಗಿತ್ತು. ಇನ್ನೂ ಒಂದವರ್ಷ ಮನಿಯಾಗ ಉಳದಾಳಂದ್ರ ಊರಾನ ಮಂದಿ ಬಾಯಿಗ ಬಂದಂಗ ಆಡಿಕೊಳ್ತಾರ ಅಂತ ಇಡಿ ರಾತ್ರಿ ಯೋಚ್ನೆ ಮಾಡ್ತಿದ್ರು. ಜಿಂಪಿಗ ಇದ್ದಕಿದ್ದಂಗೆ ಅಕಿ ಅಣ್ಣಾನ ಮಗ ಜೋಕನಾಯ್ಕನ ನೆನಪಾತು, ತರಾತುರಿಯಲ್ಲೇ ಮಂಗಾಪುರತಾಂಡದಿಂದ ಐದೂವರಿ ಮೈಲಿ ದೂರದ ಗಣುನಾಯ್ಕನ ಹಟ್ಟೀಯ ಹಕಮಪೂಜಾರಿ ಮನಿಗ ಪ್ರಯಾಣ ಬೆಳೆಸಿಯೇ ಬಿಟ್ಲು. ಬಹಳದಿನಕ್ಕ ತಂಗಿ ಮನಿಗ ಬಂದ ಖುಷಿಯೊಳಗ ಹಕಮಪುಜಾರಿ ಮನಿಯಾಗಿದ್ದ ಒಂದ ಹ್ಯಾಟಿ ಕೋಯ್ಯಿಸಿ ನಾಕ ಬಾಟ್ಲು ಹೆಂಡ ತಂದ. ಮಾಸದ ಊಟದ ನಡುವೆ ಜಿಂಪಿ "ಯಣ್ಣಾ, ನಂದೊಂದ ಮಾತಿತ್ತು ಅದಕ್ಕ ಬಂದೀನಿ" ಅಂದ್ಲು. ಹಕಮಪೂಜಾರಿಗ ಹೆಂಡ ತಲಗೇರಿತ್ತು "ತಾಯಿ ನೀ ಏನ ಅಂಜಾಕ ಹೋಗಬ್ಯಾಡ ಇಸಯಾ ಹೇಳು, ಇರಾಕಿ ನೀ ಒಬ್ಬಾಕಿನ" ಅಂದು ರೋಗ ಬಂದ ಕೋಳಿ ಚಂಡ ಕೆಡವೊಹಂಗ ಚೆಂಡ ಕೆಡವಿ ಘೋರಕಿ ಹೊಡೆಯ ತೊಡಗಿದ. ಅವಸ ಕೇಕಾಗ ಹತ್ತಿರಬೇಕು ಅಂದಾಕಿನ, ಮದವಿ ವಿಷಯ ತಗದ್ಲು, ಜಿಂಪಿ ಅತ್ತಿಗಿ ಚಿಂಕಿ ಬಾಯಿ, ತನ್ನ ಎಡವಟ್ಟ ಮಗ ಜೋಕನಾಯ್ಕಗ ಅಂತ ಚಂದುಳ್ಳ ಚಲವಿ ಹೆಣ್ಣು ಸಿಕ್ಕಾಳಂತ ಕನಸನಾಗು ಅಂದ್ಕೊಂಡಿರಲಿಲ್ಲಾ. "ಯಕ್ಕ ಮುಂಜಾನಿ ಮಾತಾಡಮು, ಈಗ ಅರ್ಜೆಂಟೇನಿಲ್ಲ ಮಕ್ಕೊನಡಿ" ಅಂತ ಕೈ ತೊಳಸಿ ಅಂಗಳದಾಗ ಹಾಸಿದ್ದ ಗೋಣಿ ತಟ್ಟಿನ ಮ್ಯಾಲ ಮಲಗಿಸಿ ದಬಟಹೊದಿಸಿ ಬಂದು ಅದೇ ಖುಷಿಯಾಗ ಉಳದಿದ್ದ ಕಾಲು ತಲಿನೆಲ್ಲಾ ಸುರ್ಕೊಂಡು ತನ್ನ ಸೊಸಿಕನಸಕಾಣ್ತಾ ಉಣ್ಣ ತೊಡಗಿದಳು. "ಯವ್ವ ಮುದ್ದಿ ಆತ ಉಣ್ಣಾಕ ಬಾರಬೇ" ಅಂತ ಪೀಕ್ಲಿ ಕೊನೆ ಮಗಳು,

ಡೋಲಿ ಎಬ್ಬಸಿದಕ ಕನಸೆಲ್ಲಾ ಮರ್ತ್ಯಂಗಾಗಿ ಅಷ್ಟು ಗಡಾನೆ ಅದೆಂತ ಮುದ್ದಿ ಮಾಡ್ದೆ ಅಂದ್ಕೊಂತ ಬಾಯಿಯೊಳಗಿದ್ದ ನಸಿಪುಡಿ ಉಗಳ ಅರ್ಧ ನುಂಗಿ ಅರ್ಧ ಹೊರಗ ಉಗಳಿ ಒಳಗ ಹೋದ್ಲು, ಮೂರೇ ಕಾಲಿನ ಮೇಲೆ ನಿಂತಿದ್ದ ಮಂಚ ಅಡ್ಡಾಡಾಕ ಆಗದ ಮುದುಕರಂಗ ಮೂಲಿ ಸೇರಿದಂಗ ಅನಿಸಿತು. ಅದರ ಕಡಿಗ ಬೆನ್ನ ಮಾಡಿ ಗಂಗಾಳ ಹಿಡ್ಕೊಂಡ ಕುಂದ್ರಾಕ ಹೋದವಳಿಗ ಯಾಕೊ ಮನಸಾಗದೆ ಗ್ವಾಡಿಗ ಆತ್ಕೊಂಡು ಕುಂತ್ಲು. ಒಂದೊಂದೆ ಗುಕ್ಕು ಮುರದು ನುಂಗತ್ತಿದಂಗ ಒಂದಕಾಲದಾಗ ಮಂಚದ ಪೀಕ್ಲವ ಅಂತ ಇಡಿ ಮಂಜಾಪೂರ ತಾಂಡದಾಗೆ ಹೆಸರವಾಸಿಯಾಗಿದ್ದು ನೆನಸ್ಕೊಂಡ್ಲು.

ಅರವತ್ತ ಮನಿ ಮಂಜಾಪೂರ ತಾಂಡದಾಗ ಪೀಕ್ಲದೊಂದೆ ಮಂಚ ಇದ್ದದ್ದು. ಮಂಜಾಪುರದಾಗ ನಡಿಯೊ ಕಾರೇವೂ ಕಟ್ಲಿಗಳಿಗ ಪೀಕ್ಲವ್ವನ ಮಂಚ ಆಸರ ಆಗಿತ್ತು. ಊರಿಗ್ಯಾರಾದ್ರು, ದೊಡ್ಡ ಸಾಹೇಬ್ರು ಅನಿಸಿಕೊಂಡೋರ ಬಂದ್ರು ಅಂದ್ರ ತಾಂಡದ ಗಂಟ್ಲು ಮುಳಗಿಸಿರೊ ಸುಕ್ಕುನಾಯ್ಕ ಪೀಕ್ಲವನ ಹತ್ರ ಹೋಗಿ "ನಮ್ಮೂರಮರ್ವಾದಿ ಕಣವ್ವ, ಡಿ.ಸಿ. ಸಾಹೇಬ್ರು ಬಂದಾರ" ಅಂತ, ಬ್ಯಾಂಕ್‌ನೋರ ಬರ್ಲಿ ಹರಾಜಿನೋರ ಬರ್ಲಿ, ಹೊಲ ಅಳ್ತಿ ಮಾಡಾಕ ಸರಪಳಿ ತಗೊಂಡ ಬರೊ ಸರ್ವೇರ ಬಂದ್ರೂ ನಾಕ ಮಂದಿ ಹೆಗಲ ಕೊಟ್ಟು ದುರ್ಗವ್ವವಗುಡಿನೆಳ್ಳಾಗ ತಂದು ಪದ್ಧತಿ ಸೆರೆ ಹಾಕ್ತಿದ್ರು, ಪ್ಯಾಂಟ್ ಹಾಕಿರೊ ಎಲ್ಲಾ ಮಂದಿ ಡಿ.ಸಿ.ಗಳಾಗಿ ಬಿಡ್ತಿದ್ರು, ಪೀಕ್ಲಿನಜರಿನ್ಯಾಗ, ಹಿಂಗ ಪೀಕ್ಲಿ ಬಾಯಿ ಚಾಲ್ತಿಯೊಳಗ ಇದ್ಲು. ಮಂಜಾಪುರದಾಗ ನಡಿಯೊ ಪ್ರತಿಯೊಂದ ಮದವಿಯೊಳಗ, ದಂಡೂರು ಕೊರಮ ಬಂಡೆಪ್ಪನ ಬ್ಯಾಂಡ್ ಇಲ್ಲದಿದ್ರು ನಡತೀತ್ತು, ಪೀಕ್ಲಿ ಮಂಚ ಇಲ್ಲದಂಗ ಮದ್ವಿ ಆಗ್ತಾನೇ ಇರ್ಲಿಲ್ಲ. ವಾರಕ ಮುಂಚೆ ಮದ್ವಿ ಮನಿಯೋರು, 'ಪೀಕ್ಲಿ ಬಾಯಿ; ಎಯ್ ಪೀಕ್ಲಿಬಾಯಿ' ಅಂತ ಹನ್ನೊಂದ ಸಲ ಹಲ್ಲಗಿಂಜಿ ಸುತ್ತಿ ಬಳಸಿ, "ಅಲ್ಲಾ ನಮ್ಮ ಹುಡಗಿ ಮದ್ವಿ, ಹೊರಗ ಕುಂಡ್ರಾಕ ಆಟ ಮಂಚ" ಅಂತಂದು ರಾಗ ಎಳದಮ್ಯಾಲ "ಹುಷಾರಾಗಿ ಒಯ್ದು ಒಂದತಾಸ ಇಟ್ಕೊಂಡ ತಂದ ಇಟ್ಟುಬಿಡ್ರಿ" ಅಂತ ಹುಕುಂ ಕೊಟ್ಟಿಂದ. ನಾಕಮಂದಿ ಕರಸಿ ಅಜಾಮತ ಎತ್ಕೊಂಡ ಹೋಗಿ ಪೂರ್ವ ದಿಕ್ಕಿಗ ಮಕ ಮಾಡಿಟ್ಟು ಕೆಲ್ಸ ಆದಿಂದ ಮುಟ್ಟಸೋ ಜವಾಬ್ದಾರಿ ತಗೋಬೇಕಿತ್ತು. ಮಂಚ ಕೋಟಿದ್ಕ ಊರ ಮಂದಿಗಿಂತ ಮದ್ಲು ಕರದು ಮೊದಲನೇ ದಿನ ಮದವಿ ಊಟ, ಎರಡನೇ ದಿನ ಎಲ್ಲಬಾಟಲ ಹೆಂಡ, ಕುರಿ ಮಾಸದ ಸಾರು ಹಾಕಿ ಸತ್ಕಾರ ಮಾಡೋದ ರೂಢಿಯಾಗಿತ್ತು. ಪೀಕ್ಲಿ ಮಂಜಾಪುರದಾಗ ಮೇರಿತಿದ್ಲು. ಇಡಿ ತಾಂಡದ ಹುಡುಗಿಯರಿಗ ಪೀಕ್ಲಿ ಅಂದ್ರ ಎಲ್ಲಿಲ್ಲದ ಗೌರವ - ಯಾವಾಳಾದ್ರು, ತನ್ನ ಹರೆಯದ ದಿವಾಕಿನ್ಯಾಗ ಜಗಳ ಆಡಿದ್ಲು ಅಂತಂದ್ರ ತಿಪ್ಪರಲಾಗ ಹಾಕಿದ್ರು ಮಂಚ ಮುಟ್ಟಗೊಡಸ್ತಿರಲಿಲ್ಲಾ. ಹಿಂದಿನ ಒಣಿ ದಿಂಬಿಮ್ಮ ಯಾವದೊ ಸಣ್ಣ ವಿಷಯಕ್ಕ ಜಗಳ ತಕ್ಕೊಂಡು ಜಗಳಕ್ಕ ನಿಂತ್ರ ಅಕಿ ಸೀರಿ ಇಕಿ ಕೈಯಾಗ ಇಕಿ ಜಡಿ ಅಕಿ ಕೈಯಾಗ ಕಾಲಕೆದರಿ ಜಗಳ ಮಾಡೊ ಕೋಳಿ ಗಳಂಗೆ ಜಗಳಕ ನಿಂತ್ರ ಒಬ್ಬರೂ ಹಿಂದಕ್ಕ ಸರಿಯಾಕ ರಡಿ ಇಲ್ಲ. "ಲೇ, ನೀ ಏನ ಚಾಜವಂತಿ ಚಜ್ಜಿತೆನಿ ಅಲ್ಲ ಹೋಗೆ, ಎಲ್ಲೆಲ್ಲಿ ಉಲ್ಲಾಡೆದ್ದೆ ಅನ್ನೋದು ಇಡಿ ಸೀಮಿಗೆ ಗೊತ್ತೈತಿ" ಅಂತ ಪೀಕ್ಲಿ ಅಂದ್ರ "ಹೋಗೆ ಚಿನಾಲಿ ರಂಡಿ, ನೀ ಏನ ಮಾರಾಣಿ ಅಲ್ಲ, ಸಾಬನ ದೌಲತ್ತಿನ ಮ್ಯಾಲ ಮೆರಿತಿದಿ ಹೋಗ" ಅಂತ ದಿಂಬಮ್ಮ ಪೀಕ್ಲಿ ಇತಿಹಾಸಕ್ಕು

ಬಾಯಿ ಹಾಕಿದ್ಲು. "ಲೇ ನಿನಗ ತೋರಿಸ್ತೀನಿ ನನ್ನ ದೌಲತ್ತು ತೋರಿಸ್ತಿನಿ, ಬಾರೆ ನನಸೌತಿ, ನೋಡ್ತಿರೆ ನೋಡ್ತಿರು" ಗೇರಿ ಎಳದು ಮನಿಗ ಹೊಂಟಳು.

ಅದಾಗಿ ನಾಕ ವರ್ಷಕ್ಕ ದಿಂಬಮ್ಮನ ಮಗಳು ಜಗನಿ ಮದವಿ ನಿಶ್ಚಯ ಆತು. ದಿಂಬಮ್ಮನ ಗಂಡ ಭಗನೂನಾಯ್ಕ ಎಲ್ಡ ಬಾಟ್ಲು ಹೆಂಡ ತಗೊಂಡು ರಾಜಿಗಂತ ಹೋದ "ನಿನ್ನ ಹೆಣ್ತಿ ನನ್ನ ದೌಲತ್ತು ನೋಡ್ತೀನಿ ಅಂದಾಳ ಆಕೀಗ ನನ್ನ ದೌಲತ್ತ ತೋರ್ಸಬೇಕು, ನಿನ್ನ ಬಗ್ಗೆ ನನಗೆ ಬೇಜಾರಿಲ್ಲ, ನೀನು ನಮ್ಮಣ್ಣನ ಸಮಾನ" ಅಂದಾಕೀನ ಹೆಂಡದ ಬಾಟ್ಲಿ ಕಡೀಗ ನೋಡಿ ಉಗಳ ನುಂಗಿದ್ಲು. ನೋಡ ತಂಗಿ ಪೀಕ್ಲವ್ವ ಏನೋ ಆ ರಂಡಿ ಸಿಟ್ಟಿನ ವಾಳ್ಯೆದಾಗ ಅಂದಾಳ ಹೊಟ್ಯಾಗ ಹಾಕ್ಕೊ ತಾಯಿ, ಅಕಿ ಪರವಾಗಿ ತೆಪ್ಪಾತಂತ ನಾನ ಕೇಳ್ತಿನಿ, ನಮ್ಮಬ್ಬಗನಿ ಆಶಿ ಪಟ್ಟಾಳ, ಕಾರೇವು ನೆಲದ ಮ್ಯಾಲ ಮಾಡಿದ್ರ ಪಾಡಾದೀತ ನೀನೆ ಹೇಳು" ಗೊಗರದ "ಛೇ ಛೇ ಎಲ್ಲಾರ ಉಂಟೆ, ನಿನ್ನ ಬಗ್ಗೆ ನಂದೇನ ತಕರಾರಿಲ್ಲ, ನೀ ದೊಡ್ಮನಷ್ಯ, ನಿನ ಮಗಳ ಭಗನಿ ಇಡಿ ಊರಿಗ ನಂಬರ್ ಒನ್ ಅಂತಾನು ಗೊತ್ತು. ಎಲ್ಲಿ ಕಂಡ್ರು, ಬಾಯಿ ತುಂಬ ಏನ್ ಪೀಕ್ಲಿ ಅತ್ತಿ ಅರಾಮದಿ ಅಂತ ಬಾಯಿ ತುಂಬ ಅಂತಾಳ, ಆದ್ರ ಅದಾಳಲ್ಲ ನಿನ್ನ ಹೆಣ್ತಿ ದಿಂಬಿ ಅಕಿ ಮಾರಿ ನೋಡಿದ್ರ ಕೈಮ್ಯಾಲ ನೀರ ಬಿಡಬಾರದು ಅಂತ ತಿರ್ಮಾನ ಮಾಡೀನಿ" ಕಡ್ಡಿ ತುಂಡ ಮಾಡದಂಗ ಮಾರಿಮ್ಯಾಲ ಹೇಳಿದ್ಲು, ಸುತ್ತ ಹಳ್ಳಿಗೆಲ್ಲಾ ಭಗನೂ ತಲಿಕೆಟ್ಟೋನಂತ ಗೊತ್ತಿತ್ತು, ಯಾರಪ್ಪನ್ನೂ ಕೇಳೋನಲ್ಲ ಅಂತೋನ ಹೆಂಗಸಿಗ ಕೇಳ್ಯಾನ. "ಎಯ್, ಸೀಮ್ಯಾಗಿಲ್ದು ನಿಂದೇ ಏನ ಮಂಚ ಇರೋದು, ನಾನ ಮನಸ್ಸು ಮಾಡಿದ್ರ ಘಳಗಿಯೊಳಗ ಸೃಷ್ಟಿ ಮಾಡಿಬಿಟ್ಟೇನು, ಏನೋ, ನಿಂದ ಐತಲ್ಲಾ ಅಂತ ಕೇಳಾಕ ಬಂದೀನಿ ನಿನ್ನ ಮಂಚ ಇಲ್ಲದಿದ್ರ ಕಾರೇವು ಕಟ್ಲಿ ಆಗೋದಿಲ್ಲೇನ ನೋಡ್ತೀನಿ ಬಿಡು, ಭಾರಿ ದೊಡ್ಡಮನುಷ್ಯಳು" ಅಂದ್ಕೊಂತ ಎದ್ದವನೆ ಹೆಗಲ ಮ್ಯಾಲಿನ ಟವಲ್ಲು ಒಂದ ಸರ್ತಿ ಜಾಡಿಸಿ ಬಗಲಾಗ ಇಟ್ಕೊಂಡ ಹರಕ ಧೋತ್ರ ಎಡಗೈಯಾಗ ಹಿಡ್ಕೊಂಡು ಹಿಂದ ಮುಂದೆ ನೋಡದಂಗ ಹೊರಟ. "ಕಂಡೀನ ಹೋಗಪ್ಪೊ ಇಂಥ ಸಿಟ್ಟ ಮಾಡೋರನ್ನ" ಪೀಕ್ಲಿ ಹಿಂದಿಂದ ಮಾತಾಡ್ತಿದ್ಲು.

ಭಗನಾಯ್ಕನ ಪಿತ್ತ ನೆತ್ತಿಗೇರಿತ್ತು "ಹಾಳ ರಂಡಿ, ನಾಯಾರಂತ ಗೊತ್ತಿದ್ರು ದರಕಾರಿಲ್ಲದೇ ಮಾತಾಡಿದ್ಲಲ್ಲಾ ಎಷ್ಟು ಪೊಗರ ಅಕೀಗ" ಕೈಯಾಗಿದ್ದ ಒಂದ ಬಾಟಲ ಹೆಂಡ ಉಸರ ಬಿಡದಂಗ ಗುಟಕರಿಸಿದ. ಒಗರ ಹೆಚ್ಚಾಗಿ ಬಾಯಗ ಬಂದಲ್ಲಾಳಿ ಉಗಳಾಕ ಎದ್ದ ಹಂದ್ರಿಕ ಹ್ವಾದ, ಏನೊ ತರಾಕ ಹೋಗಿದ್ದ ಬಿಂಬಮ್ಮ ಅವನ ಕಣ್ಣಿಗ ಬಿದ್ದಿದ್ದೆ ಎಷ್ಟೋ ವರ್ಷದ ತನ್ನ ಶತ್ರು ಕಂಡವನಂಗ, ಓಡಿ ಹೋದವನೆ ಬಿಂಬಮ್ಮನ ಜಡಿ ಹಿಡಿದು, "ಲೇ ಬೇವರ್ಸಿ ರಂಡಿ, ಮೂರನ್ನು ಬಿಟ್ಟ ಪೀಕ್ಲಿ ಹತ್ರ ಜಗಳ ಮಾಡಿ ಇವತ್ತ ನನ ಮಗಳ ಕಾರೇವಿಗ ಮಂಚ ಕೊಡದಂಗ ಮಾಡಿದೆಯಲ್ಲೇ" ಅಂತ ದುಬ್ಬದ ಮ್ಯಾಲ ದಬಾ ದಬಾ ಹೇರಿದ. ಅಲ್ಲೆ ಎಕ್ಕಿ ಗಿಡ ಕಂಬಕ್ಕ ಕಟ್ತ್ತಿದ್ದ ದಿಂಬಮ್ಮನ ಅಣ್ಣ ಓಡಿಬಂದ "ಬಿಡಮಾವ ಬಿಡು" ಬಿಡಸಿದ, ಆದ್ರೂ ಬಿಡದಂಗ ಒಂದ ಕಪಾಳಕ್ಕ ರಪ್ ಅಂತ ಬಿಗಿದ. ದಿಂಬಮ್ಮನ ಕಣ್ಣಾಗ ದೀಪ ಹತ್ತಿದಂಗಾಗಿ ಎಚ್ಚರ ತಪ್ಪಿದ್ಲು. ದಿಂಬಮ್ಮನ ಅಣ್ಣಂಗ ಸಿಟ್ಟು ಬಂದಿದ್ದೆ ಭಗನಾನಾಯ್ಕನ್ನ ಅಜಾಮತ್ ಎತ್ತಿ ನೆಲಕ್ಕ ಕುಕ್ಕಿದ. ಭಗನಾನಾಯ್ಕನ ಹೆಂಡದ ಅಮಲು ಇಳಿದು ಲಬ ಲಬ

ಬಾಯಿ ಬಡ್ಕೊಂಡ ಅಳತೊಡಗಿದ.

ಆ ಘಟನೆ ನಡದಿಂದ ಮಂಜಾಪುರದ ಮಂದಿ ಪೀಕ್ಲಿ ಮುಲಾಜ ಕಾಯತೊಡಗಿದ್ರು. ಅಕಿ ಬೋಯ್ಸರು, ಸುಮ್ಮನೆ ಅರಗಾಗಿ ಬಿಡ್ತಿದ್ರು, ಅಕಿ ಮಂಚಕ್ಕ ಆಟೊಂದ ಡಿಮಾಂಡ ಬರಕಾ ಕಾರಣ ಮದ್ದೂರ ಮೈಲಾರಿ ಮೇಷ್ಟ್ರು, ಮಂಜಾಪುರದಾಗೆ ಟೆಂಟ ಹೊಡದು ಇಪ್ಪತ್ತ ವರ್ಷದಾಗ ಹೊಲ-ಮನಿ, ದನಕರು ಅಂತ ದೊಡ್ಡ ಕಮತ ಮಾಡಿ ಊರಾಗಿಂದ ಅವನಣ್ಣನ ಸಂಸಾರ ಕರ್‍ಕೊಂಡ ಬಂದ ಇಟ್ಕೊಂಡಿದ್ದ ಮೈಲಾರಿ ಮಾಸ್ತರ ಅಣ್ಣನ ಮಗಳು ದ್ಯಾಮಿ ಮದ್ವಿಗ ಪೀಕ್ಲಿ ಮಂಚ ತರ್‍ಸಿದ್ದೆ ದೊಡ್ಡ ಸುದ್ದಿಯಾತು. ಮಂಜಾಪೂರತಾಂಡದ ಪ್ರತಿಯೊಬ್ಬರು ಮಂಚಕ್ಕ ಮುಗಿಬೀಳ ತೊಡಗಿದರು. ಇಡಿ ಊರಿನ ಮಂದಿ ಮದವೀಗ ಮಂಚ ಬೇಕೆ ಬೇಕಾಗಿ ಬಿಡ್ತು. ಮಂಚ ಇಲ್ಲಿರ್ಕ್ರ ಮದ್ವಿ ಮೂರ್ತ ತಾಸಗಟ್ಲೆ ತಡ ಆಗಿ ಹೊಕ್ಕಿತ್ತು. ಪೀಕ್ಲಿ ಮನಿಮುಂದ ಕುಂತು, ಅಕಿ ಮರ್ಜಿಕಾದು ಹೂಂ ಅಂದ್ರ ಬರೋಬರಿ ನಾಲಾರು ಹೆಗಲಮ್ಯಾಲ ಹೊತ್ಕೊಂಡ ಬಂದು ಹಗರಕ ಇಳಿಸಿ, ಹಲಗಿಮ್ಯಾಲ ಹೊಸ ಜಮಖಾನ ಹಾಸಿ, ಹೆಣ್ಣು, ಗಂಡನ್ನ ಕೂಡಿಸಿದಾಗ, ಅದರ ಮ್ಯಾಲ ಕುಂತವರಿಗ ಅದೇನೋ ಮೋಜು, ಮಂಜಾಪುರದ ಹೆಣ್ಣ ಹುಡುಗಿಯರು ಜೀವನಾದಾಗ ಮಂಚ ನೋಡಿದ್ದೆ ಪೀಕ್ಲಿದ್ದು. ನೋಡಿದ ದಿನದಿಂದಲೇ ಅದರ ಮ್ಯಾಲ ಕುಂದ್ರೋ ಕನಸು ಕಾಣ್ತಿದ್ರು. ಸಾಪಾಗಿರೊ ಹಲಗಿ, ದಪ್ಪದಪ್ಪನ ಕಾಲುಗಳು ಕಾಲಿನಗುಂಟ ಕೆತ್ತಿರೊ ಬಳ್ಳಿಗಳು, ಹೂಗಳು ನೋಡಿದ್ರ ಒಂದ ನಮೂನಿ ಆಕ್ತಿತ್ತು. ಊರಾನ ಹಡಬಿ ಹುಡ್ರು ಮದ್ವಿ ಆಗ್ತಿರೋರ ಹಿಂದಗಡೀಗ ಒಂದ ಸಲ ಉಲ್ಡಾಡಿ ಚಟ ತೀರಿಸ್ಕೊಂತಿದ್ರು, ಊರಾಗ ಯಾವಾನಾರು ಕೊಂಡ್ಲಳ್ಳಿಗ ಹ್ಯಾರೇಕ ಹೋಗಂಗಿಲ್ಲಾಂದ್ರ ಮನಿಯಾನ ಹಿರಿಯರು, "ಯಾಕಲೇ ಹೆಂಗೈತಿ ಮೈಯಾಗ? ಪೀಕ್ಲಿ ಮಂಚ ತಂದು ಹಾಕಲೇನು?" ಪೀಕ್ಲಿ ಮಂಚದ ಕರಾಮತ್ತು ಕಂಡು ಮಂದಿ ಮಾತಾಡತ್ತಿದ್ದರು.

ಊರಾಗೆಲ್ಲಾ ಗುಲ್ಲೆಬ್ಬಿಸಿದ ಮಂಚ, ಮನಿಯಿಂದ ಮನೀಗ, ಬೀದಿಯಿಂದ ಬೀದಿಗ ಅಲದಾಡಿದ ಮಂಚ ಕಡೀಗ ಒಂದ ದಿನ ಮೂಲಿಗುಂಪಾಗೊ ಕಾಲ ಬಂದೇ ಬಿಡ್ತು. ಬಿದ್ದನಾಯ್ಕ ಮಗಳ ಜಿನ್ನಿ ಮದ್ವೀಗ ಸವರಾತ್ರಿಯೊಳಗ ಹೊತ್ಕೊಂಡ ಹೋಗ್ತಿದ್ದಾಗ ಮಾದನಾಯ್ಕನ ಮಾಳಗಿಮನಿ ದಾಟೋ ಸಮಯ ಮುಂದ ಹೋತ್ಕೊಂಡಿದ್ದ ಇಬ್ಬರೊಳಗ ಒಬ್ಬ ಮಾದನಾಯ್ಕನ ಸೊಸಿ ಹಡದಿದ್ಕ ನೀರ ಹಾಕಕ ಮಾಡಿರೊ ಗುಂಡಿ ಕಾಣದೆ ಮುಗ್ಗರಿಸಿ ಬಿದ್ದು ಒಂದ ಕಾಲ ಮುರ್‍ಕೊಂಡಿದದಲ್ಲದೆ, ಮಂಚದ ಕಾಲನ್ನ ನಾಕ ತುಂಡ ಮಾಡಿದ್ದ, ಪೀಕ್ಲಿ ಪಕ್ಕೆಲಬು ಮುರದಂಗಾಗಿತ್ತು. ಮಂಚ ಮುರದಿರೊ ಸತ್ಯವನ್ನ ಒಪ್ಪಿಕೊಳ್ಳಕ ಆಗದೆ ಮುರುಕ ಮಂಚದ ಮ್ಯಾಲ ಅಂಗಾತ ಮಲಗಿ ಹಳೆ ನೆನಪಿನ ಕ್ಷಣದೊಳಗೆ ಕಳದು ಹೋದಳು.

ಗಣುನಾಯ್ಕನ ಹಟ್ಟಿ ಹಕಮಪೂಜಾರಿ ಮಗ ಜೋಕನಾಯ್ಕ ಎಡವಟ್ಟುಂದ್ರ ಎಡವಟ್ಟು. ಏನೇನು ತಿಳಿತಾನೆ ಇರ್ಲಿಲ್ಲಾ. ಮದ್ವಿ ಆದ ಹೊಸದರಲ್ಲಿ ಕೋತಿ ಆಡದಂಗ ಆಡ್ತಿದ್ದ ಹನ್ನೆಲ್ಡ ವರ್ಷಕ್ಕ ಅಕೀಗು ಅದೇ ಬುದ್ದಿ ಇತ್ತು. ಹಕಮಪುಜಾರಿ ಹಂಪಳ್ಳಿ ಲಂಗೂರ ಸಾಬಿ ಹೊಲ ಕೋರಿಗ ಹಿಡ್ಕೊಂಡಿದ್ದ. ಇಡಿ ಹಂಪಳ್ಳಿಗ ಶ್ರೀಮಂತ ಲಂಗೂರಸಾಬಿ ನೋಡಾಕ ಪಾಡಿದ್ದ ತಿಂಗಳಿಗೊಂದಪ ಮೋಟಾರ ಬೈಕ್‌ನ್ಯಾಗೆ ಹೊಲ ನೋಡಾಕ ಬರ್ತಿದ್ದ. ದೊಡ್ಡಜ್ವಾಳ ಪಸಂದಾಗ ಬೆಳದಿತ್ತು. ಲಂಗೂರ ಸಾಬಿ ಚೋಕನ ಮುಂದ ಹೇಳಿದ "ಏನೋ ಜೋಕ, ನೀ

ಮದ್ವಿ ಆಗಿದ್ಕ ಜ್ವಾಳ ಬೆಳದೈತಿ" ಅಂತ. ಜೋಕನಾಯ್ಕಗ ಏನ ಹೇಳಾಕ ತಿಳಿಯದೆ ಹೊಲ್ದಾಗ ದಗದಾ ಮಾಡ್ತಿದ್ದ ಪೀಕ್ಲಿ ಕರ್‍ಕೊಂಡ ಬಂದು ತೋರ್‍ಸಿದ. ಲಂಗೂರಸಾಬಿ ಮಾತಾಡದಂಗ ದಂಗಾಗಿ ನಿಂತ ಬಿಟ್ಟ. ಯಾವತ್ತು ಎರಡ ದಿನ ಉಳಿಯದ ಸಾಬಿ ವಾರಟೆಂಟ್ ಹೊಡದ. ಜೋಕ ತೆಪರ ಅದಾನಂತ ಸಾಬೀಗ ಗೊತ್ತಿತ್ತು. ಇಂಥದೊಂದ ಸುಂದರವಸ್ತು ಮಣ್ಣಾಗ ಹೊಲಸ ಆಗಬಾರದು ನಮ್ಮ ಪಟ್ಟಣದಾಗ ಆರಾಮಿಂದ ಇರಬೇಕು, ಅಂದ ಸಾಬಿ. ಕಣದಾಗ ಯಾರು ಇಲ್ಲದ ನೋಡಿ "ಲೇ ಜೋಕ ಒಂದ ಪಾಕೇಟು ಹೆನಡಿ ಸಿಗರೇಟ ತಗೊಂಬಾರಲೇ" ಅಂತ ಒಂದ ಮೈಲ ಇರೊ ತಾಂಡಕ್ಕ ಒಡಿಸಿದ. ಪೀಕ್ಲಿಗ ಒಬ್ಬಾಕೀನ ಇರಾಕ ಹೆಂಗೆಂಗೊ ಆಗಕಹತ್ತು. ಸಾಬಿ ಅಂವss ಮರಿಯಾದಿಂದ ಸೀದಾ ಅಕಿ ಹತ್ರ ಬಂದ. ಹತ್ತು ಬಳ್ಳಾಗ ಹತ್ತ ಬಂಗಾರದ ಉಂಗ್ರ ಟೇರಿಕಾಟ ಜುಬ್ಬಾ ಪಂಜಿ, ಮೈಯಿಗ ಹಾಕ್ಕೊಂಡಿದ್ದ ಸೆಂಟು ಘಮ್ ಅಂತಿತ್ತು. ಬ್ಯಾಡ ಅಂದ್ರು ಅವನ ಕಡೀಗ ನೋಡಬೇಕು ಅನಿಸೊ ವ್ಯಕ್ತಿತ್ವ. ತನ್ನೊಳಗ ಪುಟಿಯಾಕ ಹತ್ತಿರೊ ಹರೆಯನ್ನ ವಾರಿಗಣ್ಣಲೇ ಸಾಬೀನ ನೋಡೊಹಂಗ ಮಾಡಿತ್ತು. ಸಾಬೀಗ ತಡಿಯಾಕ ಆಗಲಿಲ್ಲಾ, ಅಕಿಹ ಹತ್ರ ಬಂದನೆ, "ಏನ್ ಚೆಂದದಿಯೇ ಹುಡಗಿ ನೀನು, ಇಂಥ ಮಣ್ಣಾಗ ದುಡಿಯಾಕ ಹುಟ್ಟೈಲ್ಲಾ ನೀನು" ಅಕೀಗ ಮತ್ತ ಬರೊ ಹಂಗ ಮಾತಾಡಕ ಹತ್ತಿದ್ದ. ಪೀಕ್ಲಿ ಹೆದರಿ ಬೆವತಿದ್ಲು. ಅವನೇನಾರ ಕೈ ಹಿಡಿದು ಬಲತ್ಕಾರ ಮಾಡಿದ್ರ ಏನ ಮಾಡ್ಲಿ? ಅನ್ನೋ ಗೊಂದಲಕ್ಕ ಬಿದ್ಲು ಲಂಗೂರಸಾಬಿ ತನ್ನ ಮಳ್ಳ ಮಾಡೊ ವಿದ್ಯೆ ಪ್ರಯೋಗ ನಡೆಸಿದ್ದ "ನಾನು ಈ ತಾಂಡದಾಗ ಅಡ್ಡಾಡಿ ನೋಡಿನಿ ಛೇ ನಿನ್ನಂತ ಚೆಲುವಿನ ಜೀವನಮಾನದಾಗೆ ನೋಡಿಲ್ಲ ನೀ ಹೂಂ ಅಂದ್ರ ನಿನ್ನ ರಾಣಿ ಮಾಡ್ತೀನಿ, ಮಂಚ ಬಿಟ್ಟ ಇಳಿಬಾರದು, ಇಡಿ ಮೈ ತುಂಬ ಬಂಗಾರ ಬಡಸ್ತೀನಿ ನನಗೇನ ಕಮ್ಮಿ" ಸುಮ್ಮೋಹಿನಿ ವಿದ್ಯೆಯೊಳಗ ಪಾರಂಗತನಾಗಿರೋ ಸಾಬಿ ಪೀಕ್ಲಿ ತಲಿಯಾಗ ಗುಂಗಾಡಿ ಹುಳ ಬಿಟ್ಟು ಸುಮ್ಮನಾಗಿದ್ದ.

ರಾಶಿ ಮುಗದು ವಾರ ಆಗಿತ್ತು ಪೀಕ್ಲಿ ಚಡಪಡಿಸತೊಡಗಿದ್ಲು, ಸಾಬಿ ಯಾಕ ಬರ್‍ಲಿಲ್ಲಾಂತ, ಅವನ ಮೈಯಾಗಿಂದ ಬರೊ ಗಂದದೆಣ್ಣೆ ವಾಸನಿ ಕೈ ನಡು ಬೆಳ್ಳಾಗ ಹೊಳಿಯೊ ಕೆಂಪ ವಜ್ರದ ಹಳ್ಳು ಮಾತಾಡೊ ಗಿಳಿಯಂತ ಮಾತು ಇದ್ದಲ್ಲಿ ಇರಾಕ ಆಗದಂಗ ಆಗಿತ್ತು. ಒಂದ ಮೈಲಿ ದೂರದಿಂದ ಸಾಬಿ ಮೋಟಾರಿಂದ ಸದ್ದು ಕೇಳಿದ್ದೆ ಪೀಕ್ಲಿ ಖುಷಿಯಿಂದ ಸೊಪ್ಪಿ ತಬ್ಬು ಮಾಡಿ ಹೊರಿಕಟ್ಟಿ ಬಣವಿ ಹಾಕೋದ ನಿಲ್ಲಿಸಿ, ಕೂದ್ಲ, ಅರವಿ ಸರಿ ಮಾಡ್ಕೊಂಡು ಸಾಬಿ ಬರೊದನ್ನ ಕಾದ ನಿಂತ್ಲು. "ಏ ಏನಾತೆ ಸೊಪ್ಪಿತಂಬಾ" ವದರಿದ ಜೋಕ "ಮುಂಜಾನಿಂದ ಬಗ್ಗಿ ಬಗ್ಗಿ ಸೊಂಟ ನೋವು ಆಟು ಕುಂತ್ಕೊಂತೀನಿ ನೀನೆ ತಗೊಂಡ ಹೋಗಿ ಒಟ್ಟು" ಅಂದ ವಳೆ, ಅವರ ಹೊಲ ಬಿಟ್ಟ ಎರಡ ಮೂರ ಹೊಲ ತಡಾದ ಬಂದ್ಲು. ಸಾಬಿ ಮೋಟಾರು ಕಣ್ಣೀಗ ಕಾಣೊ ಮಟಾನು ನಿಂತು ಹತ್ರ ಬರ್‍ತಿದಂಗೆ ತನ್ನ ಹೊಲಕ್ಕೆ ಓಡಿದ್ಲು. ಇದ್ಯಾವುದರ ಪರಿವೆ ಇಲ್ಲದ ಜೋಕ ಬಣವಿ ಹಾಕ್ತಿದ್ದ. ಅವನು ಬಂದವನೆ "ಹೆಂಗದಿ ಪೀಕ್ಲಿ ತಗೋ ಒಂದ ಮಾರ ಹೂವಿನಹಡಗಲಿ ಮಲ್ಲಿಗಿ ಹೂವ ತಂದೀನಿ ಮುಡ್ಕೊ" ಅಂದ. ದೊಡ್ಡದೊಂದು ಪ್ಯಾಕೇಟು ಕೊಟ್ಟ ಸಾಬಿ ತನ್ನ ಮೇಲೆ ಬಿಟ್ಟು ಬಿಡದಂಗೆ ಆಕ್ರಮಣ ಮಾಡ್ತಿರೋ ಹಂಗ ಅನಿಸ್ತು. ಮೆಲ್ಲ ಮೆಲ್ಲಗೆ ತಾನು ಅವನ ಹಿಡತದೊಳಗ ಬಂದಿ ಆಗ್ತಿರೋದು ಆಕಿಗೊತ್ತಾತು. ಲಂಗೂರ ಸಾಬಿ ತಲಿಕೆಟ್ಟು ಮಸರಗಡಿಗಿ ಆತು. ತಡಿಯಾಕ ಆಗಲಿಲ್ಲಾ, ಜೋಕನ ಕೈಯಾಗ

ನೂರರ ನೋಟಿಟ್ಟು ಸೀಗರೇಟ ತರಾಕ ಕಳಸಿದವನೆ ಪೀಕ್ಲಿ ಕರ್ಕೊಂಡು ಹಂಪಳ್ಳಿಗ ಬಂದ ಬಿಟ್ಟ. ನೂರಾನಿ ಸಿನೀಮಾ ಟಾಕೀಜ್ ಪಕ್ಕ, ಸಾಗವಾನಿ ಮರದ ಹಲಿಗೆಯಿಂದ ಮನಿ ಕಟ್ಟಿಸಿ, ತನ್ನದೇ ಸಾಮಿಲ್ಲಿನಿಂದ ಹಲಗಿ ತರಿಸಿ ಸಾಸಾನ ಒಂದು ಮಂಚ ಮಾಡ್ಸಿಕೊಟ್ಟ. ಸಾಬಿ ಹೇಣ್ತಿ ಮಕ್ಕಳಿಗ ಅನುಮಾನ ಬರದಂಗೆ ಬಂದು ಹೋಗಿ ಮಾಡ್ತಿದ್ದ. ಅಕಿ ಮೈ ಮ್ಯಾಲ ಕೇಜಿ ಗಟ್ಟಲೆ ಬಂಗಾರ ಹಾಕಿದ ಸಾಬಿ, ಸುಖದಾಗ ಪೀಕ್ಲಿ ನಾಮರ್ಧಗಂಡನ್ನ ಕೈಲಾಗದ ಅತ್ತಿ ಮಾವಂದಿರನ್ನ ತನ್ನ ಮನಿ ಮಂದಿನೆಲ್ಲಾ ಮರ್ತ ಬಿಟ್ಲು.

ಪೀಕ್ಲಿ ಓಡಿ ಹೋದ ಸುದ್ದಿ ಸುತ್ತ ಊರಗಳಿಗ ಹಬ್ಬಿದ್ರು, ಲಂಗೂರ ಸಾಬಿ ಸಾಲಕ್ಕ ಅಂಜಿ ಮಂದಿ ಚಕಾರ ಎತ್ತಲಿಲ್ಲ. ದಿನಗಳು ಕಳದಂಗ ಪೀಕ್ಲಿ ಅವ್ವ ಜಿಂಪಿ, ಅವಳಪ್ಪ ಕೊಂಡಾನಾಯ್ಕ ಮಕ್ಕಳುಮರಿ ಎಲ್ಲರೂ ಹಂಪಳ್ಳಿ ಸೇರ್ಕೊಂಡ್ರು "ತಾಯಿ ಹಂಗ ಮಗಳು ಹುಚ್ಚನಂತ ನನ ಮಗನ ಮ್ಯಾಲಿರಾಕ ಅಕಿಗೇನು ಗರಜ ಬಿದ್ಯೆತವ್ವ" ಅಂತ ಇಡಿ ಊರ ಮಂದಿ ಮುಂದ ಹಿಡಿಶಾಪ ಹಾಕತೊಡಗಿದ್ಲು ಚಿಂಕವ್ವ, ಪೀಕ್ಲಿ ಮಾತ್ರ ಸುಖದ ಸುಪತ್ತಿನ್ಯಾಗ ಮೇರಿಯ ತೊಡಗಿದ್ಲು ಕೊಂಡನಾಯ್ಕ ಮಾತ್ರ ಮುದಕ ಅವನಪ್ಪ ಕಂಟುನಾಯ್ಕನ ಮಂಜಾಪುರ ದಾಗಬಿಟ್ಟು ಹಂಪಳ್ಳಿ ಸೇರಿದ್ದ, ಅಲ್ಲಿ ಸರಿಯಾಗದಿದ್ರ ಮಂಜಾಪುರ, ಮಂಜಾಪುರ ಸರಿಯಾಗದಿದ್ರ ಹಂಪಳ್ಳಿ ಸುತ್ತುತ್ತಿದ್ದ. ಮಂಜಾಪುರದ ಐದ ಎಕರಿ ಹೊಲದಾಗ ಚಹಕುಡದು ಬಜ್ಜಿ ತಿಂದಿದ್ಕ ಟೋಪಿ ಪಾಟುಗ, ಎರಡ ಎಕರೆ ಹೊಲ ಬರದ ಕೊಟ್ಟಿದ್ದ. ಲಂಗೂರ ಸಾಬಿ ಹಿರಿಮಗ ಹುಸೇನಿ ತಿಳುವಳಕೀಗ ಬಂದಿಂದ ಪೀಕ್ಲಿ ಮನಿಯೋರ ಪುಂಗಿ ಬಂದಾತು. ಒಬ್ಬೊಬ್ರಾಗೆ ಮಂಜಾಪುರ ಸೇರಿದ್ರು, ಒಂದ ದಿನ ಲಂಗೂರಗ ಲಕ್ವಾ ಹೊಡೀತು, ಅದನ್ನೇ ಕಾಯ್ತಿದ ಅವನ ಮಕ್ಕಳು ಪೀಕ್ಲಿನ ಓಡಿಸಾಕ ಯೋಜನೆ ಹಾಕಿದ್ರು. ಹೆಂಗೊ ಸುದ್ದಿ ತಿಳಿದ ಪೀಕ್ಲಿ ಅವ್ವ ಜಿಂಪಿ ತಲಿ ತಲಿ ಬಡ್ಕೊಂಡು ಅಳತೊಡಗಿದ್ಲು, ಮಂಜಾಪುರದ ಕಡೀಗ ತಲಿ ಹಾಕಿನೂ ಮಲಗಬಾರದು ಅಂತ ಅಂದ್ಕೊಡಿದ ಜಿಂಪಿ ದಿನಕ್ಕ ಹತ್ತ ಮೈಲಿ ಅಡ್ನಾಡಿ ಕೂಲಿ ಮಾಡೋದ ನೆನಪಿಸಿಕೊಂಡೆ ಛಳಿ ಜ್ವರದಿಂದ ಹಾಸಿಗಿ ಹಿಡದ್ಲು. ಲಂಗೂರ ಸಾಬಿ ಮಕ್ಕಳು "ಎಯ್, ಹೆಂಗಸೆ, ಮರ್ವಾದಿಯಿಂದ ನೀನಾಗಿ ನೀನೆ ಜಗ ಬಿಟ್ಯೋ ಪಾಡ್ಯೆತಿ, ಇಲ್ಲದಿದ್ರ ಮನಿಯಾನ ಸಾಮಾನ ಕಸ್ಕೊಂಡು ಬರೆ ಬತ್ಲಗದಮತೀವಿ" ಅಂತ ಗುಟೂರ್ ಹಾಕಿಂದ ಕೆಲ್ಸ ಎಡವಟ್ಟಾತಲೆ ಅಂದಾಕಿನ ರಾತ್ರೋ ರಾತ್ರಿ ಇದ್ದ ಬಿದ್ದ ಸಾಮಾನಗಳನ್ನ ಗಂಟು ಮೂಟೆಕಟ್ಕೊಂಡ ಮಂಜಾಪುರ ಸೇರಿದ್ಲು. ಬೆಳಕಕಾಣದ ಹುತ್ತದರಾಣಿಹಂಗ ಬಿಸಲ ನೋಡದೆ ಒಳ್ಳೊಳ್ಳೆ ಮಾಸದ ಊಟ ತರಕಾರಿ ಊಟ ಉಂಡುಂಡು ಕೆಂಪಗಿದ್ದಾಕಿ ಜಿವುಟಿದ್ರ ರಕ್ತ ಬರೋ ಹಂಗಾಗಿದ್ಲು.

ಮಂಜಾಪುರ ಸೇರಿದ ಪೀಕ್ಲಿ ತಮ್ಮಂದಿರು, ತಂಗಿಯರು ಹೊರಗೆಹೋಗಿ ದುಡಿಯದೆ ಪೀಕ್ಲಿ ಹಿಡಿಗಂಟಿಗ ಮುಗಿಬಿದ್ದು ಮೈಮ್ಯಾಲಿನ ಬಂಗಾರದ ಒಡವೆ ಮಾರಿ ಒಂದೊಂದೆ ಮೋಜ ಮಾಡತೊಡಗಿದ್ರು. ಕೊಳ್ಳಾನ ಸಾಮಾನ ಹೋಗಿ ಕಿವಿಗ ಬಂದಾಗ ತನ್ನ ಮೂವರು ಹೆಣ್ಣ ಮಕ್ಕಳು ಜ್ಞಾಪಕ ಬಂದ್ರು. "ಹೋಗ್ರಲೆ ಗತಿಗೆಟ್ಬೋರ, ಹೋಗಿ ದುಡಿ ಹೋಗ್ರಿ, ಏಟ್ ದಿನಾಂತ ನನ ಗಂಟಿನ ಮ್ಯಾಲ ಉಳ್ಳಾಗಡ್ಡಿ ಸುಲದೀರಿ" ಅಂತೇಳಿ ಗದರಿಸಿಂದ ಒಬ್ಬೊಬ್ಬರೆ ಕೂಲಿ ಮಾಡಾಕ ಓಡತೊಡಗಿದರು.

ಪೀಕ್ಲಿ ಇಟ್ಕೊಂಡಿದ್ದ ಪುಡಿಗಾಸಿನೆಲ್ಲಾ ಕೂಡಿಸಿ ಚಹದಾ ಅಂಗಡಿನಾರು ಇಡನಂತ ಯೋಚನಿ ಮಾಡಿದ್ಲು. ಕೊಂಡನಾಯ್ಕ ಮದ್ಲು ಓಟ ಹಾಕಿದ, ಆದ್ರ ಜೆಂಪಿ "ಅಲ್ಲೇ ಹುಡಗಿ ಈ ಊರಾಗ ಉದ್ರಿಪೂಕು ನಿದ್ರಿಲೇದು ಅನ್ನೋ ಗಂಟಗಳ್ಳ ಮಂದಿ ಅದಾರ, ಒಬ್ಬ ಅಂಗಡಿ ಇಟ್ರ, ಹೊಸ ರುಚಿ ನೋಡಾಕಂತ ಎರಡ ದಿನ ದುಡ್ಡು ಕೊಟ್ಟ ವಡಿ, ಮಂಡಕ್ಕಿ, ಚಾ ಅಂತಂದು ಮುಗಿ ಬೀಳ್ತಾರ. ಆ ಮ್ಯಾಲಿಂದ ಉದ್ರಿಕೇಳ್ತಾರ ಉದ್ರಿ ಲೆಕ್ಕ ತಿಂಗಳು ವರ್ಷ ಬೆಳೆ ತಿರೋದ್ರಾಗ ಮತ್ತೊಬ್ಬ ಹರಕ ಮುರುಕು ಚಹಾದಂಗಡಿ ಸುರು ಮಾಡ್ತಾನ ಅಲ್ಲಿ ರುಚಿ ನೋಡಾಕ ಇದನ್ನ ಬಿಡ್ತಾರ. ಹ್ಯಾಂಗು ಇಡೋದ ಇದ್ರಿ ಒಂದ ದಪ ಯೋಚನೆ ಮಾಡು" ಒಂದ ತಾಸು ಕೊರದ್ಲು. "ಬೇ ನೀನ ಏನು ಯೋಚನಿ ಮಾಡಬ್ಯಾಡ, ಬರಿ ನನ್ನ ನೋಡಾಕ ಬರೋರು ಸಿಂಗಲ್ ಚಾ ಕುಡಿದ್ರು ನೂರ ನೂರೈವತ ಆಗತೈತಿ" ಅಂತ ತನ್ನೊಳಗಿ ಇನ್ನೂ ಉಳಿದಿರೋ ಜೀವ ಕಳೆಯನ್ನ ತೋಡಿಕೊಂಡಿದ್ಲು.

ರಾಗಿ, ಹತ್ತಿಸೀಜನ್ನು, ದೀಪಾವಳಿ ಸಂಜಿಗ ಪೀಕ್ಲಿ ಬಾಯಿ ಹೊಸ ಅಂಗಡಿ ಸುರು ಮಾಡೆ ಬಿಟ್ಲು. ದೀಪಾವಳಿ ಆಮಾಸಿಗ ಭಜನಿಮ್ಯಾಳಕರದು ಇಡಿರಾತ್ರಿ ಭಜನಿ ಮಾಡ್ಸಿ ಬಂದ ಮಂದಿಗ ಒಂದು ಚೀಲ ಮಂಡಕ್ಕಿ ಒಗ್ಗರಣಿ ಹಾಕ್ಸಿ, ಹಾಲಿಲ್ಲದ ಡಿಕಾಸನ್ನು ಸಿಲಾವರಿ ಗ್ಲಾಸು ಬಿಟ್ಟು ಅವಾಗತಾನೆ ಬಂದಿದ್ದು, ಗಾಜಿನ ಗ್ಲಾಸಿನೊಳಗ ಸೊಸಿ ಕೊಟ್ಟಿದ್ಕ ಮಂದಿ ವ್ಹಾ.. ವ್ಹಾ.. ಅಂದ್ರು ಮಾರನೆ ದಿನ ಮುಂಜಾನಿ ಗೇಣುದ್ದ ಮೆಣಸಿನಕಾಯಿ, ಪೇಪರತುಂಬ ಒಗ್ಗರಣಿ ಕೊಡಾಕ ಸುರು ಹಚ್ಚಿದ್ಲು. ಹಲ್ಲಿಲ್ಲದೋರು, ಕಣ್ಣಿಲ್ಲದೋರು ಅದ್ಯಾವದೋ ಊರಗಳಿಂದ ಬಂದೋರು ಜಗ ಇಲ್ಲದಂಗ ತುಂಬಿಕೊಂಡು ಚಪ್ಪರಿಸಿ ಬಾಯಿತುಂಬ ಪೀಕ್ಲಿ ಹೊಗಳಿ ಕೊಂಡೆ ಹೋದ್ರು. ಬೆಳಗಾ ಮುಂಜಾನೆ ಬಂದು ಖಾಲಿ ಸಿಂಗಲ್ ಚಾ ಕುಡಿದು ಮೂಲಿಯೊಳಗ ಪರ್ಮನೆಂಟಾಗಿ ಸೆಟ್ಟಾದ ಶಂಕಿ, ಮಂದಿ ಖಾಲಿಯಾದ್ರು ಕುಂತ್ಕೊಂಡು ಪೀಕ್ಲಿ ಎರಿಳಿತಗಳನ್ನ ಗಮನಿಸತೊಡಗಿದ, ಬಂದೋರಿಗೆಲ್ಲಾ ಖಾಲಿ ಪುಕ್ಕಟೆ ಪ್ರಚಾರ ಮಾಡ್ತಾ ಅವರು ಬಾಯಿ ಚಪ್ಪರಿಸೋದನ್ನ ನೋಡಿ ಉಗಳ ನುಂಗತಾ "ನಮ್ಮ ಪೀಕ್ಲಿ ಅಂಗಡಿ ಇಟ್ಟಿಂದ ನಾಕು ಮೂಲಿಯೊಳಗಿನ ಅಂಗಡಿಗಳು ಕದ ಮುಚ್ಕೊಂಡ ಹೋಗೋದ ಗ್ಯಾರಂಟಿ" ಹೋಗಳಿ ಏನಾರು ಬಕ್ಷೀಸು ಕೊಟ್ಟಾಳಂತ ನೋಡಿದ. ಅಕಿ ಕೇರ ಮಾಡದಕ ಅವಳಪ್ಪ ಕೊಂಡಾನಾಯ್ಕನ ತಾಗೊಂದು ಬೀಡಿ ಇಸ್ಕೊಂಡು ಸೇದಿ ಕೆಲ್ಸಗೀಟಲಿಲ್ಲಾಂತ ಎದ್ದು ಹೊರಾಗಬಾರಾಕು ಟೋಪಿ ಪಾಟು, "ಲೇ ಶಂಕಿ ಬಾರಲೆ ಇಲ್ಲಿ" ಅಂತ ಕರಿಯಾಕು ಸರಿಹೋತು, "ಬಂದೆ ಪಾಪಣ್ಣ" ದಾಟಾಕ ನೋಡಿದ. ಟೋಪಿಪಾಟು, ಧಾಪಗಾಲು ಹಾಕದವನೆ ಶಂಕಿ ಕೊಳಪಟ್ಟಿ ಹಿಡಿದು, "ಲೇ ಬೋಳಿಮಗನೆ ತಿಂದಿದ್ದ ಕೊಡಾಕ ಟಿಕಾಣಿ ಇಲ್ಲ, ತಿಂದ ಮನಿಗ ಎರಡು ಬಗೀತಿಯಾ ವರ್ಷ ಪೂರ್ತಿ ತಿಂದಿಯಲ್ಲ ನನ್ನ ಹೇಣ್ತಿ ತೊಮ್ಲ ಇಟ್ಟು ಹೋಗು" ಮಂದಿ ಮುಂದ ಒಪ್ಪಿಸಾಕ ನೋಡಿದ. ಇದ್ದಕ್ಕಿದ್ದಂಗ ಉಂಟಾದ ಪರಿಸ್ಥಿತಿಯಿಂದ ಹೌಹಾರಿದ ಶಂಕಿ, "ನನತಾಯಿ ಆಣೆಯಾಗೂ ನಾ ಏನ ಮಾಡಿಲ್ಲ ಬಿಡಣ್ಣ" ಶಂಕಿ ಗೋಗರದ, ದೀಪಾವಳಿ ಅಮಾಸಿ ಅಂತ ಮಂದಿ ಹೇಳಿ ಬಿಡಸಿ ಸಾಗಹಾಕಿದ್ರು. ಅದು ಆದದ್ದೇ ಪೀಕ್ಲಿ ಅಂಗಡೀಗ ಅವನ ಹಳೆ ಗೆಣಕ್ಯಾರ ಬಸ್ಯಾನಾಯ್ಕ, ಹೆಣ್ತಿ ಸತ್ತ ಮುದುಕರೆ ಗತಿಯಾದ್ರು. ಅಷ್ಟ್ರಾಗ ಆಗ್ಲೆ ಉದ್ರಿ ತಿಂದೋರ ಪಟ್ಟಿ ಉದ್ದಕ ಬೆಳ್ಕೊಂಡಿತ್ತು. ಪೀಕ್ಲಿ ಅಂಗಡಿ ಬೀಳ ಬಿತ್ತು ಮಗಳ

ಬಾಳಕಂಡು ಎದಿಹೊಡದು ಜಿಂಪ್ಪವ್ವ ಸತ್ತ ಹೋದ್ಲು, ಸಾಯೋ ಮುಂದೆ ಮಗಳನ್ನ ಹತ್ರ ಕರದು " ತಾಯಿ, ಇಷ್ಟು ದಿನಾನು ನಿನ್ನ ರುಣದಾಗೆ ಸತ್ತಹ್ವಾದೆ, ಇನ್ನೂ ಒಂದ ಕೆಲ್ಸ ಮಾಡು, ಕಡಿಗ ಹುಟ್ಟಿರೊ ನಿನ್ನ ತಮ್ಮಂದಿರಿಗ ನಿನ್ನ ದೊಡ್ಡ ಹುಡಗಿಯರನ್ನ ಕೊಟ್ಟು ಜೀವನ ಹಿಡಸು" ಸಾಯೊ ಮುಂದು ಮುದಕಿ ಹಾಗೆ ಸಾಯಲಿಲ್ಲಾ, ಮತ್ತೊಂದು ಜವಾಬ್ದಾರಿ ಹೋರಿಸಿ ಸತ್ತ ಹೋದ್ಲು. ಪೀಕ್ಲಿಗ ದಿಕ್ಕೆ ತೋಚದಂಗಾತು. ಉಪಾಸ ಬಿಟದಿನಾಂತ ಕುಂದ್ರೋದಂತ ಊರಾಗ ಯಾರಾರು ಹತ್ತಿ ಬಿಡಸಾಕ, ಕಳೆ ತಗಿಯಾಕ ಕರದ್ರ ಹೊಂಟ್ಲು, ಸುಖದಾಗ ಬೆಳದಿದ್ದ ಮೈ ಬಗ್ಗವಲ್ದು ಮಂದಿ ಒಂದೊಂದ ಸಲ ತಡಾದು ಮತ್ತೊಂದು ಸಾಲಿನೊಳಗ ಅರ್ಧಕ ಇದ್ರು ಅಕಿ ಒಂದು ಸಾಲಿನೊಳಗ ಸೊರತಿರೊ ಬೆವರನ್ನ ಒರಸಾಕ ಹೆಚ್ಚು ಕಮ್ಮಿಯಾಗ್ತಿದ್ಲು. ಅಕಿ ಮಂಚಕ್ಕ ಡಿಮ್ಯಾಂಡ ಬಂದಿಂದ ಹುಡ್ರು ಹುಡುಗಿಯರು ಅತ್ತಿ, ಅಕ್ಕ, ಸಣವ್ವ ಅಂತ ಬಿಟ್ಟು ಬಿಡದಂಗ ಮುಂದ ಮುಂದ ಕೆಲಸ ಮಾಡ್ಕೊಂಡು ಅಕಿ ಮಂಚಕ್ಕ ಪೀರಿಕೆ ಹಾಕಿ ಬಿಡ್ತಿದ್ರು, ಮಂಚದ ಮರ್ಜಿಗಾದ್ರು ಕೆಲ್ಸ ಮಾಡಿಸಿಕೊಂಡು ಹೆಸರ ವಾಸಿಯಾಗಿದ್ದ ಪೀಕ್ಲಿ ತಾನು ಮಂಚದ ಕೂಟಾಗ ಮೂಲಿ ಸೇರ್ತಿರೋದನ್ನ ನೆನಪಿಸಿಕೊಂಡಾಕಿನೆ ಬಿದ್ದನಾಯ್ಕನ ಹೆಸರೇಳಿ ಹಿಡಿಮಣ್ಣು ತೂರಿದ್ಲು.

ಊರಾಗ ದೊಡ್ಡ ಪಂಚಾತಿನೇ ಸೇರ್ಸಿದ್ಲು, ಊರ ಮಂದಿಗ ಏನ ಪಂಚಾತಿ ಮಾಡಕಂತ ತಿಳಿಯದೆ ಕೆಲವರು ಅಕಿ ಪರವಾಗಿ ಮಾತಾಡಿದ್ರು, ಮತ್ತ ಕೆಲವರು ಮಂಚ ಇದ್ದಾಗ ದೊಡ್ಡ ಮಾರಾಣಿ ಹಂಗ ಮೆರಿತಿದ್ಲು ಒಳ್ಳೆದಾತ ನೋಡಂತ ಒಬ್ಬರಿಗೊಬ್ಬರು ಹೇಳಿಕೊಂಡು ಸಮಾಧಾನ ಪಟ್ರು. ಪಂಚಾತಿ ಕಟ್ಟೆಮಂದಿ ಮಾತ್ರ ಬಿದ್ದನಾಯ್ಕನ್ನ ಬೋಯ್ದು, ಮೂರುವರಿ ಪಲ್ಲ ಜ್ವಾಳ ಕೊಡಾಕಂತ ತೀರ್ಮಾನ ಮಾಡಿದ್ರು. ಪೀಕ್ಲಿಗ ಅಳು ತಡಿಯಾಕ ಆಗಲಿಲ್ಲಾ ಹಾಡ ಹಗಲೇ ಎರಡ ಬಾಟಲು ಹೆಂಡ ಏರ್ಸಿದ್ಲು ಅದಕ್ಕ ಅರ್ಧ ಅಳು ಬಂದಿತ್ತು. ಸಾಬಿ ಹೆಸರು ಹೇಳಿ ಹೇಳಿ ಅಳತೊಡಗಿದ್ಲು. ಅವಳ ತಮ್ಮಂದಿರು, ಅಕಿ ಮಕ್ಕಳು ಜುಕ್ಕಚಲುಮಿಂದ ಅನಾಮತ ಎತ್ಕೊಂಡ ಮನಿಗ ಒಯ್ದ್ರು ಸೀದಾ ಮನಿಯಾಗ ಹೊದಾಕೀನ, ತಡವರಿಸಿಕೊಂಡ, ಮಂಚದ ಪಕ್ಕ ಹೋದ್ಲು, ಮುರದಿರೊ ಕಾಲನ್ನ ಒಮ್ಮೆ ಮುಟ್ಟಿದ್ಲು. "ಮಾರಾಣಿಯಂಗೆ ಇರು ಅಂತ ಮಾಡಿಸಿದ್ದು, ನಾ ಸಾಯಕ ಮುಂಚೆ ಮುರಿತಲ್ಲೋ ಲಂಗೂರ" ಅಂತ ಮಂಚಕ್ಕೆ ಒರಗಿ ಗೋಳಾಡಿದ್ಲು. ಪೀಕ್ಲಿ ಹಿರಿಯಳಿಯ ಆಗ್ತಿರೊ ಅಕಿ ದೊಡ್ಡ ತಮ್ಮ ತಿಮ್ಮ, "ಬೇ ನೀ ಸುಮ್ಮನೆ ಬಾಯಿ ಮುಚ್ಚತಿಯೊ ಇಲ್ಲಾ ಸೀಮೆಎಣ್ಣೆಗೊಜ್ಜಿ ಬೆಂಕಿ ಹಾಕ್ಲಿ ಅಂದ " ಲೋ ಭಾಡಕೌವ, ನಾ ಸತ್ತಿಂದ ನನ್ನ ಹೆಣದ ಕೂಡ ಸುಡೊ, ಈಗೇನಾರ ಮಾತಾಡಿದಿ ಅಂದ್ರ ಏಕ್ಕಡದಿಲೆ ಹೊಡಿತೀನಿ ನೋಡು" ಸೆಟದ ನಿಂತು ಕೂಗಿದ್ಲು, ಯಾರು ತುಟಿ ಪಿಟಕ್ ಅನ್ನಲಿಲ್ಲ.

ಪೀಕ್ಲಿಗ ಜೀವನಾನೆ ಬ್ಯಾಸರಾಗಿತ್ತು. ಅನಾಯಸದಿಂದ ಬರ್ತಿದ್ದ ಹೆಂಡ, ಊರಿಗ ಮುಂಚೆ ಮಾಂಸದೂಟ, ಇಡೀ ಊರ ಮಂದಿ ಭಲೆ ಗೌರವದಿಂದ ಕಾಣೋದು ನಿಂತಹೋತು. ಈಗ ಯಾರು ಅಕೀನ ಮಾತಾಡಿಸೋರಿಲ್ಲಾ, ಒಳಗೊಳಗೆ ಅಳುತಿದ್ಲು, ವಯಸ್ಸಾಗ್ತಿರೋದು ಅನುಭವಕ್ಕ ಬಂದಿದ್ದೆ, ಇಬ್ಬರು ತಮ್ಮಂದಿರನ್ನ ಕರದು, " ಲೇ ತಿಮ್ಮಿ ನೀ ತೊಡ್ಡ ರಾಮೀನ ಮದ್ವಿಯಾಗು. ಲೇ ಸಿದ್ಗ ನೀ ಚಿಕ್ಕಾಕಿ ಶಾವಿನ ಮದುವೆಯಾಗು ನಾನು ಅವ್ವಗ ಮಾತ ಕೊಟ್ಟೀನಿ" ಅಂತ ಹಠ ಹಿಡಿದ್ಲು. ಸಿದ್ಗ "ಮುಂದ ಬಂದವನೆ, ಬೇ ಪೀಕ್ಲವ ಎಲ್ಲರಿಗಿಂತ

ಸಣ್ಣಾಕಿ ನಿಮ್ಮಿನೂ ನನಗೆ ಕೊಡು ನಾನೇ ಮದುವಿ ಮಾಡ್ಕೊಂಡು ಇಬ್ಬರನ್ನೂ ಸಾಕ್ತೀನಿ" ಅಂದ "ಆಹಾ, ನಿನ್ನ ಮಾರಿ ಹೋಗಿ ಕನ್ನಡಿಯೊಳಗ ನೋಡಹೋಗು, ಪರದೇಶಿ, ಬಂಗಾರದಂತ ಹೆಣ್ಣ ಹೆತ್ತು ನಿಮ್ಮಂತವರಿಗ ಕೊಡ್ತಿರೋದೆ ದೊಡ್ಡದು. ಗಿಳಿ ಸಾಕಿ ಗಿಡಗನ ಕೈಗ ಕೊಟ್ಟಂಗ" ಅಂತ ಮಾತೆ ಆಡದಂಗ ಬಾಯಿ ಬಂದ ಮಾಡಿದ್ಲು, ತಿಮ್ಮಿ, ಸಿದ್ಧ ಕೆಲ್ಸಕಿದ್ದ ನೋಣನಾಯ್ಕನ ಪತ್ರದಿಂದ ರೊಕ್ಕ ತಂದು ಮದವಿ ಮಾಡ್ಕೊಳ್ಳೊದಂತ ನಿಶ್ಚಯಿಸಿ ಮೂವರು ನೋಣನಾಯ್ಕ ಮುಂದ ಇದ್ದ ಸುದ್ದಿ ಹೇಳಿ ಎಲ್ಲ ಸೊಸೈಟಿಸೀರಿ, ಒಂದೊಂದ ತಾಳಿ, ಧೋತ್ರ ಹೆಂಡದ ಖರ್ಚಿಗ ಕೈಕಾಸಿಗಂತ ಹತ್ತು ಸಾವರ ತಂದು ಬಸವನ ಜಯಂತಿಗ ಮದ್ವಿ ಮೂರ್ತ ಇಟ್ಕೊಂಡ್ರು. ಮದ್ವಿ ಹತ್ರ ಬಂದಿದ್ದ ಪೀಕ್ಲಿ ಹೆಂಡ ಕುಡದು "ಚೆಂದಾಗಿದ್ದನನ್ನ ಮಂಚ ಒಯ್ದು ಮುರದು ಮೂಲಿಗ ಸೇರಿರೊ ಹಂಗ ಮಾಡಿದ್ನಲ್ಲೋ ನಿನ್ನ ಒಸಡಗಲಿ, ನನ್ನ ಮಕ್ಕಳ ಕಾರೇವ ಮಾಡಾಕ ಇಲ್ದಾಂಗಾತಲ್ಲೋ" ಸೆರಗ ಮುಚ್ಕೊಂಡು ಇಡೀ ಊರಿಗ ಕೇಳಿಸೋ ಹಂಗೆ ಅಳತೊಡಗಿದಳು.

ಮದ್ವಿವಾರ ಇರೊ ಹಂಗ, ಪೀಕ್ಲಿ ಸಾಲಿಗ ಹೋದಾಕಿನೆ ಮೈಲಾರಿ ಮಾಸ್ತರನ ಮುಂದ ಸಣ್ಣ ಹುಡ್ರು ಕೈಕಟ್ಕೊಂಡು ನಿಲ್ಲೊ ಹಂಗ ನಿಂತು " ಸಾ ನಿಮ್ಮತಾಗ ಒಂದ ಮಾತು ಆಡಬೇಕಿತ್ತು" ಪೀಠಿಗೆ ಹಾಕಿದ್ಲು. "ಏನ ಪೀಕ್ಲವ್ವ ಏನಾಗಬೇಕಿತ್ತವ್ವ" ಮೇಷ್ಟ್ರು ಗಡಾನೆ ಹೊರಗ ಹಾಕಕ ನೋಡಿದ್ರು "ಏನಿಲ್ಲಾ ಸಾ ಬಸವನ ಜಯಂತಿದಿನ ನಮ್ಮ ಹುಡ್ರ ಮದ್ವೆ ಐತೆ, ಒಂದ ಗಂಟಿ ಮಟ ನಿಮ್ಮ ಸಾಲಿ ಕಬ್ಬಿಣದ ಕುರ್ಚಿ ಬೇಕಿತ್ತು" ಮೇಸ್ಟ್ರು ಮಾರಿ ನೋಡಿದ್ಲು ಎಷ್ಟೋ ವರ್ಷಗಳ ಕಾಲ ಹುಡುಗರ ಕುಟಾಗ ನೆಲದ ಮೇಲೆ ಕುಂತು ಪಾಠ ಮಾಡಿ ಕಡೀಗ ಊರಾಗಿಂದ ಪಾಸಾಗಿ ದೊಡ್ಡ ಸಾಲಿಗ ಹೋಗೊ ಹುಡ್ರತಾವ ಟೀಸಿ ಕೊಡಾಕಂತ ಐದು ಹತ್ತ ಜೋಡ್ಸಿ ಒಂದ ಗಾಂಧಿ ಪೋಟಾನು ಒಂದೆಲ್ಡ ಕಬ್ಬಿಣದ ಕುರ್ಚಿ ತಂದಿದ್ರು, ಹೊಸದಾಗೆ ಬಂದ ಈ ಸವಾಲ ಎದರಿಸೋದ ಹೆಂಗಂತ ಮೇಷ್ಟ್ರು ತಲಿ ಕೆರ್ಕೊಂಡ್ರು. "ಸಾ ಏನ ಯೋಚ್ನೆ ಮಾಡಾಕ ಹತ್ತೀರಿ" ಎಚ್ಚರಿಸಿದ್ಲು, "ಅಲ್ಲ ಪೀಕ್ಲವ್ವ ಅದು" ಮಾತು ಸುರುಮಾಡೊ ಮದ್ಲೆ "ಹಂಗ ಅನ್ನಬೇಡಾ ಸಾ" ಒತ್ತಡ ಹೇರಿದ್ಲು, ಮೇಷ್ಟ್ರು ಯೋಚನೆಯೊಳಗ ಬಿದ್ರು, ಒಂದ ಸಲ ಈಕೀಗೆನಾರ ಕೊಟ್ಟು ರುಚಿ ತೋರ್ಸಿದ್ರ ಮುಗೀತು, ಮಂಜಪುರದ ಮಾನಗೆಟ್ಟ ಮಂದಿ ನಾವೇನ ಪೀಕ್ಲಿಗಿಂತ ಕಡಿಲಿದಿವೇನು? ಅಂತ ಗಂಟೆ ಬೀಳ್ತಾರ ಇವತ್ತೆ ಇಲ್ಲ ಅನ್ನಬೇಕು ಅನ್ನೋ ನಿರ್ಧಾರಕ್ಕ ಬಂದವರೆ "ನೋಡ ಪೀಕ್ಲವ್ವ ನನ್ನ ಮಾತು ಕೇಳು, ಇವು ಸ್ಕೂಲಿನವು ಹಂಗೆಲ್ಲಾ ಕೊಡಾಕ ಬರೋದಿಲ್ಲ. ನನ್ನ ಮನಿಯಾಗೇನಾರ ಇದ್ದಿದ್ರ ದೇವರಾಣೆಗೂ ಕೊಡ್ತಿದ್ದೆ" ಖಂಡ ತುಂಡಾಗೆ ಹೇಳಿದ್ರು. "ಹಂಗ ಅನ್ನಬೇಡ್ರಿ ಸಾ, ಅಪರೂಪಕ್ಕ ಮದ್ವಿ ಆಗಾಕ ಹತ್ತೈತಿ, ಹುಡ್ರು ಭೋ ಆಶಿ ಪಡ್ತವಾ, ನನ್ನ ಮಂಚ ಇದ್ದಿದ್ರ ನಾ ಏನ್ ಬರ್ತಿರಾಕಿಲ್ಲ, ಅವನ ಕದಕಟ್ಲೆ ಹೆಣ ಎಲ್ಲಿ ಬಿದ್ದನಾಯ್ಕ ಮುರ್ಕೊಂಡ ಬಂದು ಮೂಲಿಯೊಳಗೆ ಗೆದ್ಲು ಹಿಡಿಯೊ ಹಂಗ ಮಾಡಿಹಾಕದ" ಅಲ್ಲೇ ಸುರು ಹಚ್ಕೊಂಡ್ಲು, ಹಂಗೆ ಬಿಟ್ರ ಊರ ಮಂದಿ ಸೇರಿಸ್ತಾಳಂತ, "ಈಗ ನಿನಗೆ ಕೊಟ್ಟೆ ಅಂತಿಟ್ಕೊ ನಾಳೆ ಊರ ಮಂದಿ ಸುಮ್ಮನಿರ್ತಾರ, ಸಾ ನನ ಮಗಳನ್ನ ಹೊರಗ ಕುಂದ್ರಸಾಕು ಅಂತ ಒಬ್ಬ ಬರ್ತಾನ, ಸಾ ನಮ್ಮ ತಮ್ಮನ ಜವುಳಾ ಇಳಿಸಾಕು ಅಂತಂದು ಮತ್ತೊಬ್ಬ ಬರ್ತಾನ, ಸಾ ನಮ್ಮ ಮನಿದೇವರ ಫೋಟೋ

ಇಡಾಕು ಅಂತ ನೂರಾ ಎಂಟ ಕಾರಣ ಹುಡ್ಕೊಂಡ ಮಂದಿ ಪಾಳೆ ಹಚ್ತಾರ", ಮಾತ ಅರ್ಥಕ್ಕೆ ತಡದಾಕಿನ "ಎಯ್ ಭಾರಿ ಆತ ಬಿಡ್ರಿ ನಿಮ್ಮದು" ತನ್ನ ನಿತ್ಯದ ಧಾಟಿ ತಗದ್ಲು "ನೀ ಏನಾರ ಅನ್ನು ಪೀಕ್ಲವ್ವ ಕುರ್ಚಿಗಳನ್ನು ಹೊರಗಾ ಕೊಡಾಕ ಆಗೋದಿಲ್ಲ" ಅಂದ ಬಿಟ್ರು "ಊರ ಮಂದಿ ರೊಕ್ಕದಾಗ ತಂದಿರೋವು ಹೌದಲ್ರೀ" ಗದರಿಸಿ ಕೇಳಿದ್ಲು, "ಹೌದು" ಮೇಷ್ಟ್ರು ಹೆದರ್ಕೊಂಡೆ ಅಂದ್ರು "ಹಂಗಂದ ಮೇಲೆ ಊರ ಮಂದಿಗ ಕೊಡೊದಿಲ್ಲಂದ್ರ ಏನ ನಿಮ್ಮ ಸಮಾಚಾರ" ಜೋರಗೆ ಹೇಳಿದ್ಲು. ಮೇಸ್ಟ್ರು, ಅಕಿ ಬಾಯಿ ಮಾತಿಗ ಮದ್ಲು ಅಂಜಿದ್ರು, ನಂತರದಾಗ ಸುಧಾರಿಸಿಕೊಂಡವರೆ "ಏನಬೇ, ಕುರ್ಚಿ ಊರೋರಿಗ ಕೊಡಬೇಕಾ, ಈ ಸಾಲಿ ಮಂದೀದು, ನಂದು-ನಿಂದಲ್ಲ, ಕುರ್ಚಿ ಕೊಡಾಕ ಆಗಂಗಿಲ್ಲಾ ಅದೇನ ಮಾಡ್ತೀಯಾ ಮಾಡ್ಕೊಂಡಬಾ ಹೋಗು, ಬಂದಬಿಟ್ಲು ಒದರಾಡ್ಕೊಂತ, ಇಕಿ ಬಾಯಿಗ ಹೆದರಿ ಹೂಂ ಅಂತೀನಿ ಅಂದ್ಕೊಂಡಾಳ" ಯಾವತ್ತು ಮಾತಾಡದೋರು ಮಾತಾಡಿದ್ರು, ಪೀಕ್ಲಿ ಅಂಜಿದ್ಲು, ಆದ್ರು ತೋರಗೊಡದೆ, "ಹೂಂ ಆತ ಬಿಡ್ರಿ ನೀವು ಅಂದಂಗೆ ಆಗವಲ್ದಯಾಕ, ನಿಮ್ಮ ಅಣ್ಣನ ಮಗಳ ಮದ್ವಿಗ ನನ್ನ ಮಂಚ ಒಯ್ದಿದ್ರಲ್ಲಾ ಬಾಡಿಗೆ ಕೊಟ್ಟರೇನು?" ಅವರ ಮಾರಿನೋಡಿದ್ಲು, ಮೇಷ್ಟ್ರ ಮಕ ಸಣ್ಣದಾತು "ನಿಮ್ಮ ಹಾಳ ಕುರ್ಚಿ ಮ್ಯಾಲ ನನ್ನ ಹರಕ ಸಿರೀನೂ ಇಡಂಗಿಲ್ಲಾ" ತಿರಗಿ ನೋಡದಂಗ ಸಾಲಿಯೊಳಗಿಂದ ಹೊರಗ ಬಂದ್ಲು. ಮೇಷ್ಟ್ರಿಗ ಅವಮಾನ ಆತು. ಕೇಳಿದ ತಕ್ಷಣ ಕೊಟ್ಟು ಮಾನ ಉಳಸ್ಕೊಂಡಿದ್ರ ಪಾಡಿತ್ತು. ಬಾಯಿ ಬಿಟ್ಟು ಬಣ್ಣ ಕಳ್ಕೊಂಡೆ ಅಂತ ಬಂದ ಸಿಟ್ಟನ್ನ ಗಲಾಟೆ ಮಾಡ್ತಿದ್ದ ದ್ಯಾಮನ ಮಗ ದುರುಗನ ಎಬ್ಬಿಸಿ ಬಾಸಾಳ ಬರೊ ಹಂಗ ಬಾರ್ಸಿ ಕಮ್ಮಿ ಮಾಡ್ಕೊಂಡ್ರು, ಪೀಕ್ಲಿಗ ಸಂಕಟ ಆಗಿತ್ತು, ಇಂತೋರ ಮದ್ವಿಗ ಇಲ್ಲಾ ಅಂದಿರಲಿಲ್ಲಾ, ಕೊಟ್ಟ ಕೊಟ್ಟೆ ಹಾಳ ಮಾಡ್ಕೊಂಡೆ ನನ್ನ ಮಂಚ, ಕೈಯಾನ ಬಂಗಾರದ ಬಳಿ, ಕೊಳ್ಳಾನ ಕಾಸಿನ ಸರ ಕಿವಿಯಾನ ವಜ್ರದ ಬೆಂಡಾಲಿ ಹೋದ್ರು ಏನೇನು ಅನಿಸಿರಲಿಲ್ಲ ಹಾಳ ಮಂಚ ಹೋಗಿದ್ದು ನನ್ನ ಸರ್ವಸ್ವ ಹೋದಂಗಾತು ಅಂತ ಮುಲಕಿ ಸುಮ್ಮನಾದ್ಲು.

ಮಂಜಾಪುರದಾಗ ಕೆಲ್ಸ ಸಿಗದಿಕ್ಕ ಮಂದಿ ಮಂಡೂರು, ಮಾಡೇನಹಳ್ಳಿ ಮಟಾನು ಹೋಗಿ ಕೂಲಿ ಮಾಡತೊಡಗಿದರು. ಮಂಡೂರ ಕಾಟೇಗೌಡ ಆಳ ಕರಿಯಾಕ ಟ್ರಾಕ್ಟರ ಬಿಟ್ಟು, ಅವನ ಕಿರಿ ಮಗ ಬೊಟೆಗೌಡ, ಸಂಜಿಮುಂದ ಬಂದು ಊರಾಗ ರಾತ್ರಿ ಕಳೆದು ಬೆಳಗಾಮುಂಜಾನೆ ಮಂದಿ ಕರ್ಕೊಂಡು ಹೊಕ್ಕಿದ್ದ ಒಂದು ವಾರ ಟ್ರಾಕ್ಟರ್ ಬಾಡಿಯೊಳಗೆ ಮಲಗ್ತಿದ್ದ, ಅದೆಂಗ ಪೀಕ್ಲಿ ಕೊನೆ ಮಗಳು ನಿಮ್ಮಿಕೂಡ ಸಖ್ಯ ಬೆಳಿತೊ ಪೀಕ್ಲಿನ ಆಳಮ್ಯಾಲ ಮೇಸ್ತ್ರಿ ಮಾಡಿ ಕೆಲ್ಸ ಮಾಡದಂಗೆ ನೋಡಿಕೊಂಡು ಯಾವಾಗಲಾರೊಮ್ಮ ಐದ ಹತ್ತು ಖರ್ಚಿಗೆ ಕೊಡೋದು ಸಂಜಿ ಮುಂದ ಒಂದೊಂದ ಬಾಟಲು ತಂದ ಕೊಡೋದ ಮಡಿ ಅವರ ಮನಿಯಾಗ ಮಲಗೋ ವ್ಯವಸ್ಥೆ ಮಾಡಿಕೊಂಡ. ಪಂಚಮಿ ಹಬ್ಬದಾಗ ಅಡ್ವಾನ್ಸ್ ಕೊಟ್ಟು, ಸರ್ವತಿಗ ಮನಿಗ ಬಂದ, ಗೋಣಿ ತಾಟ್ಟು ಹಾಸಿ ಹೈಬ್ರಿಡ್ ಜ್ವಾಳದ ಪಾಕೇಟಿನ ಚೀಲದಾಗ ಹರಕ ಅರವಿ ಹಾಕಿ ಹೊಲದಿದ್ದ ತಲೆದಿಂಬ ಕೊಟ್ಟು ಮಲಗಿಸಿದ್ಲು, ಮುಂಜಾನೆ ಬೊಟೆಗೌಡವದ್ದಾಗ "ಧಣಿ ನಿಮ್ಮಂತ ದೊಡ್ಡ ಮಂದಿ ಬಂದು ನೆಲದ ಮ್ಯಾಲ ಮಕ್ಕೊಬಾರ್ದು" ಹೇಳಿನಕ್ಕಳು ಗೌಡಗ ತಲೆ ಬುಡಾನೆ ಅರ್ಥ ಆಗಲಿಲ್ಲಾ. "ಅದೇ ಗೌಡ್ರೆ ಮುರದು ಮೂಲೆಸೇರಿರೊ ಮಂಚ ರಿಪೇರಿ"

ರಾಗ ಎಳದ್ನು, ಬೋಟೆಗೌಡ, ಅರ್ಥ ಮಾಡಿಕೊಂಡವನ ಕಿಸೆದಾಗಿಂದ ಇನ್ನೂರ ರೂಪಾಯಿ ತಗದಕೊಟ್ಟ, ಪೀಕ್ಲಿಗ ಖುಷಿಯೋ ಖುಷಿ. ಮಂಚದ ಹತ್ರ ಬಂದು ಒಂದ ಸಲ ಕೈಯಾಡಿಸಿದ್ನು " ಈಗ ನನಗೂ ನಿನ್ನಂಗ ವಯಸ್ಸಾತು. ನಿನ್ನ ಕೇಳಲ್ಲ ನನ್ನೂ, ನಿನ್ನ ರಿಪೇರಿ ಮಾಡ್ಸಿ ಮಲಗಾಕ ನನ್ನ ಎಲಬೆಲ್ಲಾ ನೋಯಿತಾವ ನೀ ಹಿಂಗೆ ಇದ್ದು ಬಿಡು" ಅಂದಾಕಿನೆ ಹೆಂಡದಂಗಡಿಗ ಹೋದ್ನು, ಹಳೆ ಸಾಲಾನೆಲ್ಲಾ ತೀರಿಸಿ ರೋಖಡಿ ಕೊಟ್ಟ ಒಂದ ಖರೀಧಿಸಿದ್ವನ್ನ ಅಂಗಡಿಯೊಳಗ ಕುಂತಿದ್ದ ಶಂಕಿ ನೋಡಿದ ಅನುಮಾನ ಬಂದ ಕೇಳಿದ " ಏನ ಪೀಕ್ಲಿ ನೂರ ನೂರದೆ ತಗಿಯಾ ಹತ್ತಿ ಏನ ವಿಷಯ", ಕೊಂಕ ನುಡಿದ, ಏನಿಲ್ಲಪ್ಪ ಪಂಚಮಿ ಅಡ್ವಾನ್ಸ್ ಇಸ್ಕೊಂಡಿದ್ದೆ, ಸಾಲ ಜಾಸ್ತಿಯಾಗಿತ್ತು, ಸಾಲ ಕೊಡದಿದ್ರೆ ಮತ್ತೊಮ್ಮೆ ಉದ್ರಿ ಕೊಡದಿಲ್ಲಾಂತ ಕೊಟ್ಟೆ" ಅಂದಾಕಿನೆ, ಎರಡ ಬಾಟಲು ಹಿಡ್ಕೊಂಡ ಮನಿಗ ಬಂದು ತತ್ತಿಸಾರ ಮಾಡ್ಸಿ ಗಡದ್ದಾಗಿ ಉಂಡು ಮನಿ ಮುಂದ ಗೋಣಿ ಚೀಲದ ಮೇಲೆ ಅಡ್ಡಾಗಿ, ಅಮಲಿನ್ಯಾಗ, " ಕೇಳ್ರೋ ಮೀಸೆ ಇರೋರ, ನನ್ನ ಮಂಚ ಹೇಂಗಿತ್ತಂದ್ರ, ಮರಾಜನ ಒಡ್ಡೋಲಗದಂಗಿತ್ತು. ನಾನ ಹೆಂಗಿದ್ನಂದ್ರ ಮಂಚದಿಂದ ಇಳಿಯದ ಮರಾಣಿಯಂಗೆ" ಕನವರಿಸ್ತಾ, ಮನಿಯೊಳಗ ಅವಳ ಮಗಳು, ಬೋಟೆಗೌಡನ ಕೂಡ ಮುರುಕ ಮಂಚದ ಪಕ್ಕೆ ತೆಕ್ಕಿ ಬಡ್ಕೊಂಡು ಬುಸ್ ಗುಡೋದ ಕೇಳಿ, ಲಂಗೂರ ಸಾಬುನ ಪಕ್ಕದಾಗ ಮಕ್ಕೊಂಡಿದ್ದ ದಿನ ನೆನಪಾಗಿ, ಎಲ್ಲೋ ತೇಲಾಡಿ ದಂಗಾಗಿ, ಉಲ್ಡಾಡಿ, ಗೊರಕಿ ಸುರು ಮಾಡಿದ್ನು.

ಜೋಗ್ಯಾ ಮತ್ತು ಬೆದರು

ಅಲ್ಲಿ ನೆಟ್ಟ ನೋಟ ಹಂಗೆ ನೋಡ್ತಾನಿಂತ, ಯಾವಾನಾರ ಒದ್ದಾನಂತ ಅದನ್ನ ನೋಡ್ತಾನೆ ಹೋದ, ಲಬ್ಬೇರ ಅಂಗಡಿದಾಟಿ, ಮಾನಾಚಾರಿ ಮನಿತದಾಡು, ಪಂಚಾತಿಕಟ್ಟೆ ತಿರವಿನವರಿಗ ಅಲ್ಲೇ ನೋಡ್ತಿದ್ದೋನು ಪಾಂಡುಗೌಡ ಪಂಚಾತಿ ಛೇರ್ಮನ್ ಆದಿಂದ ದುಡ್ಡ ಹೊಡಿಯಾಕ ಇದ್ದ ಚರಂಡಿ ಆಳಕಮ್ಮಿ ಆತು ಅಂತಂದು ಮತ್ತೊಂದ ಅಡಿ ಒಳಗ ಇಳಿಸಿದ್ದ ಆ ಚರಂಡಿ ನೆನಪಾಗದೆ ಬಕ್ಕ ಬರ್ಲೆ ಬಿದ್ದಾಗ್ಲೆ ನೋಡೊದ ಬಿಟ್ಟು 'ಸತ್ನೆಯವ್ವ' ಅಂದು ಅರಬಾಡಿಸಿ ಎದ್ದು ಯಾರಾರು ನೋಡಿದ್ರೇನಂತ ಗಮನಿಸಿದ. ಆದ್ರು ಅವನ ಕಣ್ಣಿನೊಳಗ ಸೆರೆ ಹಿಡ್ಕೊಂಡಿರೊ ಆ ನೋಟ ರೀಲಿನಂಗ ಅವನ ತಲಿಯಾಗೆಲ್ಲಾ ಸುತ್ತಾಕ ಹತ್ತಿತು. ಜೋಗ್ಯಾ ಉರ್ಫ್ ಜೋಗಿ, ಹೆಸರಿಗ ತಕ್ಕಂಗ ಎಣ್ಣಿ ಜೋಗಿನ ಆಗಿದ್ದ. ಹನ್ನೆಲ್ಡ ವರ್ಷದ ಜೋಗಿ ಒಂದೇಳಂಟ ವರ್ಷದೋನಂಗ ತೆಳ್ಳನ ಕೈಕಾಲು ಚೊಟ್ಟಗಟ್ಟಿದ ಮಕ, ಜಡಿಗಟ್ಟಿರೊ ಅರ್ಧ ಮಾರುದ್ದ ಕೂದ್ಲು, ಕರ್‍ರನ ಬಣ್ಣ, ವಿಚಿತ್ರ ಕೋಲಮಕ, ಯಾವಾಗ ನೋಡಿದ್ರು ಮೂಗಿಂದ ಸೋರೊ ಗೊಣ್ಣಿ, ಇಡಿ ಊರ ತುಂಬ ಹಂದಿ ಅಡ್ಡಾಡೊ ಹಂಗ ಚರಂಡಿ ಪಕ್ಕದಾಗೆ ಅಡ್ಡಾಡ್ತಿದ್ದ. ಯಾರಾದರ ಮನಿಯಾಗ ಸತ್ತಿದ್ರ ಅವರ ಮನಿಯಿಂದ ಒಂದ ಹತ್ತ ಮಾರ ದೂರದಾಗ ಕುಂತು ಅವರ ಅಳ್ತಿರೋದನ್ನ, ಅವರ ಮನಿಗ ಬರೊ ಬೀಗರನ್ನ, ನಡಿಯೊ ಆಗು ಹೋಗುಗಳನ್ನು ಮೈಮರತ ಗಮನಿಸ್ತಿದ್ದ. ಈ ಮಂದಿನ -ಜನ ಮುಟ್ಟರದ ಕಾರಣ ಯಾರಾರು ಗಮನಿಸಿ ದೂರದಿಂದಲೇ ಒಂದ ಪತ್ರಾವಳಿಯೊಳಗ ಏನಾರ ಚೂರು ಪಾರ ತಿಂದ ಉಳಿದಿದ್ದನ್ನ ದೂರದಿಂದ್ಲೆ ನಿಂತು, ನಾಯಿ ಮುಂದ ಬಿಸಾಡೊ ಹಂಗ ಬಿಸಾಡಿಹೊಕ್ಕಿದ್ರು, ಅದೇ ಮಹಾಪ್ರಸಾದ ಅಂತ ಜೀವನದಾಗ ಕಂಡರಿಯದ ಮೃಷ್ಟಾನ್ನ ಸಿಕ್ಕಂಗ ಖುಷಿಯಿಂದ ಸಾವಿರ ಜನ್ಮದ ಹಸಿವನ್ನ ಹಿಂಗಿಸಿಕೊಳ್ಳೊಹಂಗ ಗಬಗಬಾಂತ ತಿಂದು ಬಿಡ್ತಿದ್ದ. ಯಾರಾದಾರ ಮದ್ವಿ ಆಗ್ತಿದ್ರ ಅವನ ಕೇರಿ ಪಾಪೂಸನೆ ಬ್ಯಾಂಡ್ ಒಯ್ತಿದ್ದ ಜಿಂಗಲ್ ಹೊಡಿಯಾಕೊ ಇಲ್ಲಾ ಬ್ಯಾಂಡ್ ಮುಂದ ಆ ತಾಳಕ ತಕ್ಕನಂಗ ಎಲಬೆ ಇಲ್ಲದಿರೊ ಮೈಯನ್ನ ಆಕಡೀಗೊಮ್ಮೆ ಈ ಕಡೀಗೊಮ್ಮೆ ಕುಣಿಸ್ತಾ, ಒಂದ ಸಲ ಜೋರಾಗಿ ಮೂಗ ಎಳಿತಾ, ತಲಿಯಾಗ ತುಂಬಿಕೊಂಡಿದ್ದ ಹೇನು, ಸೀರು ಕಡದಾಗೊಮ್ಮೆ ಪರಪರಾಂತ ಕೆರ್ಕೊಂಡು, ಉಗಾರಗ ಬಂದಿರಬಹುದಾದ ಹೇನುಗಳನ್ನು ಹೊಡಿಯಾಕ ಮ್ಯಾಳ ಬಿಟ್ಟು ದೂರ ಓಡ್ತಿದ್ದ. ಮೈಮೇಲಿನ ಅಂಗಿ ಹರಿದು ಗಂಟ ಹಾಕಾಕ ಆಗದಷ್ಟು ಗಂಟ ಕಟ್ಟಿಯಾಗಿತ್ತು. ಹಿಂದ ಎರಡೂ ಕಡೆ ಹಾಕಿದ್ದ ತ್ಯಾಪಿಯೊಳಗಿಂದ ಒಂದ ಹಿಡಿ ಆಟ ಇರೋ ಎರಡು ಕುಂಡಿ ಕಾಣ್ತಿದ್ದು, ಮುಂದ ಹಾಕ್ಕೊಳಾಗ ಗುಂಡಿ ಇಲ್ಲದೆ, ಉಡದಾರವಾಗಿ ಕಟ್ಟಿದ್ದ ಸೂತ್ಲಿದಾರಕ್ಕ ಒಂದ ಕಡ್ಡಿಯಿಂದ

ಬೀರಿ ಮಾಡಿ ಚಣ್ಣಾನ ಒಳಗ ಸಿಗಿಸಿ, ಬಿರೀ ತಿರುಗಿಸಿದ್ದ. ಅದು ಸೊಂಟದ ಚರ್ಮಕ್ಕ ತಾಗಿ ತಾಗಿ ಒಂದ ಬೊಟ್ಟು ಚರ್ಮ ಕೊಳತು ಗಾಯ ಆಗೋಹಂಗ ಮಾಡಿತ್ತು.

ಜೋಗ್ಯಾಗ ಮತ್ತ ಅದು ನೆನಪಾತು ಬಿದ್ದ ಎದ್ದಿದ್ದನ ಲೆಕ್ಕಿಸದೆ ಖಂಡೇಗೌಡ್ರ ಹೊಸಮನಿ ಮುಂದಿಂದ ಮತ್ತೊಂದ ಸಲ ಹಾಯೋ ಮನಸ ಮಾಡಿದ. ಮದಲಸಲ ಬಂದಾಗ ಖಂಡೇಗೌಡನ ಮಗ ಸಣ್ಣೇಗೌಡನ ಮಗಳು ಹೆಚ್ಚು ಕಮ್ಮಿ ಅವನ ವಯಸ್ಸಿನವಳೇ ಇರಬೇಕು ಹೊಸ ಅರಿವಿ ತೊಟ್ಕೊಂಡು ಮುದ್ದ ಮುದ್ದಾಗಿ ನಿಂತಿರೋದ ಕಂಡು ಹೊಟ್ಟೆ ಉರದಿತ್ತು "ಛೇ ಇವ್ನವ ಎಂಥ ಮನಿ ಕಟ್ಟಿಸಾಕ ಹತ್ಯಾನಪ್ಪ ಈ ಸೂಳಿಮಗಗೌಡ, ನಮ್ಮ ಮಾರಜ್ಜಿ ಹೇಳ್ತಿದ್ದ ರಾಜನ ಅರಮನಿ ಹಿಂಗ ಇರಾಕ ನೋಡಂತ" ಖಂಡೇಗೌಡ ಕಟ್ಟಿಸ್ತಿದ್ದ ಎಲ್ಡ ಅಂತಸ್ತಿನ ದೊಡ್ಡ ಮನಿ ನೋಡ್ತಾ ಮ್ಯಾಲ ನೋಡ್ದ. ಮನೀಗ ದೃಷ್ಟಿ ಬೀಳ ಬಾರದಂತ ಕಟ್ಟಿದ ಬೆದರಿಗ ಹರಿಯದಿರು ಒಂದು ಹೊಸ ಅರಿವಿಯಂತಿರೊ ಅಂಗಿ ಚೆಣ್ಣ ಕಂಡಿದ್ದೆ ಅವನ ಎದಿಯಾಗ ನೂರ ಕನಸು ಮೂಡಿಸಿತ್ತು ಗೌಡ್ರ ಹುಡಗಿ ತನ್ನ ಅಸಹ್ಯ ಮಕ ನೋಡಿ ಹೀಯಾಳಿಸಿ ಖೇದ ಪಟ್ಕೊಳೊ ಮದ್ಲು ಜಾಗ ಖಾಲಿ ಮಾಡಿದ್ದ. ಅಲ್ಲಿಂದ ರೊಂಯ್‌ಯಂತ ದುರಗವ್ವನ ಗುಡಿಮಟ ಓಡಿದ. ಗೋಲಿ ಆಡ್ತಿದ್ದ ಹುಡಿಗರು, ಗೋಲಿಕದ್ದು ಮುಕಳಾಗ ಅಡಗಿಸಿಟ್ಟು ಕಾಣದಂಗ ಓಡಿ ಹೊಕ್ಕಾನಂತ ಹಡಪಹತ್ತಿರೊ ನಾಯಿನ ಗದರಿಸಿದಂಗ ಗದರಿಸಿ ಗದುಮಿದ್ರು. ಅಲ್ಲಿ ನಿಲ್ಲಾಕ ಆಗ್ಲಿಲ್ಲಾಂತ, ಪಂಚಾತಿ ಕಟ್ಟಿ ಹತ್ರದ ಧ್ವಜದ ಕಂಬಕ ಅಂಡೂರಿದ, ಬಿಸಲಾಗ ಸೀಮೆಂಟ ಕಾದಿದ್ಕ ಕುಂಡಿ ಚುರ್ರುಗುಟ್ತು, "ಥು ಇವ್ನವ್ವ ಕಟ್ಟಿ ಕಾದ ಬಿಟ್ಟೈತಿ" ಅಂದ್ಕೊಂಡವನೆ ಇರುಪಣ್ಣಾನ ಅಂಗಡಿ ಓಣಿ ಹಿಡಿದ. ಹೊಗ್ತಿದ್ದೋನಿಗ ಮತ್ತ ಆ ಬೆದರು ನೆಪ್ಪಾತು" ಅಲ್ಲಾ ಗೌಡ್ರು ಆ ಮನಿಮ್ಯಾಕ ಯಾಕಿಂಗ ಹೊಸಅರವಿತೊಡಿಸಿ ಹಿಂಗ ಗೊಂಬಿ ನಿಲ್ಸ್ಯಾರ. ನಂಗಾರ ಕೊಟ್ಟು ನಿಲ್ಲಲೇ ಒಂದು ದಿನ ಅಂದಿದ್ರ ಮುಂಜಾನಿಂದ ಸಂಜಿ ಮಟನಿಂತ ಅರವಿ ಹೊಡ್ಕೊಂಡ ಬಂದ ಬಿಡ್ತಿದ್ದೆ. "ಯಾರು ಇದ್ದಂಗ ಕಾಣಲಿಲ್ಲಾ, ಅಲ್ಲೆ ಮರಳಿನ ರಾಸಿಮ್ಯಾಲ ಕುಂತು ನೋಡ್ದಾನೋಡ್ದಾ ಖಂಡೇಗೌಡ ಕೆಮ್ಮಿದಂಗಾಗಿ "ಬಂದ್ನಪ್ಪ ಇವ್ನವ್ವನ ಮುದಿಯಾ, ಮಾತೇತ್ತಿದ್ರ ಲೇ ನಿಮ್ಮವ್ವನ ಕೀಳ ಜಾತಿ ಸೂಳಿಮಗನ, ಇಲ್ಲೇನ ನಿಮ್ಮಪ್ಪನ ಗಂಟ ಇಟ್ಟಿ ಏನಲೇ ಶನಿ ಸೂಳೆಮಗನ ಓಡ ನಿನ್ನವ್ವನ" ಅಂತ ಹಂದಿಗ ಗದರಿಸೋ ಹಂಗ ಗದರಿಸ್ತಾನ,ಅವನ ಕೈಗೇನಾರ ಸಿಗ್ತಂದ್ರ ಅದನ್ನೆ ತಗದ ಬೀಸಬಿಡ್ತಾನ ಹಾಳಾದೋನ ಅನ್ಕೊಂತ ಎದ್ದು ಬಿದ್ದು ದಿಕ್ಕಾಪಾಲಾದ.

ಹಂಗೇ ಸುತ್ತಾಡ್ತಾ ಮ್ಯಾಗಳೋಣಿಗ ಬಂದ. ಹೆಂಡ ದಂಗಡಿ ಜುಮ್ಮವ್ವ ಹೆಂಡಕ್ಕ ನೀರ ಸೇರ್ಸಿಸೇರ್ಸಿ ಕಾಸ ಮಾಡಿ, ಗಡದ್ದಾಗೊಂದು ಗುಡಿಸಲಿದ್ದಿದ್ದನ ಸರ್ಕಾರ ಜಂತಾಮನಿ ಸ್ಕೀಮನ್ಯಾಗ ಕೊಟ್ಟ ಹಂಚು, ಕಿಟಕಿ, ಬಾಗಿಲ ಸೇರ್ಸಿ ಹೆಂಡದ ದುಡ್ಡಿಂದ ಒಂದ ದೊಡ್ಡಮನೀನ ಕಟ್ಟಿಸಿಕೊಂಡಿದ್ಲು. ಹಟ್ಟಿ ಮಂದಿ ಹೆಂಡ ಕುಡದು ಕಳ್ಳಾಗ ತೂತಾಗಿ ಸಾಯೋದ ಕಂಡು ಸರ್ಕಾರ ಹೆಂಡ ನಿಲ್ಲಿಸಿಂದ ದಾವಣಗೇರಿ ಪ್ಯಾಟೆಯಿಂದ, ಮಾನಣ್ಣ ಸೀಜನಿಗ ಯಾರು ಕೊಳ್ಳದ ಕೊಳತ ಹಣ್ಣಿನ ರಾಶಿಯೊಳಗಿಂದ ಸೋಸಿಸಿಗೊ ಮಾನಣ್ಣ ತಂದ ಮಾರೋದು ಹಲಸಿನ ಹಣ್ಣಿನ ಸೀಜನ್ನಿಗ ಸಿಂಬಳದಂತ ಹಲಸ ತಂದು ತಾಂಡೆ ದುರಗವ್ವನ ಗುಡಿಯಾಗಿಟ್ಟು ಮಾರ್ತಿದ್ಲು. ಹಣ್ಣಿನ ಗಬ್ಬುವಾಸನಿಗ ಇಡಿ ಊರಿನ ನೊಣಗಳೆಲ್ಲಾ ಮುಕ್ರತಿದ್ವು. ಅವನ್ನೆ ಕೊಳ್ಳಾಕ ಹಟ್ಟಿ

ಹುಡ್ರು ನೊಣಗಳನ್ನ ಒಡಿಸಿ ಅವರೆ ನೊಣಗಳಂಗ ಮುಗಿ ಬೀಳ್ತೀದ್ರು. ಒಂಚೂರ ಹೆಚ್ಚಾಗಿ ಕೊಟ್ಯಾಳಂತ ಮಾಮಿ ಅನ್ನೋನ್ಯಾರೊ, ದೊಡವ್ವ ಅನ್ನೋನ್ಯಾರೋ, ಯಜ್ಜಿ ಅಂತ ಕರಿಯೋರ್‍ಯಾರೊ, ಸಣ್ಣವ್ವ ಅಂತ ಅಂದಂದು ಹಣ್ಣ ಖರೀಧಿ ಮಾಡ್ತಿದ್ರು. ಅವಾಗ ಕಲ್ಲಂಗಡಿ ಹಣ್ಣಿನ ಸೀಜನ ಆಗಿದ್ಕ ಜುಮ್ಮವ್ವ ಮುಕಳಿಸುಟ್ಟ ದ್ವಾರಗಾಯಿಯಂತ ಹಣ್ಣ ತಂದ ಗುಡಿಯಾಗ ಒಟ್ಕೊಂಡಿದ್ಲು, ಜೋಗ್ಯಾ ಹೋಗಿ ಆಶಿ ಕಣ್ಣು ಬಿಟ್ಕಂಡ ನೋಡ್ತಾನಿಂತ. ಅದೇ ಹೊತ್ತಿಗ ಸರಿಯಾಗಿ ಮ್ಯಾಗಲ ಮನಿ ಕೊಂಡ್ಯಾಡನ ಮಗಳ ರತ್ನ ಬಂದಾಕಿನ ಹತ್ತ ಪೈಸೆ ಕೊಟ್ಟು ಒಂದ ಕರಕಿ ಖರೀದಿಸಿ ಗುಡಿ ಅಂಗಳದಾಗ ನಿಂತ್ಕೊಂಡು ಕರಕಿ ನಡಕ್ಕ ಬಾಯಿ ಹಾಕಿ ತಿನ್ನೋದನ್ನ ನೋಡ್ತಾ ನಿಂತ. ಅಕಿ ಹೆಂಗಬಾಯಿ ಆಡಿಸ್ತಾ ತಿಂತಾಳೊ ಹಂಗೆ ಇವನು ತಿನ್ನೋನಾಟಕ ಮಾಡ್ದಾ. ಅವನು ತನ್ನ ಕಡೀಗ ಕಣ್ಣು ಬಿಡ್ತಿರೋದ ನೋಡಿ "ಲೇ ಜೋಗ್ಯಾ ಹೋಗಲೇ ಅತ್ಲಾಗ ದೃಷ್ಟಿ ಬಿಡಬ್ಯಾಡ ನಾಳಿಕನನ್ನ ಹೊಟ್ಟೆ ಜಾಡ್ಸಿತು" ಅಂತ ಗದರಿದ್ಲು ಅವನಿಗಿಂತ ಸಣ್ಣಾಕಿ ಅಂತ ತಿಳದಿದ್ದೆ" ಲೇ, ನಿಮ್ಮ ಮನಿತಾವ ಬಂದೀನೇನು ನಿಮ್ಮಪ್ಪಂದೇನು ಗುಡಿಯಲ್ಲ, ಇಲ್ಲಿ ಯಾರ ಬೇಕಾರ ನಿಂತ್ಕೊಬಹುದು" ಅಂದವನೆ, ಅಕಿ ಹಣ್ಣೊಳಗ ಬಂದ ಬೀಜಾನ ನಾಲಿಗಿ ಮ್ಯಾಲ ತಂದು ಥು! ಅಂತ ಹೊರಗ ಉಗಳಿದ್ಲು, ಅದನ್ನೆ ಕಾಯ್ದಿದ್ದ ಜೋಗ್ಯಾ, ಗಬಕ್‌ಅಂತ ಎತ್ಕೊಂಡು ಕಚ ಕಚಾಂತ ಅಗದು ನುಂಗಿ, ಅಕಿ ಹಣ್ಣು ತಿಂದು ಸಿಪ್ಪಿ ಎಲ್ಲಿ ಬಿಸಾಡ್ತಾಳಂತ ಕಾದ್ಕೊಂತ ನಿಂತ, ರತ್ನಿ ಕೆಂಪಗಿರೊದನ್ನೆಲ್ಲಾ ಹಲ್ಲಿಂದ ಗೆಬರಿ ತಿಂದ್ಲು. ಜೋಗ್ಯಾ ಗುಡಿ ಮುಂದಿನ ಕಲ್ಲಮ್ಯಾಲ ನಾಯಿ ಹಂಗ ಕಾದ ಕುಂತ, ಕೆಂಪದ ಮುಗಿದಿಂದ ಬೆಳಗಿರೋದನೆಲ್ಲಾ ಗೆಬರಿ ಗೆಬರಿ ಕೆಲಗಿನ ಸಿಪ್ಪೆಬರೋವರಿಗ ತಿಂದ, ಅಲ್ಲೆ ಪಕ್ಕದಾಗ ತಾಂಡೆದುರ್ಗವನ ಗುಡಿಮುಂದ ಸಗಣಿ-ಕಸಗುಡಿಸಿ ಒಟ್ಟು ಮಾಡಿದ್ರಾಗ ಬಿಸಾಡಿದ್ಲು. ಕಾದಕ್ಕೊಂದೆ ನಿಂತಿದ್ದ ಜೋಗ್ಯ ಗಬಕ್ಕಂತ ಎತ್ಕೊಂಡು ಅದರ ಮ್ಯಾಲ ಮೆತ್ಕೊಂಡಿದ್ದ ಕಸಾನೆಲ್ಲಾ ವರಸಿ ಸಿಪ್ಪೆತಿಂದ ಹೊಟ್ಟೆ ತುಂಬ್ಕೊಂಡ. ಜುಮ್ಮವ್ವನ ಹೆಂಡ ಬಂದಾದಿಂದ ಹೆಂಡ ಹೇರೊ ಕತ್ತಿ ಬೇಕಾರಾಗಿತ್ತು. ಅದಕ್ಕಿನೆಲ್ಲಿ ಕಾಳಜಿ ಮಾಡೊದಂತ ಹುಡ್ರುಪಡ್ರು ತಿಂದ ಬಿಸಾಡಿದ ಸಿಪ್ಪಿ ಹಾಕಿದ್ರಾತಂತ, ಅಲ್ಲೆ ಪಕ್ಕಕ್ಕ ಕಟ್ಟಿದ್ಲು. ಹುಡ್ರೆಲ್ಲಾ ತಿಂದ ಆದ ಮ್ಯಾಲ 'ಲೇ ಸೋಮ, ಭೀಮ, ಕಾಳ, ತತ್ತಾರಲೆ ಸಿಪ್ಪಿ' ಅಂತ ಹತ್ರ ಇಸ್ಕೊಂಡ ಒಟ್ಟು ಮಾಡಿ ಕತ್ತಿಗ ಹಾಕ್ತಿದ್ಲು, ಅದನ್ನ ನೋಡಿದ ಜೋಗ್ಯಾ, ಅದ್ರಾಗ ಯಾವದೊ ಒಂದ ಸಿಪ್ಪಿ ಕೆಂಪಗ ಕಾಣ್ತು ಅರ ಬಾಡಿಸಿ ಮುಂದ ಹೋದವನೆ ಕೈಹಾಕದ, ತನ್ನ ಹಿಡಿಯಾಕ ಬಂದಾನ ಇಂವss ಅಂದಿದ್ದೆ. ಹಿಂದಿನೆಲ್ಡಕಾಲನ್ನು ಎತ್ತಿ ಒದಿಯಾಕಬಂತು. ಕತ್ತೆ ಒದಿತೈತಿ ಅಂತ ಗೊತ್ತಿದ್ಕ ಬಹಳ ಹುಷಾರಿಂದ ತಪ್ಪಿಸಿಕೊಂಡು, ಸಿಪ್ಪೆತಕ್ಕೊಂಡ "ನನಗೆ ಒದಿಯಾಗ ಬರ್ತಿ ನಿನ್ನವ್ವನ ಕತ್ತಿ ಜಾತಿದ" ಅಂದವನೇ ಎಲ್ಡ ಕಲ್ಲುಗಳನ್ನ ತಗೊಂಡು ರೊಂಯ್ಯಂತ ಬೀಸಿದ. ಹೊಡ್ತ ಬಿದಿದ್ಕ ಕತ್ತಿ ಫುರ್, ಫುರ್‌ಂತ ಮೂತಿ ಸಿಂಡರಿಸಿ ಆ ಹೂಂ ಆ ಹೂಂ... ಅಂತ ತನ್ನ ಎದ್ಬೋಡಿ ರಾಗ ಸುರು ಹಚ್ಕೊಂತು. "ಯಾವನ್ನೆ ಭಾಡಕಾವ ಮಗ, ಬಗಲಾಗ ಹಲ್ಲ ಬಂದಾವೇನು" ಹಣ್ಣಿನ ಪುಟ್ಟಿ ಬಿಟ್ಟಾಕಿನ ಓಡಿ ಬಂದ್ಲು" ಮತ್ತ ಅದ್ಯಾಕ ಒದಿಯಾಕ ಬರಬೇಕ ಬೇ" ಅಂದ ಜೋಗ್ಯಾ" ಓ ನೀನೇನು ಹಾಠಗಳ್ಳ, ನೀ ಸಿಗು ನನ ಕೈಯಾಗ ನಿನ್ನ ತಲಿ ಬೋಳ್ಸಿ ಅದ್ರ ಮ್ಯಾಲ ಕುಂದ್ರಿಸಿ ಮೆರವಣಿಗೆ ಮಾಡ್ಲಿಲ್ಲಾ, ನಮ್ಮಪ್ಪ ಎಕ್ಕಡದ ಹುಟ್ಟೆಂಗಿಗ

ಹುಟ್ಟಿದೋಳೆ ಅಲ್ಲಾಂತ ತಿಳ್ಕೊ" ಅಂತ ಸೀರಿ ಸೊಂಟಕ ಸಿಗಿಸಿಕೊಂಡಾಕಿನ ಓಡಿದಂಗ ಮಾಡಿದ್ಲು" ಹೂಂ. ಬೋಳಸ್ತಿಯಾ ನಿನ್ನವ್ವನ ಹೆಂಡದ ಜುಮ್ಮಿ ಕೊಳಕ ಹಣ್ಣಿ ಮಾರಾಕಿ ಹೆಂಡಕ್ಕ ನೀರ್ ಬೆರಸಾಕಿ, ಬಾ ಹಿಡಿ ಬಾ" ಅಂದವನೆ ಗಾಳಿಯಂಗ ಓಡಿ ಮಾಯವಾದ.

ಓಡಿ ಬಂದವನೆ ಖಂಡೇಗೌಡನ ಹೊಸ ಮನಿ ಮುಂದ ನಿಂತು ಮತ್ತದೆ ಬೆದರನ್ನ ದಿಟ್ಟಿಸಿನೋಡದ, ಅವನೆ ಆ ಅರವಿಹಾಕ್ಕೊಂಡು ತಲಿಬಾಚ್ಕೊಂಡು ಪಾಂಡಣ್ಣಿ ಮೇಸ್ತ್ರು ಸಾಲಿಗ ಹೋಗೊ ಹಂಗ ಕನಸು ಕಾಣತೊಡಗಿದ. ಮನಿ ಮುಂದಿನ ಉಸುಕು ತಂಪಾಗಿತ್ತು ಗೌಡ್ರ ಮನಿಯೋರು ಯಾರು ಕಾಣದಕ್ಕ ನಡಕ್ಕ ಕುಂತವನೆ ಎರಡಿ ಹಿಡಿ ಎತ್ಕೊಂಡು ಕಾಲ ಮ್ಯಾಲ, ಚಣ್ಣದಾಗ ಹಾಕ್ಕೊಂಡು ತನ್ನ ಪಾಡಿಗ ತಾನು ಖುಷಿ ಪಡ ತೊಡಗಿದ. ಅವನ ಹಟ್ಟಿ ಮುನಿಯ ಗೌಡರ ಜೀತದಾಳು ಹೊರಗ ಬಂದ. " ಏನ ಮುನಿಯಪ್ಪ ಏನ ಮನಿಐತಿ, ಅವನಪ್ಪನ ಈ ಮನಿಯಾಗ ಇರೊ ಮನುಸ್ಯಾರು ಪುಣ್ಯೇವು ಮಾಡ್ಯಾರ ನೋಡು" ಅಂದವನೆ ಒಳಗ ಇಹಾಕಿದ ಸಾಲಿಗ ಹದಿನೈದಿಪ್ಪತ್ತ ಬಾಗಿಲಗಳು ನಿಂತಿದ್ವು. "ಲೇ ಜೋಗ್ಯಾ ಹೋಗ್ಲೆ ಅತ್ಲಾಗ ಗೌಡ್ರ ಮನಿಯೋರ ನೋಡಿದ್ರ ಹಂಗಿಂಗ ಹೊಡಿಯಲ್ಲ ನೋಡಿ ನಿನಗ" ಗದರಿಸಿದ ಮುನಿಯ. ಮ್ಯಾಲಿಂದ ಕೆಳಗಿಳಿದಿದ್ದ ಸಲಾಕಿ ಹಿಡಿದು ಜೋತಾಡಬೇಕಂತ ಆಶಿಯಾಗಿದ್ದೆ ಕಿಟಕಿ ಹತ್ತೊ ಮನಸ ಮಾಡ್ದ. ಹಿಂದೆ, ಖಂಡೇಗೌಡ ನೆನಪಾಗಿ ನಾಯಿಗ ಒದಿಯೊ ಹಂಗ ಒದ್ದಾರ ತಗಿ ಅತ್ಲಾಗಂದವನೆ ಹಂಗೆ ಬೆನ್ನ ಕಡಿಂದ ಹಿಂದಕ್ಕ ಸರದು ಈಗ ಹೆಂಗ ಕಾಣತೈತಿ ಬೆದರು ಅಂತ ನೋಡಿದ. ಗೌಡರ ರೈಟ್ ಹ್ಯಾಂಡ್ ಆಗಿದ್ದ ಸರ್ಪ ಅನ್ನೋ ಆಳಮಗ ಬಂದವನೆ " ಏನ್ಲೆ ಜೋಗ್ಯಾ ಇಲ್ಲೇನ ಮಾಡಾಕ ಹತ್ತಿ" ಕೇಳಿದ. ಸರ್ಪ ಅವನ ಹಟ್ಟಿಯವನೆ ಆದ್ರಿಂದ ಸಲಿಗೆಯಿಂದ್ಲೆ" ಏನಿಲ್ಲಾ ಕಾಕ ಯಾಪರಿ ಕಟ್ಟೆಸಾಕ ಹತ್ಯಾರ ಮನಿ ಅಂತ ನೋಡ್ತಿದ್ದೆ" ಅಂದ. "ಹೂಂ ನೀನು ಕಟ್ಟಸ್ತಿ ಏನ ನೋಡ ಒಂದ" ಆಶೆವಾಡಿದ. "ಅಲ್ಲ ನಮ್ಮಂತ ಇನ್ನೂರ ಮಂದಿ ಮಕ್ಕೊ ಬಹುದು ನೋಡಿದ್ರಾಗ ದುಪಟಿ ಬ್ಯಾಡ, ಏನು ಬ್ಯಾಡ" ಅವನ ಮಾತಿನಕಡೀಗ ಲಕ್ಷ್ಯ ಕೊಡದಂಗ ಹೇಳಿದ. ಪ್ರತಿ ದಿನ, ದ್ಯಾವಮಾರಿ, ತಗಣಿ ಕಾಟ ತಡಿಯಾಕಾಗದೆ ಪರಪರಾಂತ ಮೈಕೆರ್‍ಕೊಂಡು ಸಾಕಾಗಿ ಹೋಕೈತಿ, ಅಡೀಗ ಗೋಣಿ ತಟ್ಟು ಮ್ಯಾಲೊಂದು ಹರಕು ದುಬಟಿ, ಇವರ್ದೆ ಪಾಡ ಇಪ್ಪತ್ತ ಮಂದಿ ಇರಬೇಕು ಗೌಡ್ರ ಮನಿಯಾಗ ಒಬ್ಬೊರಿಗ ಒಂದೊಂದು ಖೋಲಿ ಹೆಂಗಾರ ಒಲ್ಡಾಡು " ಹೂಂ ನಮ್ಮವೂ ಅದಾವ ನಮ್ಮಪ್ಪ ಕಾಲ ಚಾಚಿದ್ನಂದ್ರ ಮುಂದಿನ ನೆರಕಿ ಕಿತ್ತ ಹೋಗೊ ಆಟ ಉದ್ದ, ಎಲ್ಲಾ ನಾವಪಡ್ಕೊಂಡ ಬಂದಿದ್ವು" ತನ್ನ ತಾನೆ ಸಮಾಧಾನ ಮಾಡ್ಕೊಂಡು ಸರ್ಪನ ಹತ್ರ ಹೋದ. ಮನಿ ಹಿಂದಿಂದಿ ದ್ರಾಕ್ಷಿ ಗೊಂಚಲು ಹಿಡ್ಕೊಂಡು ತಿನ್ಕೊಂತ ಬಂದ ಮುದಿಗೌಡನ ಮೊಮ್ಮಗಳು ಮಾಲವ್ವ, ಜೋಗ್ಯಾನ ವಿಚಿತ್ರವಾಗಿ ನೋಡಿ, ಅವನ ಸುತ್ತಲು ತಿರುಗಿ ಅವನ ವಿಕಾರ ಲಕ್ಷಣ ಕಂಡಾಕಿನ ಗೊಳ್ಳಂತ ನಕ್ಕಳು. ಸರ್ಪಗ ಸರಿಕಾಣಲಿಲ್ಲ" ಮಾಲವ್ವರ ಹಿಂಗೆಲ್ಲಾ ನಗಬಾರದ್ರವ್ವಾ, ಇದು ದೇವಿಯಲ್ಲಮ್ಮನ ಮಹಿಮಾ, ತಾಯಿ ಈ ಕೂಸು ಹುಟ್ಟಿದ ದಿನಾನೆ ಮನಸ್ಸಿಟ್ಟು ಇವನ್ನ ತನ್ನ ಉಡಿಯಾಗ ಹಾಕ್ಕೊಂಡಾಳು, ನಕ್ರ ದೇವಿಗೆ ಸಿಟ್ಟು ಬರತೈತಿ, ಮತ್ತೇನಾರು ಹೆಚ್ಚು ಕಮ್ಮಿ ಮಾಡ್ಯಾಳು ನಗಬೇಡ್ರವ್ವ" ಅಂತೇಳಿ ಆ ಚೋಟುದ್ದ ಹುಡುಗಿ ಮುಂದೆ ಹಲುಬಿದ. ಕುತೂಹಲ ತಡಿಯದ ಮಾಲವ್ವ ಜೋಗ್ಯನ ಹತ್ರ ಹೋದವಳೆ ಅವನ ಜಡಿಯನ್ನು ನೋಡಿದ್ಲು

ತಲಿ ತೊಳದ ಎಷ್ಟು ವರ್ಷಗಳಾಗಿದ್ದ್ವೋ, ಕೆಟ್ಟ ವಾಸನಿ ಬಿಟ್ಟಿತ್ತು. ಅಕಿ ಹೊಟ್ಟೆ ತಳಿಸಿದಂತಾಗಿ ವಾಂತಿ ಮಾಡೋ ಹಂಗ ಮಾಡಿದ್ಲು. ಜೋಗ್ಯಾಗ ತಲಿಯಾಗ ಹೇನುಗಳೆಲ್ಲಾ ಎದ್ದು ಬುಳು ಬುಳು ಅಡ್ಡಾಡ್ತಿರೋ ಹಂಗಾತು. ಪರಾ ಪರಾಂತ ಕೆರಿಬೇಕೆಂತ ಅನಿಸಿತು. ಹಿಂಗ ಮಾಡಿದ್ರ ಹುಡಗಿ ಮುಂದ ಮರ್ಯಾದಿ ಹೋದಿತಂತ ಸರ್ಪನ ಕೈ ಬಿಡಿಸಿಕೊಂಡವನೆ "ಕಾಕ, ಬರ್ತೀನಪ್ಪ ನಮ್ಮ ಚಿಮ್ಮಿ ಕಾಯಕ ಹತ್ಯಾಳ ಮನಿಯಾಗ" ಅಂದ. ನಾಚ್ಕೊಂತ ಹಿಂಬದಿಯಿಂದ ಓಡಿ ಮರಿಯಾದ.

"ಲೋ ಜೋಗ್ಯಾ ಇವತ್ತ ನೀ ಬದಕ್ತಿ ಏನ್ಲಾ ಅವ್ವನ ಕೈಯಾಗ ಮುಂಜಾನಿ ಅಂಬ್ಲಿ ಉಂಡ ಹ್ವಾದೋನ ಈಗ ಬರಾಕ ಹತ್ತಿಯಲ್ಲ. ಎಲ್ಲಿಗ ಹಾಳಾಗಿ ಹೋಗಿದ್ದೆ" ಅಂತ ಕುಂಟ್ಕೊಂತ ಹೊರಗ ಬಂದ್ಲು. "ಎಲ್ಲಿಗಿಲ್ಲ ಬಿಡಕ್ಕ ಇಲ್ಲೆ ಊರಾಗ ಸುತ್ತ ಹೊಡಿಯಾಕ ಹತ್ತಿದೆ" ಸ್ವಲ್ಪ ಹೊತ್ತ ಸುಮ್ಮನಿದ್ದು "ಯಕ್ಕ ಉಣ್ಣಾಕ ಅಂಬ್ಲಿ ಐತನೇನಬೆ ಹೊಟ್ಯಾಗ ಸಂಕಟ ಆಗಾಕ ಹತ್ತೈತಿ" ಅಂದ "ಐತ್ನೋಡು ಗಡಾನ ತಿಂದ ಬಾ, ಹೇನಾರ ಆರಿಸ್ತಿನಿ" ಕರದ್ಲು ಚಿಮ್ಮಿ, ಒಂದಕಾಲ ಉದ್ದ ಮಾಡಿ ಕುಂಟಕಾಲ ಮ್ಯಾಲ ಅವನ ತಲಿ ಇಟ್ಕೊಂಡು ಒಂದೊಂದೆ ಹೇನ ಗಳನ್ನು ಆರಿಸಿ ಕುಕ್ಕತೊಡಗಿದ್ಲು, ಜೋಗ್ಯನ ತಲಿಯಾಗ ನಾನಾನಮೂನಿ ವಿಚಾರಗಳು ಎದ್ದು ಮರಿಯಾಗ ತೊಡಗಿದವು ಅವನಿಗ ತಡಿಯಾಕ ಆಗದೆ ಕೇಳಿದ. "ಯಕ್ಕ ನಮ್ಮಪ್ಪ ಯಾಕ ಬಡವನಾದಬೇ?" ಚಿಮ್ಮಿ ಮಾತಾಡಲಿಲ್ಲ. ಅವನಿಗಿಂತ ಒಂದು ವರ್ಷ ದೊಡ್ಡೋಳು ಚಿಮ್ಮಿ. ಒಂದಕಾಲ ಪಾಡಿದ್ದು ಮತ್ತೊಂದು ಸಣ್ಣದೈತಿ, ಒಂದೇ ಕಾಲನ್ನ ಊರಿ ಮತ್ತೊಂದರ ಮೇಲೆ ಭಾರ ಬಿಡಾಕ ಆಗದೆ ಕುಂಟ್ಕೊಂತ ಅಡ್ಡಾಡತಾಳ. ಜೋಗ್ಯ ಒಂದು ವರ್ಷದವನಿದ್ದಾಗಲೇ ಅಕೀನ ಅವನ ತಾವ ದೇಕರಕಿ ಮಾಡಾಕ ಬಿಟ್ಟು ಹೊಕ್ಕಿದ್ರು ಅವರವ್ವ ಅಪ್ಪ. ಎಂಟೊಂಬತ ವರ್ಷಕ್ಕೆ ಹಟ್ಟಿಹುಡ್ರೆಲ್ಲಾ ಗೌಡ್ರ ಹೊಲಕ ಕೂಲಿ ಮಾಡಾಕ ಹೊಕ್ಕಿದ್ದವು. ಚಿಮ್ಮಿ ಕುಂಟಿ, ಜೋಗ್ಯಾ ಕೈಲಾಗದವ ಅದು ಅಲ್ಲದೆ ದೇವರ ಹೊತ್ನೋನು. ಮಂದಿ ಕೈಯಾಗ ಒಂದು ಬೈಗುಳ ತಿನ್ನಬಾರ್ದು ಹಂಗೇನಾರು ಬೈಯಿಸಿಕೊಂಡ ಅವನಪ್ಪನಿಗೆ ಕೇಡ ಬರೋದಂತ ಯಲ್ಲಪ್ಪಜ್ಜ ಹೇಳಿಂದ, ಗಂಡ ಹೇಣ್ತಿ ಇಬ್ಬರು ಹೊತ್ತ ಹುಟ್ಟಾಕ ಮುಂಚೆ ಹೋಗಿ ಹೊತ್ತ ಮುಳಗಿದ ಮ್ಯಾಲ ಬರ್ತಿದ್ರು. ಜೋಗ್ಯಾನಪ್ಪ ದುರಗ ಮಗ ಜೋಗ್ಯಾಅಂದ್ರ ಪ್ರಾಣ ಅಂದ್ಕೊಂಡಿದ್ದು, ಕುಂತ್ರು, ನಿಂತ್ರು ಅವನದೇ ದ್ಯಾನ ಮಾಡ್ತಿದ್ದ ಕೂಲಿಯಿಂದ ಬಂದ್ನಂದ್ರ ಅವನಿಲ್ದೆ ಒಂದ ಘಳಿಗೆ ಇರ್ತಿರಲಿಲ್ಲಾ. "ಅಪ್ಪಾ, ಎಲ್ಲದಿಯೋ ಜೋಗಣ್ಣ, ಬಾ ಮಗ" ಅಂತ ಕರದು ತೊಡಿ ಮ್ಯಾಲ ಕುಂಡ್ರಿಸಿಕೋಳ್ತಿದ್ದ. ಅವನವ್ವ ಜಂಪಿಗ ಅಡಗಿ ಮಾಡೋದೆ ದೊಡ್ಡ ಕೆಲ್ಸ ಆಗುತ್ತಿತ್ತು. ಚಿಮ್ಮಿ ತೆವಳ್ತಾ, ಕಸ ಮುಸರಿ ಮಾಡಿರ್ತಿದ್ಲು, ಅವಳವ್ವ ಜಂಪಿ ತಂದ ಸೊಪ್ಪು ಸೆದಿಗಳನ್ನ ಹಸನ ಮಾಡ್ತಿದ್ಲು, ಜಂಪಿಗ ಮಕ್ಕಳ ಆರೈಕೆ ಮಾಡಾಗ, ಮೈ ತೊಳಿಯಾಕ ಹೊತ್ತಾರು ಎಲ್ಲಿ ಸಿಗಬೇಕು. "ಎದ್ದೇನೂ ಜೋಗಿ ಅಂದ್ರ ಹೆಗಲ ಮೇಲ ಕಡಾಸು ಅನ್ನೋಹಂಗ ಅಕಿ ತೆಲಿ ಅಕೀಗ ರಗಡ ಆಗಿತ್ತು. ಅದಕ್ಕೆ ಜೋಗ್ಯನ ಸ್ಥಿತಿ ಹಂಗಾಗಿತ್ತು ಅವರ ಹಟ್ಟಿ ಕಾಣುನ ಮಗ ಕುಬೇರಿ, ಸಂಕುಲನ ಮಗ ಥಾಕು ಹಿಂಗೆ ಆಗಿ ಈಗ ಊರೂರ ಬೇಡೊ ದಾಸಪ್ಪಗಳಾಗ್ಯಾರ. ಜೋಗ್ಯ ಬೆಳೆದು ದೊಡ್ಡವನಾದಿಂದ ಅದೇ ಹಾದಿ ಹಿಡಿಬೇಕು ಅದು ಅವರ ಹಟ್ಟಿಯ ಪದ್ಧತಿ.

ಜೋಗ್ಯಗ ಬಹಳ ಸಂಕಟ ಆಗುತ್ತಿತ್ತು. ತಾನೊಬ್ಬನೆ ಸಹಿಸಲಾಗದ ಹಿಂಸೆಯನ್ನು ಸಹಿಸಿಕೊಂಡಿದ್ದ. ತಲಿಯೊಳಗ ಕೈ ಹಾಕಿದ್ರ ಸಾಕು ಹೇನು, ಸೀರು ಎರೆಡೆರಡು-ಮೂರಮೂರು ಸಿಗ್ತಿದ್ವು. ಅಂಗಿ, ಚಣ್ಣದೊಳಗು ನುಸಿಯಾಗಿದ್ವು ಅವನ ಕಂಡು ಅವನಿಗೆ ಜಿಗುಪ್ಸೆಯಾಗ ತೊಡಗಿತು. "ಛೇ ನಾ ಯಾಕಾದ್ರು ಈ ಮನುಷ್ಯ ಜಾತಿಯೊಳಗೆ ಹುಟ್ಟಿದೆ?" ಅನಿಸಿತು. ಹಸ್ಕೊಂಡ್ರ ಉಣ್ಣಾಕ ಕೂಳಿಲ್ಲ, ಛಳಿಯಾತಂದ್ರ ಹೊತ್ಕೊಳ್ಳಾಕ ದುಪ್ಪಿ ಇಲ್ಲಾ ಹರಕ ಅಂಗಿ ಇಡಿ ಮೈ ಮುಚ್ತಿರಲಿಲ್ಲ ಯಾಕೆ? ಎಂಬ ಅವನ ಸಾವಿರ ಪ್ರಶ್ನೆಗಳಿಗ ಅವನಕ್ಕ ಚಿಮ್ಮಿ ಯಾವತ್ತೂ ಉತ್ತರಿಸುತ್ತಿರಿಲಿಲ್ಲಾ. ಪಾಪ ಆಕೀಗೆ ಹಿಂಸೆಯಾಗ್ತಿತ್ತು, ಜೀವನ ಪೂರ್ತಿ ಹೊರೆಯಾಗಿ ರಬೇಕಲ್ಲ ಅನ್ನೋ ಚಿಂತಿ, ಅಕಿ ತಲಿಗ ಉತ್ತರ ಹೊಳಿಯೋದಾದ್ರು ಯಾವಾಗ, ಜೋಗ್ಯಾನ ಮನಸ ಮಾತ್ರ, ಖಂಡೇಗೌಡ್ರ ಹೊಸ ಮನಿ ಸುತ್ತಲೇ ಸುತ್ತುತ್ತಿತ್ತು. ದಿನಕ್ಕೊಂದೆರಡ ಸರ್ತಿನಾದ್ರು ಹೊಸ ಮನಿ ಮುಂದೆ ಅಡ್ಡಾಡಿ, ಮನಿಮ್ಯಾಲಿನ ಬಿದರ ನೋಡಿ ಸಮಧಾನ ಪಡ್ಕೊಂಡೆ ಮನಿಗ ಸೇರುತ್ತಿದ್ದ.

ಜೋಗ್ಯಾಗ ತಡಿಯಾಕ ಆಗದೆ, "ಯಕ್ಕ ಗೌಡ್ರ ಮನಿತಾಗ ಒಬ್ಬ ಹುಡುಗಿ ಅದಾಳಲ್ಲ, ಎಂಥ ಅರವಿ ಉಟ್ಕೊಂಡಿದ್ಲಬೇ, ನಂಗಂತ್ತು ಅಕೀನೆ ನೋಡಬೇಕು ಅನಿಸಿ ನೋಡ್ತಾ ಇದ್ದೆ, ಅವನವ್ವನ ಮುದಿಗೌಡ ಅದಾನಲ್ಲ ಕೆಮ್ಮಂತ ಬಂದ ಹಿಂದ-ಮುಂದ ನೋಡ್ದಂಗೆ ಓಟ ಕಿತ್ತೆ ನೋಡು" ಅಕಿ ಎನಂತಾಳಂತ ಮಾರಿ ನೋಡಿದ ಅಳ್ತಿದ್ದ ಇನ್ನೊಬ್ಬ ತಮ್ಮ ಡೊಕ್ಕ ನನ್ನ ತಟ್ಟಿ ಮಲಿಗಿಸೋದ್ಕ ಹವಣಿಸುತ್ತಿದ್ಲು, ಅಕಿ ಮಾತಾಡದ್ಕ ಅವನೆ ಸುರು ಮಾಡಿದ. "ಅವರ ಮನಿಯಾಗ ಪ್ರತಿ ದಿನ ಹೊಟ್ಟೆ ತುಂಬ ಉಣ್ತೀರಬೇಕಲ್ಲಾ. ಏನೇನ ಉಣ್ತೆರಾಕು" ಕನಸಿನ ಲೋಕಕ ಇಳಿದ. ಚಿಮ್ಮಿ ಮಾತ್ರ 'ಜೋ.... ಜೋ ಲಾಲಿ, ರಾಮ ಲಾಲಿ, ಹನ್ಮಪ್ಪಲಾಲಿ, ಮೈಲಾರಪ್ಪಲಾಲಿ, ಎಗ್ಗುತಪ್ಪ ಲಾಲಿ" ಮಲಗಿಸೋದಕ್ಕೆ ಪ್ರಯತ್ನ ಮಾಡ್ತಾನೆ ಇದ್ಲು. "ಒಪ್ಪತ್ತಾದ್ರು ಹೊಟ್ಟೆ ತುಂಬ ಉಣ್ಣಬೇಕ ಯಕ್ಕ ನಾವು ಸಾಯೋದ್ರಾಗ ಉಂಡೀವ"? ಅನುಮಾನ ವ್ಯಕ್ತಪಡಿಸಿದ. "ಬಾಯಿ ಮುಚ್ಕೊಂಡು ಹೊರಗ ಆಡ ಹೋಗ್ಲೆ, ನಿನ್ನ ಮಾತ ಕೇಳಿ ಡೊಕ್ಕ ಏಳ್ತಾನ" ಗದರಿದ್ಲು, ಕರಿಮೈ, ಬಡಕಲು ದೇಹ ತೀಕ್ಷ್ಣ ಕಣ್ಣಿನ ಜೋಗ್ಯಾ, ನಾಳೆ ಒಳ್ಳೆದಾದೀತು ಅನ್ನೋ ಆಶೆಯಿಂದ ಕನಸ ಕಾಣ್ತಾ ಇಲ್ಲಿಂದಲ್ಲಿ ಅಲ್ಲಿಂದಿಲ್ಲಿ ಓಡ್ತಾ, ತನಗ ಕಂಡಿದ್ದನ್ನ ಸೂಕ್ಷ್ಮವಾಗೆ ಗಮನಿಸುತ್ತ, ಯಾರಾರು ಏನಾದ್ರು ತಿಂತಿದ್ರ ಅದು ಸರಿಯೋ ತಪ್ಪೋ ತಿಳಿಯದೆ ಅವರ ಮುಂದೆ ಹೋಗಿ ಆಶೆ ಕಣ್ಣಿಂದ ನೋಡ್ತಾ ನಿಲ್ತಿದ್ದ. ಊರಿಗೆ ಬಂದ ಬಸ್ಸು, ಲಾರಿ, ಕಲ್ಡಿ ಕುಣಿಸೋನು, ಶಾಸ್ತ್ರ ಹೇಳೋನು, ಪೂಜೆ ಮಾಡೊ ಬಟ್ಟರಿಂದ ಮದಲ ಹಿಡಿದು ಎಲ್ಲರಿಗೂ ಅವನ ಪರಿಚಯವಿತ್ತು. ಯಾರಾದ್ರು ದೊಡ್ಡಜನ ಊರಾಗ ಭಾಷಣ ಮಾಡಿದ್ರ ಪಿಳಿಪಿಳಿ ಕಣ್ಣು ಬಿಟ್ಕೊಂತ, ಅರ್ಥ ಆಗಲಿ ಆಗದಿರಲಿ ಮೈಯೆಲ್ಲಾ ಕಿವಿಯಾಗಿಸಿ ಕೇಳ್ತಿದ್ದ. ಅವರು ಹೋದಿಂದ ಅದೇ ಭಂಗಿಯೊಳಗ ಮಾತಾಡ್ತಿದ್ದ. ಊರಾನ ಸಾಲಿ ಸನೀಕ ಸುಳಿಯದೆ ರಾತ್ರಿ ಸಾಲಿ ಓದ್ರಪ್ಪ ಅಂತ ಪ್ರಚಾರ ಮಾಡಾಕ ಬಂದೋರ ಹಾಡಗಳನ್ನು ಕಂಠಪಾಠ ಮಾಡ್ಕೊಂಡಿದ್ದ.

ತಾಂಡೆದುರ್ಗವ್ವನ ಗುಡಿಮುಂದ ಆಟ ಆಡ್ತಿದ್ದ ಹುಡ್ರೆಲ್ಲಾ ಅವನ ಕಂಡೋರೆ 'ಲೇ ಜೋಗ್ಯಾ' ಬಂದ ಅಂತ ಅವನ ಹತ್ರ ಓಡಿದ್ರು ಕಡೇ ಮನಿ ಕಾಸೀಮ ಅವನಪ್ಪನ ಸೈಕಲ್

ಅಂಗಡಿಯಿಂದ ತಂದ ಹಳೇ ಸೈಕಲ್ ಟ್ಯೆಯರ್‌ನ್ನು ಸ್ಕೂಟರ್ ಮಾಡ್ಕೊಂಡು, ಬಾಯಿಂದ ಹಾರನ್, ಸೌಂಡ್ ಹೊರಡಿಸುತ್ತಾ "ಬುರ್ss.... ಬುರ್ss...." ಸದ್ದ ಮಾಡ್ತಾ ಓಡ್ತಿದ್ದನ್ನ ನೋಡಿದ ಜೋಗ್ಯಾ, "ಕಾಸಿಂ, ಲೇ ಕಾಸಿಂ, ಒಂದ ಸಲ ಕೊಡಲೆ, ಇಲ್ಲೆ ಕೋಡಿ ಸರದ ಮಟ ಹೋಗಿ ಬರ್ತಿನಿ ಕೊಡಲೇ" ಅಂತದು ದುಂಬಾಲ ಬಿದ್ದ, ಅವನ ಕಾಟ ತಡಿಲಾರದೆ, "ತಗೊಳಲೇ ಮಾರಾಯ ಅವನವ್ವನ ಶನಿಗಂಟ ಬಿದ್ದಂಗ ಬಿಳ್ತೀಯಾ ಗಡಾನ ಬಾ ನಮ್ಮಪ್ಪ ಕೋಡಿ ಹಟ್ಟಿಗ ಹೋಗಿ ಹೆಂಡತರಾಕ ಹೇಳ್ಯಾನ" ಅಂತ, ಎಚ್ಚರಿಸಿ ಕೊಟ್ಟ, ಬಾಯಿಯಿಂದ ಬರ್‍ರ್ರಂ ಅಂತ ಸದ್ದ ಮಾಡಿ, ವಾರದ ಹಿಂದ ಊರಿಗ ಬಂದಿಂದ ಇನ್ಸ್‌ಪೆಕ್ಟರ್ ಅಬ್ದುಲ್ಲಾ ಬುಲೆಟ್ ಚಾಲು ಮಾಡಿದ್ದನ್ನ ನೋಡಿದ್ದ ಜೋಗ್ಯಾ, ಬದ್ ಬುದ್ದ್ ಬುದ್ದ್ ಅಂತ ಸದ್ದ ಮಾಡಿ ಕಾಲನ್ನ ಎತ್ತಿ ಸ್ಟಾಟರ್ ತುಳದಂಗ ತುಳದು ಗೌಡ್ರ ಮನಿ ಕಡೀಗ ಹೊಳ್ಳಿಸಿದ. ಮಟ ಮಟ ಮದ್ಯಾಹ್ನ ಹೊಸ ಮನಿ ಮುಂದ ನಿಂತವನೆ ಸುತ್ತು ನೋಡಿದ ಸರ್ಪ್ಯ, ಮುನಿಯ, ಗೌಡ, ಯರು ಕಾಣಲಿಲ್ಲಾ, ಬಹಳ ದಿನಗಳಿಂದ ಇಂಥ ಹೊತ್ತನ್ನೇ ಕಾಯ್ತಿದ್ದ ಜೊಗ್ಯಾ ತಲಿಯಾಗ ಏನ ವಿಚಾರ ಬಂತೊ ಸೈಕಲ್ ಟ್ಯೆಯರ್ ಬಿಸಾಡಿದ್ದೆ, 'ಇವನವ್ವನ ಏನಾಗತ್ಯೆತಿ ಆಗ ಬಿಡ್ಲಿ ಇವತ್ತ ನೋಡೆ ಬಿಡಾನ" ಅಂದ್ಕೊಂಡವನೆ ಸರಸರ ಒಳಗೆ ಓಡಿದ.

ಎಲ್ಡನೇ ಮಾಡಿ ಮ್ಯಾಲಹೋಗಿ ಇನ್ನೇನ ಕೈ ಹಾಕಬೇಕು. ಖಂಡೇಗೌಡನ ಮೂರನೇ ಮಗ ನಾಗ ಓಡಿ ಬಂದ "ಲೇ ಬೇವರ್ಸಿ ನನಮಗನೆ ಜೋಗ್ಯಾ ಏಟ ದಿನದಿಂದ ಮಾಡಾಕ ಹತ್ತಿಯಲೆ ಕಳ್ಳತನ" ಅಂತ ಅವನ ಹರಕ ಅಂಗಿ ಹಿಡ್ಕೊಂಡ. ಜೋಗ್ಯಾ" ಇಲ್ಲಣ್ಣ ಕಳ್ಳತನ ಮಾಡಾಕ ಬಂದಿಲ್ಲಾ" ಅಂದವನೆ ತಪ್ಪಿಸಿಕೊಳ್ಳಾಕ ನೋಡ್ತಾ ಹರದಿದ್ದ ಅಂಗಿ ಚರ್‌ಂತ ಪೂರ್ತಿ ಹರದು ನಾಗನ ಕೈಯಾಗ ಬಂತು. "ನಿಲ್ಲಲೇ ನಿನ್ನವ್ವನ" ಅಂತಂದ ಬೆನ್ನ ಹತ್ತಿ ಹಿಡಿದು. "ನಿನ್ನವ್ವ ಸೂಳಿಮಗ್ನ, ಮನಿದಾಟ್ಕೊಂಡ ಎರಡನೇ ಮಾಡಿ ಹತ್ತಿದ್ಯಲ್ಲಾ ಯಾಕ ಹೇಳು?" ಜಾಡಿಸಿ ಒದ್ದ, ಅದೇ ಹೊತ್ತಿಗ ಸರಿಯಾಗಿ ವ್ಯಾಗಳಗೇರಿಗ ಹೋಗಿದ್ದ ಖಂಡೇಗೌಡನ ಕುದುರಿ ಸವಾರಿ ಹೊಸ ಮನಿತಾಗ ಬಂದ ನಿಲ್ತು. ಖಂಡೇಗೌಡನ ಮುದಿ ಮೀಸೆ ನೋಡಿದ ಜೋಗ್ಯ ಚಣ್ಣದಾಗ ಉಚ್ಚಿ ಹೋಯ್ಕಂಡ. "ಯಾಕ್ಲೆನಾಗ್ಯ, ಏನ ಮಾಡ್ದ" ಮಗನ್ನ ಕೇಳ್ದ. "ಯಪ್ಪ ಏನ ಮಾಡಿದ್ನೋ ಗೊತ್ತಿಲ್ಲ ಬಿಲ್ಡಿಂಗ್ ಮ್ಯಾಲ ಹತ್ತಿದ್ದ ಅಲ್ಲಿಂದ್ಲೆ ಹಿಡ್ಕೊಂಡ ಬಂದೀನಿ" ಅಂದ. "ಯಾರಲೇ ನೀನು, ಯಾಕ ಹತ್ತಿದ್ದೆ ಮ್ಯಾಕ, ಬೊಗಳ್ತಿಯಾ ಚರ್ಮ ಸೂಲಿಲಿ" ಗದರಿದ. 'ಯಾಕಿಲ್ಲ ಧಣಿ ಸುಮ್ಕ" "ಯಾಕಿಲ್ಲ ಥು ಏನ ಕೆಟ್ಟ ನಾರಾಕ ಹತ್ಯಾನ" ಮೂಗ ಮುಚ್ಕೊಂಡ ಓಡಿದ ಗೌಡ, ಸುದ್ದಿ ತಿಳಿದ ಸರ್ಪ ಓಡಿ ಬಂದವನೇ, "ಏನಾತ ಧಣಿ ಏನ ಮಾಡ್ದ" ನಡಕ ಬಾಯಿ ಹಾಕಿದ. "ಎಲ್ಲಿ ಹಾಳಾಗ ಹೋಗಿದ್ಯಲೇ ಸರ್ಪ, ಈ ಸೂಳಿಮಗ ಏನೋ ಕದೀಯಾಕಂತ ಅಟ್ಟದ ಮ್ಯಾಲ ಹತ್ತಿದ್ದ" ಅಂದ ನಾಗ. ಸರ್ಪ ನಡಗ ತೊಡಗಿದ. ಏನ ಅನಾಹುತ ಮಾಡಿದ ಈ ಹಾಳ ಸೂಳೆ ಮಗ ಅಂದ್ಕೊಂಡ ಅವನ ಹೆಂಗಾನ ಮಾಡಿ ಪಾರ ಮಾಡಬೇಕಂತ ಯೋಚಿಸಿದ. "ಆಟ ಹಿತ್ಲ ಕಡೀಗ ಹೋಗಿದ್ದೆ ಧಣಿ" ಅಂದ. "ಅಂದಂಗ ಇಂವss ಯಾರ ಮಗನಲೇ ಸರ್ಪ ಎನ ಗಬ್ಬ ನಾರ್‍ತಾನ ಸತ್ತ ದನದಂಗ" ಖಂಡೇಗೌಡ ಕೆಟ್ಟ ವಾಸನಿ ಮೂಗಿಗ ಅಡರಿದಂಗೆ ಹೇಳಿದ. "ಅದೇ ನಮ್ಮ ಟ್ಟಿ ಮರಿಯನ ಮಗ ಧಣಿ. ಇವರಪ್ಪ ಭಾಳ ನೀಯತ್ತಿನೋನು ಬಂಗಾರದ ರಾಶಿ ಇದ್ರೂನು

ಮುಟ್ಬೋನಲ್ಲಾ. ಇವನು ಅಂತ ಹುಡುಗನಲ್ಲ ಬಿಡ್ರಿ". ಅವನನ್ನ ಅವರ ಕಪಿಮುಷ್ಠಿಯಿಂದ ಬಿಡಾಸಾಕ ನೋಡ್ದ. ಇಲ್ಲಿಕ್ರ ಮೈಮ್ಯಾಲ ಒಂದ ಪದರ ಚರ್ಮ ಏಳೊ ಹಂಗೆ ಹೊಡಿತಾರ ನಿರ್ದಯಿ ಸೂಳಿ ಮಕ್ಕಳ್ರು ಅಂತ ಯೋಚನೆ ಮಾಡಿದ. "ಥು ನಿಮ್ಮವ್ನ, ನಿಮ್ಮ ಜಾತಿ ಚಾಳಿ ಎಲ್ಲಿ ಬಿಡ್ತೀರಿ, ನೀವೆಲ್ಲಾ ಒಂದೆ, ಹೋಲ್ದಾನ ತೆನಿತೆನಿನೇ ಬಿಡಂಗಿಲ್ಲ. ರಾಶಿ ರಾಶಿನೇ ಬಿಡಂಗಿಲ್ಲಾ ಕದ್ಕೊಂಡ ಹೋಗಿ ರಾತ್ರೋ ರಾತ್ರಿ ಅದೆಂಗ ಗಪ್ ಮಾಡ್ತಿರೊ ಗೊತ್ತೆ ಆಗಂಗಿಲ್ಲಾ, ಅಲ್ಲಲ್ಲೇ ಸರ್ಪ ಹ್ವಾದ ಬ್ಯಾಸಗಿಯೊಳಗ ಕುರುಬರ ಗೊಂಡನ ಮಂದೆಯೊಳಗಿಂದ ಹತ್ತ ಕುರಿ ಕದ್ದ ನಿಮ್ಮ ಹಟ್ಟಿ ಮಂಧಿ ರಾತ್ರೋ ರಾತ್ರಿ ಒಂದ ಎಲಬಿಲ್ದಂಗ ಅದೆಂಗ ತಿಂದ ಹಜಂ ಮಾಡ್ಕೊಂಡ್ರಲೇ, ಥು ನಿಮ್ಮ ದೇವ್ವ ಗುಟ್ಟದ ಸೂಳಿ ಮಕ್ಕಳ್ರ್ಯಾ," ಗೌಡ ಇಡಿ ಹಟ್ಟಿಯ ಜನ್ಮನೇ ಜಾಲಾಡಿದ. ಯಾರೊ ಒಬ್ಬಿಬ್ಬರು ಮಾಡ್ತಾರಂತ ಹಟ್ಟಿ ಮಂದಿಗೆಲ್ಲಾ ಅನ್ನಾಕ ಆದಿತ ಧಣಿ. ತಮ್ಮ ಜರನ್ನು ಸಮರ್ಥಿಸಿಕೊಂಡ. ಅದನ್ನ ಲಕ್ಷಿಸದ ಗೌಡ "ಲೇ ಮ್ಯಾಗ ಯಾಕ ಹತ್ತಿದೆ ಅಂತ ಹೇಳಿ ಬಿಡು ನಿನ್ನ ಬಿಟ್ಟು ಬಿಡ್ತೀನಿ" ಪುಸಲಾಯಿಸಿದ ಗೌಡ, ಹುಟ್ಟಿ ತಿಳುವಳಿಕಿ ಬಂದಾಗಿಂದ ಖಂಡೇಗೌಡನ ಹರಕತ ನೋಡ್ತಾ ಬಂದಿದ್ದ ಜೋಗ್ಯಾ ಜಪ್ಪಯ್ಯ ಅಂದ್ರು ಬಾಯಿ ಬಿಡಲಿಲ್ಲಾ. ಒಂದು ಸಲ ಅವರ ಹಟ್ಟಿ ಕೊಂಬನ ಮಗಳು ಕಣ್ಣೀಲಿ - ತೆಂಗಿನ ತ್ವಾಟಕ ಹೋಗಿದ್ದ ಅವಳವ್ವಗ ಮದ್ಯಾಹ್ನದ ರೊಟ್ಟಿ ಕೊಟ್ಟ ಬರಾಕಂತ ಖಂಡೇಗೌಡ್ರ ಹೊಸ ತ್ವಾಟಕ ಹೋಗಿದ್ಲು, ವಾಪಸ್ ಬರೋ ಮಂದ ಗಿಡದಿಂದ ಕೆಳಗೆ ಉದುರಿದ ಒಂದ ಕಾಯಿ ತಗೊಂಡು ಅಂಗ್ಯಾಗಿ ಬಚ್ಚಿಟ್ಕೊಂಡು ಹಟ್ಟಿ ಕಡಿಗ ಹೊಂಟಿದ್ಲು. ಗೌಡನ ಸೊಸಿ ಮಾಯಕ್ಕ ಬರೋದನ್ನ ಕಂಡ ಹುಡುಗಿ ಹೆದರಿ ಅಡ್ಡಾಡ್ಡ ಹೋಗಾಕ ಹತ್ಲು. ಅನುಮಾನದಿಂದ ಬೆನ್ನ ಹತ್ತಿದ್ದ ಮಾಯಕ್ಕ ಕಣ್ಣೀಲಿನ ಹಿಡ್ಕೊಂಡ ಬಂದು ಮುದಿಗೌಡನ ಕೈ ಗೊಪ್ಪಿಸಿದ್ಲು. ಗೌಡ ಹುಡುಗಿ ಅನ್ನೊ ಖಬರಿಲ್ಲದೆ ಮೂರ ನಾಮ ಹಚ್ಚಿಕೊಳ್ಳಾಗ ಎಕ್ಕಡದ ಹಾರ ಹಾಕಿ ಊರಾಗ ಮೆರವಣಿಗೆ ಮಾಡಿದ್ದ. ಇಡೀ ಊರಿಗ ಊರೆ ಗಾಬಾಗಿ ಬಾಯಿ ಮುಚ್ಕೊಂಡ ನೋಡ್ತಿದ್ರು. ಅಕೀಗು ಮದ್ಲು "ತೆಪ್ಪ ಒಪ್ಕೊಳ್ಳೆ ಲೌಡಿ, ನಿಂಗ ಬಿಡ್ತೀನಿ" ಅಂತ ಗದರಿಸಿದ್ದ. ಅವನ ಮೊಮ್ಮಗಳ ವಯಸ್ಸಿನ ಸಣ್ಣ ಹುಡುಗಿನ ಚಿತ್ರ ಹಿಂಸೆ ಕೊಟ್ಟ ನರ ರಾಕ್ಷಸ ಇವನು ಅನ್ನೋದ ಜೋಗ್ಯಾಗ ಗೋತ್ತಿತ್ತು.

"ಬಾಯಿ ಮಾತೀಂದ ಬಗ್ಗಲ್ಲ ಇವನು, ಲೇ ನಾಗ್ಯ, ಮದ್ಲು ಆ ಮರಕ ಬಿಗಿ ಹಜಾಮರ ನಿಬಂನ ಕರದು ತಲಿ ಬೋಳಿಸಿ ಜುಮ್ಮಿ ಹೆಂಡ ಹೇರ್ತಿದ್ದ ಕತ್ತೆ ತಂದು ಅದ್ರ ಮ್ಯಾಲ ಕುಂದ್ರಿಸಿ ಮೂರ ನಾಮ ಬಳಿದು ಊರ ತುಂಬ ಮೆರವಣಿಗೆ ಮಾಡ್ಸು" ಅಂತ ಹೇಳಿದ. ಖಂಡೇಗೌಡ ಏನ ಹೇಳ್ತಾನೋ ಅದು ಕೊನೆ ಮಾತು, ಸುತ್ತ ಮಂದಿಗ ಅದು ತಿಳಿದಿತ್ತು. ನಾಗ ಜೋಗ್ಯಾನ ಹಿಡಿದು ಜಾಲಿಮರಕ್ಕೆ ಕಟ್ಟಿದ. ಜೋಗ್ಯನ ಸುದ್ದಿ ಇಡಿ ಊರಿಂದೂರಿಗ ಹಬ್ಬಿತು. ಕೆಲ್ಸದಿಂದ ಬಂದು ಅದೇ ತಾನೆ ಮುಕಳಿ ಊರಿದ ಮರಿಯಗ ಸರ್ಪನ ತಮ್ಮ ಹುಲುಗ, "ಮರಿಯಪ್ಪ ಮಾವ ಖಂಡೇಗೌಡ ಜೋಗ್ಯಾನ ತಲಿ ಬೋಳಿಸಿ ಕತ್ತಿ ಮ್ಯಾಲ ಕುಂದ್ರಿಸಿ ಮೆರವಣಿಗೆ ಮಾಡಾಕ ಹೇಳ್ಯಾನ" ಅಂದ. ಯಾಕ? ಏನಂತ ತಿಳಿಯದ ಮರಿಯಗ ಮುಗಲಕಳಚಿ ತಲಿಮ್ಯಾಗ ಬಿದ್ದಂಗಾತು. "ಯಾಕಂತ ತಮ್ಮ" ಅಂತ ಗಾಬರಿಯಿಂದ ಕೇಳಿದ. "ಯಾಕೆನಪ್ಪ ನಂಗೂ ಸರಿಗ ಗೊತ್ತಿಲ್ಲಾ, ಗುಬ್ಬಿ ಗೌಡನ ಕಣದ ಹತ್ರ ಜಾಲಿ ಮರಕ್ಕ ಕಟ್ಯಾರ ನೋಡು" ಅಂದ.

ಮರಿಯ ಸತ್ನೋ ಬಿದ್ನೋ ಅಂತ ಎದಿ ಎದಿ ಬಡ್ಕೊಂಡು ಓಡಿ ಹೋದವನೆ ಗೌಡರ ಪಾದದ ಮ್ಯಾಲ ಊದಕ ಬಿದ್ದ "ಅವನು ದೇವರ ಹೊತ್ತೋನ ಧಣಿ ನಮ್ಮ ಮನಿತನಕ್ಕೆ ಒಳ್ಳೆದಾಗಂಗಿಲ್ಲಾ, ನಮ್ಮ ವಂಶಾನೆ ನಿರ್ವಂಶ ಆಗಿ ಹೊಕ್ಕೈತಿ ದ್ಯಾವಿ ಶಾಪಕ್ಕ ಗುರಿ ಆಗ್ತೀವಿ ಅವನ ಬದ್ಲಿಗ ನನ್ನ ತಲಿ ಬೋಳಿಸಿ ಮೆರವಣಿಗೆ ಮಾಡ್ರಿ" ಅಂಗಲಾಚಿ ಬೇಡಿಕೊಂಡ "ನೀ ಏನ ಮಾಡಿದ್ರು, ಆಗಕಿಲ್ಲ ಮರಿಯ ನಾನ ಒಂದ ಸರ್ತಿ ಬಾಯಿಯೊಳಗಿಂದ ಮಾತ ತಗದ್ರ ಮುಗಿತು, ವಾಪಸ್ ತಗೊಳ್ಳೊದಿಲ್ಲಾ ಅಂತಂದು ಸುತ್ತ ಮೂವತ್ತ ಹಳ್ಳಿಗ ಗೊತ್ತೈತಿ ಅಂತಾದ್ರಾಗ ನೀ ಬಂದ ಬೇಡಿಕೊಂಡ ತಕ್ಷಣ ನನ್ನ ಮಾತ ಬದಲಾಸಾಕ ಆಕೈತೇನು? " ತನ್ನ ಕಡೆ ನಿರ್ಧಾರ ಹೇಳಿದ.

ಹಟ್ಟಿ ಮಂದಿ ಎಲ್ಲಾ ಜಾಲಿಗಿಡದ ಸುತ್ತ ಮಾರದೂರದಾಗ ಕುಂತ್ಕೊಂಡ ಮುಂದಾಗೋದನ್ನ ಬಾಯಿ ಬಿಟ್ಕೊಂಡ ನೋಡ ತೊಡಗಿದರು. ಚೌರದ ನಿಂಬ ಬಂದವನೆ ತನ್ನ ಕತ್ತಿ ತಗೆದು ತಿಕ್ಕೊ ಕಲ್ಲ ಮ್ಯಾಲ ನಾಕ ಹನಿನೀರ ಬಿಟ್ಟು ನಾಕ ಸಲ ಆ ಕಡೀಗ ಈ ಕಡೀಗ ತಿಕ್ಕಿ ಕರಕರಾಂತ ನೆತ್ತಿ ಬೋಳಿಸಿದ. ಗಬ್ಬವಾಸನಿ ತಡಿಯಾಗ ಆಗದೇ "ಲೇ ಜೋಗ್ಯಾ, ಎಷ್ಟು ವರ್ಷಗಳಾದ್ವಲೇ ಮೈ ತೊಳದು, ಪಾಪಿ ಸೂಳಿಮಗನ ಸತ್ತ ದನದಂಗ ವಾಸನಿ ಹೊಡಿಯಾಕ ಹತ್ತಿ" ಅಂತ ಬಾಯಿಗ ಬಂದ ಉಗಳನ್ನೊಮ್ಮೆ ಉಗಳಿದ. ಮರಿಯ ಮತ್ತ ಅವನ ಹೇಣ್ತಿ ಭಾರಾಡಿ ಅಳತೊಡಗಿದ್ರು ಸರ್ಪ, ಮರಿಯಮ್ಮ, ಹನ್ಮಜ್ಜ ಸಮಾಧಾನ ಮಾಡಾಕ ನೋಡಿದ್ರು. ಸಮಾಧಾನ ಆಗಂಗ ಕಾಣದಕ ಗಪ್ಪಾದ್ರು "ದ್ಯಾವಿ ನಮ್ಮನ್ನ ಸುಮ್ನೆ ಬಿಡ್ತಾಳೇನಪ್ಪ, ಯಾರಾರ ಹೋಗಿ ಗೌಡ್ರಿಗೆ ಹೇಳ್ರಿ, ನಮ್ಮ ವಂಶಾನೆ ನಾಶಾನ ಮಾಡ್ತಾಳ. ಭಾರಿ ಹಠ ಮಾರಿ ಅಕಿ, ಏನ ಮಾಡಾನ್ರಪ್ಪ ನಾವು, ಯವ್ವ ತಾಯಿ ನಿಂತಾವ ಶಕ್ತಿ ಇಲ್ಲೇನವ್ವ ಗಾಳಿಯಂಗ ಬಂದು ಕಾಪಾಡಬಾರ್ದ ನನ್ನ ಮಗನಿಗೆ" ಅಳು ಜೋರಾತು. ಜೋಗ್ಯಾ ಕೊಸರಿಕೊಂಡು ಪ್ರತಿಭಟನೆ ಮಾಡಿದ, ಅವನು ಕೊಸರಾಡಿದ್ಕ ತಲಿಗ ಕತ್ತಿತಾಗಿ ಚರ್ಮ ಎದ್ದು ರಕ್ತ ಬರಕಾ ಹತ್ತು. ಮ್ಯಾಲಿನ ಒಂದ ಪದರು ಕೊಳಿ, ಹೇನು, ಸೀರು ಜಡ್ಡ ಗಟ್ಟಿದ ಕೂದ್ಲು ಹೋಗ್ತಿದಂಗೆ ಅವನಿಗೆ ಆರಮ ಅನಿಸಿತು, ಎಷ್ಟೋ ವರ್ಷಗಳಿಂದ ತಲೆ ಮ್ಯಾಲೊಂದು ದೊಡ್ಡ ಗಂಟು ಹೊದ್ಕೊಂಡು ಅಡ್ಡಾಡ್ತಿರೊ ಹಂಗ ಅನಿಸಿತ್ತು ಅವನಿಗ ಈಗ ಸಮಾಧಾನ ಆಗಿತ್ತು. ಅವನ ಪ್ರತಿಭಟನೆ ಕಮ್ಮಿಯಾತು, ಹಗಲಲ್ಲಾ ಬಿಸಲಾಗ ಹ್ವಾರೆ ಮಾಡಿ ದಣದಿದ್ದ ಅವನವ್ವ ಅಪ್ಪನ ಆರ್ಭಟನೂ ನಿಂತಿತ್ತು. ಕ್ಷಣಾರ್ಧದಾಗ ಜೋಗ್ಯಾನ ಜಡಿ ಮಾಯ ಆಗಿದ್ದು ಊರ ಹುಡ್ರೆಲ್ಲಾ ಚಪ್ಪಾಳೆ ತಟ್ಟಿ ಹೋ ಅಂತ ಕೂಗಿದ್ರು. ಗೌಡ್ರ ನಾಗ, ಸರ್ಪನ ಕರ್ಕೊಂಡು ಬಂದು ತಲಿಮ್ಯಾಲ ದಪ್ಪನಾಗಿ ಸಣ್ಣದ್ದೊಂದು, ಕೆಮ್ಮಣ್ಣಿಂದೊಂದು ಮತ್ತ ಕರಿಮಸಿದು ಮೂರನಾಮ ಹಾಕ್ಸಿದ. ಜುಮ್ಮವ್ವನ ಕತ್ತಿ ಹಿಡ್ಕೊಂಡ ಬರಾಕ ಹೋಗಿದ್ದ ಆಳು ಕತ್ತಿ ಹಿಡ್ಕೊಂಡು ಬಂದು ನಿಲ್ಸಿದ. ಸರ್ಪ ಜೋಗ್ಯಾನೆತ್ತಿ ಕತ್ತಿ ಮ್ಯಾಲ ಕುಂದ್ರಿಸಿದ. ಹುಡುಗರು, ಹಟ್ಟಿ ಮಂದಿ ಜೋಗ್ಯಾನ ಕತ್ತಿ ಹಿಂದಿಂದ ಹೊಂಟರು. ಗೌಡನ ಹಳಿ ಮನಿ ಬಾಗಲಾಗ ನಿಂತಿದ್ದ ಖಂಡೇಗೌಡನ ಮೊಮ್ಮಗಳು ಮಾಲವ್ವ ಜೋಗ್ಯನ ಅವತಾರ ನೋಡಿ ನಗಲಿಲ್ಲಾ ಅಕಿ ಕಣ್ಣಿಂದ ನೀರು ಜಿನಗುಡಾಕಹತ್ತಿದ್ವು. ಜೋಗ್ಯ ಮಾತ್ರ ಗೌಡನ ಹೊಸ ಮನಿ ಬಂದೊಡನೆ ತಲಿ ಬೋಳಿಸಿಕೊಂಡು - ಮಕಕ್ಕ ಮಸಿ ಬಳಿಸಿಕೊಂಡಿದ್ರು ಅವನ ಅಂತರಾಳದೊಳಗ ಶಾಶ್ವತವಾಗಿ

ಉಳಿದಿರೊ ಹೊಸ ಅಂಗಿ-ಚಡ್ಡಿ ತೊಡಿಸಿ ಅಂತಸ್ಥಿನ ಮ್ಯಾಲ ನಿಲ್ಲಿಸಿರೊ ಬೆದರನ್ನ ಒಂದು ಸಲ ನೋಡಿದ. ಇದ್ವಕ್ಕಿದ್ದಂಗೆ ಬೆದರಿಗ ಜೀವ ಬಂದು ಕಣ್ಣು ಮಿಟಕಿಸಿ ತುಟಿ ಅರಳಿಸಿ ಕಿಸಕ್ ಅಂತ ನಕ್ಕಂಗಾತು. ಕಣ್ಣು ತಿಕ್ಕೊಂಡು ಸರಿಗ ನೋಡಿದ ಒಂದ ಉದ್ದನ ಕೋಲು, ಅದಕ್ಕೊಂದು, ಅಡ್ಡಗೋಲು, ಅದಕ್ಕೆ ತೆಳಗ ಚಡ್ಡಿ ಮ್ಯಾಲ ಅಂಗಿ ತೊಡಿಸಿ ಜನರ ದೃಷ್ಟಿ ಬೀಳಬಾರದಂತ ಕಟ್ಟಿರೊ ಬೆದರು ಕಾಣ್ತು. ಕತ್ತಿ ಮುಂದಕ ಮುಂದಕ್ಕ ಹೊಂಟಂಗೆಲಾ ಬೆದರು ದೂರ ದೂರ ಸರಿಯಾಕ ಹತ್ತಿತು. ಜೋಗ್ಯ ಮಾತ್ರ ಯಾವಾಗ ನೋಡಿದ್ರು ಪರಸರಾಂತ ಕೆರ್ಕೊಬೇಕು ಅನಿಸ್ತಿದ್ದ ತನ್ನ ತಲಿ ಕಡಿಯದಕ್ಕ ಖುಷಿ ಪಟ್ಟು, ತಲಿಮ್ಯಾಲ ಕೈಯಿಂದ ಸವರಿಕೊಂಡ. ಆರಾಮ ಅನಿಸಿತು. ಒಂದು ಸಲ ಹೊಟ್ಯಾಗಿಂದ ಉಸರ ತಗದು ಹೊರಗ ಹಾಕಿದ ನೆಮ್ಮದಿ ಅನಿಸಿತು.

ಮುಖಗಳು

ದೆಹಲಿಯ ದೂರವನ್ನು ಕಣ್ಣುಗಳಿಂದಲೇ ಅಳೆಯುತ್ತಿದ್ದ ನನಗೆ ಇಲ್ಲಿ ಬರುವುದಕ್ಕಿಂತ ಮುಂಚೆ ಈ ಊರ ಬಗ್ಗೆ ನನ್ನವೇ ಆದ ಕಲ್ಪನೆಗಳಿದ್ದವು. ಪ್ರತಿಯೊಂದು ಗಲ್ಲಿ-ಬೀದಿಗಳನ್ನು ಎಡ ಬಿಡದೆ ನನ್ನ ನೆನಪಿನಾಳದ ದಿಲ್ಲಿಯನ್ನು ಹುಡುಕಾಡುತ್ತಿದ್ದೆ. ಕಿವಿಗವುಡಿಕ್ಕುವ ವಾಹನಗಳ ಸದ್ದು, ಶ್ವಾಸಕೋಶ ಕೆಡಿಸುವ ಹೊಗೆ, ಎತ್ತರದ ಮಹಡಿ ಮನೆಗಳು, ನನ್ನ ಸುಂದರ ದೆಹಲಿಯನ್ನು ವಿಕಾರಗೊಳಿಸಿದ್ದವು. ಇನ್ನಷ್ಟು ವಿಕಾರಗೊಳ್ಳುವ ಮೊದಲು ನೋಡಿದೆನಲ್ಲಾ ಎಂಬುದೊಂದೆ ಖುಷಿ. ಇದ್ದಕಿದ್ದಂತೆ ಡ್ರೈವರ್ ಬ್ರೇಕ್ ಹಾಕಿದ, ಎಲ್ಲರೂ ಮುಂದಕ್ಕೆ ಮುಗ್ಗರಿಸಿದೆವು. ಹೊರಗೆ ಇಣುಕಿದೆವು, ಕಮಾಂಡೊ ಒಬ್ಬ ಮುಂದೆ ನಿಂತಿದ್ದ ಟ್ರಾಫಿಕ್ ಜಾಮ್ ಆಗಿದೆ, ಒಂದು ಗಂಟೆ ಮುಂಚೆ, ಬಸ್ಸೊಂದರಲ್ಲಿ ಬಾಂಬ್ ಸ್ಫೋಟಿಸಿ ಸುಮಾರು ಎಪ್ಪತ್ತು ಜನರು ಸತ್ತಿದ್ದಾರೆ. ನೀವು ಹಿಂದೆ ಹೋಗಿ, ನೆಹರೂ ಸ್ಟೇಡಿಯಂ ದಾರಿಗೆ ಹೋಗಿ ವಾಪಸು ಹೋಗಿ, ಇಡಿ ದೆಹಲಿಯೇ ನಾಕಾಬಂಧಿ ಮಾಡಲಾಗಿದೆ ಅಂದವನೆ ಮತ್ತೊಂದು ಬದಿಗೆ ಹೋದ. ನನಗೆ ಮತ್ತು ನಿರಾಶೆಯಾಯಿತು. ಮುಂದಿನ ಸೀಟಿಗೆ ತಲೆಯಾನಿಸಿ ಕಣ್ಣು ಮುಚ್ಚಲು ಹವಣಿಸಿದೆ. ಇದ್ದಕಿದ್ದಂತೆ ವಂದನಾ ಹೇಳಿದ ಆ ಮಾತು ನೆನಪಾಯಿತು. ಒಂದು ನಿಮಿಷ ತಳಮಳಿಸಿ ಬಲಕ್ಕೆ ಹೊರಳಿದೆ. ಹೊರಗಡೆ ರಾಷ್ಟ್ರಪತಿ ಭವನದ ಸುಂದರ ಕಟ್ಟಡ ಕಂಡಿತು. ಅದರ ಮೇಲೆ ಸ್ವಚ್ಛಂದವಾಗಿ ಹಾರುತ್ತಿದ್ದ ತ್ರಿವರ್ಣ ಧ್ವಜವನ್ನೇ ದಿಟ್ಟಿಸಿ ನೋಡತೊಡಗಿದೆ. ಬೆಂಗಳೂರಿನಿಂದ ದೆಹಲಿಗೆ ಬರುವವರೆಗೆ ನಾನು ಹೀಗೆ ಈ ಸುಂದರ ನಗರಿಯ ಕನಸು ಕಾಣುತ್ತ ಸ್ವತಂತ್ರನಾಗಿದ್ದೆ. ಇಲ್ಲಿಯ ಕ್ಲಿಷ್ಟ ಸನ್ನಿವೇಶಗಳು ನನ್ನ ಮನದ ಗತಿಯನ್ನೆ ಬದಲಿಸಿ ನಾನು ನಾನಲ್ಲದ ಹಾಗೆ ಮಾಡಿಬಿಟ್ಟಿವೆ. ಎಷ್ಟೊ ಹೊತ್ತು ಹಿಂದಿನ ವಾಹನಗಳು ತಿರುಗುವರೆಗೆ ಬಸ್ಸು ನಿಂತಿತ್ತು ನಾನು ಹಾಗೆಯೇ ವಿಚಾರಮಾಡುತ್ತ ಕುಳಿತಿದ್ದೆ.

"ಹೆಣ್ಣು ತನ್ನ ಮನದ ಕನ್ನಡಿಯೊಳಗೆ ಸುಂದರ ಪುರುಷನ ಪ್ರತಿಬಿಂಬ ನೋಡುತ್ತಾಳೆ, ಒಂಮು ಮುಖ ಸರಿಕಾಣದಿದ್ದರೆ ಕನ್ನಡಿಯನ್ನೇ ಬದಲಿಸುತ್ತಾಳೆ. ನೀನು ನನ್ನ ದೃಷ್ಟಿಯಲ್ಲಿ ಹಾಗೆ". ನನಗೆ ಹಿಂಸೆ ಎನಿಸಿತು. ಮುಖ ಮುಚ್ಚಿಕೊಂಡು ಅಳಬೇಕು ಅನಿಸಿತು. ನಾನು... ಮುಂದೆ ಊಹಿಸದಾದೆ... "ಮೊದಲು ನಿಮ್ಮ ಹಸಿದ ಆ ನೋಟವನ್ನು ಬದಲಿಸಿಕೊಳ್ಳಿ. ನೀವು ಹಾಗೆ ನೋಡಿದರೆ ನನ್ನ ಮೈಯೆಲ್ಲಾ ಮುಳ್ಳು ಮುಳ್ಳು ಆಗುತ್ತದೆ"

ಹೃದಯವನ್ನು ಕಿತ್ತು ಹೊರಗಡೆ ತೆಗೆದು ಕಾಲಡಿಗೆ ಹಾಕಿ ತುಳಿದ ಹಾಗಾಯಿತು. ಇವತ್ತಿನವರೆಗೆ ಯಾರು ಹೇಳಿರಲಿಲ್ಲಾ ನನ್ನವು ದೋಷಪೂರಿತ ಕಣ್ಣುಗಳೆಂದು. ಅದ್ಯಾಕೊ, ಒಮ್ಮೆ ನೋಡಿದವರನ್ನು ಮತ್ತೊಮ್ಮೆ ನೋಡುವ ಹವ್ಯಾಸ. ಅವರು ನೋಡಿದರೆ ನಾನು

ದೃಷ್ಟಿ ಬದಲಿಸದೆ ಅವರನ್ನೇ ಗಮನಿಸುತ್ತಿದ್ದೆ. ಅದು ಕೆಲವರಿಗೆ ಹಿತವೆನಿಸುತ್ತಿರಬೇಕು. ಮತ್ತೆ ಕೆಲವರಿಗೆ ಮಳ್ಳಾದಂತೆ ಅನ್ನಿಸಬಹುದು. ಆದರೆ ನನ್ನ ಕಣ್ಣು, ನೂರು ಅರ್ಥ ಸೂಸುವ ನೋಟ ವಂದನಾಗೆ "ಇಲ್ ಹಂಗ್ರಿ ಲುಕ್ ಓ" ಕಣ್ಣುಗಳನ್ನು ಮುಟ್ಟಿದೆ. ಹಾಳು ಮನಸ್ಸಿನ ಹುಚ್ಚು ಹಾರಾಟಕ್ಕೆ ಈ ಕಣ್ಣುಗಳು ಪಾಪಿಯಾದವು. ಇದರ ಮಂಗನ ಆಟಕ್ಕೆ ಕಡಿವಾಣಹಾಕಬೇಕು. ನಾನು ಉದ್ವೇಗಗೊಂಡಿದ್ದೆ. ನನ್ನೊಳಗೆ ರಕ್ತ ಪರಿಚಲನೆ ಹೆಚ್ಚಾದಂತೆ ಅನಿಸಿತು.

ನಾನು ನನ್ನ ಅಂತರಂಗವನ್ನ ಪ್ರಶ್ನಿಸಿದೆ. ನಾನು ನಿಜವಾಗಿಯೂ ವಂದನಾಳನ್ನು ಪ್ರೀತಿಸುತ್ತಿದ್ದೆ? ಮೊದಲ ಸಲ ಯವನಿಕದಲ್ಲಿ ಅವಳ ತಂದೆ ಪುತ್ತೂರ ಪಟಾಲಂ ಶೆಟ್ಟಿಯೊಂದಿಗೆ ಕಾರಿನಲ್ಲಿ ಬಂದು ಇಳಿದಾಗ, ನನಗೆ ಅರಿವಿಲ್ಲದೆ ಅವಳ ಸ್ನಿಗ್ಧ ಸೌಂದರ್ಯಕ್ಕೆ ಮಾರಿ ಹೋದದ್ದು, ಅವಳಪ್ಪನದು ಕಾರಿದೆ ಎಂದೋ ಇಲ್ಲ ಅವಳು ಬೆಂಗಳೂರಿ ನವಳಾಗಿದ್ದರೂ ಉತ್ತರ ಕರ್ನಾಟಕದ ನಮ್ಮೊಂದಿಗೆ ಸಲಿಗೆಯಿಂದ ಆತ್ಮೀಯತೆಯಿಂದ ಬೆರೆತು ಆಡುತ್ತಿದ್ದ ಸಲಿಗೆ ಮಾತುಗಳಿಗೆ ಮಾರು ಹೋಗಿಯೇ, ಉತ್ತರ ಸಿಗಲಿಲ್ಲಾ, ಹಾಗಾದರೆ ಡಿ.ಸಿ. ಕಾಂಪೋಂಡಿನ ಗಿಡಗಳ ನೆರಳಲ್ಲಿ 'ಲೇಖಾ'ಳೊಂದಿಗೆ ಆಡಿದ ಕಣ್ಣಾಮುಚ್ಚಾಲೆ 'ಸಕ್ಕು'ಳೊಂದಿಗೆ ಕಳೆದ ದಿನಗಳು, ಮನೆ ಕಾಯುವಾಗ, ಪಕ್ಕದ ಮನೆಯ 'ಪದ್ದಿ'ಯೊಂದಿಗೆ ಬೆಳೆಸಿದ್ದ ಸಂಬಂಧ. ಇಂತಹ ಅನೇಕ ಹೆಸರುಗಳು ನನ್ನದೆಯೊಳಗೆ ಕುಟುಕ ತೊಡಗಿದವು. ಈ ವಂದನಾ ಹತ್ತರಲ್ಲಿ ಹನ್ನೊಂದನೆಯವಳು. ಇದು ಪ್ರೀತಿಯೇ ಅಲ್ಲಾ, ನನ್ನ ಮನದೊಳಗೆ ದೌರ್ಬಲ್ಯವಾಗಿ ಕಾಡುತ್ತಿರೂ ಬಯಕೆಯ ಭೂತ. ಹೌದು, ಎಷ್ಟೋ ಹರೆಯದ ಕನಸುಗಳನ್ನು ಚಿವುಟಿ ಹಾಕಿದ್ದೆ ಇದು, ಒಮ್ಮೊಮ್ಮೆ ನನಗೆ ಅನುಮಾನ ಕಾಡುತ್ತದೆ ನನ್ನ ದೇಹದೊಳಗೆ ಹೃದಯ ಎಂಬುದು ಇದೆಯೊ ಇಲ್ಲವೋ ಎಂದು, ಬಹಳ ಹೊತ್ತಿನವರೆಗೂ ನನ್ನೊಳಗೆ ತಾಕಲಾಟ ನಡದೆ ಇತ್ತು. ಕೊಸರಿಕೊಂಡು ವಾಸ್ತವಕ್ಕೆ ಬರಲು ಹೆಣಗಾಡುತ್ತಿದ್ದೆ. ಆಗಲೇ ಪ್ರೀತಿ ಎಂಬ ಪದಕ್ಕೆ ಇರಬಹುದಾದ ಅರ್ಥ ಹುಡುಕಲು ಬೆನ್ನತ್ತಿ ಓಡಿದೆ.

ಹಳ್ಳಿಯೊಳಗೆ ಅಂದು ನಾನು ಗುಲಗುಲಿಯೊಂದಿಗೆ ಆಟ ಆಡುವಾಗ ಕಲ್ಲುಗಳಿಗೆ ಮದುವೆ ಮಾಡಿಸಿ ಸಂಸಾರ ಮಾಡಲು ಹಚ್ಚಿದ್ದು, ಜುಗಾಣಿ ಜೊತೆಗೆ ನಮ್ಮ ಗದ್ದೆಯೊಳಗೆ ಬೆಂಡೆಕಾಯಿ ಉಳ್ಳಾಗಡ್ಡಿ ಹಾಕಿದ್ದನ್ನು ಕಾಯಲು ಹೋದಾಗ ಗುಡಿಸಲೊಳಗೆ ಅವಳು ಹೇಳುತ್ತಿದ್ದ ಆ ಮಾತುಗಳೆಲ್ಲವೂ ಪ್ರೀತಿಯ ಪ್ರತೀಕವೆ?.... ಮತ್ತೊಮ್ಮೆ ಪ್ರಶ್ನಿಸಿಕೊಂಡೆ. ಉತ್ತರ ಸಿಗಲಿಲ್ಲಾ, ದೆಹಲಿಯ ಅಡ್ಡಡ್ಡ ಹರದಾರಿಗಳಂತೆ ಹಳೆಯ ವಿಚಾರಗಳೆಲ್ಲಾ ಕವಲು ಕವಲಾಗುತ್ತಿರುವಂತೆ ಅನಿಸಿತು. ಹಳಿತಪ್ಪಿದ ಮನಸ್ಸನ್ನು ಟ್ರಾಕಿಗೆ ತರಲು ಹವಣಿಸುತ್ತಿದ್ದೆ. ನನಗೆ ಅರಿವಿಲ್ಲದೆ ನಾವು ಉಳಿದುಕೊಂಡಿದ್ದ ಸ್ಕೌಟ್ ಗ್ರಾಮ ಬಂದಿತ್ತು.

ವಂದನಾ ನನಗಿಂತ ಮುಂಚೆ ಇಳ್ಕೊಂಡಿದ್ದಳು. ಅವಳ ಎಂದಿನ ಮೋಹಕ ನಗೆಯಿಂದ, 'ಬನ್ನಿ' ಎಂದಳು. ಅವಳ ಮುಖ ನೋಡಲು ಅನುಮಾನಿಸತೊಡಗಿದೆ. 'ಹಾಳು ಕಣ್ಣುಗಳು ಅವಳ ಅಂತರಾಳವನ್ನೆ ಜಾಲಾಡಿಬಿಡುತ್ತವೆ'. ನೋಟ ಬೇರೆಕಡೆಗೆ ಹರಿಸಿ ಇಳಿಯಲು ಹವಣಿಸಿದೆ. ".ಕಣ್ಣುಗಳಷ್ಟೇ ಕಲ್ಮಷ ಮನಸ್ಸು" ಎಂದುಕೊಳ್ಳುತ್ತ ಬಸ್ಸಿನ ಫುಟ್‌ಬೋರ್ಡ್ ಅಂಚಿಗೆ ಕಾಲಿಟ್ಟು ಮುಗ್ಗರಿಸಿದೆ, ಮುಂದಿಂದ ಅವಳು ಹಿಡಿದು ನಿಲ್ಲಿಸಿದಳು. "ಹಲೋ

ಹೀರೋ ಎಲ್ಲಿದ್ದಿರಿ, ಇದು ವೆಹಲಿ. ನೀವು ಕ್ಯಾಂಪಿಗೆ ಬಂದಿರೊದು, ಬಿ ಹಿಯರ್ ಎಂದು ಹೀಯಾಳಿಸಿದಳು. ಮಾತಾಡುವ ಮನಸ್ಸಿಲ್ಲದೆ ಹೊರಟೆ. "ಮೈಡಿಯರ್ ಅದ್ವಿತೀಯ್" ಎಂದು ಕರೆದಳು. ನಾನು ಮನಸ್ಸಿಲ್ಲೇ ಹಿಂದಕ್ಕೆ ತಿರುಗಿದೆ. ನನ್ನ ಕೈಗೊಂದು ಮಡಚಿದ ಕಾಗದದ ತುಂಡೊಂದನ್ನು ಕೊಟ್ಟವಳೆ ಸರಸರ ತನ್ನ ಟೆಂಟ್‌ಕಡೆಗೆ ಹೊರಟು ಹೋದಳು. ಹಾಳು ಕುತೂಹಲ, ಹಾಳೆಯನ್ನು ಹೊರಳಿಸಿದೆ. ಛೀ ಏನು ಇಷ್ಟೊಂದು ಅವಸರ. ಇಲ್ಲಿ ಬೇಡ. ನನಗೆ ಮತ್ತು ಕುತೂಹಲ ಹೆಚ್ಚಾಯಿತು. ಏನಿರಬಹುದು? ಅಷ್ಟೊಂದು ಸುಲಭವಾಗಿ ಬಲೆಗೆ ಬೀಳದ ಹುಡುಗಿ ಬರೆದಿರುವುದಾದರೂ ಏನು. ಚಡಪಡಿಕೆ, ಕಾತರದಿಂದ, ಮತ್ತೊಂದು ಮಡಿಕೆಯನ್ನು ಬಿಚ್ಚಿದೆ. "ಹಾಂ ಯು ಚೀಟ್ ನೋಡಿ ನೋಡಿ, ಕೆಟ್ಟ ಅವಸರ" ಏನಿದು, ಹಿಂಗ್ಯಾಕೆ ಬರೆದಿದ್ದಾಳೆ. ಓಪನ್ ಮಾತಾನಾಡುವ ಅವಳು ರಹಸ್ಯವಾಗಿ ಬರೆದಿರುವ ವಿಷಯ. ತಲೆಯೊಳಗೆ ವಿಚಾರಗಳ ಕಿರುರ್ಝುರಿಗೊಂದು ಬುಗ್ಗೆ ಹೊಡೆಯಿತು. ಅವಳು ನನ್ನ ಈ ಹಾಳು ಕಣ್ಣುಗಳಿಗೆ ಮರುಳಾಗಿರಬಹುದೆ? ಹಾಳೆಯನ್ನು ತಿರುಗಿಸಿದೆ "ಬಿ ಕಾಮ್, ನಿಧಾನವಾಗಿ, ಟೆಂಟಿಗೆ ಹೋಗಿ, ಹಗುರವಾಗಿ ಹಾಸಿಗೆಯ ಮೇಲೆ ಮಲಗಿಕೊಂಡು ಬಿಡಿಸಿ ಓಕೆ!" ನನ್ನ ವಿಚಾರ ಲಹರಿ ಮತ್ತಷ್ಟು ಹರಿವನ್ನು ಪಡೆಯಿತು. ಹಾಳು ಆಲೋಚನೆ ನಾನು ಅಂದುಕೊಂಡಂತೆ ಆಗುವುದೇ ಇಲ್ಲಾ. "ಸರಿ, ಹಾಗೆ ಮಾಡುವೆ" ಎಂದುಕೊಂಡವನೆ ಗಡಿಬಿಡಿಯಿಂದ ನಾನು ರಾಮು, ರವಿ ಉಳ್ಕೊಂಡಿದ್ದ ಟೆಂಟಿನಕಡೆಗೆ ದಾಪುಗಾಲು ಹಾಕುತ್ತಾ ಓಡಿದೆ. ಹಿಂದಿನಿಂದ ಯಾರೋ 'ಅದ್ವಿತೀಯ್', ಹಲೋ, ಕೂಗಿದರು. ತಿರುಗಿ ನೋಡಲು ಅನುಮಾನಿಸಿದೆ. ರವಿಯ ಧ್ವನಿ ಇದ್ದಹಾಗಿತ್ತು. "ಸಾಯಲಿ" ಅಂದುಕೊಂಡು ಟೆಂಟಿನ ಒಳಗೆ ಪ್ರವೇಶಿಸಿದೆ. ನನಗಿಂತ ಮೂರಡಿ ಎತ್ತರ ಕಾಟನ್ನು ಹತ್ತಿದೆ, ಬಟ್ಟೆ ಬಿಚ್ಚುವ ಮನಸು ಆಗಲಿಲ್ಲಾ, ತಲೆ ತುಂಬ 'ವಂದನಾ' ಕೊಟ್ಟ ಚೀಟಿಯ ವಿಷಯವೇ ತುಂಬಿತ್ತು. ಹೃದಯ ಜೋರಾಗಿ ಬಡಿದುಕೊಳ್ಳತೊಡಗಿತು. ಏನಿರಬಹುದು. ಮುಂದೆ ಆಗಬಹುದಾದ ಖುಷಿ, ದುಃಖಕ್ಕೆ ಮನಸ್ಸನ್ನು ಗಟ್ಟಿಗೊಳಿಸಿಕೊಂಡು. "ಇನ್ನೂ ನನಗೆ ತಡೆಯಲಾಗದು" ಉಸುರಿದೆ. "ಇದೇ ನಮ್ಮ ದೌರ್ಬಲ್ಯ, ಹುಡುಗಿಯರ ಒಂದೇ ಒಂದು ಮಾತಿಗಾಗಿ ಗುಲಾಮಗಿರಿಯನ್ನು ಸ್ವೀಕರಿಸಲು ಸಜ್ಜಾಗಿ ಬಿಡುತ್ತೇವೆ. ಹೆತ್ತ ಸಂಬಂಧವನ್ನು ಧಿಕ್ಕರಿಸಿ ಅವಳ ಹಿಂದೆ ಕೋಲೇಬಸವನಂತೆ ಚೆಂಡು ಅಲುಗಾಡಿಸುತ್ತಾ 'ಯಸ್ ಬಾಸ್' ಗಳಾಗಿಬಿಡುತ್ತೇವೆ". ಎಲ್ನೋ ಡೀಪಿಯೆಟ್ ಆದ ವಿಚಾರದಿಂದ ಹೊರ ಬಂದಾಗ ಪತ್ರ ಅಣಕಿಸಿತು. ನನಗೆ ಅರಿವಿಲ್ಲದೆ ಪರಪರ ಅಂತ ಬಿಡಿಸಿದೆ, ನಾನು ಅಂದುಕೊಂಡಂತೆ, ಉದ್ದವಾಗಿರಲಿಲ್ಲಾ, ಇಂಗ್ಲೀಷ್ ಅಕ್ಷರಗಳನ್ನು ಓದಿದೆ. "ಥ್ಯಾಂಕ್ ಫಾರ್ ಯುವರ್ ಕಂಪನಿ". ಯಾರೋ ಬೆನ್ನಲ್ಲಿ ಇರಿದ ಹಾಗಾಯಿತು. "ಸ್ಟುಪಿಡ್" ನನಗರಿವಿಲ್ಲದೆ ಹೊರಟ ಶಬ್ದ ಟೆಂಟಿನೊಳಗೆ ಪ್ರತಿಧ್ವನಿಸಿತು. ನಾಗಾಲ್ಯಾಂಡಿನ ನಾಲ್ಕು ಹುಡುಗರು ನನ್ನ ಕಡೆಗೆ ದುರುಗುಟ್ಟಿ ನೋಡಿದರು. ನಗಬಾರದೆಂದರೂ ವಿಷಾಧದ ನಗೆ ನಕ್ಕೆ. "ಎಲ್ಲವೂ ಹೀಗೆ ಮುಚ್ಚಿ ಕೊಂಡಾಗ ಅದ್ಭುತವಾಗಿ ಕಾಣುತ್ತವೆ. ತೆರೆದಾಗ ಏನು ಇರುವುದಿಲ್ಲ ನಮ್ಮ ನಂಬಿಕೆಯೇ ಹಾಗ, ಕೆಲವರನ್ನು ಅದ್ಭುತವಾಗಿ ತಿಳಿಯುತ್ತೇವೆ. ರಿಯಾಲಿಟಿ ತಿಳಿದಾಗ ಹೇಸಿಗೆ ಎನಿಸುತ್ತ ನಾನು ಒಂದೊಮ್ಮೆ ಹಾಗೆ ಅಲ್ಲವೆ, ಅವಳು ಹಾಗಯೇ ಇರಬೇಕು. ನನ್ನ ಎದುರಿಗೆ ನಾಲ್ಕು ಜನ ತನ್ನ ಬಾಯ್ ಫ್ರೆಂಡ್‌ಗಳ ಪತ್ರಗಳನ್ನು

ಓದಿದಳು. ನಮ್ಮಿಬ್ಬರ ನಡುವೆ ಒಂದು ರೀತಿಯ ಸಾಮ್ಯವಿದೆ. ಈಗ ನಾವು ಹಳಸಿರುವ ಸಂಬಂಧಕ್ಕಾಗಿ ಹಾತೊರೆಯುತ್ತಿದ್ದೇವೆ" ಎಂದುಕೊಂಡೆ.

ರೈಲು ಹತ್ತುವ ಮೊದಲು ಎಲ್ಲಾ ಹುಡುಗರನ್ನು, ಹುಡುಗಿಯರನ್ನು ಬಿಟ್ಟು "ಅದಿ, ಕಾಫಿ ಕುಡಿಯೋಣ" ಎಂದು ಕರೆದಿದ್ದಳು. ರೈಲಿನೊಳಗೆ ಕಳೆದ ಆ ನಾಲ್ಕು ದಿನಗಳು ಬರಿ ಬೂಟಾಟಿಕೆಗಾಗಿ ನಡೆಸಿದ ನಾಟಕವೆ? ಸದಾ ನನ್ನ ಸನ್ನಿಹವನ್ನೆ ಹುಡುಕಿ, ನನ್ನ ಪಕ್ಕ ಕುಳಿತು ಹುಡುಗಿಯರನ್ನು ಹೀಯಾಳಿಸುವ ಮಟ್ಟಕ್ಕೂ ಹೋದ ಹುಡುಗಿ ಇವತ್ತು ಇದ್ದಕ್ಕಿದ್ದಂತೆ ವಿಚಿತ್ರವಾಗಿ ವರ್ತಿಸುತ್ತಿದ್ದಾಳೆ. ಅವಳ ಸಲಿಗೆ, ಸ್ನೇಹ.... ಒಂದು ಕ್ಷಣ ವಿಚಾರಗೊಂಡಿತು ಮನಸು. ಅವಕಾಶವಾದಿ, ನನ್ನ ರಿಯಾಲಿಟಿ ಅವಳಿಗೆ ತಿಳಿಯಲು ಸಾಧ್ಯವಿಲ್ಲ. ಆದರೂ ಹೀಗೇಕೆ ವರ್ತಿಸುತ್ತಿದ್ದಾಳೆ ಒತ್ತಾಯದಿಂದ ಕಣ್ಣು ಮುಚ್ಚಿದೆ. ಹಳೆ ಮುಖಗಳೆಲ್ಲಾ ವಿಕಾರಗೊಂಡಿತ್ತು ತಳೆದು ನನ್ನ ಸುತ್ತಲು ಕುಣಿದಾಡತೊಡಗಿದವು. ಲೇಖಾ, ಸುಕ್ಕು, ಪದ್ಮಾ, ಸೋಬನ, ಇನ್ನೂ ಅನೇಕರ ಮುಖಗಳು, ಪ್ರೀತಿಯೇ ಇಲ್ಲದ ಬರಡು ನೆಲದಂತಿರುವ ನನ್ನ ಹೃದಯವನ್ನು ಅಗೆಯತೊಡಗಿದವು. ಪ್ರತಿಯೊಂದು ಪರಿಚಯದ ಹಿನ್ನೆಲೆ ವಿಚಿತ್ರವಾಗಿತ್ತು. ಲೇಖಾ ಯಾವುದೋ ಸಂದಿಗ್ದ ಸ್ಥಿತಿಯಲ್ಲಿ ಸಹಾಯ ಪಡೆದಿದ್ದಳು. ಅವಳ ಒಂಟಿತನಕ್ಕೆ ನಾನು ದೊರಕಿಸಿಕೊಟ್ಟ, ನ್ಯಾಯ ಎಂಥಹುದು. ಮದುವೆಯಾಗುವ ಭರವಸೆ, ನನ್ನ ಹುಸಿ ಆಶ್ವಾಸನೆಯನ್ನು ಒರೆಗೆ ಹಚ್ಚದಷ್ಟು ದುರ್ಬಲ ಹುಡುಗಿ ತೋಳ ತೆಕ್ಕೆಯಲ್ಲಿ ಬಿಡಿಸಿಕೊಳ್ಳದೆ ಬಂಧಿಯಾಗಿದ್ದಳು. ಹೀಗೆ ಒಂದೊಂದೆ ಇತಿಹಾಸ ಸೃಷ್ಟಿ ಮಾಡಿದೆ. ಆ ಕ್ಷಣದಲ್ಲಿ ನಾನು ಮಾಡುತ್ತಿರುವುದೆಲ್ಲಾ ಸರಿ ಅನಿಸಿತು. ಕಾಲೇಜು ಕ್ಯಾಂಪಸ್‌ನಲ್ಲಿ ಅಂದು ಮೇಲೆತ್ತಿ ಉಳ್ಳವರ ಬೈಕುಗಳ ಮೇಲೆ ಕುಳಿತು ನನ್ನ ಕಡೆ ನೋಡಿ ವಿಜಯದ ನಗೆ ನಕ್ಕಿದ್ದ ಬಿನ್ನಾಣಗಿತ್ತಿಯರ ಮೇಲಿನ ಸೇಡಿನ ಪ್ರತೀಕದಂತಿತ್ತು ನನ್ನ ವರ್ತನೆ.

ಎಷ್ಟೋ ದುರ್ಬಲ ಮನಸುಗಳನ್ನು ಅತಿಕ್ರಮಿಸಿದ್ದೆ. ನನ್ನ ಕುರಿತು ಮಾತಾಡಿಕೊಳ್ಳುತ್ತಿದ್ದ ಅನೇಕ ಹುಡುಗಿಯರು ನನ್ನ ಬಯಸಿದ್ದು ನಿಜ. ಆದರೆ ಅಸಹಾಯಕ ಹೆಣ್ಣುಗಳ ಮೇಲೆ ನಾನು ತೋರಿದ ಪೌರುಷ ಸರಿಯೇ, ಹಿಂಸೆ ಅನಿಸಿತು. ಇವರುಗಳ ಸಾಲಿಗೆ ಸೇರಲಿರುವ ವಂದನಾ, ಮತ್ತೊಂದು ಪುರಾವೆ. ಯಾಕೋ ತಲಮಳಿಸಿದೆ. ಉಸಿರುಗಟ್ಟಿಸುತ್ತಿದ್ದ ಒಳಗಿನ ಪ್ರಪಂಚದಿಂದ ಮುಕ್ತನಾಗಿ ಹೊರಬರಲು ಹವಣಿಸಿದೆ. ನಾನೊಂದು ನಿರ್ಧಾರಕ್ಕೆ ಬಂದೆ. ಅವಳೊಂದಿಗೆ ಇರುವ ಸಂಬಂಧ ಕಡಿಮೆ ಮಾಡಿ, ನಾನು ಬಂದ ಕೆಲಸದ ಕಡೆಗೆ ಗಮನ ಹರಿಸಬೇಕು ಅಂತ. ಆಗಲೆ ಸಂಜೆಯಾಗಿತ್ತು. ಯಥಾಪ್ರಕಾರ ದಿಲ್ಲಿಯ ಛಳಿ ಆರಂಭವಾಗಿತ್ತು. ರವಿ ಬಟ್ಟೆ ಬದಲಿಸಿ ಊಟಕ್ಕೆ ಹೊರಟಿದ್ದ "ಬಾರೋ ಊಟಕ್ಕೆ" ಅಂದ. ನನಗೆ ಮಾತು ಬೇಡವೆನಿಸಿತು. "ಯಾಕೋ ಮೈಯಲ್ಲಿ ಹುಷಾರಿಲ್ಲಾ, ಇಲ್ಲಾ ವಂದನಾ ಏನಾದ್ರು ಹೇಳಿದ್ಲ" ಉತ್ತರಕ್ಕೂ ಕಾಯದೆ ಬಡಬಡಾಯಿಸಿದ. "ಕಮಾನ್ ಯಾರ್, ಈ ದೆಹಲಿಯೊಳಗೂ ಬೇಸರ ಏನೋ, ಹೋಗಲಿ ಬಿಡಯ್ಯ, ನಿನಗೇನು ಇಂತಹ ನೂರಾ ಎಂಟು ವಂದನಾಗಳಿದ್ದಾರೆ". ವ್ಯಂಗ್ಯವೊ ಸಮಾಧಾನದ ಮಾತೊ, ಊಹಿಸದಾದೆ. ಮೌನ ಹಿತವೆನಿಸಿತು. ತುಟಿ ಬಿಚ್ಚದೆ ಅವನ ಹಿಂದೆ ಹೊರಟೆ. "ಅವನನ್ನು ನೋಡಿ ಕಲಿಯಬೇಕಿತ್ತು. ಎಷ್ಟು ತಾಳ್ಮೆಯಿಂದ ವರ್ತಿಸುತ್ತಾನೆ. ನನ್ನ ಹಾಗೆ ಡಿಸ್ಟರ್ಬ್ಡ್ ಮೈಂಡೆಡ್ ಅಲ್ಲಾ. ನಾನು ನನಗೆ ಮುಳುವಾಗಿರೊ

ಬರವಣಿಗೆಯನ್ನು ಬಿಟ್ಟು ಬಿಡಬೇಕು, ಇವನ ಹಾಗೆ, ಏನೂ ಸಂಬಂಧವಿಲ್ಲದಂತೆ ನನ್ನ ಪಾಡಿಗೆ ನಾನಿರಬೇಕು" ನನ್ನೊಳಗೆ ಮಾತಾಡಿಕೊಳ್ಳುತ್ತಿದ್ದೆ. ಉದ್ದನೆ ಸಾಲು. ನಾನು ನಾನ್ ವೆಜ್ ಸಾಲಿನೊಳಗೆ ನಿಂತೆ. ಹುಡುಗರು, ಹುಡುಗಿಯರು ಒಬ್ಬೊಬ್ಬರೆ ತಮ್ಮ ಪಾಡಿಗೆ ತಾವು ಸಾಗುತ್ತಿದ್ದರು. ರವಿ, "ಅಲ್ನೋಡು ನಿನ್ನ ಫೇವರಿಟ್, ವಂದಿತಾ ಠಾಕೂರ್ ಚಿಕನ್ ಬಡಿಸ್ತಿದ್ದಾಳೆ" ಅಂದ. "ನನ್ನ ಪಾಡಿಗೆ ನನ್ನ ಬಿಡ್ತಿಯಾ ಮಹಾರಾಯ ನನಗೀಗ ಮಾತುಬೇಡ" ರೇಗಿದೆ. "ಹಲೋ ಚಿಕನ್ ಪ್ಲೀಸ್", "ರಾಜಸ್ಥಾನದ ಠಾಕೂರ್ ರಣವತ್‌ಸಿಂಗ್, ಅದೆಲ್ಲೋ ಮಿಲಿಟರಿಯೊಳಗೆ ಸುಬೇದಾರ್ ಅಂತೆ, ಇವಳಿಗೊಂದು ತಿಕ್ಕಲು, ಯಾವಾಗ ನೋಡಿದ್ರು ನನ್ನ ನೋಡಿ ಹಲ್ಲು ಗಿಂಜುತ್ತಿರುತ್ತಾಳೆ, ನೋಡುವುದರಲ್ಲಿ ನನ್ನ ಮೀರಿಸುತ್ತಾಳೆ". ಕೈಯೊಳಗಿನ ಪ್ಲೇಟು ಮುಂದೆ ಮಾಡಿದೆ. ಇಬ್ಬರ ಪಾಲಿನಷ್ಟು ಬಡಿಸಿ 'ಕಿಸ್' ಅಂತೇಳಿ ನಕ್ಕಳು, ರವಿ ಜೋರಾಗಿ ನಕ್ಕ. ನನ್ನ ಪಾಡಿಗೆ ನಾನು ಪರೋಟ ತೆಗೆದುಕೊಂಡು ಕರ್ನಾಟಕದವರ ಗುಂಪಿನಲ್ಲಿ ಸೇರದೆ, ನಾಗಾಲ್ಯಾಂಡಿನ ಹುಡುಗ-ಹುಡುಗಿಯರ ಜೊತೆಗೆ ಹೋಗಿ ಸೇರಿಕೊಂಡೆ. ನಮ್ಮವರ ಜೊತೆಗೆ ದಿನ ಇದ್ದಿದ್ದೆ, ಇದೊಂದು ಹೊಸ ಅನುಭವ ಅನಿಸಿತು.

ನಾನು ಊಟ ಮುಗಿಸಿದಾಗ, ಹಾಲ್‌ನಲ್ಲಿ ಕಾರ್ಯಕ್ರಮ ಆರಂಭ ಆಗಿತ್ತು. ಎಲ್ಲರಿಗಿಂತ ದೂರ ಒಬ್ಬನೆ ಕುಳಿತು ಅಸ್ಸಾಂನ "ಬಿಹೂ" ಡಾನ್ಸ್ ನೋಡಿ ಖುಷಿ ಪಡತೊಡಗಿದೆ. ಛಳಿ ಹೆಚ್ಚಾಯಿತು. ಹೆಗಲ ಮೇಲಿನ ಶಾಲನ್ನು ಹೊದ್ದುಕೊಂಡೆ. ಏನೋ ಬೆಚ್ಚನೆಯ ಅನುಭವ. ಅವಳಲ್ಲಿ ಮತ್ತೊಂದು ಶಾಲು ಇಲ್ಲದಿದ್ದರೂ ನೀವೇ ಇಟ್ಕೊಳ್ಳಿ ಛಳಿಯಾಗುತ್ತೆ ಅಂತ ಕೊಟ್ಟಿದ್ದಳು ವಂದನಾ.

ಏನೋ ಬೆಚ್ಚನೆಯ ಅನುಭವ, ಮನಸು ಹಿಡಿತ ಕಳೆದುಕೊಳ್ಳತೊಡಗಿತು. ಯಾರಿಗಾಗಿಯೋ ಕಣ್ಣುಗಳು ಶೋಧಿಸ ತೊಡಗಿದವು. ಎದ್ದವನೆ ಮುಂದೆ ಕುಳಿತವರ ನಡುವೆ ಹೊರಟೆ ಬಿಟ್ಟೆ, ಒಬ್ಬ ಹುಡುಗಿಯ ಪಕ್ಕ ಖಾಲಿ ಇದ್ದ ಕುರ್ಚಿ ಸರಿಸಿ ಕುಳಿತೆ. ಆ ಕಡೆ ಈ ಕಡೆ ತಲೆ ತಿರುಗಿಸಿ ನೋಡಿದೆ "ನನಗೆ ಗೊತ್ತಿತ್ತು ನಿಮ್ಮ ಮನಸು ಎಲ್ಲೂ ನಿಲ್ಲುವುದಿಲ್ಲಾ ಎಂದು, ಅದಕ್ಕೆ ಪಕ್ಕದೊಳಗೆ ಖಾಲಿ ಕುರ್ಚಿ ಉಳಿಸಿದ್ದೆ". ನನ್ನ ಕಡೆಗೆ ನೋಡದೆ ಮಾತಾಡುತ್ತಿದ್ದಳು ವಂದನಾ, ಧ್ವನಿ ಬಂದೆಡೆ ತಿರುಗಿದೆ. ನನ್ನ ಪಡಿಪಾಟಲು ಕಂಡು ನಗುತ್ತಿದ್ದಳು. ಹೌದು ವಂದನಾ, ಮನಸು ನನ್ನ ಕೈ ಮೀರಿ ಓಡಿಬಿಡುತ್ತದೆ. ನಾನು ಹಿಡಿದಷ್ಟು ಹಿಡಿತ ತಪ್ಪಿಸಿಕೊಂಡು ಅಣತಿದೂರ ಹಾಕುತ್ತದೆ. ಹೆಣ್ಣು ಸನಿಹ ಬಂದಾಗ ಪ್ರೀತಿ, ಪ್ರೇಮ ಮೀರಿದ ಭಾವೋದ್ವೇಗ". ನಾನು ಏನೇನೂ ಹಲಬುತ್ತಿದ್ದೆ. ಸ್ಟೇಜ್ ಮೇಲೆ ಕಾರ್ಯಕ್ರಮ ಜೋರಾಯಿತು. ನಮ್ಮ ಮಾತುಗಳು ಸಂತೆಯೊಳಗಿನ ವ್ಯಾಪಾರದಂತೆ ಅನಿಸಿತು. ಅವಳ ಮಾತು ಕೇಳಿಸದಾದವು. ಕಾರ್ಯಕ್ರಮ ತಮಗೆ ಸಂಬಂಧವಿಲ್ಲ ಎಂಬಂತೆ ಸುತ್ತಲ ಜನರನ್ನು ಕಡೆಗಣಿಸಿ ಒಂದು ಸೆಳೆತದ ಲೋಕದೊಳಗೆ ವಿಹರಿಸುತ್ತಿದ್ದೆವು.

ಮಾತು ಮತ್ತು ಕೃತಿಯ ನಡುವಿನ ಅಂತರ ಅಳೆಯಬೇಕೆನಿಸಿತು. ಅರ್ಥ ಕಳೆದುಕೊಳ್ಳುವ ಮಾತುಗಳಿಗೆ ಬಣ್ಣ ಬಳಿಯುವ ನನ್ನ ಹಳೆ ರೂಢಿಯನ್ನು ಹೊಸದಾಗಿ ಪ್ರದರ್ಶಿಸಲು ಹವಣಿಸಿದೆ. ಏನು ಮಾತುಗಳು ಹಾಳಾದವು. ಒಂದರ ಬೆನ್ನಿಗೆ ಒಂದು ಪೋಣಿಸಿಕೊಂಡು ಹೋಗಿ ಬಿಡುತ್ತವೆ. ಶೃಂಗಾರ ಕಾವ್ಯ ಹೀಗೆ ರಚಿತವಾಗಿರಬೇಕು. ಈ ಹೆಂಗಸರಲ್ಲಿ ಗಂಡಸರನ್ನು

ಮಾತನಾಡಿಸುವ ಶಕ್ತಿ ಇದೆ ಅನಿಸುತ್ತೆ. ಮಾತು ಬಾರದವನು ಮಾತನಾಡುತ್ತಾನೆ. ನಮ್ಮಿಬ್ಬರ ಪಾಡು ಅದೇ ಆಗಿತ್ತು. ಅವಳ ಹಿಂದಿನ ಇತಿಹಾಸದ ಪಳಿಯುಳಿಕೆ ಮೇಲೆ ಮತ್ತೊಂದು ಹೊಸ ಲೋಕ ಸೃಷ್ಟಿಸ ಹೊರಟಿದ್ದೆವು. ಎಷ್ಟೋ ಹೊತ್ತಿನವರೆಗೆ ನಡೆದ ತಾಕಲಾಟದಿಂದ ಬಿಡುಗಡೆಗೊಂಡಾಗ ಹಗುರವೆನಿಸಿತು ನನಗೆ. ರಾತ್ರಿ ಹನ್ನೊಂದು ಗಂಟೆಯಾಗಿತ್ತು, ಹೊರಗಡೆ ತುಂತುರು ತುಂತುರು ಮಂಜು ಬೀಳುತ್ತಿತ್ತು. ಛಳಿ ಮೈ ಕೊರೆಯುತ್ತಿದ್ದರೂ ಹಿತವೆನಿಸಿತು. ನಮ್ಮ ಮನಸುಗಳ ಘರ್ಷಣೆಯ ನಡುವೆ ಕಾಲರಾಯ ಸರಿದುಹೋದದ್ದೆ ತಿಳಿಯಲಿಲ್ಲಾ. ಕಾರ್ಯಕ್ರಮ ಮುಗಿದು ಸ್ಟೇಜ್ ಮೇಲೆ ಕತ್ತಲಾಯಿತು. ಎಲ್ಲರೂ ಟೆಂಟ್‌ಗಳ ಕಡೆಗೆ ಹೊರಟೆವು. ಏನೋ ಹೇಳಬೇಕೆಂದು ಬಾಯಿ ತೆರೆದೆ. ತುಟಿ ಸೀಳಿ ಮಾತುಗಳು ಹೊರಡಲಿಲ್ಲಾ. ಗಂಟಲೊಳಗೆ ಸತ್ತು ಹೆಣವಾದವು. ಒಮ್ಮೆ ಅವಳ ಕಡೆ ನೋಡಿದೆ ನಕ್ಕಳು. ನಾನು ನಗಲಿಲ್ಲಾ, ಮರುಕ್ಷಣವೆ ಬಿಡುಗಡೆ.

ರೈಲು ಹೊರಟಾಗ ದಿಲ್ಲಿಯ ನೆನಪುಗಳನ್ನು ದಿಲ್ಲಿಯಲ್ಲೇ ಮರೆಯಲು ಹವಣಿಸಿದೆ. ನಿಜಾಮುದ್ದೀನ್ ನಿಲ್ದಾಣದಲ್ಲಿ ನಿಂತ ನನಗೆ ಅಲ್ಲಿ ಕಂಡ ಮುಖಗಳೆಲ್ಲಾ ಮರೆಯಾಗತೊಡಗಿವು. ನನ್ನ ಪ್ಲೇಟ್‌ನಲ್ಲಿ ಹೆಚ್ಚು ಚಿಕನ್ ಹಾಕುತ್ತಿದ್ದ ರಾಜಸ್ಥಾನದ ಹುಡುಗಿ. ಸದಾ ನನ್ನ ಜೊತೆಯಲ್ಲಿ ಇರಬಯಸಿದ ಪಂಜಾಬ್ ಹುಡುಗಿ, ಮುಸುಕು ಮುಸುಕು ಚಿತ್ರಣ, ನಾನು ಟೆಂಟ್ ಬಿಡುವ ಪೂರ್ವದಲ್ಲಿ ಅದೆಂತಹ ರೋದನ. ನಾನು ರವಿ ಪ್ಯಾಕ್ ಮಾಡ್ತಾ ನಗ್ತಾ ಇದ್ದೆವು. "ಇದು ನಮ್ಮ ದೇಶದ ಹೆಂಗಸರುಗಳ ದೌರ್ಬಲ್ಯ. ಮಾನಸಿಕ ದಿವಾಳಿತನ", ಅಂದ ಅವನು "ಅಲ್ಲ ಕಣೋ ಪುರುಷನನ್ನ ದಿಕ್ಕು ತಪ್ಪಿಸುವ ಅಸ್ತ್ರ" ಅಂದೆ. ಎಲ್ಲವೂ ಅಸಹಜವೆನಿಸಿತು. ರೈಲು ಪ್ಲಾಟಫಾರ್ಮ ಬಿಟ್ಟಾಗ, ನನಗೆ ಕೆಡುಕೆನಿಸಿತು. ರಾಷ್ಟ್ರಪತಿ ಭವನದ ಎದುರಿಗೆ ಕುಳಿತು ನನ್ನ ಹಳ್ಳಿಯ ದಿನಗಳನ್ನು ನೆನಪುಮಾಡಿಕೊಂಡು ಅತ್ತದ್ದು ನೆನಪಾತು. ಈ ಊರೊಳಗೆ ಏನೋ ಸೆಳೆತವಿದೆ. ಪ್ರತಿಯೊಬ್ಬ ತಮ್ಮೂರಲ್ಲಿ ದಿಲ್ಲಿ ದರ್ಬಾರ ಬಗ್ಗೆ ಮಾತಾಡುತ್ತಾನೆ. ನಮ್ಮಂತಹ ಕೆಲವೇ ಜನರು ಇದನ್ನ ನೋಡಿ ತೃಪ್ತಪಡೋದು, ಗುಡ್ ಬೈ ದಿಲ್ಲಿ ಎನ್ನಬೇಕು ಅನಿಸಿತು.

ತನ್ನ ಪಾಡಿಗೆ ಟ್ರೇನ್ ಸಾಗಿತ್ತು. ಆ ಒಂದು ತಿಂಗಳು ನನ್ನೊಳಗೆ ಉಂಟಾದ ಬದಲಾವಣೆ ಗಮನಿಸಿದೆ. ಕ್ಯಾಂಪಿನಿಂದ ಏನಾದರೂ ಕಲಿತೆನೆ? ಪ್ರಶ್ನಿಸಿಕೊಳ್ಳತೊಡಗಿದೆ. ಏನೋ ಸ್ವಲ್ಪ ಬದಲಾವಣೆಯಾಗಿದೆ ಅನಿಸಿತು. ಕರ್ನಾಟಕದವರೆಲ್ಲಾ ತಮ್ಮ ಅನುಭವ ಹಂಚಿಕೊಳ್ಳುತ್ತಿದ್ದರು. ಪ್ರೊ. ಗರುಡ ನನ್ನ ಕಡೆಗೆ ಪ್ರಶ್ನಾರ್ಥಕ ನೋಟ ಹರಿಸಿದರು. ನಾನು ಏನೂ ಹೇಳುವ ಸ್ಥಿತಿಯಲ್ಲಿರಲಿಲ್ಲಾ. ರವಿ, ಹನಮ ಒತ್ತಾಯಿಸಿದರು. ವಂದನಾ ಮಾತಾಡಲಿಲ್ಲಾ. ಒಂದೆರಡು ಮಾತಿನಲ್ಲಿ ಹೇಳಿ ಮುಗಿಸಿದೆ. ಇದೆಂಥ ವಿಚಿತ್ರ ಸ್ನೇಹವೊ ಅನಿಸಿತು. ನನಗೆ. ಒಂದು ವೇಳೆ ಇವಳೊಂದಿಗೆ ಜೀವನ ಪೂರ್ತಿ ಕಳೆಯುವುದಾದರೆ ನನ್ನಿಂದ ಸಾಧ್ಯವಾದೀತೆ?. ಬಹುಶಃ ಇದೊಂದು ಯೌವ್ವನ ಸಹಜವಾದ ಸೆಳೆತವಿರಬೇಕು. ಇದರಲ್ಲಿ ಯಾವುದೇ ಪ್ರೀತಿಯ ಅಂಶಗಳಿಲ್ಲ. ಅದು ಇದ್ದರೂ ನನಗೆ ಅರ್ಥವಾಗುವ ಸ್ಥಿತಿಯಲ್ಲಿ ಇರಲಿಲ್ಲಾ. "ಮೀಯರ್ ಇನ್‌ಫೆಚುಯೇಷನ್" ಅನಿಸಿತು. ಎದ್ದು ಡೋರ್ ಹತ್ತಿರಬಂದೆ. ಗಾಳಿ ಒಳಗೆ ನಗುತ್ತಿತ್ತು. ನಾನು ಅದಕ್ಕೆ ತಡೆಯಾಗಿ ನಿಂತಿರುವೆ ಎಂಬಂತೆ ಒಳಗೆ ನೂಕುತ್ತಿತ್ತು. ಯಾರೋ ಹೆಗಲ

ಮೇಲೆ ಕೈ ಇಟ್ಟರು. ತಿರುಗಿದೆ ಅವಳು ನಗುತ್ತಿದ್ದಳು.

ಅವಳ ಕೈಗೊಳಗಿದ್ದ ಪೇಪರ್ ಹಾಸಿಕೊಂಡು ಕುಳಿತೆವು. ಯಾರು ಮಾತು ಆರಂಭಿಸಬೇಕೆಂಬ ಸ್ಪರ್ಧೆ ನಡೆದಂತಿತ್ತು. ನನ್ನಲ್ಲಿ ಆಸಕ್ತಿ ಕಡಿಮೆಯಾಗಿತ್ತು. ಹೆಣ್ಣು ಸುಡುವ ಬೆಂಕಿಯಂತೆ ಅರಿವಿಲ್ಲದೆ ಕಾವೇರಿಸುತ್ತಾಳೆ, ಅವಳ ಕಡೆಗೆ ನೋಡಿದೆ. ಅವಳ ಮನಸಿನೊಳಗೆ ಒಂದು ರೀತಿಯ ಗೊಂದಲ ಉಂಟಾಗಿತ್ತು. "ನಾಳೆ ಊರು ಬರುತ್ತೆ ನೀವು ಇಲ್ಲವಾಗುತ್ತೀರ" "ತುಂಡುಗಳ ಪೋಣಿಸುತ್ತಿದ್ದಳು. ಹೌದು, ಎಲ್ಲೂ ಹೀಗೆ ಅಲ್ವೆ. ಅಗಲಿಕೆ ಅನಿವಾರ್ಯ" ಅಂದವನೆ ವೇಗ ಹೆಚ್ಚಿಸಿ ಟ್ರೇನ್ ಓಡುತ್ತಿರುವ ಪರಿಯನ್ನು ಗಮನಿಸಿದೆ. ಇಡಿ ಒಂದು ತಿಂಗಳಾದರೂ ನಿಮ್ಮ ಮನಸ್ಸು ಅರ್ಥವಾಗಲಿಲ್ಲಾ. ನೀವು ತುಂಬಾ ಕಾಂಪ್ಲಿಕೇಟ್ ಅಂದುಕೊಂಡಂತೆ ಇರುವುದೇ ಇಲ್ಲ" ಅಂದವಳೆ ನನ್ನ ಉತ್ತರಕ್ಕಾಗಿ ಕಾಯತೊಡಗಿದಳು. ನಾನು ಮಾತಾಡಲಿಲ್ಲ. "ನನ್ನ ಬಗ್ಗೆ ನಿಮಗೆ ಆಸಕ್ತಿ ಇದೆ. ನೀವು ಬಾಯಿಬಿಟ್ಟು ಹೇಳಲಿಲ್ಲಾ. ನಿಮ್ಮ ಒಂದು ವಿಚಿತ್ರಗುಣ ಅಂದ್ರೆ ಹುಡುಗಿಯರ ಕಂಡು 'ಯೀಲ್ಡ್' ಆಗೋದು. ಅದು ಪುರುಷರಿಗೆ ಶೋಭಿಸುವುದಿಲ್ಲ. ಅಂತಹ ವ್ಯಕ್ತಿ ನನ್ನ ಗಂಡನಾಗುವುದನ್ನು ನಾನು ಇಷ್ಟ ಪಡುವುದಿಲ್ಲ. ಹೆಣ್ಣು ಒಂದು ಹಂತದವರೆಗೆ ಸೆಲೆಕ್ಟಿವ್ ಒಂದು ಸಾರಿ ನಿರ್ಧರಿಸಿದ ಮೇಲೆ ಸಂಬಂಧಕ್ಕೆ ಜೋತು ಬೀಳುತ್ತಾಳೆ. ಗಂಡು ಹಾಗಲ್ಲ ಹೆಣ್ಣಿನ ಆಸೆಯನ್ನು ಧಿಕ್ಕರಿಸಿ ಹೊಸ ಹೊಸ ನೆಲೆಗಳನ್ನು ಶೋಧಿಸುತ್ತಾನೆ. ನನ್ನ ಮತ್ತು ನಿಮ್ಮ ಸಂಬಂಧ ಎರಡು ವಿರುದ್ಧ ದಿಕ್ಕಿನೆಡೆಗೆ ಕೊಂಡೊಯ್ಯುತ್ತವೆ. ನಾವು ಒಂದಾಗಲು ಸಾಧ್ಯವಿಲ್ಲ" ವಂದನಾ ಎದ್ದು ಹೋಗದಿದ್ದಳು. ನಾನು ವೇಗವಾಗಿ ಮರೆಯಾಗುತ್ತಿದ್ದ ಮರಗಿಡ- ಹಳ್ಳಕೊಳ್ಳ ಊರುಕೇರಿಗಳನ್ನು ಗಮನಿಸುತ್ತಾ ಅವಳ ನೆನಪನ್ನು ಮರೆಯಲು ಹೆಣಗಾಡತೊಡಗಿದೆ.

ಶರೀರ ಗೂಡು ಹೋಗದ ಮುನ್ನಾ

ಬೆಟ್ಟದ ಮಲ್ಲಣ್ಣನ ಬೆಟ್ಟದ ಹಿಂದೆ ಅಡಗಿಕೊಂಡ ಸೂರ್ಯ ತನ್ನ ಹಿಂದೆ ಕರ್‍ರನ ಕತ್ತಲನ್ನ ಬಿಟ್ಟು ಹೋಗಿದ್ದ. ಇಡೀ ಬೆಟ್ಟದ ಸಾಲು, ಮಹಾಭಾರತದಲ್ಲಿ ಬರೋ ರಾಕ್ಷಸಿನಂತೆ ಕಂಡಿತು ಅವನಿಗೆ, ತಣ್ಣಗೆ ಮೈ ಕೊರಿಯೊ ಛಳಿ ಎದೆಯೊಳಗ ಏನೋ ಒಂದು ಅವ್ಯಕ್ತಗೊಳಿಸದ ಭಯ. ಜಂಬೂರ ಎದ್ದವನೆ ಒಂದು ಅಂದಾಜಿನ ಮೇಲೆ ಇಡಿ ಹೊಲ ಸುತ್ತಾಡಿದ. ಹೊಲದೊಳಗಿನ ಬಂಡಿ ಕಲ್ಲುಗಳನ್ನು ಸವರಿದ. ಮೂಕ ಚೌಡಿ, ಬಂಡೆಗಲ್ಲು ಚೌಡಿಯರಿಗೆ ಭಯ ಭಕ್ತಿಯಿಂದ ಕೈಮುಗಿದ. ಅವನು ಯಾವಾಗಲೂ ಮಲಗುತ್ತಿದ್ದ ಬೇವಿನ ಮರದ ಹತ್ರ ಬಂದ ಬಡ್ಡಿಯನ್ನ ಮುಟ್ಟಿದ ಒಂದ ಸಲ ಅಪ್ಕೊ ಬೇಕ ಅನಿಸಿ ಎಲ್ಡು ಕೈ ಚಾಚಿ ಬಿಗಿಯಾಗಿ ಅಪ್ಪಿಕೊಂಡ ಅವನ ಹಿಡಿತಕ್ಕೆ ಸಿಗಲಿಲ್ಲಾ. ಹೊಲಕ ಬರದೆ ಮೂರನಾಕ ವರ್ಷಗಳೆ ಆಗಿದ್ದವು. "ನಾ ಸಣ್ಣವನಿದ್ದಾಗ ಒಂದ ಕೊನಿ ಇತ್ತು. ಇವತ್ತು ಎಂಥ ದೊಡ್ಡ ಮರ" ಒಂದು ಸಲ ಕನಲಿದ. ಯಾಕೋ ಅಳಬೇಕು ಅನಿಸಿತು " ದುಃಖ ಮನುಷ್ಯನನ್ನು ದುರ್ಬಲಗೊಳಿಸತೈತಿ, ಅಳಬಾರದು" ಮನಸ್ಸನ್ನ ಗಟಿ ಮಾಡಿಕೊಳ್ಳಾಕ ಜೋರಾಗಿ ಮಾತಾಡಿಕೊಂಡ. ಬಂದ ಕೆಲಸ ನೆನಪಾದಾಗ ಇಡಿಮೈ ಕಂಪಿಸಿತು "ಯಾಕೆ ಹಿಂಗಾಗಾಕ ಹತ್ತೈತಿ? " ಪ್ರಶ್ನೆ ಮಾಡಿಕೊಂಡ ಹಿಂಗಾದ್ರ ಕೆಲ್ಸ ಕೆಡತೈತಿ ಅಂದವನೆ ಕಿಸೆಯೊಳಗಿಂದ ಒಂದು ಸರೆ ಪಾಕೀಟು ತಗದ್ ಹಲ್ಲಿಂದ ಕಚ್ಚಿ ಒಂದೇ ಉಸುರಿಗ ಖಾಲಿ ಮಾಡಿದ. ಗಂಟಲು ಸುಡ್ತಾ ಒಳಗ ಹೊದ ಸರಾಯಿ ತಲೆಗೆ ಏರಿ ನೆನಪಿನ ಹುತ್ತಕ ಬಡದಿದ್ದೆ ಅಂವ ಅಂರ್ತಮುಖಿಯಾದ.

ಪಿಯುಸಿ ಫೇಲಾಗಿ ಊರ ಸೇರಿದ ಜಂಬೂರನ ತಲಿಗ ಹೊಳದಿದ್ದೆ ದಿಗಡೂರಿಗೊಂದು ಯುವಕಸಂಘ ಕಟ್ಟಿ ಊರಿಗಾಗಿ ಏನಾದ್ರು ಮಾಡಬೇಕೆಂತ. ಅಂವಃ ಸಣ್ಣೋನಿದ್ದಾಗಲೇ ಅವನ ತಂದಿ ರಾಚಪ್ಪ ತೀರ್ಕೊಂಡಿದ್ದ. ನಾ ಕೂಲಿ ಮಾಡಿದ್ರು ಮಗ ಓದಿ ಬುದ್ಧಿ ವಂತನಾಗಿ ಸರ್ಕಾರಿ ಕೆಲ್ಸ ಹಿಡಿದು ದೊಡ್ಡ ಗೌಡ್ರ ಇರ್ವಾಕ್ಷಿ ಹಂಗ ಇರಲಿ ಅಂತ ಅವನವ್ವ ಸಿದ್ದಮ್ಮ ಅವನ ಬಿಟ್ಟು, ಅವನ ಹಿಂದಿದ್ದ ನಾಕ ಹೆಣ್ಣು ಮೂರ ಗಂಡ ಹುಡ್ರುಸ ತಗೊಂಡು ಕೆಲ್ಸ ಮಾಡಿ ಅವನಿಗ ದುಡ್ಡು ಮುಟ್ಟಿಸುತ್ತಿದ್ಲು. ಜಂಬೂರ ಮಾತ್ರ ಪಿಯುಸಿ ಸೆಕೆಂಡಿಯರಿನ ಇಂಗ್ಲೀಷ್, ರಾಜ್ಯಶಾಸ್ತ್ರ, ಇತಿಹಾಸ ತಲಿಗ ಹತ್ತದೆ ಅವನ ಊರಿನವನೇ ಆದ ಪೆಂಗೂ ಜತೆ ಸೇರಿ ಪಕ್ಕದ ಜಬಾತಿಯಿಂದ ಬರ್‍ತಿದ್ದ ಹೆಣ್ಣ ಹುಡುಗಿಯರ ಹಿಂದೆ ಬಿದ್ದು ಎಲ್ಲಾ ವಿಷಯ ಕಳ್ಕೊಂಡು ಮನಿ ಸೇರಿದ. ಓದಿನ ತಲಿ ಬುಡ ತಿಳಿಯದ ಸಿದ್ದಮ್ಮ ಹಿರಿಮಗ ಜಂಬೂರ ಏನ್ಮಾಡ್ತಾನ ಎನ್ಬಿಡ್ತಾನಂತ ತಲಿಕೆಡಿಸಿಕೊಳ್ಳದೆ ದುಡದು ದೊಡ್ಡ ಗೌಡ್ರ ಸಾಲಕ್ಕ ಅಡು ಇದ್ದ ಹೊಲ ಬಿಡಿಸಿಕೊಂಡಿದ್ಲು. ಜಂಬೂರಗ ಆಗದೋರ ಹೋಗಿ 'ಸಿದ್ದಮ್ಮ ನಿಮ್ಮ ಹುಡುಗ

ಜಂಬ ನಪಾಸ ಆಗ್ಯಾನ ಬೇ' ಅಂತ ಹೇಳಿದ್ದು, ಏನೂಂತ ತಿಳಿಯದೆ "ಹೌದೇನೊ ಪಾಡ್ ಆತ ಬಿಡು ದೇವ್ರು ಒಳ್ಳೆದ ಮಾಡ್ಲಿ" ಅಂತ ಸುಮ್ಮನಾಗಿದ್ಲು. ಹೇಳಿದವನು ತಲ ಕೆರ್ಕ್ಕೊಂಡ ಜಾಗ ಖಾಲಿ ಮಾಡಿದ್ದ.

ಸಿದ್ದಮ್ಮ ಯಾವುದಕ್ಕೂ ತಲೆ ಕೆಡಿಸಿಕೊಳ್ಳಲಿಲ್ಲಾ "ಎಷ್ಟಾದ್ರು' ಅಂವss ಕಲ್ತಾನ ಅಂತ ಮಂದಿ ಮುಂದ ಮಗಂದೆ ಶಿಫಾರಸ್ಸು ಮಾಡ್ತಿದ್ಲು. ಜಂಬೂರ ತನ್ನ ತಾಯಿಗ ಮಾಡಿದ ನಿರಾಶೆ ಕುರಿತು ಯಾವತ್ತು ಯೋಚನೆ ಮಾಡ್ಲೆ ಇಲ್ಲಾ. ಬಾಯಿ ಸತ್ತ ತಮ್ಮಂದಿರು ಹೇಳಿದಂಗ ಕೇಳೊ ತಂಗಿಯರು, ತಾ ಮಾಡಿದ್ದೆ ಕಾರುಭಾರು ಅಂದ್ಕೊಂಡು ಒಂದಿಷ್ಟು ಊರಾನ ಹುಡ್ರ ಸೇರಿಸಿಕೊಂಡು ಯುವಕ ಸಂಘ ಕಟ್ಟಾಕಂತೇಳಿ ಓಡಾಡ ತೊಡಗಿದ. "ಊರಾಗ ನಡಿತಿರೊ ಅನ್ಯಾಯ ನಿಲ್ಲಬೇಕು ಅಂತಂದ್ರ ನಮ್ಮ ಸಂಘ ಅಸ್ತಿತ್ವಕ ಬರಬೇಕು ಗ್ರಾಮ ಪಂಚಾಯ್ತಿ ಎಲೆಕ್ಷನ್ ಬಂದು ಎಲ್ಡ ಪಾರ್ಟಿ ಆಗಿರೊ ಊರು ಮತ್ತೆ ಒಂದಾಗ ಬೇಕು, ಹನ್ಮಂತ ದೇವರ ಗೂಳಿಮಾರಿ ಬಡ್ಡಿ ರೊಕ್ಕ ತಿಂದೋರು, ಮನ್ನೆ ಸರಾಯಿ ಅಂಗಡಿ ಹರಾಜ ಆದಿಂದ ಬಂತಲ್ಲಾರೊಕ್ಕ ಅದು ಹೊರಗ ಬರಬೇಕು ಅದಕ್ಕ ನಾವು ಹುಡುಗರೆಲ್ಲಾ ಒಂದಾಗಲೇ ಬೇಕು" ಹುಡ್ರಮುಂದ ದೊಡ್ಡ ಭಾಷಣ ಮಾಡಿದ. ಬಹಳ ಮಂದಿಗ ಜಂಬೂರನ ವಿಚಾರ ಒಪ್ಪಿಗೆ ಆದದ್ದೆ ಊರ ಹಿರಿಯರನ್ನೆಲ್ಲಾ ಗುದ್ದಮ್ಮನ ಕಟ್ಟಿಗ ಸೇರಿಸೆ ಬಿಟ್ರು.

ಕಟ್ಟಿಮ್ಯಾಲ ಕುಂತ ಕೆಲಮಂದಿಗ ಹುಡುಗರು ಮಾಡಾಕ ಹೊಂಟರೋದು ಬರಾಬರಿ ಅನಿಸಿದ್ರ ಮತ್ತೆ ಕೆಲವರಿಗ ಊರ ಉಸಾಬರಿ ತಪ್ಪಿ ಹೊಕೈತಲ್ಲಾ ಅಂತ ಒಪ್ಪಿಗೆ ಆಗಲಿಲ್ಲಾ. ದೊಡ್ಡ ಗೌಡ್ರು, ಪಾಂಡಜ್ಜ, ಪುಡಾರಿ ಪುಂಡಲಿಕ "ಆಯ್ತಪ್ಪ ಅದೇನ ಮಾಡ್ತಿರೊ ಮಡ್ಕಳ್ರಿ, ದಿಗಡೂರಿನ ಹೆಸರ ತರ್ರಿ ಆಟೆಯ, ನಮ್ಮ ಕಾಲ ಮುಗೀತು ಇನ್ನ ನಿಮ್ಮದೇ ಮಾಡ್ರಿ" ಅಂತೇಳಿ ಒಪ್ಪಿಗೆ ಕೊಟ್ರು. ಇಡಿ ಊರ ರೊಕ್ಕ ತಿಂದಿದ್ದ ಡಿಳ್ಳಿಗ ಮಾತ್ರ ಬ್ಯಾಡಾಗಿತ್ತು. "ನೀವು ಮಾಡೋದ್ಕ ನಂದಂತು ಒಪ್ಪಿಗಿ ಇಲ್ರೋ ತಮ್ಮ, ಸಂಘ ಪಂಗ ಯಾಕ ಬೇಕು ಈಗ ಊರು ಪಾಡೈತಿ, ಹಾಳ ಮಾಡಾಕ ಹೋಗಬ್ಯಾಡ್ರಿ" ಅಂತೇಳಿ ತೆಳಗಿದ್ದ ಟವೆಲು ಕೊಡವಿಕೊಂಡು ಹೆಗಲಿಗೇರಿಸಿಕೊಂಡು ಹೊಂಟೆಬಿಟ್ಟ. ಗೂರಜ್ಜ ಎದ್ದವನೆ, ಸತ್ಯ ಅರಗಿಸಿಕೊಳ್ಳೊದು ಬೋ ಕಷ್ಟ ಕಣ್ರಪ್ಪ, ಅವನು ಏನ್ಮಾಡ್ತಾನ ನೋಡಾಮ, ನೀವು ನಾಳೆಯಿಂದಲೇ ನಿಮ್ಮ ಕೆಲ್ಸ ಸುರುಮಾಡ್ರಿ", ಅಂದ ಹುಡುಗರಿಗ ಬಹಳ ಖುಷಿಯಾಯಿತು. ಜಂಬೂರ ಹತ್ತ ಹುಡ್ರನ ಕಟ್ಕೊಂಡವನೆ ಸಂಘ ರಿಜಿಸ್ಟರ್ ಮಾಡಿಸಿ, ಸರ್ಕಾರದಿಂದ ಏನೇನು ಸವಲತ್ತು ಸಿಗತೈತೊ ಅದನ್ನೆಲ್ಲಾ ಪಡೆಯಾಕ ಪ್ರಯತ್ನ ಮಾಡಿದ.

ಜಂಬೂರ ಮನೆ ಮಾತಾಗಿದ್ದ, ಸಣ್ಣೋರು ದೊಡ್ಡೋರು ಅವನು ಕಂಡ್ರ ಗೌರವ ತೋರಿಸತೊಡಗಿದ್ರು, ಸಂಘಟನೆಯನ್ನು ರಾಜ್ಯ ಮಟ್ಟಕ ಒಯ್ದು ಮುಟ್ಟಿಸಿದ್ದ. ಪಕ್ಕದ ಪಾಪೂರಿಗ ಗೊತ್ತಿರದ ದಿಗಡೂರಿನ ಖ್ಯಾತಿ ಬೆಂಗಳೂರ ತಂಕ ಮುಟ್ಟಿತ್ತು. ಊರಿಗ ಡಾಂಬರ ರಸ್ತೆ ಆತು. ಬಡಬಗ್ಗರಿಗ ಮದ್ವಿ ಮಾಡಾಕ ಕಲ್ಯಾಣ ಮಂಟಪ ಅನ್ನೋದಾತು ಊರ ಹುಡ್ರು ಅಷ್ಟೆ ಅಲ್ಲಾ ಪಕ್ಕದ ಪಾಪೂರ, ಪಲ್ಲಾಗಟ್ಟಿ, ಜೇಕಟ್ಟಿ, ಹನ್ಮನಹಳ್ಳಿ ಹುಡುಗರಿಗೆಂತೇಳಿ ದಿಗಡೂರಿನಲ್ಲಿ ಸರ್ಕಾರಿ ಹೈಸ್ಕೂಲ ಆತು ಬಡ ಮಕ್ಕಳ ಹಾಸ್ಟೆಲು ಆತು, ಇನ್ನೇನ ಬೇಕು.

ಊರ ಪಕ್ಕದಾಗೊಂದು ದೊಡ್ಡ ಟ್ಯಾಂಕ್ ಕಟ್ಟಿ ಮನಿಮುಂದ ನಲ್ಲಿ ನೀರು

ಬರೋಹಂಗಾತು. ಲಟ್ಟು ಲಟ್ಟು ಅಂತ ಕೈ ಬೋರ ಹೊಡೆದು ಹೊಡೆದು ಎದೆ ನೋವು ಮಾಡಿಕೊಂಡಿದ್ದ ಹೆಂಗಸರಿಗಂತು ಜಂಬೂರ ಸಿನೀಮಾದ ಹೀರೋಗಳ ಹಂಗೆ ಕಾಣ ತೊಡಗಿದ "ಹಿಂಗೆ ಬಿಟ್ರ ಯಾರಿಗೂ ಮೈಟ್ ಆನ್ನಂಗಿಲ್ಲಾ ಮಗ" ಅಂತ ಡಿಳ್ಳಿ ಮಗ ಸಿರಿಯ, ಜಂಬೂರನ ಚಿಗದೊಡಪ್ಪನ ಮಕ್ಕಳನ್ನೆಲ್ಲಾ ಕಲೆ ಹಾಕ್ಕೊಂಡು ಅವನ ವಿರುದ್ಧ ದೊಡ್ಡದೊಂದು ಪಡೆಯನ್ನೇ ಹುಟ್ಟಿಹಾಕಿದ. ಜಂಬೂರ ಮಾಡಿದೆಲ್ಲಾ ರೊಕ್ಕ ಹೊಡಿಯಾಕ, ಅಂತ ಮಂದಿ ತೆಲಿ ತುಂಬ ತೊಡಗಿದ್ರು, ಏನಿಲ್ಲಾಂದ್ರೂ ಒಂದೆಲ್ಡ ಲಕ್ಷ ಮಾಂಡ್ಕೊಂಡಾನಂತ ಗುಣಕಾರ-ಭಾಗಾರ ಮಾಡಿ ಮಂದಿಗ ಒಪ್ಪಿಸ ತೊಡಗಿದ. ಹಳಿ ತಲೆ ಕೆಲ ಮಂದಿ ಹಂಗೂ ಸೈ ಹಿಂಗೂ ಸೈ ಅನೋವು. ಕರಾರುವಕ್ಕಾಗಿ ಹೇಳಿದ್ದನ್ನೆ ಕೇಳಿ, "ಏಯ್, ಇದ್ರೂ ಇರಬೇಕ ಬಿಡ್ರಪ್ಪ, ಇತ್ತಿತ್ಲಾಗ ಅವನ ಡೌಲೆ ಬದಲಾಗೈತಿ" ಅಂತ ಜಂಬೂರನ ಮ್ಯಾಲ ಅನುಮಾನ ಪಡೋದಕ್ಕೂ ದಿಗಡೂರಿಗ ಮದ್ರಾಸಿನ ಬೋರ ಗುದ್ದೊಲಾರಿ ಊರಿಗ ಬರೊದಕ್ಕೆ ಸರಿಹೋತು.

ದೊಡ್ಡ ಗೌಡ್ರು ಹಳೆ ಬಾವಿ ಸೋಸಿ ಸೋಸಿ ಸಾಕಾಗಿ, ದೊಂಬರಳ್ಳಿಯ ಅವರ ಬೀಗರು ತಮ್ಮ ಹೊಲಕ್ಕೆ ಬೋರ ಗುದ್ದಿಸಿ ನೀರಾವರಿ ಮಾಡ್ತಿರೋದನ್ನ ನೋಡಿ ಬಂದು ತಾವು ನಾನೂರ ಎಕರೆ ಹೊಲಕ್ಕೆ ಎಂಟೊಂಬತ್ತ ಬೋರ ಗುದ್ದಿಸೊ ಯೋಜನೆ ಹಾಕ್ಕೊಂಡು ಮದ್ರಾಸಿಂದ್ಲೆ ಕರೆಸಿದ್ರು. ಜಂಬೂರ ತಮ್ಮ ಎಂಟ ಎಕರೆ ತರಿ ಹೊಲಕ್ಕ ಬೋರ ಗುದ್ದಿಸಬೇಕೆಂತೇಳಿ ಯೋಚಿಸಿಕೊಂಡು, ಅರ್ಧ ನಗದು ಅರ್ಧ ಉದ್ರಿ ಮಾತಾಡಿ ಬೋರ ಬಿಡಿಸಿದ. ಅವನ ಪುಣ್ಯ ನೆಟ್ಟಗಿತ್ತು. ಐದ ಇಂಚು ನೀರು ಹಾಲಿನ ಹಂಗ ಉಕ್ಕಿ ಬಂತು. ದೊಡ್ಡ ಗೌಡ್ರು ಎಂಟ ಹತ್ತು ಬೋರ್ ಬಿಡಸಿದ್ರು, ಆಟ ನೀರು ಬೀಳದಕ್ಕ ಹೊಟ್ಟೆ ಉರಿತಾಳದೆ "ಸೂಳಿ ಮಗ ಊರಿಂದ ರೊಕ್ಕ ತಿಂದ ಹೊಲಕ್ಕ ಬೋರ ಬಿಡಿಸಿಕೊಂಡ. ಹಡಬಿರೊಕ್ಕದವರ ಹೊಲದ ತುಂಬ ನೀರು ಬೀಳತಾವ ಸ್ವಂತ ಹಾಕಿದವರಿಗ ಆಟಕ ಆಟ, ಅವನ್ನ ಹಿಡಿದು ವಿಚಾರಿಸಬೇಕು" ಅಂತೇಳಿ ಊರಾಗ ಟಾಂ... ಟಾಂ... ಡಂಗೂರ ಸಾರಿಸಿ ನೀರಿನ ಸೇಡು ತೀರಿಸಿಕೊಳ್ಳೊ ಅವಕಾಶಕ್ಕಾಗಿ ಕಾಯತೊಡಗಿದ್ರು. ಊರಿಗೆ ದೊಡ್ಡ ಶ್ರೀಮಂತ ದೊಡ್ಡ ಗೌಡ್ರೆ ಹಿಂಗಂತಾರಂದ್ರ ಏನೂ ತಿಳಿಯದ ರೈತಾಪಿ ಮಂದಿ ಬಿಟ್ಟಾರೇ, ಪಂಚಾತಿ ಸೇರಿಬಿಟ್ರು.

ಜಂಬೂರಗ ಸಾಕ ಸಾಕಾಗಿ ಹೋಗಿತ್ತು. ಎದ್ದು ನಿಂತು ಕೈ ಮುಗಿದು ಬೇಡಿಕೊಂಡ. "ದೈವಸ್ಥರು ಇವತ್ತ ಸೇರಿಕೊಂಡಿರಿ, ನೀವ ದೇವರು ಅಂತ ನಂಬೀನಿ, ನಮ್ಮ ಮುಂದಿರೊ ಗುದ್ದಮ್ಮನ ಮ್ಯಲ ಆಣಿ ಮಾಡಿ ಹೇಳ್ತಿನಿ ದೈವದ ಒಂದ ಪೈಸ ನಾ ತಿಂದಿದ್ರ ನಾ ಇಲ್ಲೆ ಸೆಟ್ಕೊಂಡ ಹೋಗ್ಲಿ" ಅವನ ಮಾತನಂಬಾಕ ತಯಾರಿಲ್ಲದ ಮಂದಿ ನೂರಾ ಎಂಟು ವಿಚಾರ ಹೊರಗಹಾಕಿದ್ರು. ಜಂಬೂರಗ ತನ್ನ ತಪ್ಪಿನ ಅರಿವಾಯ್ತು. ನಾನು ಡಿಳ್ಳಿ ಮಾಡ್ದಂಗ ಮಾಡಬೇಕಿತ್ತು. ತಪ ಮಾಡಿದೆ, ನನ್ನೂರು ಅಂತ ಅಭಿಮಾನದಿಂದ ನಮ್ಮವ್ವ, ತಮ್ಮಂದಿರಿಗೆ ಮೋಸ ಮಾಡಿ ಅವರು ದುಡ್ಡದಿದ್ದನ್ನ ನನ್ನ ಸ್ವಾರ್ಥಕ್ಕೆ ಬಳಸಿಕೊಂಡೆ, ಮಂದಿಗ ಅಂಜಿ ಕೆಟ್ಟೆ. ಸಾವಿರಾರು ರೂಪಾಯಿ ಲಪಟಾಯಿಸಿರೊ ಡಿಳ್ಳಿ ಆರಾಮದಿಂದ ಅದಾನ, ನಾನು ಪ್ರಾಮಾಣಕನಾಗಿ ಮಾಡಿ ತಿಂದಿಲ್ಲ ಅಂತ ಹೇಳಿದ್ರು. ಈ ಮಂದಿ ನಂಬಾಕ ತಯಾರಿಲಿಲ್ಲಾ. ಹ್ಯಾಂಗ ನಂಬಿಸಲಿ ಈ ಮಂದಿನ, ಒಬ್ಬಂವss ಕಡದು ಅಂತಂದ್ರ ಮತ್ತೊಬ್ಬಂವಾss ಬಳದು ಅಂತಾನು, ಅದೇನ ಮಾಡ್ತಾರ ಮಾಡ್ಲಿ ನಾಹೊಲಕ್ಕ ಸಾಲ ಮಾಡಿ ಬೋರ ಬಿಡಿಸಿನಿ ಅದೇ

ದೊಡ್ಡ ತಪ್ಪಾತ ನೋಡು. ಒಬ್ಬನೆ ಯೋಚಿಸ ತೊಡಗಿದ. ಮಂದಿ ಮಾತು ನಡದ ಇದ್ದವು, 'ಹುಲಿ ಗುಂಡಿಗ ಬಿದ್ರ ಆಳಿಗೊಂದ ಕಲ್ಲು' ಅನ್ನೊ ಹಂಗ ಆಗಿತ್ತು ಅವನ ಪರಿಸ್ಥಿತಿ. ಒಂದ ಮೂಲಿಯೊಳಗ ಕುಂತಿದ್ದ ಹೆಂಗಸರು ಮಾತ್ರ ಇನ್ನೂ ಜಂಬೂರ ಪ್ರಾಮಾಣಿಕ ಅಂತೇಳಿ ಮಾತಾಡಿಕೊಳ್ಳುತ್ತಿದ್ದರು. ಡಿಳ್ಳಿ ಹೆಂಡತಿ ಗೋಮಿ, ಅಲ್ಲಿಯೂ ಒಂದ ಬೀಜ ಬಿತ್ತಾಕ ನೋಡಿದ್ಲು. ಅಕಿ ಗಂಡನ ಕೆಲ್ಸ ಗೊತ್ತಿದ್ದ ಹೆಂಗಸರು ಇದು ಡಿಳ್ಳಿ ಕೈವಾಡ ಅಂತ ತಿಳಿಯೋದು ತಡ ಆಗಲಿಲ್ಲಾ. ತಿರಗಮುರಗ ಅವೇ ಮಾತುಗಳು ಒಬ್ಬ ಒಂದ ಸುರು ಮಾಡಿದ್ರ ಮತ್ತೊಬ್ಬ ಅವನ ಹಿಂದಿಂದ ಅದನ್ನೆ ಹೇಳ್ತಿದ್ದ. ಇದೆಲ್ಲಾ ಬಗೆ ಹರಿಯೊ ಕೆಲ್ಸ ಅಲ್ಲ ಅಂತ ತಿಳ್ಕೊಂಡ ದೊಡ್ಡ ಗೌಡ್ರು, "ಏನೋ ತಪ್ಪು ಮಾಡ್ಯಾನ ಆದ್ರ ಊರಿಗ ಒಂದೀಟು ದುಡದಾನ, ಇದೊಂದ ಸಾರಿ ಅವನನ್ನ ಮಾಫಮಾಡ್ರಿ" ಅಂದವರೆ ವಸ್ತ್ರ ಕೊಡವಿ ಎದ್ದೆ ಬಿಟ್ರು. ಮಂದಿಗ ನಿರಾಶೆ ಆದ್ರು ಗೌಡ್ರ ಹಿಂಗಂದಾರಂದ್ರ ನಮ್ಮದೇನು ಅಂತ ಎದ್ದು ಬಿಟ್ರು. ಡಿಳ್ಳಿ ಮಗ ಸಿರಿಯಾ ಎದ್ದವನೆ" ಇನ್ನು ಮುಂದ ಜಂಬೂರ ಸಂಘದ ಮನಿಕಡೀಗ ಬರೋದು ಬ್ಯಾಡ. ಏನಂತೀರಿ ಗೌಡ್ರ "ಅಂತ ನೆರದ ಮಂದಿ ಮಾರಿ ನೋಡಿದ" ಹೌದು ಅಂವss ಇನ್ನೂ ಬ್ಯಾಡ" ಅಂದವರೆ ಕಟ್ಟೆ ಇಳಿದು ಹೊಂಟೆ ಬಿಟ್ರು.

ಜಂಬೂರಗ ತಲಿ ಕೆಟ್ಟ ಹೋಗಿತ್ತು. ಬೋರ ಕೊರೆಸಿದ್ದು ಮೋಟರ ತಂದಿದ್ದು ಕರೆಂಟ ಎಳಸಿದ್ದಂತ ಸಾಲ ಮೈ ತುಂಬಿಹೋತು. ಅದು ಅಲ್ಲದೆ ಹುಡ್ರ ಮುಂದ ಊರಾಗ ಅಡ್ಡಾಡೋದು ಕಷ್ಟ ಆತು" ಬಂದ ನೋಡ್ರಲೇ ನಮ್ಮ ಲೀಡರ್" ಅಂತೇಳಿ ಅವನಿಗಕೇಳೊ ಹಂಗೆ ಮಾತಾಡತೊಡಗಿದ್ರು. ಸಾಲ ಹೆಚ್ಚಾಗಿದ್ಕ, ಮನಿಯೊಳಗು ತಮ್ಮಂದಿರು ಅವನ ಮ್ಯಾಲ ಅಷ್ಟೊಂದು ಒಳ್ಳೆ ರೀತಿಯಿಂದ ವ್ಯವಹಾರ ಮಾಡ್ಲಿಲ್ಲ. "ಲೇ, ಅಂವss ರೊಕ್ಕ ತನ್ನ ಹೆಸರಿಗ ಯಾವದೋ ಬ್ಯಾಂಕಿನೊಳಗ ಇಟ್ಕೊಂಡಾನ, ನಾವು ದುಡಿಯೋರ ಆದ್ವಿ, ಅಂವss ಬಿಳಿ ಬಟ್ಟೆ ಹಾಕ್ಕೊಂಡು ಅಡ್ಡಾಡಿ ಖರ್ಚು ಮಾಡಾವ" ಜಂಬೂರನ ಕಿವಿಗೆ ಬಿದ್ದಿದ್ದೆ ತಳಮಳಿಸಿಪ್ಪಾದ, ಹಿಂದೆ ಮುಂದೆ ನೋಡದೆ, ಊರ ಬಿಟ್ಟ ಹೊಂಟಿದ್ದೆ ಮದ್ರಾಸ ಬೋರವೆಲ್ ಲಾರಿ ಹತ್ತಿಬಿಟ್ಟ. ಒಂದ ತಿಂಡಿ ಎಲ್ಡ ಊಟ ತಿಂಗಳಿಗ ಹತ್ತ ನೂರಂತ ಮಾತ ಮಾಡ್ಕೊಂಡು ತಮಿಳು ಮಲಿಯಾಳಿ ಹುಡ್ರ ಗೆಳೆತನಮಾಡ್ಕೊಂಡು ಹೈಸ್ಕೂಲೊಳಗ ಕಲ್ತಿರೊ ಹಿಂದಿಯನ್ನೆ ಚೂರು ಪಾರು ಮಾತಾಡಿಕೊಂಡು ಊರೂರು ಸುತ್ತ ತೊಡಗಿದ.

ಜಂಬೂರನ ಸುತ್ತಾಟದಾಗ ನಾಕೈದ ವರ್ಷಗಳೇ ಕಳಹ್ಯಾದವು ಅವನಿಗೂ ಪೈಪಹಿಡಿ, ಕೇಸಿಂಗ ತೊಡಿಸು, ನಟ್ ಟೈಟ್ ಮಾಡು ಅಂತ ಹೇಳಿ, ಕೇಳಿ ಬ್ಯಾಸರ ಬಂತು. ಯಾವತ್ತ ಊರ ಬಿಟ್ಟಿದ್ನೋ ಅವತ್ತಿಂದ, ಹೊಳ್ಳಿ ಊರಿನ ಮಾರಿ ನೋಡಿರಲಿಲ್ಲಾ. ಯಾಕೊ ಊರಿನ ನೆನಪಾತು. ಅಷ್ಟ್ಯಾಗ ಅವನ ಸಾಲ ತೀರಿತ್ತು ಹೊಲಕ ಬೋರ ಬಿಡಸೋರು ನೀರು ಚೆನ್ನಾಗಿ ಬಂತಂದ್ರ ಒಳ್ಳೆ ಊಟ ಹಾಕಿ ಕೈ ತುಂಬ ರೊಕ್ಕಾನು ಕೊಡ್ತಿದ್ರು, ನೀರು ಬೀಳಲಿಲ್ಲಾ, ಹಿಗ್ಗಾ ಮುಗ್ಗ ಉಗಿತ್ತಿದ್ರು, ಹಾಂಗೆ ಹಿಂಗೆ ಅದಕ್ಕ ಇದಕ್ಕಂತ ಖರ್ಚು ಮಾಡಿಯೂ ಒಂದಿಷ್ಟು ರೊಕ್ಕ ಮಾಡ್ಕೊಂಡಿದ್ದ. ಮಾಲಿಕ ಊರ ಕಡೀಗ ಹೋಗಿ ಬರ್ತೀನಿ ಅಂತ ಲೆಕ್ಕಾಚಾರ ಮಾಡಿಸಿಕೊಂಡು ಸಿದಾ ಮನಿಗ ಬಂದ.

ಮಂದಿ ತಲಿಯಾಗಿಂದ ಜಂಬೂರನ ಹೆಸರು ಮತ್ತ ಅಂವ ಮಾಡಿದ್ದು ಮಾಸಿಹೋಗಿತ್ತು.

"ಪಾಪ ಸುಕಾಸುಮ್ಮನೆ ದೊಡ್ಡಗೌಡ್ರು ಊರ ಬಿಟ್ಟು ಹೊರಗ ಹಾಕಿದ್ರು, ಅಂವssಯಾ ಮಗಂದು ನಯಾ ಪೈಸಾ ತಿನ್ನೋನೆ ಅಲ್ಲ" ಅಂತ ಕೆಲ ಮಂದಿ ಮಾತಾಡಿಕೊಳ್ಳತೊಡಗಿದ್ರು. ಸಂಘದ ಮನಿ ಕದ ಮುರದಿತ್ತು. ಒಳಗಿದ್ದ ಆಟದ ಸಾಮಾನು, ಭಜನಿ ಸಾಮಾನು ಒಂದು ಇರ್ಲಿಲ್ಲಾ. ಈಗ ಅಲ್ಲಿ ಫೆಲಾಗಿ ಊರ ಸೇರಿದ ಪುಟಗೋಸಿ ದಂಡ ಸೇರ್ಕೊಂಡು, ಕುಡಿಯೋದು, ಸವರಾತ್ರಿ ಮಟ ಇಸ್ಪಿಟ ಆಟ ಆಡೋದು, ಅವನ ಮಗಳ ಹಿಂಗ, ಇವನ ಹೇಣ್ತಿ ಹಿಂಗ ಅಂತೇಳಿ ಇಲ್ಲ ಸಲ್ಲದ ಮಾತಕತಿ ಆಗುತ್ತಿದ್ದವು. ಡಿಳ್ಳಿ ಮಗ ಸಿರಿಯಾ ಕೆಲ ಮಂದಿ ಹುಡ್ರನ ಕಟ್ಕೊಂಡು ದೊಡ್ಡ ಗೌಡ್ರ ಮೊಮ್ಮಗಳು ಸೌದಮ್ಮನ ಎತ್ಕೊಂಡ ಹೋಗಿ ಅಂಡ ಹರಿಯೋ ಹಂಗೆ ಹೊಡ್ದಾ ತಿಂದು ಊರ ಬಿಟ್ಟಿದ್ರು. ಊರಾಗೇನಾರು ಕಂಡ್ರ ಕಡದು ಚೆರಗ ಚೆಲ್ಲೋದಾಗಿ ಗೌಡ್ರು ಅಂಜಿಕೆ ಹಾಕಿದ್ರು. ಮಂದಿ ಮತ್ತೆ ಜಂಬೂರನ ಬಗ್ಗೆ ಯೋಚನೆ ಮಾಡತೊಡಗಿದರು. ದೊಡ್ಡ ಗೌಡ್ರಿಗ ತಮ್ಮ ತಪ್ಪಿನ ಅರಿವಾದ್ರು ಒಪ್ಪಿಕೊಳ್ಳಾಕ ತಯಾರಿರಲಿಲ್ಲಾ, ಜಂಬೂರ ಮಾತ್ರ ಹಳ್ಳಿ ಹಾಳಾದ್ರೇನು ದಿಲ್ಲಿ ಪಟ್ನಾದರೇನು ತನ್ನ ಪಾಡಿಗ ತಾನು ಸುಮ್ಮನಿರೋದಂತ ತೀರ್ಮಾನಿಸಿದ. ಸಾಲಿ ಕಲಿತು ಅರ್ಧಕ್ಕೆ ಬಿಟ್ಟು ಬಂದ ಹುಡುಗರ ಧಾಂದಲಿ ಹೆಚ್ಚಾಗಿತ್ತು. ದೊಡ್ಡೋರು ಸಣ್ಣೋರು ಅನ್ನದೆ ಅದೇನ ಸಿಗರೇಟು, ಗುಟಕಾ, ಒಬ್ಬೊಬ್ರು ಐದಾರು ಪಾಕೇಟು ಸಾರಾಯಿ ಕುಡಿಯೋದು ಯಾರ ಸ್ವಲ್ಪ ಐಬದಾರು ಅವರ ಮನೀಗ ನುಗ್ಗೋದು ಮಾಡ್ತಿದ್ರು. ಹುಡ್ರ ಕಾಟ ಬಿಡಾಡಿ ದನಗಳ ಕಾಟಕ್ಕಿಂತ ಹೆಚ್ಚಾಗಿತ್ತು. ಹ್ಯಾಂಗ ಹತೋಟಿಗ ತರೋದಂತ ಮಂದಿ ಪರದಾಡುತ್ತಿದ್ರು. ಜಂಬೂರ ಊರಿಗ ಬಂದ ಮ್ಯಾಲ ತಾನಾಯ್ತು ತನ್ನ ಹೊಲ ಮನಿಯಾತು ಊರ ಉಸಾಬರಿ ಅಂದ್ರ ಮೆಟ್ಟಿ ಬೀಳ್ತಿದ್ದ. ಮಗ ಹಿಂಗ ಇರಬೇಕಂದ್ರ ಮನೀಗ ಸೂಸಿ ಬರಬೇಕೆಂತ ಅವನವ್ವ ಯೋಚನೆ ಮಾಡಿ ಒಳಗಿಂದೊಳಗೆ ಮಸಲತ್ತ ನಡಿಸಿದ್ಲು.

"ನಂದೇನ ಅವಸರ ಇಲ್ಲಬೇ ತಂಗಿಯರದ ಆಗ್ಲಿ" ಅಂತ ಜಾರಿಕೊಳ್ಳಾಕ ನೋಡಿದ. ಮನಿ ಮಂದಿ ಮಾತ ಕೇಳದೆ ದೂರದ ಸೋದರ ಸಂಬಂಧದ ಹೆಣ್ಣು ತಂದು ಮದ್ವಿ ಮಾಡೇ ಬಿಟ್ರು. ಜಂಬೂರ ತನ್ನ ಮ್ಯಾಲ ಹೆಚ್ಚಾಗ್ತಿರೊ ಜವಾಬ್ದಾರಿಗಳಿಗೆ ಸರಿಯಾಗಿ ಸ್ಪಂದಿಸತೊಡಗಿದ. ಹಗಲು ರಾತ್ರಿ ಹೊಲ್ದಾಗ ಮನಿಯಾಗ ದುಡಿದು ಒಂದೊಂದೆ ಜವಾಬ್ದಾರಿ ಕಳ್ಕೊ ಬೇಕು ಅಂತ ಆಲೋಚಿಸುತ್ತಿರುವಾಗ್ಲೆ ಮನಿಗ ಮತ್ತೊಬ್ಬ ಸದಸ್ಯ ಸೇರ್ಪಡೆಯಾಗಿದ್ದ. ಈಗ ಅವನ ವಿಚಾರ ಪೂರ ತನ್ನ ಮನೆಯ ಆರ್ಥಿಕ ಪ್ರಗತಿ ಕಡೆಗೆ ಹರಿಯಿತು. ನೀರಾವರಿ ಹೊಲಕ್ಕೆ ತರಕಾರಿ ಹಣ ತರೊ ಬೆಳೆಗಳನ್ನ ಬೆಳಸಿ ಎರಡು ಹೆಣ್ಣು ಹುಡ್ರನ ದಾಟಿಸಿದ. ರಾತ್ರಿ ಸರ್ವೋತ್ತಿನ ಮಟ ನೀರಾ ಕಟ್ಟಿ, ಸುಸ್ತಾಗಿ, ಮುಂಜಾನೆ ಮಲಗಿದಾಗ ಏಳಾಕ ಮನಸಾಗದೆ ಮಲಗಿ ಬಿಡುತ್ತಿದ್ದ.

ಜಂಬೂರ ನಿಜವಾಗಿಯೂ ಒಂದು ವಿಚಿತ್ರವಾದ ಆಂತರೀಕ ಕಾಯಿಲೆಗೊಳಗಾಗಿದ್ದ. ಇದ್ದಕ್ಕಿದಂಗೆ ಧಡ್‌ಂತ ನೆಲಕ ಬಿದ್ದೋನು ದಿನಕ ದಿನ ತೂಕ ಕಳ್ಕೊಂಡು ಜ್ವರದಿಂದ ಬಳಲ ತೊಡಗಿದ. ಹೆಚ್ಚು ಕೆಲ್ಸ ಮಾಡಿದ್ಕ ಹಿಂಗಾಗಿರಬೇಕಂತೆ. ಊರಿಗ ಬರ್ತಿದ್ದ ಮಲೇರಿಯಾ ಡಾಕ್ಟರ ಮೈಲಾರ ಲಿಂಗಪ್ಪನ ಹತ್ರ ಎಲ್ಲ ಪೆನ್ಸಿಲಿನ್ ಚುಚ್ಚಿಸಿಕೊಂಡ. ಪ್ರಯೋಜನ ಕಾಣಲಿಲ್ಲ. ಅವನು ಮನಿಸೇರಿ ದುಡಿಯೋದ ನೋಡಿ ಆಗದವರು ಬನ್ನಿಕೊಪ್ಪಕ ಕೈ ಮುಕ್ಕೊಂಡಾರೇನಂತ ಅವನವ್ವ ರುಕ್ಮಾ ಪೂಜಾರಿತಾವ ಶಕುನ ಕೇಳಿಸಿದ್ಲು. ಅವನು ಏನೇನೊ ದೋಷ ತಗದು,

ಹಾಳಮೂಳ ಮಾಡಿದ ಒಂದೇ ಸಮನೆ ಸುತ್ತಿರೊ ಮೈ ಕಾವು ಇಳಿಯಲೇ ಇಲ್ಲಾ. ಹರೇಯದ ಮಗ ನೆಲ ಹಿಡಿದಿದ್ದನ ಕಂಡ ಅವರವ್ವ ಕೂಳು ನೀರು ಬಿಟ್ಟು ಯೋಚ್ನೆ ಮಾಡತೊಡಗಿದ್ಲು. "ಯಾಕಿಂಗ ಮಾಟ ಮಂತ್ರ ಅಂತಿ ಸಿದ್ದಮ್ಮ ದಾವಣಗೇರಿ ಧರ್ಮದ ಆಸ್ಪತ್ರಿಗೆ ಒಯ್ಯಬಾರ್ದ" ಅಂತೇಳಿ ಗುಡ್ಡಪ್ಪಜ್ಜ ತಾಕೀತು ಮಾಡಿದ. ಸಿದ್ದಮ್ಮಗ ಮುದುಕನ ವಿಚಾರ ಹೌದು ಅನಿಸಿದ್ದೆ "ತಮ್ಮ ಜಂಬಣ್ಣ ನಾಳೆ ಹೊತ್ತಾರೆ ದಾವಣಗೇರಿ ಧರ್ಮದ ಆಸ್ಪತ್ರಿಗಾರು ಹೋಗಿ ತೋರಿಸಿಕೊಂಡ ಬರಾನ ಮಗ. ಏಟ ದಿನ ಆತು ಹಿಡಿದಿರೊ ಜರ ಬಿಡ್ತಿಲ್ಲಾ. ನಾಳೆ ಏನಾರ ಹೆಚ್ಚು ಕಮ್ಮಿ ಆದ್ರ ಇಡಿ ಮನೀನ ಮುಳಗಿ ಹೊತ್ಯೆತಿ" ಅಂತೇಳಿ ತನ್ನ ಎದಿಯಾಗಿನ ಸಂಕಟ ತೋಡಿಕೊಂಡಿದ್ಲು. "ಯವ್ವ ನನಗ ಏನೂ ಆಗಿಲ್ಲಾ ಒಂದ ಇನ್ನೂರ ತಾ, ಆಟ ಡಾಂಬರ ರಸ್ತಿ ಮೇಲೆ ಅಡ್ಡಾಡಿ ಬಂದ್ನಿ ಅಂತಂದ್ರ ಮೈ ಕಾವು ಇಳ್ಕೊಂಡ ಹೊಕ್ಕೆತಿ" ಅಂತೇಳಿ ಇನ್ನೂರ ರೂಪಾಯಿ ತೆಗೊಂಡು ಡಾವಣಗೇರಿಗ ಬಂದು ದೊಡ್ಡ ಡಾಕ್ಟರ ಕಡೀಗ ತೋರಿಸಿದ.

ಜಂಬೂರನ ಎದಿಯಾಗ ಬಿರುಗಾಳಿ ಎದ್ದಿತ್ತು. ಇಡಿ ತನ್ನ ಸಂಸಾರ ನಿರ್ನಾಮವಾಗುವುದನ್ನ ನೆನೆದು ಒಳಗೊಳಗೆ ರೋಧಿಸ ತೊಡಗಿದ. ಎಲ್ಲಿಗಾದ್ರು ಓಡಿ ಹೋಗಬೇಕು ಅಂದ್ರು ಬಹಳ ಕೆಟ್ಟದಾಗಿ ಸಮಾಜ ನನಗ ಅಂಟಿರೊ ರೋಗ ಇರೊ ರೋಗಿಯನ್ನು ಕಾಣುತ್ತೆ. ಅದಕ್ಕಿಂತ ಊರಾಗ ಸುಳಿವಿಲ್ಲದೆ ಸಾಯೋದೆ ಪಾಡು ಅಂದವನೆ ಸೀದಾ ದಿಗಡೂರಿನ ಬಸ್ಸು ಹತ್ತಿದ. ಮನಿ ಮುಟ್ಟೋದ್ರಾಗ ಸಾಕ ಸಾಕಾಗಿ ಹೋಗಿತ್ತು. ಸಾಯೋದು ಖಾತ್ರಿಯಾದಂತಾಯ್ತು. ಉಳದಿದ್ದು ನರಳಿ ನರಳಿ ಥು... ಛೀ... ಅನಿಸಿಕೊಂಡು ಬದಕೋದು. ವಿಚಾರ ಬಂದಾಗ ಭೂಮಿ ಗರ ಗರ ತಿರುಗಿದಂಗಾತು. ಪ್ರತಿ ಕ್ಷಣ ಸಾವನ್ನ ಎದುರ ನೋಡ್ತಾ ಕಾಲ ಹಾಕೋದು ಕಠಿಣ ಅನಿಸತೊಡಗಿತು. ಮನಿ ಹೊರಗ ಉಸಿರು ಗಟ್ಟಿ ದಂಗಾಗ ತೊಡಗಿತು. ಹುಟ್ಟಿದ ಹಸುಗೂಸು ಭವಿಷ್ಯದ ಕನಸು ಹೆಣೆಯೋ ಮದ್ಲೆ ಸುಡಗಾಡು ಸೇರೋದು ಅಂದ್ರೆ 'ತಥ್-ಪಾಪಿ ಜೀವವೆ' ಎದಿಯಾಗ ನೋವು ಕಾಣಿಸಿಕೊಂಡು. ಕುಂತಲ್ಲೆ ಅಡ್ನಾದ, ದಾರಿಯೊಳಗ ಹೊಂಟೊರು, ಜಂಬೂರಗ ಏನಾತು ಅಂತ ಓಡಿ ಬದ್ರು. ಅವನ ಮಾರಿ ನೋಡಿದ ಒಂದಿಬ್ಬರು 'ಏಯ್ ಮುಟ್ಟ ಬ್ಯಾಡ್ರಿ ಅವನಿಗಿರೋ ರೋಗ ನಿಮಗ ಅಂಟ ತಂದ್ರ ನೀವು ಉಳಿಯೋ ದಿಲ್ಲಾ ಓಡ್ರಿ ಓಡ್ರಿ' ಅಂತೇಳಿ ಹುಚ್ಚ ನಾಯಿ ಕಂಡು ಮಂದಿ ಓಡಿ ಹೋಗೋ ಹಂಗೆ ಓಡ ತೊಡಗಿದ್ರು. 'ಅಲೆಲೆ ಘಾತ ಆತು' ಮೆಲ್ಲಗ ಉಸರಿದ "ನನ್ನ ಹೇಣ್ತಿ, ಇಡಿ ಸಂಸಾರ ಈ ಊರೊಳಗ ಬದಕೋದು ದುಸ್ತರ ಆತು, ಇದಕ್ಕೊಂದು ಪರಿಹಾರ ಹುಡುಕಬೇಕು". ಅಂದ್ಕೊಂತ ಬಹಳ ಪ್ರಯಾಸ ಪಟ್ಟು ಎದ್ದವನೆ ಮನಿ ಮುಟ್ಟಿದ.

ಸುದ್ದಿ ಬಾಯಿಯಿಂದ ಬಾಯಿಗ ಕಾಳ್ಗಿಚ್ಚಿನಂಗ ಇಡೀ ಊರ ತುಂಬ ಹರಡಿತ್ತು. "ದುಷ್ಟ ಪ್ರಾಣಿ ಹಂಗ ಮಂದಿ ನನ್ನ ಕೊಲ್ತಾರ ಏನ್ಮಾಡ್ಲಿ" ಹಳ ಹಳಿಸಿದ. ದೊಡ್ಡ ಗೌಡ್ರು, ಪೀಕಜ್ಜ, ಗೂರಜ್ಜ, ಡಿಳ್ಳಿ, "ಥು ನಾಯಿ ಸೂಳಿ ಮಗ ಹಾಳಾಗಿ ಹೋದಾಂವ ಹೆಮ್ಮಾರಿಯಂತ ಏಡ್ಸ್ ರ್‍ಯಾಗ ತಗೊಂಡ ಬಂದ್ನಲ್ಲಾ ಊರ ಉಳಿಯೋದ ಹ್ಯಾಂಗ" ಅಂತೇಳಿ ಕ್ರೂರ ದೃಷ್ಟಿಯಿಂದ ಕೊಂದ ಹಾಕ್ತಿರೊ ಹಂಗ ಅನಿಸಿತು. "ಬ್ಯಾಡ್ರಪ್ಪ ಹಂಗ ಚುಚ್ಚಿ ಕೊಲ್ಲಬ್ಯಾಡಿ ಬೇಕಾದ್ರ ಒಂದ ದೊಡ್ಡ ಕಲ್ಲ ಎತ್ತಿ ಬಿಸಾಕಿ ಬಿಡ್ರಿ" ಅಂತ ಜೋರಾಗಿ ವದರಿದ. ಅವನೊಬ್ಬನೆ ಮಾತಾಡ್ತಾ ಇರೋದನ್ನ ಕೇಳಿ ಸಿದ್ದಮ್ಮ, ಅವನ ತಮ್ಮಂದಿರು ಅವನ ಹೇಣ್ತಿ ಚಿಕ್ಕಿ ಓಡಿ

ಬಂದ್ರು, ಅವರಿಗೂ ಊರಾಗ ಮಂದಿ ಮಾತಾಡ್ತಿದ್ದು ಕೇಳಿ ಹೌದ ಅನಿಸಿತು. ಅವನ ಹೇಣ್ತಿ ಚಿಕ್ಕಿಗ ಯಾರೋ ಹೇಳಿದ್ದು ಮನದಟ್ಟಾಗಿತ್ತು. "ಛೀ ಹಾಳ ಮನಿಯೋನ ನೀ ಒಬ್ಬನೇ ಸಾಯೋದಲ್ಲದೆ ಪಸಂದಾಗಿ ಬದಕಿದ್ದ ನನ್ನ ಸಾಯಿಸಿ ಬಿಟ್ಟೆಯಲ್ಲಾ ನಾ ಏನು ಅನ್ಯಾಯ ಮಾಡಿದ್ದೆ" ಅವನ ಕೊಳ್ಳ ಪಟ್ಟಿ ಹಿಡಿದು ಕೇಳ್ತಿದ್ಲು. ಜಂಬೂರಗ ಇಡಿ ಮನಿ ತನ್ನ ಮ್ಯಾಲ ಕುಸಿದಂಗಾತು. ಪ್ರಯತ್ನ ಪಟ್ಟು ಕಣ್ಣು ಬಿಟ್ಟ. ಯಾರು ಇಲ್ಲದನ್ನ ನೋಡಿ ಸಮಾಧಾನ ಪಟ್ಕೊಂಡವನೆ ಹಿಂಗಾಗ ಮದ್ಲು ನನ್ನ ಬದುಕಿಗೊಂದು ಸರಿಯಾದ ದಾರಿ ಕಂಡ್ಕೊಬೇಕು ಅಂತೇಳಿ ನಿರ್ಧರಿಸಿಕೊಂಡ. ಎಂಥ ವಿಪರ್ಯಾಸದ ಬದುಕು "ಇಡಿ ಊರಿಗ ಮಾದರಿಯಾಗಿದ್ದ ನಾನು ಈಗ" ಮುಂದೆ ಯೋಚನೆ ಮಾಡದಾದ.

ಅವತ್ತು ಎಲ್ಲಿಲ್ಲದ ಹುಮ್ಮಸ್ಸು ಬಂದಿತ್ತು. ರೋಗದಿಂದ ಹಾಸಗಿ ಹಿಡಿದು ಒಂದ ತಿಂಗಳೇ ಆಗಿತ್ತು. ಜುಕ್ಕ ಜುಲುಮಿಯಿಂದ ಮಾರ ದೂರ ಅಡ್ಡಾಡ್ತಿದ್ದೋನು ತಾನು ಹತ್ತ ವರ್ಷಗಳ ಹಿಂದೆ ಕೊಂಡಿದ್ದ ಸೈಕಲ್ಲು ಮನಿ ಮುಂದ ನಿಂತಿತ್ತು. ಸ್ಟ್ಯಾಂಡ್ ತಗದವನೆ ಹತ್ತಿ ತುಳ್ಕೊಂಡು ಹೊಲದ ಕಡೀಗ ಹೊಂಟ. ದೊಡ್ಡ ಗೌಡ್ರ ಆಳು ಸರ್ಪ, ಜಂಬೂರನ್ನ ಕಂಡವನೆ ಓಡಿ ಬಂದು "ಧಣಿಯೋರ ಪಾಡಾದ್ರೇನ್ರಿ ಹಾಸಗಿ ಹಿಡಿದಿದ್ರಿ ಅಂತೇಳಿ ದೊಡ್ಡ ಅಪ್ಪಾರು ಹೇಳ್ತಿದ್ರು, ಏನಾಗಿತ್ತ ನಿಮಗ, ನಿಮ್ಮಂತ ಪುಣ್ಯಾತ್ಮರಿಗ ಹಿಂಗ್ಯಾಕ ಆಗಬೇಕು ಅಂತೀನಿ, ಆ ದೇವರಿಗ ಯಾರ ಒಳ್ಳೇರು ಯಾರ ಕೆಟ್ಟೋರು ಅಂತ ತಿಳಿಯೋದಿಲ್ಲಾ" ಅಂತ ಮುಗ್ದ ಮನಸ್ಸಿನ ಭಾವನೆ ಹೊರಗ ಹಾಕಿದ. ಜಂಬೂರನ ಎದಿಗ ಯಾರೊ ಇರದಂಗಾತು. ಸರ್ಪ, ಪುಣ್ಯಾತ್ಮ ಅಂತ ಅಣಕ ಮಾಡಾಕ ಹತ್ಯಾನಂತ ಅನಿಸಿತು "ಹೌದು ಸರ್ಪ, ಏನ್ಮಾಡೋದು ಕಾಲದ ಗರ್ಭದಾಗ ಅದೇನೈತೊ ಕಂಡೋರ್ಯಾರು. ಈಗಾಟು ಪಾಡ ಆಗೈತಿ ಆಟ ಹೊಲದ ಕಡೀಗ ಅಡ್ಡಾಡಿ ಬರಾನಂತ ಹೊಂಟಿನಿ" ಅಂದವನೆ ಅವನ ಉತ್ತರಕ್ಕೂ ಕಾಯದೇ ಹೊಂಟೆ ಬಿಟ್ಟ. ಇಡಿ ಹೊಲ ಸುತ್ತಾಡಿದ. ಅಕ್ಕ ಪಕ್ಕದ ಹೊಲಗಳಲ್ಲಿ ಏನೇನೈತಿ ಅಂತೇಳಿ ನೋಡಿದ. ಹತ್ರ ಯಾವ ಬಣವೆ ಇಲ್ಲಾಂತ ಖಾತ್ರಿ ಮಾಡಿಕೊಂಡವನೆ ಮನಿಗ ವಾಪಾಸಾದ.

ಜಂಬೂರ ತಲಿಕೊಡವಿದ, ಆವಾಗ್ಲೆ ಕತ್ಲು ಗೌವ್ ಅನ್ನಾಕ ಹತ್ತಿತ್ತು. ಯಾವತ್ತು ಹೊಲ್ದಾಗ ಇಷ್ಟೊತ್ತು ಒಬ್ಬನೆ ಇದ್ದಿರಲಿಲ್ಲಾ ಕತ್ತಲಂದ್ರ ಹೆದರಿ ಉಚ್ಚಿ ಹೊಯ್ಕಂತಿದ್ದ. ಈಗ ಅವನಿಗ ಹೆದರಿಕೆ ಆಗಲೇ ಇಲ್ಲಾ. "ಕತ್ತಲ್ಲಂದ್ರೇನೆ ಸಾವು ಅದಕ್ಕ ಯಾಕ ಹೆದ್ರಾಕು" ಒಳಗಿನ ಭಯ ಕಮ್ಮಿ ಮಾಡಿಕೊಳ್ಳೋ ಯತ್ನ ನಡಿಸಿದ್ದ. ಕಿಸೆಯೊಳಗಿಂದ ಮತ್ತೊಂದು ಪಾಕೀಟ ತಗದ, ಇದನ್ನ ಇಲ್ಲೆ ಕುಡಿಬಾರ್ದು, "ನಿಷ ಏರ್ರು ಅಂದ್ರ ಬಂದ ಕೆಲ್ಸ ಆಗಕಿಲ್ಲ" ಅಂದವನೆ ಬೇವಿನ ಗಿಡದಿಂದ ಪೂರ್ವಕ್ಕಿದ್ದ ಸೊಪ್ಪಿಬಣವಿ ತಾಗ ಬಂದ ಪಾಕೀಟ ಕತ್ತರಿಸಿ ಕುಡದ ಮುಗಿಸಿದ. ಯಾಕೊ ಧೈರ್ಯ ಬರ್ಲಿಲ್ಲಾ. ಮತ್ತೊಂದನ್ನು ಕುಡದು ಬಾಟ್ಲಿಯೊಳಗ ತಂದಿದ್ದ ವಿಷ ಒಂದೇ ಗುಡುಕಿಗ ಸುರುವಿಕೊಂಡ. ಎದಿಯಾಗ ಉರಿಯ ತೊಡಗಿತು ತನ್ನ ಸಾವಿಗ ನಿಶ್ಚಿತ ಅಂದುಕೊಂಡ. ಇಡಿ ಊರು ಕಣ್ಣ ಮುಂದೆ ನಿಂತಿತು. "ಹೌದು ನಾನು ಆಡಿ ಬೆಳೆದ ಊರು- ಹತ್ತಿ ಇಳದ ಗುಡ್ಡ, ತನ್ನ ಇವತ್ತಿನ ಪರಿಸ್ಥಿತಿಗೆ ಕಾರಣವಾದ ಊರು. ಬಹಳ ಕಡಿಮೆ ಕಾಲ ತನ್ನ ಹೆಂಡತಿ ಮಕ್ಕಳ ಕೂಡ ಕಾಲ ಕಳೆದೆ, ಅಂವss ಹುಟ್ಟಿ ವರ್ಷಕ್ಕೆ ನೆಲ ಹಿಡದೆ- ಮನಿತುಂಬ ಮಂದಿ ಇರೋದಕ ನನ್ನಾಕಿ ನನ್ನೆದರಿಗ ಯಾವತ್ತು ಮಕ ಕೊಟ್ಟೆ

ಮಾತಾಡಲಿಲ್ಲಾ ನನ್ನ ಈ ಕಾಯಿಲೆ ಬಗ್ಗೆ ಅವರಿಗೆಲ್ಲಾ ಹೆಚ್ಚು ತಿಳಿಯಾಕ ಮುಂಚೆ ನನ್ನ ನಾನು ಮುಗಿಸಿಕೊಳ್ತೀನಿ" ಆಲೋಚನೆಗಳೆಲ್ಲಾ ತುಂಡಾಗ ತೊಡಗಿದ್ದು, ಹೊಟ್ಟೆಯೊಳಗ ಸಂಕಟ ಎದ್ದಿತ್ತು. "ಅವ್ವ ನನ್ನ ಕ್ಷಮಿಸಬೇ ನೀ ಅಂದ್ಕೊಂಡ ಮಗ ನಾನಾಗಲಿಲ್ಲಾ. ಕೆಟ್ಟೋರ ಸಹವಾಸ ಮಾಡಿಬಿಟ್ಟೆ. ಮದ್ರಾಸಿನೊಳಗ ಆಗಬಾರ್ದೆಲ್ಲಾ ಆಗಿ ಹೋತು" ಬಿಕ್ಕಳಿಸಿದ.

ಕಡೀಗ ತನ್ನ ಮಗನ ನೆನಪಾತು, ಸಂಕಟ ಹೆಚ್ಚಾತು "ಒಡ ಹುಡ್ಡಿದವರು ನನ್ನ ಕಂಡು ಹೇಸಿಗಿ ಪಡಾಕ ಮುಂಚೆ ನಾನು ಸಾಯಬೇಕು" ಅಂದವನೆ, ಕಿಸೆಯೊಳಗಿಂದ ಕಡ್ಡಿ ಪೆಟ್ಟಿಗೆ ತಗದು ಕಡ್ಡಿಗೀರಿ ಇಡಿಬಣವಿಗ ಬೆಂಕಿ ಹಚ್ಚಿದ. ಬೇಸಿಗೆ ಆದ್ದರಿಂದ ಒಣಸೊಪ್ಪಿಗ ತಡ ಇಲ್ಲದೆ ಬೆಂಕಿ ಹತ್ಕೊಂಡು, ಮೈಮ್ಯಾಗಿದ್ದ ಅರವಿ ತಗದು ದೂರ ಇಟ್ಟ ತಾನು ಬರದು ಇಟ್ಟಿದ್ದ ಚೀಟಿ ಹೊರಗ ಇಟ್ಟ. ಕಡಿಸಲ ತನ್ನೂರ ಕಡಗ ನೋಡಿದ, ಕಾಲು ಹಿಂಜರಿಯಿತು. ಮನಸು ಹತೋಟಿ ತಪ್ಪ ತೊಡಗಿತ್ತು. ಓಡಿ ಬಂದವನೆ ಹಿಂದೆ ಮುಂದೆ ನೋಡದೆ ಜಿಗಿದುಬಿಟ್ಟ. ಮದ್ಲೆ ಸತ್ತು ಹೋಗಿದ್ದ ಜಂಬೂರ ಕಾಲು ಕೈ ಒಂದೆಲ್ಡ ಸರ ಬಡದ, ಸ್ವಲ್ಪ ಹೊತ್ತಿನ ನಂತರ ಮ್ಯೆಗ ಬೆಂಕಿ ಹತ್ಕೊಂಡಿತು, ತಲಿ ಭಡ್‌ಂತಾ ಹೊಡದಿದ್ದು ಸದ್ದಾತು. ಜಂಬೂರನೆಂಬುವನು ದಿಗಡೂರಾಗ ಇದ್ದ ಅನ್ನೋದಿಗ ಬರಿ ನೆನಪಾಗೆ ಉಳಿತು. ಇದ್ದಕ್ಕಿದ್ದಂಗೆ ಕಾಣಿಸಿಕೊಂಡ ಬೆಂಕಿಯನ್ನು ನೋಡಿದ ಮಂದಿ - ಗುಡ್ಡಕ್ಕ ಕಿಚ್ಚ ಹತ್ತಿರ ಬೇಕು ಅಂತ ತಮ್ಮೊಳ ಮಾತಾಡಿಕೊಂಡು ಸುಮ್ಮನಾದ್ರು. ಜಂಬೂರನ ತಾಯಿ ಸಿದ್ದಮ್ಮಗ ಮಾತ್ರ ಕರಳೊಂದು ತುಂಡಾದಂಗಾಗಿ ಹೊಟ್ಯಾಗ ತಾಳದ ಸಂಕಟ ಎದ್ದಿತು.

ದೇವರ ಬಂಗಾರ

ಒಂದಿದ ಘಳಿಗೆ ಜುಕ್ಕಜುಲ್ಮಿಯಿಂದ ಕಣ್ಣ ಮುಚ್ಕೊಂಡ, ಆವೆ ಶಬ್ದಗಳು ಕಿವಿಗಪ್ಪಳಿಸಿ ಪ್ರತಿಧ್ವನಿಸತೊಡಗಿದವು. ಇಡಿ ಮನಿತುಂಬ ಮಂದಿ ಅಡ್ಡಾಡ್ತಿದ್ರು, ಕೂಗ್ತಿದ್ರು, ಕರಿತಿದ್ರು, ದೊಡ್ಡಮನಿ ಐವತ್ತರವತ್ತ ಮಂದಿ ಇಡಿಮನಿಯಾಗ ಯಾವಾಗ ನೋಡಿದ್ರು ಹಬ್ಬದ ವಾತಾವರಣದಂಗಿರ್ತಿತ್ತು. ಅಂವ ಮಾತ್ರ ಗಲಾಟೆ ನಡವೆಯೂ ನಿರ್ಲಿಪ್ತನಾಗಿದ್ದ. ಮನೆಯ ಯಾವದೋ ಒಂದು ಖೋಲಿಯೊಳಗ ಕುತ್ಕೊಂಡು ಮಾಯದ ಹಳೆಗಾಯದ ಮೇಲೆ ಹಿಕ್ಕಿ ಗಟ್ಟಿದ ಕೀವು ಮಾಸವನ್ನು ಉಗರಿಂದ ಕೀಳುವಂತೆ ಹಳೆಯ ಘಟನೆಯನ್ನ ನೆಪ್ಪ ಮಾಡ್ಕೊಳ್ತಿದ್ದ. ಪಕ್ಕದಾಗಿನ ದೊಡ್ಡ ಪುಸ್ತಕದ ರ್ಯಾಕ್‌ನಲ್ಲಿ, ಟಾಲಸ್ಟಾಯ್, ಬಾಬಾಸಾಹೇಬ, ಗಾಂಧಿ, ಬುದ್ಧ, ಬಸವ, ಲೆನಿನ್, ದೊಸ್ತೊವಾಸ್ಕಿ, ಕಾಫ್ಕಾ, ಕಾಮು, ಆಸ್ಟೀನ್, ಆಚಬೆ ಮುಂತಾದ ಅನೇಕ ಸಾಹಿತ್ಯ ಕೃತಿಗಳು ಒಂದರ ಮಗ್ಗಲೊಳಗೆ ಒಂದು ಒರಗಿಕೊಂಡಾವ. ತಾನು ಓದಿ ಸಾಲುಗಳ ಕೆಳಗೆ ಗೆರೆಹಾಕಿದ ಆ ಸಾಲುಗಳು ಮನಸ್ಸಿನೊಳಗೊಮ್ಮೊಮ್ಮೆ ಮಿಂಚಿ ಮಾಯ ಆಗ್ತಿದ್ವು. ಅವೆಲ್ಲವುಗಳನ್ನು ಸರಿಸಿ ಇಪ್ಪತ್ತ ವರ್ಷದ ಹಿಂದೆ ನಡೆದ ಆ ಘಟನೆ ಪ್ರಮುಖ ಸ್ಥಾನ ಪಡೆದುಕೊಳ್ಳುತ್ತದೆ. ಅವನ ನೆನಪಿನಂಗಣದಲಿ ಒಂದು ಗಂಟಾಗಿ ಉಳಿದಿರೊ ಆ ಘಟನೆ ಯಾವಾಗ ಬೇಕೆಂದಾಗ ಬಯಲಾಟದ ಪಾತ್ರಗಳಂಗ ಮನಸಿನ ಪರದೆ ಮೇಲೆ ಮೂಡಿ ಬಂದು ಬಿಡ್ತಾವ. ಅವತ್ತು ಆದದ್ದಾದರು ಏನು? ಅವನು ಘಟನೆಯೊಳಗೆ ಇಳಿದುಬಿಡುತ್ತಾನೆ. ತಮ್ಮ ಪರಶು, ಇದು ಇವತ್ತು ನಿನ್ನೆದಲ್ಲಾ ಎಷ್ಟೋ ತಲೆ ಮಾರಗಳಿಂದ ನಡ್ಕೊಂಡ ಬಂದಿರೋದು, ನಿಮ್ಮಜ್ಜ, ಅವರಜ್ಜ, ಅವರಜ್ಜ ಹಿಂಗ ಎಷ್ಟೋ ಪೀಳಿಗೆಯಿಂದ ನಡ್ಕೊಂಡ ಹೊಂಟೈತಿ ಅದನ್ನ ತಡಿತೀನಿ ಅಂತ ಹೊರಟಿಯಲ್ಲ ಏನ ಹೇಳಲಿ ನಿನ್ನ ಒಣವಾದಕ್ಕ' ಅವ್ವ ಎಷ್ಟು ನೊಂದ್ಕೊಂಡಿದ್ಲು ಹೇಳೊ ಮುಂದ ಅಂದ್ರ ಅಕಿ ಮಾರಿ ನೋಡಾಕ ಆಗಲಿಲ್ಲಾ ನನಗ. ಕಣ್ಣ ಕೆಂಪಾಗಿದ್ವು ಅತ್ತು ಅತ್ತು, ಸೀರಿ ಶೆರಗು ತೋಯ್ದು ತುಪಡಿಯಾಗಿತ್ತು. ಹೇಳೊ ಮುಂದ ಸುಮ್ಮನಿದ್ದಾಕಿ ಮತ್ತ ಅಳಾಕ ಸುರುಮಾಡಿದ್ಲು. ಅಪ್ಪ, ದೊಡ್ಡಪ್ಪ, ದೊಡ್ಡವ್ವ, ಒಬ್ಬರ ಮಾರಿ ಒಬ್ಬರು ನೋಡ್ಕೊಂಡ ಸುಮ್ಮನಾದ್ರು. ತೊತುಮಾಮ ಸಿದ್ದವ್ವಕ್ಕ, ಹನುಮಕ್ಕ ಯಾರೊಬ್ಬರು ತುಟಿಪಿಟಿಕ್ ಅನ್ನಲಿಲ್ಲಾ.

ಯಾರೇನಂದರು ನಾನ ಮಾತ್ರ ನನ್ನ ನಿರ್ಣಯಕ್ಕೆ ಬದ್ಧನಾಗಿ ಖಡಾಖಂಡಿತವಾಗಿ ನಿರಾಕರಿಸಿದ್ದೆ. ಸಣ್ಣೀರ ಎದ್ದ ಬಂದವನೆ, " ಪರಸಣ್ಣ ನೀ ದೊಡ್ಡ ಮನುಷ್ಯ, ಸಾಲಿಕಲ್ತೋನು ನಾಕ ಮಂದಿಗ ಬುದ್ಧಿವಾದ ಹೇಳೋನು ನೀನ ಹಿಂಗ ದಾರಿ ತಪ್ಪಿಹ್ವಾದ್ರ ಹ್ಯಾಂಗಂತೀನಿ. ನಾಳೆ ಊರಾಗ ನಮ್ಮ ಮನೆ ಗೌರವ ಏನಾಗಬ್ಯಾಡ. ಮನಿಯಾಗ ದೊಡ್ಡಾಕಿ ಅತ್ತಿಗಿ ಅಕೀನ

ಈ ಹೊಣೆ ಹೊತ್ಕೋ ಬೇಕು ಇದು ಪದ್ಧತಿ" ಅಂತೇಳಿ ತನ್ನ ಹೆಂಡತಿ ಮ್ಯಾಲ ಬಂದೀತಂತ ತಪ್ಪಿಸಿಕೊಂಡು ದೊಡ್ಡವನಾದ ತನ್ನಣ್ಣನ ಹೆಗಲ ಮ್ಯಾಲ ಹಾಕಿ ದೂರಸರಿಯಾಕ ನೋಡಿದ. ಅಲ್ಲಿವರಿಗ ಸುಮ್ನೆ ಕುಂತಿದ್ದ ಅವನು "ಲೇ ಸಣ್ಣೀರ ನೀ ಬಾಯಿ ಮುಚ್ಕೊಂಡ ಕುಂತ್ಕೊ ನೀ ಯಾಕ ಹಿಂಗ ಹರಿ ಹಾಯಾಕಹತ್ತಿ ಅನ್ನೋದ ಗೊತ್ತೈತಿ. ನನ್ನ ಅಭಿಪ್ರಾಯ ಏನನ್ನೊಂದನ್ನ ದೊಡ್ಡೋರಿಗ ತಿಳಿಸೀನಿ ಇನ್ನು ಅವರುಂಟು-ನಾನುಂಟು ನಡಕ ನೀ ತಲಿ ಹಾಕಬ್ಯಾಡ' ಧನಿ ಎತ್ತರಿಸಿ ಗದರಿಸ್ತಾ ಮತ್ತೆ ಸಣ್ಣೀರನ್ನ ನಡಕ್ಕ ತಂದು ನಿಲ್ಲಿಸಿದ. ಯಾರು ಮಾತಾಡಾಕ ಹೋಗಲಿಲ್ಲಾ. ಮತ್ತೆ ಅವನೆ ಸುರು ಮಾಡಿದ. "ನೋಡ್ರಪ್ಪ ಇದ್ರಾಗ ರಾಜಿ ಆಗೋದೆನಿಲ್ಲಾ ನಿಮ್ಮ ನಂಬಿಕಿ ನಿಮಗೆ ನನ್ನ ನಂಬಿಕೆ ನನಗೆ. ದೊಡ್ಡವನ್ನ ಜೀವನ ಪರ್ಯಂತ ಯಲ್ಲವ್ವನ ಬಂಗಾರ ಕೊಳ್ಳಾಗ ಹಾಕ್ಕೊಂಡಾಕಿ, ಅಮಾಸಿಗ, ಹುಣ್ಣೀಮಿಗ ಒಂದ ಸಲ ತಲಿಮ್ಯಾಲ ಕೊಡಪಾನ ಹೊತ್ಕೊಂಡ 'ಎಲ್ಲಮ್ಮ ನಿನ್ನ ಹಾರಕ ಉಧೋ' ಅಂತ ಉರೆಲ್ಲಾ ತಿರುಗಿ ಬೇಡ್ಕೊಂಡ ಬಂದು ಯಲ್ಲಮ್ಮ ದೆವಿ ಮನಸ್ಸಿಗ ಸಮಾಧಾನ ಪಡಿಸಿದ್ಲು, ಅಂತಂದು ನಿಮ್ಮವಾದ ಆದ್ರ ಅದನ್ನ ನನ್ನ ಹೆಂಡತಿ ಮುಂದವರಿಸೋದಿಲ್ಲಾ ಅಷ್ಟೆ" ಅವನು ಮಾತಾಡ್ತಿದ್ದಂಗೆ ಅವನ ದೊಡ್ಡವ್ವ ಎದ್ದ ಒಳಗಹ್ವಾದ್ಲು "ಸಾಲಿಕಲ್ತಗಟ್ಟಿಗ ನಮ್ಮ ಸಂಪ್ರದಾಯ, ಪದ್ಧತಿ ಬಿಡಾಕ ಆದೀತೇನು ಪರಸಣ್ಣಾ" ಅಪ್ಪನ ಹಳೆ ಧಾಟಿಯ ಬುದ್ಧಿವಾದ ಆರಂಭವಾಗಿತ್ತು. "ಅಪ್ಪ, ದೊಡ್ಡಪ್ಪ ಕೇಳ್ರಿಲ್ಲಿ, ನಿಮಗ ಭ್ರಮೆ ಮುಚ್ಕೊಂಡೈತಿ, ಯಲ್ಲಮ್ಮನ ಕುರಿತು ಸುಮ್ಮಸುಮ್ನೆ ನಿಮ್ಮ ಮನಸ್ಸಿನೊಳಗ ಹುಟ್ಟಿರೋ ಒಂದು ಭಯ ಅಷ್ಟೇ, ನಿಮ್ಮ ಹಿಂದಿನೋರು ನಂಬಿದ್ರು ಅಂತ ನೀವ್ವು ನೀವ ನಂಬೀರಿ ಅಂತ ನಿಮ್ಮ ಮುಂದಿನೋರು ಅಷ್ಟೇ ಇದಕ್ಕೆನಾರು ಕಾರಣ ಅದಾವ? ಏನಾರು ತರ್ಕ ಐತ? ಹೋಗಲಿ ನಿಮ್ಮದ್ರಾಗ ಯಾರಾರು ಒಬ್ಬರು ಯಾವಾಗ್ಲಾದ್ರು ಒಮ್ಮೆ ಯಾಕೆ ಹಿಂಗ? ಅಂತ ಪ್ರಶ್ನೆ ಮಾಡೀರಾ ಮಾಡಿಲ್ಲಾ, ದೇವರು ಏನಾರು ಮಾಡಿದ್ರ ಅನ್ನೋ ಅಂಜಿಕೆ ಅಟೇಯ. ದೇವರು ಹಿಂಗ ಜೋಗತಿ ಆಗಲಿಲ್ಲಾ ತನ್ನ ಭಕ್ತಳು ಅಂತ ಸಿಟ್ಟಾಗಿ ಮನಿ ಮುರಿಯೋದಿಲ್ಲಾ" ಮತ್ತೇನೇನೊ ಹೇಳಾಕು ಅನ್ನಿಸಿತ್ತು ಅವನಿಗೆ ಆದ್ರ ಅವನ ಮಾತಿನೊಳಗೆ ಉಳಿದವರ್‍ಯಾರಿಗೂ ಆಸಕ್ತಿ ಇರೋ ಹಿಂಗ ಅವನಿಗ ಕಾಣಲಿಲ್ಲಾ ಸುಮ್ಮನಾದ.

ಅವನ ಮಾತುಗಳ ಏರಿಳಿತಗಳನ್ನೇ ಗಮನಿಸುತ್ತಾ ಕುಂತಿದ್ದ ಅವನ ಹೆಂಡತಿ ಪಾರೋತಿ ಹಿಂದ ಯಾವಾಗ್ಲೋ ಸೌದತ್ತಿ ಎಲ್ಲಮ್ಮನ ಜೋಗತಿಯಾಗಿ ಕೊಡಪಾನ ಹೊತ್ಕೊಂಡು ತನ್ನ ತೌರಮನಿ ಬಿಟ್ಟು ಊರಿಂದೂರಿಗೆ ಅಡ್ಡಾಡಿ ದೇವಿ ಸೇವೆ ಮಾಡಬೇಕಿತ್ತು. ಮನಿ ತುಂಬ ಐದಾರ ಹೆಣ್ಣು ಮೂರನಾಕ ಗಂಡು ಕಿತ್ತ ತಿನ್ನೋ ಬಡತನ ತೂತುಮಾಮ ಹೆಂಡತಿನ ಕಟ್ಕೊಂಡು ತಿರಗಾಡಿ ಕೂಲಿ ಮಾಡ್ತಿದ್ದ. ಎಲ್ಲಕ್ಕಿಂತ ದೊಡ್ಡವಳಾದ ಪಾರೋತಿ ಮೈ ತೊಳಿಯದೆ, ತಲಿಬಾಚದೆ ಮಣ್ಣಾಗ ಆಟ ಆಡಿ ಜೊಂಡಗಟ್ಟಿದ ತಲಿಗ ಅಮಾಸಿಗೋ ಹುಣುಮಿಗ ಆಟ ಔಡಲೆಣ್ಣೆ ತಿಕ್ಕಿ ನಾಕ ಸಲ ಪರಪರಾಂತ ಕೆರೆದು ಎಲ್ಲ ಜಡಿಹಾಕಿ 'ನಮ್ಮವ ಲಕ್ಮಿ ಇದ್ದಂಗ ಅದಾಳಂತ" ಮೂಗಿಂದಿಳಿತ್ತಿದ್ದ ಗೊಣ್ಣಿ ತಗಿಯದೆ ಎಲ್ಲಸರತಿ ನಿವಾಳಿಸಿ ಲಟಗಿತಗದು ಮಾಡಿದ್ಲಂದ್ರ ಮತ್ತ ವರುಷಕ್ಕೆ ನೆನಪಾಗಿತಿದ್ಲು. ಹಿಂಗಾಗಿ ಆಕಿತಲಿ ಜಡಿಕಟ್ಟಿಕೊಂಡಿತ್ತು. ಒಂದ ದಿನ ತಲಿ ಬಾಚೋಮುಂದ ನೋಡಿದ ಅವಳವ್ವ ಮಾದೇವಿ,

ಮಗಳಿಗಾದ ಸ್ಥಿತಿಯನ್ನ ಗಂಡನಿಗೆ ಗುಟ್ಟಾಗಿ ಹೇಳಿದ್ಲು. "ಎಂಥ ಪಾಡ ಆಡ್ಕೊಂಡ ಇದ್ಲು ಹುಡುಗಿ" ಅಂತ ಮಾದೇವಿ ಅಳಾಕತ್ಲು "ಐ, ನಿಂದೊಳ್ಳೆ ಕತಿಯಾತ ನೋಡು, ತಿಂಗಳೊಪ್ಪತಿಗ ಋತಮತಿ ಆಗತಾಳ, ನಮ್ಮ ಮನಿತನದಾಗ ಹಿರಿಮಗಳನ್ನ ಹ್ಯಾಂಗ ಎಲ್ಲಮ್ಮಗ ಬಿಡೊ ಪದ್ಧತಿ ಐತೆ ಐತಿ, ಏನೋ ನಮ್ಮ ಪುಣ್ಯ ದೇವಿಗ ನಮ್ಮ ಮಗಳು ಪಾರೋತಿ ಮನಸಿಗ ಬಂದಾಳಂದ್ರ ಮುಗೀತು. ನಾವಾರು ಏನ ಮಾಡಾಕ ಆದೀತು. ಆರ ತಿಂಗಳ ಬಿಟ್ಟು ಅವ್ವನ ಗುಡಿಗ ಹೋಗಿ ಬ್ಯಾಟಿ ಹೊಡಿದು ಪೂಜಿ ಮಾಡಿ ಗೆಜ್ಜೆ ಕಟ್ಟಿಸಿದ್ರಾತು" ಅಂತಂದು ತೊತು ಮಾಮ ಸಮಾಧಾನ ಮಾಡಿದ್ದ.

ಅಲ್ಲಿ ಇಲ್ಲಿ ಅಂತ ಕೈಗಡ ಮಾಡಿ ಬ್ಯಾಟಿಗ, ಸರಾಯಿ, ಪೂಜಿ ಸಾಮಾನಿಗಂತ ದುಡ್ಡು ಹೊಂದಿಸಿದ್ದ, ಸಾಕೇನಳ್ಳಿ, ಬೂತರಾಮಪುರ, ಮಾಚೂರಿಗ ಹೋಗಿ ಬೀಗರಿಗೆಲ್ಲಾ ಕರದ ಬಂದಿದ್ದ. ಗುಂಡೂರಿಂದ ಅವ್ವ, ದೊಡ್ಡವ್ವ, ದ್ಯಾಮುತಾತ, ಗೂರಮಜ್ಜಿ ಚಕ್ಕಡಿ ಕಟ್ಕೊಂಡ ಹೊಂಟಿದ್ರು. ಊರಿಗ ಹೋಗೊದೆ ಅಪರೂಪಕ್ಕೊಮ್ಮೆ "ನೀನು ಒತ್ನೆಳ್ಳಿಗ ಬಂದೆ ಇಲ್ಲಾ, ನಿಮ್ಮ ತೂತು ಮಾಮ ಕೇಳೇ ಕೇಳ್ತಾನ ಬಾ" ಅಂತಂದು ದೊಡ್ಡವ್ವ ಒತ್ತಾಯ ಮಾಡಿದ್ಕ ಅವನು ಹೊರಟಿದ್ದ. ಅವಾಗತಾನೇ ದೊಡ್ಡಾಕಿಯಾಗಿದ್ದ ಪಾರೋತಿ ಮೈ ಕೈ ತುಂಬ್ಕೊಂಡು ಒಳ್ಳೆ ರಸಪೂರಿ ಹಣ್ಣಂಗಿದ್ಲು. ಯಲ್ಲಮ್ಮನ ಹೆಸರ ಹೇಳಿ ಭಂಡಾರ ಹಚ್ಚಿ ಗೆಜ್ಜೆ ಪೋಣಿಸಿದ ಮ್ಯಾಲ ಮುಗದ ಹೋತ ಕತಿ, ಕಂಡ ಕಂಡ ಗಂಡಸರ ಪಾದ ಪೂಜೆ ಮಾಡ್ತಾ ಊರಿಂದೂರಿಗ ಅಲಿತಾ ಬದುಕನ್ನೊ ಕರ್ಮಕಾಂಡದೊಳಗ ಒಂದಾಗಿ ಬಿಡ್ತಿದ್ಲು. ಬಂದೋರಿಗೆಲ್ಲಾ ಸಾರಾಯಿ ತಂದ ಕೊಟ್ಟು ಇದ್ದಿದ್ದು ಇಲ್ಲದ ಉಪಚಾರ ಮಾಡ್ತಿದ್ದ. ಒತ್ನೆಳಿಗ ಹೋದ ಅವನು ಅಲ್ಲಿ ನಡಿತಿರೊ ಕಾರೇವಿನ ಬಗ್ಗೆ ಸರಿಯಾದ ಮಾಹಿತಿ ತಕ್ಕೊಂಡ "ಛೇ, ಎಂಥ ಮೂಢ ಜನ ಅಂತೀನಿ ಅಮಾಯಕ ಹುಡುಗಿಯನ್ನ ದೇವರ ಹೆಸರ ಹೇಳಿ ಬೀದಿಗ ಬಿಡೋದು ಇದೆಂಥ ದೇವರ ಸೇವೆ ಇಲ್ಲಾ ಇದಕ್ಕ ನಾನು ಬಿಡಲ್ಲ" ಅವನು ಔಡುಗಚ್ಚಿ ಎಲ್ಲ ಕೈ ಮುಷ್ಠಿ ಬಿಗಿದು ಗ್ಯಾಡಿಗ ಗುದ್ದಿದ. ರಾತ್ರಿ ಸರ್ವೋತ್ತಿನ ಮಟ ಕೆಲವರು ಕುಡಿತಾನೆ ಇದ್ರು ದೊಡ್ಡ ವ್ವ, ಅವ್ವ, ಮಾದೇವಿ, ಅತ್ತಿ ನಾಳಿನ ತಯಾರಿ ನಡೆಸಿದ್ರು, ಅವನು ಮಾತ್ರ ಪಾರೋತಿ ಭವಿಷ್ಯದ ಕುರಿತು ಯೋಚನೆ ಮಾಡ್ತಿದ್ದ. ಒಂದ ಸಲ ಹೋಗಿ ಹೆಂಗಸರ ನಡಕ ಕುಂತು ಏನ ಮಾತಾಡ್ತಾರಂತ ಕೇಳಿದ. "ನಮ್ಮ ಪಾರೋತಿ ಬಾಳ ಪುಣ್ಯಾತ್ಮಗಿತ್ತಿ ಕಣವ್ವ ದ್ಯಾವಿನೆ ಅಕಿ ಮ್ಯಾಕ ಮನಸ ಇಟ್ಟಾಳೆ" ತೋತುಮಾವನ ಎಲ್ಡನೇ ಹೆಣ್ತಿ ರ‍್ಯಾಮಕ್ಕ ಅಂದ್ಲು, ದೊಡವ್ವ ಮಾತಾಡಲಿಲ್ಲ. "ಆದ್ರೂ ಹೆಣ್ಣಿನ ಬಾಳೆ ಹಿಂಗ ನೋಡ, ಅಕೀಗ ಏನಂತ್ಲೆ ತಿಳಿಯಂಗಿಲ್ಲಾ, ಅಕಿ ವಾರಗಿ ಹುಡಿಗಿಯರು ಮದ್ವಿ ಆಗೋಮುಂದ ಏನನಿನಸ ಬೇಡಾ ಅಕೀಗ" ಅವ್ವ ತನ್ನ ಕಾಳಜಿ ತೋಡಿಕೊಂಡ್ಲು. "ಏನ ಮಾಡೋದವ್ವ, ನಮ್ಮ ಜಾತಿ ರೀತಿ ರಿವಾಜೆ ಅದು" ಮಾದೇವಿ ಅತ್ತಿ ಸೆರಗ ಬಾಯಿಗ ಅಡ್ಡ ಇಟ್ಟು ಅಳತೊಡಗಿದ್ಲು.

ಅವನಿಗ ತಡಿಯಾಕ ಆಗಲೇ ಇಲ್ಲಾ ಎದ್ದು ಅವರು ಕುಂತ ಹತ್ರ ಹೋದವನೆ "ಅತ್ತಿ ಅದು ಯಾವದೋ ಕಾಲದಾಗ ಬುದ್ಧಿ ಇಲ್ಲದ ಮಂದಿ ಮಾಡಿದ್ದು, ಆಗ್ಲು ಈಗ್ಲೂ ಬಹಳ ಬದಲಾಗೈತಿ ನಾವಷ್ಟೆ ಇನ್ನೂ ಹಳೆಕತಿಯನ್ನ ನಂಬಾಕ ಹತ್ತೀವಿ" ಎದಿಯಾನ ಸಿಟ್ಟಿನ ವ್ಯಕ್ತಪಡಿಸಿದೆ, "ಹಂಗಂದ್ರ ಅದೀತೇನಪ್ಪ, ನಮ್ಮ ಸಮಾಜ, ನಮ್ಮದೈವದರು ಅವನ್ನೆ

ನಂಬಿಕೊಂಡ ಬಂದಾರ ಈಗ ಬಂದು ಎಲ್ಲಾ ಬದಲಾಗ್ಯೆತಿ ಅನ್ನಾಕ ಆದಿತೇನು?" ರಾಮಕ್ಕ ಅತ್ತಿ ಸಮಾಜಾಯಿಸಿದ್ಲು. "ಅತ್ತಿ, ನಿಮ್ಮ ಸಮಾಜಕ್ಕೂ ದೈವಕ್ಕೂ, ಪಾರೋತಿ ಅಂತಹ ಮುಗ್ದ ಹುಡುಗಿ ಬದಕ ಹಾಳ ಮಾಡೊ ಅಧಿಕಾರ ಇಲ್ಲಾ ನಿವೆಲ್ಲಾ ನಿಮ್ಮ ಮನಸಗಳಿಗೆ ವಂಚನೆ ಮಾಡ್ಕೊಂಡು ಬದುಕಿರೋರು, ನೀವು ಹೆಂಗಸರು, ಹೆಂಗಸರಾಗೆ ಯೋಚ್ನೆ ಮಾಡಿ" ಎಲ್ಲಾ ಕ್ಷಣಾರ್ಧದೊಳಗ ಬದಲ ಮಾಡಿ ಬಿಡೋ ಹಂಗ ಮಾತಾಡಿದ್ದ. ಮಾತಿಗ ಮಾತ ಬೆಳಿತು. ಕುಡದು ಚುಟ್ಟ ಎಳಿತ ಕುತ್ಕೊಂಡೊರಿಗ ನಿಶೆ ಇಳದಂಗಾಗಿ ಒಳಗ ಬಂದ್ರು. ರಾಮಕ್ಕನ ಮೈಯಾಗ ದೇವರ ತುಂಬಿಕೊಂಡಿದ್ದು, "ಲೇ ಮಗನೆ... ಹೂಂ.... ಹೂಂ... ಷ್, ನಿಂದ ಕಡಿಗಾಲ ಬಂದೈತಿ" ಒಂದೇ ಸಲಕ್ಕ ಚಿಟ್ಟಂತ ಚೀರಿದ್ಲು, ಅವ್ವ, ದೊಡವ್ವ, ಮಾದೇವತ್ತಿ, ತೋತುಮಾಮ, ಹೊರಗಿದ್ದ ಗಂಡಸರೆಲ್ಲಾ ದಿಕ್ಕೆಟು ಓಡಿ ಬಂದ್ರು. "ನಾಳಿನ ಕಾರೇವಿಗ ಇಜ್ಜ ಮಾಡಾಕ ಒಬ್ಬಂವ ಬಂದಾನ, ನಾನಂದ್ರ ಅವನ ಕಾಲಾಳ ಕಸ ಆಗಿ ಹೋಗಿನಿ ನಾಳೆ ಬೆಳಗ ಹರಿಯೋದ್ರಾಗ ಅಂವ ರಕ್ತ ಕಾರ್ಕೊಂಡ ಸಾಯಿತಾನ", "ಯವ್ವ ಮಾತಾಯಿ ಏನೂ ಅರಿಯದ ಕೂಸ ಕೆಣವ್ವ ನನಮಗ ಸಿಟ್ಟ ಮಾಡ್ಕೊ ಬ್ಯಾಡ ತಿಳಿದೆ ತೆಪ್ಪು ಮಾಡ್ಯಾನ ಕ್ಷಮ ಮಾಡು ತಾಯಿ ಕ್ಷಮ ಮಾಡು" ದೊಡವ್ವ ಸೆರಗ ಕೈಯಾಗ ಹಿಡಿದು ಧೀರ್ಘದಂಡ ನಮಸ್ಕಾರ ಮಾಡಿದ್ಲು. "ನೀ ತಿಳಿ ಹೇಳು ನೀ ತಿಳಿ ಹೇಳು" ರಾಮಕ್ಕ ಗುಡಗಿದ್ಲು "ಲೋ ಪರಶು ಯಾಕಾರ ಮಾತ ಆಡಾಕ ಹೋಗಿದ್ಯೋ ನಾಳೆ ಏನಾರ ಹೆಚ್ಚು ಕಮ್ಮಿ ಆತಂದ್ರ ಏನ ಗತಿ, ತೆಪ್ಪಾತಂತ ಅಡ್ಡ ಬೀಳು" ಅವನವ್ವ ಅಂಗಲಾಚಿದ್ಲು. ಅಕಿ ಮನಸ್ಸಿಗ ಬ್ಯಾಸರಾಗಬಾರದು ಅಂದವನೆ "ತೆಪ್ಪಾತು ಮಾತಾಯಿ ಕ್ಷಮ ಮಾಡು" ಅಂತ ಊದಕ ಬಿದ್ದ. "ಲೇ ಮಗನೆ ಪರಸ ನಾಕ ಅಕ್ಷರ ಕಲ್ತಿ ಅಂತ ದಿಮಾಕ ಬಂತೇನೊ ನಿನಗ ಕಲ್ತಿದ್ರ ಅದುನಿನ್ನ ಮನಿಯಾಗ, ತೊತು ಮನಿ ಹಾಳ ಮಾಡಾಕ ಬಂದಿ ಏನಲೇ ಹಂಗಾಕನಾ ಬಿಡಂಗಿಲ್ಲ" ಅಂತ ಗುಡುಗಿದ್ಲು "ಶಾಂತಳಾಗು ತಾಯಿ ತಪ್ಪು ಒಪ್ಕೊಂಡಾಯಿತಲ್ಲ" ಅವನು ಕೇಳಿಕೊಂಡಿದ್ದ "ಶ್... ಹೂಂ.... ಹೂಂ...." ರಾಮಕ್ಕ ತಣ್ಣಗಾಗಿದ್ಲು. ಆ ಕಡೀಗ ಖಂಡು ಕಾಕನ ಮೈಮ್ಯಾಲ ದುತ್ತ್ ಅಂತ ದೇವರ ಬಂದಿದ್ದು "ಏಯ್... ಹೂಂ... ಹೂಂ..." ಜೋರಾಗೆ ಕೂಗಿದ. "ನಾನು ನಿಮ್ಮ ಮನಿ ದೇವರು ಬ್ಯಾಟರಾಯಪ್ಪ" ಸುಮ್ಮನಾದ "ತೊತಪ್ಪ, ನಾನ ಹೇಳ್ತಿನಿ ನಾಳೆ ನಡೆಬೇಕಾದ್ದು ಕಾರೇವು ನಡಿಲೇ ಬಾರ್ದು" ಮತ್ತೆ ಮೌನ. ಅವ್ವ, ದೊಡವ್ವ, ದಂಗಾಗಿದ್ರು, ನೆರದ ಗಂಡಸರೆಲ್ಲಾ "ಅದೆಂಗಾದಿತು ನನ ತಂದೆ ಎಲ್ಲಾ ತಯಾರಿ ಆಗೈತಿ, ತಾಯಿ ಬಂದೀಗ ದಯಪಾಲಿಸ್ಯಾಳ" ಅಂದ ಒಬ್ಬಾತ.

"ಹೆಂಗಾದಿತ್ರಪ್ಪ ದೇವಿ ಹೇಳಿದಾಟ ಮಾಡೋರ ನೀವು, ಬ್ಯಾಟರಾಯಪ್ಪ ನಿಮ್ಮ ಸೀಮಿಯಾಗಿರೊ ನಿಮ್ಮ ಮಂದಿ ಕುಲದೇವ್ರ ಆತ ಪಡಮಾಡ್ಸಿ ಹೇಳ್ತಾನಂದ್ರ ಕೇಳಬೇಕು" ಅವನು ಜೋರಾಗೆ ಹೇಳಿದ. "ಸದ್ದು ಸದ್ದು" ಕಾಕಾ ಕೂಗಿದ "ನಿಮ್ಮ ಕುಲದೈವ ನಾನು ನನ್ನ ಮಕ್ಕಳ ಮನಿ ಮರ್ಯಾದಿ ಕಾಯೋದ ನನ್ನ ಕರ್ತವ್ಯ ನನ ಮಾತ ಯಾರ ಕೇಳೊದಿಲ್ಲಾ ನಾಶನ ಆಗಿ ಹೋಕ್ಕೀರಿ" ಗುಡುಗಿದ. "ನಮ್ಮಪ್ಪ ನನ ತಂದಿ ನೀ ಹ್ಯಾಂಗ ದಯಪಾಲಿಸ್ತಿಯೊ ಹಂಗೆ ಆಗವಲದ್ಯಾಕ, ನಾನು ಮಕ್ಕಳಿಂದಿಗ ನನ್ನ ಉದ್ಧಾರ ಮಾಡ ತಂದೆ ಉದ್ಧಾರ ಮಾಡು". ಊದಕ್ಕ ಬಿದ್ದ ತೊತುಮಾಮ, ರಾಮಕ್ಕಗ ಇರಿಸ ಮುರಿಸಾತು "ಹೂಂ.... ಹೂಂ...."

ಅಂತ ಸುರು ಮಾಡಿದ್ಲು. "ರಾಮತ್ತಿ ಬಾಯಿ ಮುಚ್ಚು ಈಗಾರ ನಿಮ್ಮ ಕುಲದೈವ ಬಂದು ಅಪ್ಪಣಿ ಮಾಡ್ಯಾನ ನಿಂದೆಲ್ಲಿ ಹಚ್ಚಿ, ಬಾಯಿ ಜೋರ ಮಾಡಿದ್ರ ಯಾರು ಕೇಳೊದಿಲ್ಲಾ, ನನ್ನ ಮೈಮ್ಯಾಲು ದೇವರನ್ನ ಬರಸಲೇನ ಬೇಕಾರ" ಅವನ ಮಾತಿಗ ಬೆಪ್ಪಾದ ರಾಮಕ್ಕ ಮಾರಿ ಸಣ್ಣದ ಮಾಡ್ಕೊಂಡು ಭೂಮಿ ನೋಡತೊಡಗಿದ್ಲು. ತೊತುಮಾಮ, ಮಾದೇವತ್ತಿ, ದೊಡವ್ವ, ಅವ್ವನ್ನ ಕುಂದ್ರಿಸಿಕೊಂಡ ಪಾರೋತಿ ಬದುಕಿನೊಳಗೆ ಬರೊ ಹೀನಾಯ ಸ್ಥಿತಿಗಳನ್ನು ಎಳಿ ಎಳಿಯಾಗಿ ಬಿಚ್ಚಿ ಇಡ್ತಾ ಹೋದೆ. ತೊತುಮಾಮ, ಮಾದೇವತ್ತಿ, ಸಣ್ಣ ಕೂಸಿನಂಗ ಅಳತೊಡಗಿದ್ರು. ಅವ್ವ ದೊಡವ್ವ ಸಮಾಧಾನ ಮಾಡಿದ್ರು. ಅವನೆ ಮುಂದ ಹೋಗಿ "ಅವ್ವ, ದೊಡವ್ವ ನನದೊಂದ ಮಾತೈತಿ ನಿಮ್ಮ ಮನಸಿಗ ಕೆಟ್ಟ ಅನಿಸೋದಿಲ್ಲಾಂದ್ರ ನಾನು ಆಕೀನ ಮದ್ವಿ ಆಕ್ಕೀನಿ" ಅಂದವನೆ ಅವರ ಉತ್ತರಕ್ಕಾಗಿ ಕಾದ. ದೊಡವ್ವಗ ಎಲ್ಲಿಲ್ಲದ ಖುಷಿ. ಅವನ್ನ ಬಾಚಿ ತಬ್ಬಿಕೊಂಡಾಕಿನೆ ಅಳತೊಡಗಿದ್ಲು. ಸೇರಿದ ಬೀಗರಿಗ ಬಂದಿದ್ಕು ಸಮಾಧಾನ ಆದಂಗಾತು.

ಮುಂಜಾನೆ ಎದ್ದು ದೇವರಿಗ ಹೋಗೋ ಬದ್ಲು ಅಲ್ಲೆ ಪೂಜೆ ಮಾಡಿ, ಅವರಿಬ್ಬರ ಮಾತಕತಿ ಮುಗಿಸಿ ಪಾರೋತಿ ಜಡಿ ಕತ್ತರಿಸಿ ಜಡಿಕಟ್ಟಿದ ಕೂದ್ಲನ್ನ ತೆಗೆದ ಹಾಕಿದ್ರು. ಪಾರೋತಿಗ ಅವನ ಬಗ್ಗೆ ಅಭಿಮಾನ ಉಂಟಾಗಿತ್ತು. ಪಾರೋತಿ ಒಳಗಿನ ಪಡಸಾಲಿಯಿಂದ ಇಣಿಕಿ ನೋಡಿದ್ಲು. ಅವಳ ಮನಸ್ಸಿನೊಳಗ ಅಚ್ಚೊತ್ತಿದ್ದ ಹಳೆಯ ಘಟನೆ ಮತ್ತೊಂದು ಹೊಸ ರೂಪ ತಳಿತಿರೋದನ್ನ ನೆನಪಿಸಿಕೊಂಡು ಸಂಕಟದಿಂದ ಅವನ ಕಡೀಗ ನೋಡಿದ್ಲು. ಅವನ ಹೊಟ್ಯಾಗ ಕಿಚ್ಚ ಇಟ್ಟಂಗಾತು. ಇಪ್ಪತ್ತೈದ ವರ್ಷದ ಹಿಂದೆ ಹಿಂಗ ಪಾರೋತಿ ಜೋಗತಿಯಾಗಿ, ಯಾರದೊ ಒಳ ಸಂಚಿಗ ಸಿಕ್ಕೊಂಡು ಬದುಕನ್ನ ನುಚ್ಚು ನೂರ ಮಾಡ್ಕೊಂಬಿಡ್ತಿದ್ಲು. ಆದ್ರ ಇವತ್ತು ಮತ್ತೊಂದು ಅಂಥಹದ್ದೆ ಸಮಸ್ಯೆ. ಅವನು ಚಿಂತಿಸತೊಡಗಿದ "ಅವತ್ತು ನಾನು ಹಿಂಗ ಮಾಡಬಾರದಿತ್ತು" ಅಂದ್ಕೊಂಡ, ಹದಿಮೂರು ವರ್ಷದ ಹಿಂದೆ ಅವನು ನೌಕರಿ ಸೇರಿದ ಆರಂಭದ ವರ್ಷಗಳು, ತನ್ನ ಓದಿಗೆ ಸರಿಯಾದ ನೌಕರಿ ಸಿಗಲಿಲ್ಲಾಂತ ಸಿಕ್ಕಿದ್ದ ದ್ವಿತೀಯ ದರ್ಜೆ ಗುಮಾಸ್ತಿಕಿ ಬ್ಯಾಡ ಅಂತಂದು ಬಿಟ್ಟು ಮನಿ ಸೇರಿದ್ದು, ನೌಕರಿಯೊಳಗಿದ್ದಾಗಿನ ಮರ್ಯಾದಿ ಬಿಟ್ಟು ಮ್ಯಾಲ ಇರೋದಿಲ್ಲಾಂತ ತಿಳಿಯಾಕ ಬಹಳ ದಿನಗಳೇನು ಬೇಕಾಗಲಿಲ್ಲಾ.

ಮನಿ ಮಂದಿ ಮದ್ಲು ಕೊಡ್ತಿದ್ದ ಗೌರವ ಕೊಡೋದಾಗಲಿ, ಅವನ ಬಗ್ಗೆ ಕಾಳಜಿನೆ ಮಾಡ್ತಾ ಇರಲಿಲ್ಲಾ. ಅವನು ಮಾತ್ರ ತನ್ನ ಪಾಡಿಗೆ ತಾನು ನಿರ್ಲಿಪ್ತನಾಗಿ ಊಟ, ಕೆರೆ ಏರಿ ಬೇಜಾರಾದ್ರ ಹೊಲದ ಕಡೀಗ ಸುತ್ತಾಡ್ತಿದ್ದ. ಮರದ ಕೆಳಗ ಕುಂತ ಏನೇನೊ ಯೋಚನೆ ಮಾಡ್ತಿದ್ದ, ಮಳ ಉದ್ದ ದಾಡಿ ಅಸ್ತ ವ್ಯಸ್ತ ಉಡುಪು ಯಾರಿಗು ಮಾತಾಡಿಸ್ತಿರಲಿಲ್ಲ. ಯಾರ ಕೂಡ ಬೆರಿತಿರಲಿಲ್ಲ. ಒಂದ ನಮೂನಿ ಇರತೊಡಗಿದ. ಪಾರೋತಿ ಚೊಚ್ಚಲ ಹೆರಿಗಿಗಂತ ಒತ್ನಳ್ಳಿಗ ಹೋಗಿದ್ಲು. ಹೋಗಿ ತಿಂಗಳೊಪ್ಪತ್ತಿನೊಳಗ ಗಂಡ ಕೂಸಿಗ ಜನ್ಮಕೊಟ್ಟಳಂತ ಸುದ್ದಿ ತಿಳಿದು ಅವನು ಖುಷಿ ಪಟ್ಟಿದ್ದ. ಹೆಂಡತಿ ಬಾಣಂತನಕ್ಕ ಸಾಮಾನ ಒಯ್ಯಾಕ ಕಾಸಿಲ್ಲದೆ ಬೇಜಾರ ಪಟ್ಕೊಂಡ. ಆಗ ಅವನಿಗ ನೆನಪಾಗಿದ್ದು ಅವನ ದೊಡವ್ವ. ಅವನಿಗ ಸಹಾಯ ಮಾಡೋದು ಆಕಿ ಒಬ್ಬಾಕೀನ ಅಂದವನೆ ಹುಡುಕಾಡಿದ, ಪಡಸಾಲಿ, ನಡುಮನಿ, ಎಲ್ಲೂ

ಕಾಣಲಿಲ್ಲಾ "ಎಲ್ಹೋದ್ಲು ಮುದಕಿ" ಅನ್ಕೊಂತ ದನದ ಕೊಟಗಿಯೊಳಗ ಬಗ್ಗಿ ನೋಡಿದ, ಕೊಟಗಿಯೊಳಗ ಗಂಜಲು ಬಳಿಯಾಕ ಹತ್ತಿದ್ಲು "ಯವ್ವ" ಅಂದೆ ಏನು? ಅನ್ನೋಹಂಗ ನನ್ನ ಕಡೀಗ ನೋಡಿದ್ಲು. ವಯಸ್ಸಾಗಿ ನಡ ಬಗ್ಗಿತ್ತು ಆದರೂ ಸ್ವಾಭಿಮಾನದ ಮುದಕಿ ಹಂಗಿಸಿಕೊಂಡ ಯಾಕ ಕೂಳ ಉಣ್ಣಾಕಂತ ಚೂರು ಪಾರು ಕೆಲ್ಸ ಮಾಡ್ತಿದ್ಲು. "ನಿಂತಾವ ಆಟ ಮಾತಾಡೋದ ಐತ ಬೇ" ಅಂದ "ಬಂದೆ ನಡೀಲ ಗಂಜಲ ಬಳದು" ಅಂತ ಹೇಳಿ ಎರಡು ಕೈಗಳಿಂದ ಸರಸರಾಂತ ಬಳಿಯ ತೊಡಗಿದಳು. ಅವನು ಕಟ್ಟೆಮ್ಯಾಲ ಕುಂತ್ಕೊಂತ ಕಾಯ ಕೊಡಗಿದ, ಅವನ ದೊಡವ್ವ ಹೊರಗ ಬರಾಕು ಯಾರೋ ಒಳಗಿಂದ ಬಂದು ಕಟ್ಟಿಗ ಕುಂದ್ರಾಕು ಅವನು ತಲೆ ಕೆರ್ಕೊಂಡು ಎದ್ದು ಕಣದ ಕಡೀಗ ಹೊಂಟ "ಏನ್ಲಾ, ಪರಸರಾಮ ಕೆಲ್ಸ ಐತೆ ಅಂದೋನು ಅತ್ತ ಕಡೀಗ ಹೊಂಟೆಯಲ್ಲ" ಅಂತ ಕೇಳಿದ್ಲು "ಅಲ್ಲಿ ಮಂದಿ ಅದಾರೆ ಬೇ ಅದಕ್ಕ ಇತ್ಲಾಗ ಬಂದೆ ಇಲ್ಲೆ ಬಾ ಕಣದ ಕಡೀಗ" ಅಂದವನೆ ನಾನೇನು ಕೇಳ ಬೇಕಿತ್ತೋ ಅದನ್ನ ಹತ್ತಸಲ ಮನಸ್ಸಿನೊಳಗ ಅಂದ್ಕೊಂಡೆ "ಯವ್ವ" ಮುಂದ ಮಾತ ಬರ್ಲಿಲ್ಲಾ "ಲೋ ಪರಶರಾಮ, ನಿನ್ನ ಹೊತ್ತ ಬೆಳಸದಾಕಿ ನಾನು, ನೀ ಎಂಥೋನಂತ ನನಗೆ ಗೊತ್ತಿಲೇನ್ಲಾ, ಏನ ಕೇಳಾಕೊ ಹಿಂದ ಮುಂದೆ ನೋಡದಿ ಕೇಳು" ಪ್ರೀತಿಯಿಂದ ಹೇಳಿದ್ಲು. "ಅದು ಬೇ ಮತ್ತ, ನನ್ನ ಹೇಣ್ತಿ ಪಾರೋತಿ ಗಂಡಕೂಸ ಹಡದಾಳಂತ, ನೋಡಬಾರಕು" ರಾಗ ಎಳಿದ ಅವನು "ಹೌದೆನ್ಲಾ ಯಾರ ಬಂದಿದ್ರು" ಖುಷಿಯಿಂದ ಕೇಳಿದ್ಲು "ತೊತುಮಾಮ ಯಾರದೊ ಹತ್ರ ಹೇಳಿಕಳಿಸಿದ್ನಂತ ಸುದ್ದಿ ಗೊತ್ತಾತು. ಆದ್ರ ಹೋಗಾನಂದ್ರ ಕೀಸೆದಾಗ ಪುಡಿಗಾಸು ಇಲ್ಲ. ಎಂಟ ತಿಂಗಳಿಂದ ಕೆಲ್ಸಕ ಹೋಗಿಲ್ಲ. ಈಗ ಬುದ್ಧಿ ಬೆಟ್ಟಿಯಾತು, ನಾಳೆ ಮದ್ಲು ಕೆಲ್ಸಕ ಹಾಜರಾಗಬೇಕು" ಅಂವ ಏನೇನೊ ಮಾತಾಡ್ತಿದ್ದ ಮುದಕಿ ಅವನ ಮಾರಿನೆ ನೋಡಿತಿದ್ಲು "ಯವ್ವ" ಮತ್ತ ಅನುಮಾನ ಪಟ್ಟ ಹೇಳೊದು ಅನಿವಾರ್ಯವಾಗಿತ್ತು, ಗಟ್ಟಿ ಮನಸ್ಸ ಮಾಡಿದವನೇ "ನಿನ್ನ ಕೊಳ್ಳಾನ ಬಂಗಾರ ತಕ್ಕೊಡಬೇ ಅಡ ಇಟ್ಟು ದುಡ್ನ ತಗೊಂಡ ಹೋಗಿ ನೌಕರಿಗೆ ಸೇರಿ ತಿಂಗಳೊಪ್ಪತಿಗ ವಾಪಸ್ ಬಿಡಿಸಿಕೊಡ್ತಿನಿ" ಅಂತ ಹೇಳಿ ಮುಗಲ ನೋಡಿದ. "ಅದೀಟನ ಕೇಳಾಕ ಇಟೊತ್ತ ಮಾಡಿದೇನ್ಲಾ, ತಾಳ ಒಸಿ ಕೈ ತೊಳ್ಕೊಂಡ ತಕ್ಕೊಡ್ತಿನಿ. ನಾಳೆ ಬಿದ್ದ ಹೋಗೋ ಮರ ನಾನು, ಹ್ಯಾಂಗು ನಿಮದ್ರಾಗ ಯಾರಿಗಾರ ಒಬ್ಬರಿಗೆ ಸೇರಬೇಕು. ನಿನ್ನ ಹತ್ರನಾರ ಇದ್ರ ಜೋಪಾನವಾಗಿ ಉಳಿದೀತು" ಅಂದೀಕಿನ ಕೈ ತೊಳ್ಕೊಂಡು ಬಂದು ತಗದು ಅವನ ಕೈಯಾಗ ಇಟ್ಟು ತುಟಿ ಸೀಳದೆ ಒಳಗ ಹೋದ್ಲು. ಅವನು ಒಳಗೆ ಸಂಕಟಪಟ್ಟ. ಎಂಥ ಸ್ಥಿತಿ ಬಂತಲ್ಲ. ಯಾವದನ್ನು ಬಲವಾಗಿ ವಿರೋಧಿಸಿದ್ದಿನೊ ಅದೇ ಸುಳಿಯೊಳಗ ಮತ್ತೆ ಮತ್ತೆ ಸಿಕ್ಕಿ ಹಾಕ್ಕೊಳ್ತಾ ಅದೀನಿ ಅನಿಸಿತು. ನನ್ನ ಆದರ್ಶಕ್ಕಿಂತ ನನ್ನ ಹೆಂಡ್ತಿ ಮಗ ಸಂಸಾರ ಮುಖ್ಯ. ನಾನು ಹುಂಬನಾಗಿದ್ದೆ. ಈ ಮಂದಿ ಯಾರಿಗೂ ಕೇರ ಮಾಡೊದಿಲ್ಲ. ನನ್ನ ಒಣ ಆದರ್ಶಗಳಿಗೆ, ಇಲ್ಲಿ ಜಾಗವಿಲ್ಲ. ನಾನು ಏನ ಮಾತಾಡ್ತಿನೊ ಅವರಿಗೆ ತಿಳಿಯೋದಿಲ್ಲ, ಅವರು ಹೇಳಿದಂಗೆ ನನಗೆ ಬದುಕಲಿಕ್ಕೆ ಆಗೋದಿಲ್ಲ. ನನ್ನ ಮತ್ತು ನಮ್ಮವರ ನಡುವೆ ಬಹಳ ಅಂತರವಿದೆ. ನಮ್ಮ ನಡುವೆ ಯಾಕಿ ಅಂತರ? ಬಹಳ ಹೊತ್ತಿನವರಿಗೆ ಅವನು ವಿಚಾರ ಮಾಡುತ್ತಲಿದ್ದು, ಅವನ ದೊಡವ್ವ ಬಂದು "ಪರಶು, ಯಾಕ್ಲ ಹಿಂಗ ನಿಂತೆ ಗರ ಬಡದೋನಂಗೆ, ಇನ್ನೇನ ಯೋಚನೆ ಮಾಡಾಕ ಹತ್ತೀಯ, ಈ

ಬದುಕ ನಿನಗಲ್ಲಾ ಮಗ, ಮಣ್ಣಾಗ ಮಣ್ಣಾಗಬೇಕು, ಗಾಳಿ, ಮಳಿ, ಬಿಸಲಾಗ ಬೇಯಬೇಕು. ಈ ಪಡಿ ಪಾಟ್ಲು, ನಮಗರಿಲಿ ನಿನಗ್ಯಾಕ ಚೆಂದಾಗಿ ಸಂಸಾರ ಮಾಡ್ಕೋ ಹೋಗು" ಬಸವಣ್ಣನ ಗುಡಿಕಡೀಗ ಮಾರಿ ಮಾಡ್ಕೊಂಡು ಪ್ರಖರಿಸ್ತಿರೊ ಸೂರ್ಯನನ್ನೆ ನೋಡ ತೊಡಗಿದ್ಲು. ಅವನಿಗ ಮಾತಾಡಕ ಆಗದೆ ಸೀದಾ ನಡೆದ ಬಿಟ್ಟ.

ಗಡ್ಡದೂರ ಬ್ಯಾಂಕ್ ಮ್ಯಾನೇಜರ್ ಬಂಗಾರ ಇಟ್ಕೊಳ್ಳಾಕ ಹಿಂದ ಮುಂದ ನೋಡ್ದ ನಾನು ನಿಜಾನ ವಿವರಿಸಿ ಹೇಳಿದೆ, ಆತ ಒಪ್ಪಲಿಲ್ಲಾ, ಅವನು ಬಹುಬೇಗ ಸಿಟ್ಟಿಗ ಬರ್ತಿದ್ದ. ಸಿಟ್ಟಿಂದ'ನೋಡಿಸ್ವಾಮಿ, ನಾನಿದನ್ನ ಮಾರ್ತಿಲ್ಲಾ ಅಡವಿಡಾಕ ಹತ್ತಿನಿ, ಇದು ನನ್ನ ದೊಡವಂದು ಅರ್ಜೆಂಟ್ ಹಣ ಬೇಕು, ತಿಂಗಳೊಪ್ಪತ್ತಿಗೆ ಇದನ್ನು ಬಿಡಿಸಿಕೊಳ್ತಿನಿ. ನೀವೇನು ಕಾಳಜಿ ಮಾಡೋದ ಬ್ಯಾಡ. ಇದರ ತೂಕ ನೋಡಿ ಎಷ್ಟು ರೂಪಾಯಿ ಸಿಗಬಹುದು ಅನ್ನೋದನ್ನು ಹೇಳ್ರಿ" ಅವನು ಜೋರ ಬಾಯಿ ಮಾಡಿದ್ದ ಮ್ಯಾನೇಜರ್ ನರಂ ಆಗಿ, ಅದರ ತೂಕ, ಹಳೆಯದೋ ಹೊಸದೋ ಅನೋದನ್ನು ನೋಡಿ, ನೋಡ್ರಿ ಇದಕ್ಕೊಂದ ಎರಡು-ಎರಡೂವರಿ ಸಾವಿರ ಕೊಡಬಹುದು, ಅರ್ಜಿ ತುಂಬಿಕೊಡ್ರಿ ಅಂತ ಹಣ ಕೊಡೊ ವ್ಯವಸ್ಥೆ ಮಾಡಿದ್ರು. ಒಂದ ಸಲ ಪಾರೋತಿ ಮತ್ತ ಮಗು ನೋಡ್ಕೊಂಡು ಕೆಲ್ಸಕ ಹೋಗೊ ಆಲೋಚನೆ ಮಾಡ್ಕೊಂಡವನೆ ಒತ್ನಳ್ಳಿಗ ಬಸ್ಸು ಹಿಡದ. ತೂತುಮಾಮಗ ಖುಷಿಯಾಗಿತ್ತು. ಯಾವಾತ್ತು ಆತನ ಊರಿಗೆ ಹೋಗೆ ಇರಲಿಲ್ಲಾ. ಮದ್ವಿಯಾದಿಂದ ಹೆಚ್ಚೆಂದ್ರ ಎರಡ ಸಲ ಹೋಗಿರಬೇಕು. ಪಾರೋತಿ ಒಳಗೊಳಗೆ ನೊಂದಕೊಂಡಿದ್ಲು. ಮಗುವಿನ ಗತಿ ಏನು ಅಂತ. ಹೆಚ್ಚು ಕಮ್ಮಿ ನೌಕರಿ ಹೋದಂಗೆ. ಅಂತ ಎಲ್ಲರೂ ತಿಳಿಕೊಂಡಿದ್ರು. ತೊತುಮಾಮಗ ಆತಂಕ ಹೆಚ್ಚಾಗಿತ್ತು. "ಪರಶು,-ನಾ ಏನ ತಿಳಿದ್ವಾವಲ್ಲ, ನೀನು ಕಲ್ತೋನು ಶ್ಯಾಣ್ಯ, ನಿನಮುಂದ ಹೇಳಬರಾದು ಆದ್ರ ನಿನ್ನ ಅವಸ್ಥೆ ನೋಡಿ ಹೇಳಂಗಾತು ಆಟೇಯ" ಮಾಮ ಸುಮ್ಮನಾದ, ಅವನಿಗೆಲ್ಲಾ ತಿಳಿದಿತ್ತು "ಮಾಮ ನಾಳೆ ಬೆಳಿಗ್ಗೆನೆ ನಾನು ಹಳದಾಳಕ್ಕ ಹೊಂಟೀನಿ, ಒಂದ ಎಂಟ ತಿಂಗಳಾತು ಗೈರ ಹಾಜರಾಗಿ, ಏನೋ ಒಂದ ಸಮಜಾಯಿಸಿ ಕೊಟ್ಟು ಪ್ರಯತ್ನ ಮಾಡ್ತಿನಿ, ಮುಂದೇನ ಆಕೃತಿ ನೋಡಾನ" ಅಂದವನೆ ಮಗುಗೊಮ್ಮೆ ನೋಡಿ ಎದಿಯಾಗ ಹೆಪ್ಪಗಟ್ಟಿದ ಉಸಿರಿನ ಗುಡ್ನಾನೆ ಹೊರಗ ಹಾಕಿದ.

ಹಳದಾಳ ತಾಲ್ಲೂಕು ಕಚೇರಿಗ ಬಂದಾಗ, ಹನೆಲ್ಡ ಗಂಟೆಯಾಗಿತ್ತು. ಹಿಂದಿದ್ದ ಸಾಹೇಬ ವರ್ಗಾಗಿ ಹೋಗಿದ್ದ, ಬಂದೋನು ತಲಿತಿರಕ, ಬಾಯಿಗ ಬಂದಂಗೆ ಕಾನೂನು ಒದರ್ತಿದ್ದ. ಅಲ್ಲಿಯ ಕಾರಖೂನರೆಲ್ಲಾ ಹೆಚ್ಚು ಕಮ್ಮಿ ಅವನನ್ನು ಮರತೆ ಹೋಗಿದ್ರು. ಹಂಗಾಗಿ ಜವಾನನೊಬ್ಬ ಅಡ್ಡ ಕೈ ಹಿಡಿದು "ಏನಾಗ ಬೇಕಿತಪ್ಪ ಹಂಗ ಕೊಂಡ್ವಾಡದನ ನುಗ್ಗೊ ಹಂಗ ಖಬರಿಲ್ದೆ ನುಗ್ತಿಯಲ್ಲಾ ಏನ್ಸಮಾಚಾರ" ಅಂತ ನಿಲ್ಲಿಸಿದ. ಆತನ ದಾಡಿಗೂ, ವೇಷಕ್ಕೂ ಯಾರೊ ಅಪರಿಚಿತನ ಹೋಲುವಂತಿತ್ತು. "ಸಾಹೇಬರನ ನೋಡಬೇಕು" ಅಂದವನೆ ಅವನ ಮುಲಾಜಿಗ ಕಾಯದೆ ಒಳ ನುಗ್ಗಿ ತನ್ನ ಟೇಬಲಿಗೆ ಹೋದ. ಯಾರೊ ಹೊಸಬನೊಬ್ಬ ಕುಂತು ಏನೋ ಬರಿತಿದ್ದ, ಮೈ ತಣ್ಣಗೆ ಕಂಪಿಸತೊಡಗಿತು. ಮುಂದಿನ ಘಟನೆಯನ್ನು ನೆನಪಿಸಿಕೊಂಡು. ಸಾಹೇಬರ ಹತ್ತಿರ ಹೋದವನೆ, ತನ್ನ ಪರಿಸ್ಥಿತಿ ಹೇಳಿಕೊಂಡ "ನೋಡ್ರಿ ಪರಸಪ್ಪ, ಇವತ್ತ ನೌಕರಿ ಇಲ್ಲದೆ ಜನ ಖಾಲಿ ಪುಕ್ಕಟ್ಟೆ ಐದ ಹತ್ತು ರೂಪಾಯಿಗೆ ದಿನವಿಡಿ

ಕೂಲಿ ಮಾಡ್ತಾರೆ, ಸಿಕ್ಕ ನೌಕರಿ ಬಿಟ್ಟು ದಿಕ್ಕಿಲ್ದೋರಂಗೆ ತಿರಗಾಡ್ತಿರಲ್ಲ ಹೋಗಿ" ಅಂದು ಸುಮ್ಮನಾದರು. ಅವನು ತನ್ನ ಹತ್ರ ಇದ್ದ ಒಂದೊಂದೆ ಬಾಣ ಪ್ರಯೋಗ ಮಾಡಿ ಒಪ್ಪಿಸಿದ. ಅಲ್ಲಿಗೆ ಜೀವನದ ಒಂದು ಮಹತ್ವದ ಘಟ್ಟ ಮುಗಿದಂಗಾಗಿತ್ತು. ಮತ್ತೆಂದು ಆ ಘಟನೆಯೊಳಗೆ ಹೋಗಬಾರದು ಅನಿಸಿತು. ತನ್ನೆಲ್ಲಾ ಭೂತದ ಬದುಕನ್ನ ಅದುಮಿಟ್ಟು ಹೊಸದೊಂದು ಜಗತ್ತಿನೆಡೆಗೆ ಸಾಗಿದ.

ಹಿರೀಮಗ ಬೆಳೆಯ ಬೆಳೆಯುತ್ತಿದ್ದಂತೆ ಮತ್ತೆರಡು ಹೆಣ್ಣು ಕೊನೆಗೊಂದು ಗಂಡು ಹೀಗೆ ನಾಲ್ಕು ಜನ ಮಕ್ಕಳು, ಸಂಸಾರದ ಜಂಜಡದಾಗ ದೊಡ್ಡವ್ವನ ಬಂಗಾರ ಬ್ಯಾಂಕಿನೊಳಗೆ ಕೊಳಿಯಾಕಹತ್ತು. ಜವಾಬ್ದಾರಿ ಹೆಚ್ಚಾಗಿತ್ತು. ಬಂದ ಪಗಾರದ ದುಡ್ಡು ಸಂಸಾರ ನಿಭಾಯಿಸಲಿಕ್ಕೆ, ಸಾಲ್ತಿರಲಿಲ್ಲ. 'ಛೇ ಅವತ್ತು ದೊಡವ್ವನ ಬಂಗಾರ ಇಸ್ಕೊಬಾರದಿತ್ತು" ಅಂತ ಕನಲಿದ. ಎಷ್ಟೋ ಸಂದರ್ಭದಲ್ಲಿ ಆಮಿಷಗಳು ಬಂದಾಗ ಒಂದ ಕಡೆ ಒಪ್ಕೊಂಡು ದೊಡವ್ವನ ಬಂಗಾರ ಬಿಡಿಸಿಕೊಡಬೇಕು ಅಂತ ಅನಿಸಿತು. ಆದ್ರ ಅವನು ನಂಬಿಕೊಂಡ ಬಂದಿದ್ದ ಆ ಮೌಲ್ಯನೆಪಾತು ಎಲ್ಲಾ ಅನಿವಾರ್ಯತೆಗಳ ನಡುವೆಯೂ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿದ್ದ ತನ್ನೊಳಗೆ ನಡೆಯುತ್ತಿದ್ದ ಸಂಘರ್ಷ ದಿಂದ ಹೊರಗ ಬರಕಾಂತ ಪ್ರಯತ್ನ ನಡೆಸಿದ್ದ. ಒಟ್ಟುಗೂಡಿದ್ದ ಭಾವನೆಗಳನ್ನು ಯಾರಕೂಟಾಗಾರು ಹಂಚ್ಕೋಬೇಕಂತ ಪ್ರಯತ್ನಿಸಿದ. ಯಾರು? ಅರ್ಥವಾಗದ ಹೆಂಡತಿ, ಮಕ್ಕಳ ಹತ್ರ ತೋಡಿಕೊಳ್ಳೋಣ ಅಂತಂದ್ರ ತನ್ನ ದುಃಖವೇ ಅವಕ್ಕ ಅರ್ಥ ಆಗದೆ ಮಕ-ಮಕ ನೋಡ್ತಾ ಕುಂತ ಬಿಡ್ತಿದ್ವು ಹೆಂಗ ಪ್ರತಿ ಕ್ರಿಯಿಸೋದಂತ ಅವಕ್ಕಿನ್ನು ತಿಳಿದಿರಲಿಲ್ಲಾ, ನನ್ನ ಪಾಡು ನನಗಿರ್ಲಿ, ಅವರನ್ನ ನಡಕ್ಕ ತರಬಾರದಂತ ಅವರನ್ನು ದೂರಾನೆ ಇಟ್ಟೆ.

ಪರಿಸ್ಥಿತಿ ಸುಧಾರಿಸಿದಂಗಾಗಿ, ಒಂದಿಷ್ಟು ದುಡ್ಡು ಸಿಗ್ತು. ಮಕ್ಕಳೆಲ್ಲಾ ಒಂದೊಂದು ಡಿಮಾಂಡ ಮಾಡಿದ್ರು. ಅವನ ಮಾತ್ರ ದೊಡವ್ವನ ರಿಣದೊಳಗಿಂದ ಮುಕ್ತನಾಗಬೇಕಂತ ನಿರ್ಧರಿಸಿದ. ಹುಡುಗರೆಲ್ಲಾ ಸೇರಿ ಉಪವಾಸ ಸತ್ಯಾಗ್ರಹ ಮಾಡೋದಾಗಿ ಹೆದರಿಕೆ ಹಾಗಿ ಒಪ್ಕೊಳ್ಳೊ ಹಂಗೆ ಒತ್ತಾಯ ಪಡಿಸಿದ. ಅವರ ಡಿಮ್ಯಾಂಡ್ ಪೂರೈಸಿ ರೊಕ್ಕ ಕಾಲಿ ಮಾಡಿಕೊಂಡ. ದೊಡವ್ವನ ಬಂಗಾರದ ದೇವರ ಮೂರ್ತಿ ಇದ್ದ ಸರ ಮಾತ್ರ ಮನಸ್ಸಿನೊಳಗ ಗಟ್ಟಿಯಾಗಿ ನೆಲೆ ನಿಂತಿತ್ತು. ಯಾಕೊ ಮನಸ್ಸಿಗ ನೆಮ್ಮದಿ ಇಲ್ಲದಂಗಾಗಿ, ಯಾವದಾದ್ರು ಚೂರು ಪಾರು ದುಡ್ಡ ತಂದು ಬಂಗಾರ ಬಿಡಿಸಬೇಕೂಂತ ಘನ ಪ್ರಯತ್ನ ಮಾಡಿದೆ. ದೊಡವ್ವನ ಬಂಗಾರ ರಾತ್ರಿ ಮಲಗಿದಾಗ ಎದಿಮ್ಯಾಲ ಬಂದು ಕುಂತಂಗಾಗ ತೊಡಗಿತು. ನನ್ನ ಆಲೋಚನೆ ತಾಕಲಾಟಗಳು ನಡಿತಿರೋವಾಗಲೆ ಮತ್ತ ಮೂರುವರ್ಷಗಳು ಕಳೆದ ಹೋಗಿದ್ವು. ಅವನ ಹಳೆ ಟ್ರಂಕ ತಗದು ಏನೊ ಹುಡಕ್ತಾ ಇದ್ದ ಅವನಿಗ ಗಡ್ಡದೂರಿನ ಬ್ಯಾಂಕ್ ಮ್ಯಾನೇಜರ ಕಳಿಸಿದ ಹರಾಜ ನೋಟಿಸಾಗಿತ್ತು. ಅವನು ಹೌಹಾರಿದ 'ಲೇ ಪಾರೋತಿ ಬಾರೆ ಇಲ್ಲಿ' ಅಂತ ಪಂಚ ಪಾರೊಹಂಗ ಕೂಗಿದ. ಗಂಡನ ಆರ್ಭಟಕ್ಕೆ ಅಡಗಿ ಮಾಡ್ತಿದ್ದ ಬಿಟ್ಟು ಓಡಿ ಬಂದ್ಲು... "ಏನಾತ್ರಿ ಹಿಂಗ್ಯಾಕ ಒದರ್‍ತಿರಿ" ಅಂದ್ಲು "ಘು ನಿನ್ನ ಇದ್ಯಾವಾಗ ಬಂದಿದ್ದ, ನನಗ ಯಾಕ ಹೇಳಲಿಲ್ಲಾ ದೊಡವನ ಬಂಗಾರ ಹರಾಜ ಆಗಿ ಹೊತಲ್ಲಾ ಈಗ ಏನ ಮಾಡ್ಲಿ" ತಲಿಮ್ಯಾಲ ಕೈ ಹೊತ್ಕೊಂಡ ಕುಂತ "ಏನನ ಶಿವನ ಅದನ್ನ ನಿಮಗ ಹೇಳೆ ಇಲ್ಲೇನ್ರಿ ನಾನು ಎಂಥ ಘಾತ

ಆತ್ರಿ, ನಿಮಗ ಹೇಳಾಕಂತ ನಿಮ್ಮ ಟೆಂಕ್ರಿನಾಗ ಇಟ್ಟಿದೆ" ಅಂತ, ಗೋಳಾಡ ತೊಡಗಿದ್ಲು. ಆಕೀಗ ಬೋಯ್ಯುವುದರಿಂದ ಗದರಿಸೋದರಿಂದ ಏನ ಪ್ರಯೋಜನ ಆಗಂಗಿಲ್ಲ ಅಂತೆ ತಿಳಿದವನೆ ಕೊನೆಯ ತಾರೀಖು ನೋಡಿದ ಬಂಗಾರ ಹರಾಜಾಗಿ ಮೂರ ವರ್ಷಗಳೇ ಆಗಿ ಹೋಗಿದ್ವು, ಹಿಂಗ ಕುಂತ್ರ ಪ್ರಯೋಜನ ಆಗಂಗಿಲ್ಲ ಅಂದವನೆ, ಮನಿಯಾಗಿಂದ ಒಂದಿಷ್ಟು ಸಾಮಾನಗಳನ್ನ ಒಯ್ದು ಅಡವಿಟ್ಟು ರೊಕ್ಕ ಜೋಡಿಸಿ ತನಕ ಪರಿಚಯವಿದ್ದ ಒಬ್ಬ ಸೋನಾರ ಹತ್ರ ಹೋಗಿ ಎಲ್ಲಮ್ಮನ ಮೂರ್ತಿ ಇರೊ ಅಂತಹದ್ದು ಬಂಗಾರದ ಪದಕ ಮಾಡ್ಸಿದ, ಅದನ್ನ ಕೊಳ್ಳಾಗ ಹಾಕಿಕೊಳ್ಳಾಕ ಬರೋ ಹಂಗ ಬೋನು ಮಾಡಿ ಒಂದ ಒಳ್ಳೆ ದಾರ ಪೋಣಿಸಿದ್ದ ನೋಡಿ ಅವನು ನೆಮ್ಮದಿ ಉಸರಬಿಟ್ಟ.

ಎರಡನೇ ಸಲ ನೌಕರಿಗ ಸೇರಿದ ಮ್ಯಾಲ ಊರು ತನಗೆ ಬ್ಯಾಸರಾಗಿದ್ಕ ಅವನು ಹೋಗೆ ಇರಲಿಲ್ಲಾ. ಒಂದ ಸಲ ದೊಡವ್ವ ಬಂದಿದ್ಲು, ಒಂದಲ್ಲಸಲ ತೊತುಮಾಮ, ಅಪ್ಪ, ಅವ್ವ ಮಾಮೂಲು, ಹುಡುಗರು ದೊಡ್ಡವರಾಗಿದ್ರು. ತಮ್ಮ ಮೂಲದ ಬೇರುಗಳಿರೊ ಹಳ್ಳಿಗೆ ಒಂದ ಸಲ ಹೋಗ ಬೇಕನ್ನೊ ತುಡಿತ ಅವರಲ್ಲಿತ್ತು. ಆಗಾಗ್ಗೆ ಅವರಪ್ಪ ಅಮ್ಮನನ್ನ ಒತ್ತಾಯಿಸಿದ್ರು. ಅದಕ್ಕಂತ್ಲೆ ಅವನು ಎಲ್ಡವಾರ ರಜಾ ಹಾಕಿದ. ಗದಗಿಗೆ ಬಂದು ಗದಗಿಂದ ರಾತ್ರಿವಸ್ತಿಗಾಡಿ ಗೂಂಡೂರ ಬಸ್ಸ ಹತ್ತಿ ತನ್ನ ಹಳೆಯ ಸೆಳೆತಕ್ಕೆ ಸ್ಪಂದಿಸುತ್ತಾ, ಒಳಗೊಳಗೆ ತನ್ನ ಬಾಲ್ಯಯೌವ್ವನ, ಹೋರಾಟ, ಬಡತನ, ಶೋಷಣೆ ಇವೆಲ್ಲವನ್ನು ದಾಟಿ ಗಟ್ಟಿಯಾಗಿ ಭೂಮಿ ಮೇಲೆ ಕಾಲೂರಿ ನಿಂತ ಆ ಕ್ಷಣಗಳನ್ನು ಯೋಚನೆ ಮಾಡ್ತಾ ಇದ್ದ. ಅವನು ಮೆಟ್ರಿಕ್‌ನ್ಯಾಗ ಇರಬೇಕಾದ್ರ ಪರೀಕ್ಷೆ ಕಟ್ಟಾಕ ದುಡ್ಡಿಲ್ಲಾಂತ ಗದಗಿಂದ ಊರಿಗ ಓಡಿ ಬಂದಿದ್ದ. ಅವನಪ್ಪಗ ದೊಡ್ಡ ಚಿಂತಿಯಾತು. ಮಳಿಬ್ಯಾರೆ ಸತಾಸಿತ್ತು ಬೆಳಿ ಇಲ್ಲಾ ಮಂದಿ ಬೊಂಬಾಯಿಗ ದುಡಿಯಾಕ ಹೊಂಟಿದ್ರು, ಆ ಪರಿಸ್ಥಿತಿಯೊಳಗ, "ಏನ ಮಾಡ್ಲಲೇ ತಮ್ಮ ಎಲ್ಲೂ ಕೂಲಿನ ನಡಿತಿಲ್ಲಾ" ಕೈ ಕೈ ಹಿಸಕಿಕೊಂಡಿದ್ದ. ಯೋಚನೆ ಮಾಡ್ತಾ ಇರಬೇಕಾದ್ರ ದೊಡವನ ಬೆಳ್ಳಿ ಸೊಂಟ ಪಟ್ಟಿ ಅಪ್ಪಗ ನೆನಪಾಗಿತ್ತು. ಓಡಿ ಹೋದವನೆ ಸುದ್ದಿ ತಿಳಿಸಿದ. ನನ್ನ ಸಾಕಿ ಬೆಳಸಿ ಕೈ ತುತ್ತು ಕೊಟ್ಟು, ಸದಾ ತನ್ನ ಮಗನಂತೆ ಕಂಡೊಳ ಆಕಿ ಹಿಂದ ಮುಂದ ವಿಚಾರ ಮಾಡದೆ ತಗದು ಕೊಟ್ಟೆ ಬಿಟ್ಲು. ಮೇಟಿ ಜಂಬಣ್ಣಗ ಮಾರಿ ದುಡ್ಡು ಕೊಟ್ಟಿದ್ದ. ಅವೆಂಥ ಕಠಿಣ ದಿನಗಳು, ಅವನ ಬಾಯಾಗಿಂದ ಹೊರ ಬಂದವು ಶಬ್ದಗಳು. ಅವನ ದೊಡ್ಡ ಮಗಳು "ಏನಾತಪ್ಪ ಒಬ್ಬರೆ ಮಾತಾಡಾಕ ಹತ್ತಿರಿ" ಅಂದ್ಲು. ಈಗ ಗ್ರಹಿಸಿಕೊಳ್ಳೊ, ತಾಕತ್ತು ಪಡ್ಕೊಂಡಾಳಂತ ತಿಳಿದು ಆಕಿ ಮುಂದ ಹೇಳ್ತಾ ಹೋದ ಬಸ್ಸು ಗುಂಡೂರ ತಲುಪಿತ್ತು.

ಅವನ ಸಂಸಾರ ನೋಡಿ ದೊಡವ್ವಗ ಖುಷಿಯಾಗಿತ್ತು. ಒಂದೇ ದೊಡ್ಡಮನಿ ನಡಕ್ಕ ಅಡ್ಡಾದಿಡ್ಡಿ ಗ್ವಾಡಿಗಳು, ಎದ್ದು ಇದು ದೊಡಪ್ಪ, ಅಪ್ಪ, ಬಾಣುತಾತ, ಚಂದುತಾತ ಹಿಂಗ ಹಂಚಿಕೊಂಡಿದ್ನ ಅವನಿಗ ತಿಳಿಸಿದ್ರು. ದೊಡಪ್ಪನ ಆಸ್ತಿಗೆಲ್ಲಾ ಅವನೆ ಹಕ್ಕದಾರನಾಗಿದ್ದ. ಯಾಕ ಬೇಕಿತ್ತು ಈ ವಿಭಜನೆ ಅಂತ ಅವನಿಗ ಅನಿಸಿತು. ಅವನ ಎದಿಯಾಗಿನ ಮಾತು ಬಾಗಿಯೊಳಗ ಕಾಲಿಡ್ತಿದಂಗೆ ಎದರಾದ ತಲೆ ತುಂಬ ನೆಲೆಗೂದ್ಲು, ಸುಕ್ಕುಗಟ್ಟಿದ ಮುಖ, ಬಾಗಿದ ಬೆನ್ನು, ಗೊಗ್ಗರ ಧನಿ, ರಾಮನ್ನೆಕಾದ ಶಬರಿ ಹಂಗ ತನ್ನ ಪರಶು ಬಂದ ದಪ ತನ್ನ ಹೊಸಲಯೊಳಗ ಕಾಲಿಟ್ಟು ನನ್ನ ಮಡಿಲಾಗ ಒಂದ ಆರೇ ಘಳಿಗಿ ತಲ ಇಟ್ಟು ಮಕ್ಕೊಂಡ

ಹ್ವಾದ್ನನಂದ್ರ ಅವತೆ ಜೀವ ಬಿಟ್ಟೇನು ಅನ್ನೋ ಮಹದಾಸೆಯಿಂದ ಕಾಯಿತ್ತಿದ್ದ ದೊಡ್ಡವ್ವಗ ಕೇಳಿದ "ಯವ್ವ ಯಾಕಬೇ ಹಿಂಗ ಹರದು ಹಂಚ್ಕೊಂಡ್ರಿ ಯಾವಾನಾರ ಬ್ಯಾರೆ ರಕ್ತ ಹಂಚ್ಕೊಂಡಾನೇನ ಬೇ" ಅವನ ಕಂಠ ನಡಗತಿತ್ತು. ದೊಡವ್ವ ಮಾತಾಡಲಿಲ್ಲಾ ಅವನನ್ನ ತಬ್ಕೊಂಡಾಕಿನ ಸಣ್ಣ ಕೂಸಿನಂಗ ಅಳತೊಡಗಿದ್ಲು. ಇಂತಹ ಸಂಬಂಧದ ಅನ್ಯೋನ್ಯತೆಯನ್ನ ಕಾಣದ ಹುಡ್ರು ಅವರಿಬ್ಬರ ಹಿಂದೆ ಸುತ್ತಾಡಿದ್ರು. "ಬ್ಯಾರೆ ರಕ್ತ ನಮ್ಮದಲೋ ಪರಶು, ಹೊರಗಿಂದ ಬಂದಾವಲ್ಲ ಹಡಬಿ ಹೆಂಗಸು, ಅವರದು ಏನ ಮಾಡ್ಲಿ ಹೇಳು, ಹಗಲು-ರಾತ್ರಿ ಮನಿ ಕುರುಕ್ಷೇತ್ರ ಅಕ್ಕಿತ್ತು. ನಿಮ್ಮ ದೊಡಪ್ಪ ವಿಷ ತಗೊಳಾಕ ಹೋಗಿದ್ದ. ಎಲ್ರೂ ಸೇರಿ, ತೀರ್ಮಾನ ಮಾಡಿದ್ವಿ" ಅವನಿಗ ಕಳವಳ ಆತು ಇದ್ದ ತುಂಡ ಭೂಮಿನ ಮತ್ತ ತುಂಡ ತುಂಡಾಗಿ ಹಂಚ್ಕೊಂಡು ಕೂಲಿ ಮಾಡಿ ಹೊಟ್ಟೆ ಹೋರಿಯಾಕ ಹತ್ತಿದ್ರು, ಯಾರು ಯಾರಿಗ ಸಂಬಂಧವಿಲ್ಲದಂಗೆ ತಮ್ಮ ಪಾಡಿಗ ತಾವಿರ ತೊಡಗಿದ್ರು.

ದೊಡವ್ವಗ ತನ್ನ ಕೊಳ್ಳಾನ ಬಂಗಾರದ ದೇವಿಪದಕ ಕೊಟ್ಟಿದ್ದ, ಮರತ ಹೋಗಿತ್ತು. ಆದ್ರೂ ಬಹಳ ನಿಷ್ಠೆಯಿಂದ ಪೂಜೆ ಮಾಡಿ, ಬೇಡ್ಕೊಂಡ ಬರ್ತಿದ್ಲು ಅವನು ಮತ್ತ ಬಂಗಾರ ಕೊಡಕ ಹೋದ. ಮತ್ತೊಂದ ಅನುಮಾನ ಬಂತು ಈ ಮಂದಿ ಮತ್ತ ಹಳೆ ಚರ್ಚೆ ಸುರು ಹಚ್ಕೊಂಡ್ರ ಅಂತ ಹೆದರಿಕಿ ಆತು. ಈಗ ಕಾಲ ಬಹಳ ಬದಲ ಆಗ್ಯೆತಿ ನೋಡಾನ ಏನಾಗುತ್ತೆ ಅಂತ. ಅವನ ಅಕಿ ಕೊಳ್ಳಾಗ ಹಾಕಿದ "ಏನ್ಲಾಅದು " ಎತ್ತಿ ನೋಡಿ, ಯಾವ ಆಸಕ್ತಿ ವ್ಯಕ್ತ ಪಡಿಸದೆ "ಮತ್ತ್ಯಾಕ ತಂದೆ" ಅಂದಾಕಿನ ಹೊರಗ ಹ್ವಾದ್ಲು. ಒಂದ ವಾರ ಅಲ್ಲೆ ಇದ್ದ ಅವನಿಗ ಮನಿ ಪರಿಸ್ಥಿತಿ ಅರ್ಥ ಆಗಿತ್ತು. ದೇವರ ಬಂಗಾರ ಹೊರೋದರ ಬಗ್ಗೆ ಚರ್ಚೆ ಬಂದೇ ಬರತ್ಯೆತಿ ಅನ್ನೋ ಖಾತ್ರಿ ಇತ್ತು. ಸಣ್ಣೇರ ನಾದ್ರು ಪ್ರಸ್ತಾಪ ಮಾಡೇ ಮಾಡ್ತಾನ ಅಂತಿದ್ದ ಹಂಗೆ, ಕಾಕ, ದೊಡಪ್ಪ, ಅಪ್ಪ ಕಟ್ಟಿಗ ಕುಂತೆ ಬಿಟ್ರು "ನಾನ ಅವತ್ತು ಹೇಳಿದ್ದೆ, ಇವತ್ತು ಹೇಳ್ತೀನಿ ನನಗ ಅದು ಹಿಡಸಂಗಿಲ್ಲಾ" ಸ್ಪಷ್ಟ ಪಡಿಸಿದೆ. "ಲೇ ತಮ್ಮ ಈಗ ನಮ್ಮದ ಮುಗದ್ಯೆತಿ ಎಣ್ಣಿ ಇಲ್ಲದೆ ಬರಿ ಕಸುವಿಂದ ಗಾಳಿಯೊಳಗ ಆರಿ ಹೋಗಾಕ ಮಿಸಕಾಡ್ತಿರೊ ದೀಪದಂಗ, ಬಾಳ ಬೇಕಾದ್ದು ಮುಂದಿನ ಜನಾಂಗಕ್ಕ ಉತ್ತರ ಹೇಳೋನು ನೀನು ಯೋಚ್ನಿ ಮಾಡು" ದೊಡಪ್ಪ ತನ್ನ ವಿಚಾರ ಹೇಳಿದ. ಅವನ ಹಿರಿಮಗಳು, ಕಾಕನ ಮಗ ಯಂಕಂಚಿ, ಎರಡನೇ ಕಾಕನ ಮಗ ಪರಮು, ಆತನ ಮಗಳು ಕೆಂಚವ್ವ, ಬಹಳ ದಿನಗಳಿಂದ ಅದರ ಬಗ್ಗೆ ತಮ್ಮ ವಿರೋಧ ವ್ಯಕ್ತ ಪಡಿಸ್ತಿದ್ದೋರೆ. ಅವರಿಗೊಬ್ಬ ಮುಖಂಡ ಸಿಕ್ಕಂಗಾಗಿ ಎಲ್ಲರೂ ಒಕ್ಕೊರಲಿಂದ "ನೋಡ್ರಪ್ಪ ಹಿಂದ ಆತು, ನಿಮ್ಮ ಕಾಲದ ಈ ಪದ್ಧತಿ ನಿಮ್ಮ ಕೂಡನೇ ಮಣ್ಣಾಗಿ ಹೋದ್ರ ಪಾಡು, ನಾವು ಸಿಟಿಯೊಳಗ ಹೋಗಿ ಬಿಕ್ಷೆ ಬೇಡಿ ಎಡಿಮಾಡಾಕ ಆಗೋದಿಲ್ಲ. ನಿಮ್ಮ ಕಾಲದ ಸತ್ಯ ನಮ್ಮ ಕಾಲದ ಸುಳ್ಳು ಅದು ಸತ್ತ ಹೋತು ಅಂದ್ಕೊಬೇಕು ಇದೇ ಈ ಪ್ರಕೃತಿ ನಿಯಮ" ಅವರಿಗ ಅರಿವು ಮೂಡಿಸೊ ಯತ್ನ ಮಡಿದ್ರು. ಆದ್ರ ಹಳೆ ತಲಿಮಂದಿಗ ಸಮಜಾಯಿಸಿ ಮಾಡೊದು ಕಷ್ಟ ಆಗಿತ್ತು. ಅಪ್ಪನಡಕ್ಕ ಮಾತಾಡಾಕ ಪ್ರಯತ್ನ ಮಾಡಿದ. ನಮ್ಮ ವಿರೋಧಿ ಗುಂಪು ಅದಕ್ಕೆ ಅವಕಾಶ ಕೊಡಲಿಲ್ಲಾ. ಅಪ್ಪ-ದೊಡಪ್ಪ ನಂಬಿದ ಎಷ್ಟೋ ದೇವರುಗಳಿಗೆ ಒಂದು ತರ್ಕನೆ ಇರಲಿಲ್ಲಾ, ಯಾರೊ ಒಬ್ಬ ಹೊಲದೊಳಗೆ ಐದು ಕಲ್ಲುಗಳಿಗೆ ಸುಣ್ಣ ಬಳಿದ್ರೆ ದೇವರಾಗಿ ಜನ್ಮ ಪಡ್ಕೊಳ್ತಿದ್ದು, ಹಿಂಗ ಕಂಡ ಕಂಡ ಕಲ್ಲುಗಳಿಗೆಲ್ಲಾ

ಕೈ ಮುಗಿಯೊ ಜನರ ಪದ್ಧತಿಗಳು ಹಾಗೆ ಅರ್ಥ ಕಳ್ಕೊಂಡಿದ್ವು.

ರಜೆ ಮುಗಿದಿದ್ದೆ ಗೊತ್ತಾಗಲಿಲ್ಲಾ, ಗುಂಡೂರ ಬಿಡೊ ಸಮಯ ಬಂದಿತ್ತು ದೊಡವ್ವ, ಅವ್ವ ಚಡಪಡಿಸಿದ್ರು, ದೊಡವ್ವನ ಕಣ್ಣು ಮಂಜಾಗಿತ್ತು. ಕಿವಿ ಕೇಳಿಸ್ತಿರಲಿಲ್ಲಾ, ಅಕೀನ ನೋಡಿ ಅವನಿಗೆ ಸಂಕಟಾತು. 'ಯವ್ವ ಬಂದ ಬಿಡಬೇ" ಮಾತ ಬರಲಿಲ್ಲಾ, ಅಕಿ ಮಾತಾಡದೆ ಕೈಸನ್ನಿಯಿಂದ್ಲೆ ಇಲ್ಲಾಂದ್ಲು, ನಾನು ತ್ರಾಸ ಕೊಡಾಗ ಹೋಗಲಿಲ್ಲಾ, ಎಲ್ಲರೂ ಹೊಂಟನಿಂತ್ರಿ ಎಲ್ರೂ ನಮ್ಮನ್ನ ಕಳಸಾಕ ದೊಡ್ಡ ಹುಣಸಿಮರದ ಮಟಾನು ಬಂದಿದ್ರು. ಅವ್ವಗ ನನ ಕೂಡ ಬರಾಕ ಮನಸಿತು. ಪಾರೋತಿ ಕರದಿದ್ಕ ಮಾತಾಡಲಿಲ್ಲಾ, ನನ್ನ ಮರ್ಜಿಕಾದ್ಲು ನಾನು ಕರಿಲಿಲ್ಲಾ, ಯಾವದೋ ಗಡಬಡಿಯೊಳಗ ಅವಳು ಕರೀಲೇ ಇಲ್ಲಾ ಬಸ್ಸು ಬಂತು ಸುತ್ತ ಒಮ್ಮೆ ನೋಡಿ ಬಸ್ಸ ಹತ್ತಿ ಕುಳಿತ. ಎದಿಯೊಳಗ ಏನೋ ಚುಚ್ಚಿದಂಗಾತು, ಏನಂತ ಯೋಚನೆ ಮಾಡ್ತಾ ಕಣ್ಣು ಮುಚ್ಚಿ ಹಾಗೆ ನಿದ್ದೆ ಹೋಗಿ ಬಿಟ್ಟ. ಬಸ್ಸು ಗದಗಿನಲ್ಲಿ ನಿಂತಾಗ ಹುಡುಗರೆ ಎಬ್ಬಿಸಿದರು ಮನಸು ಹಗರುತಾ ಇಳಿದು ಮತ್ತೊಂದು ಬಸ್ಸಿನ ಹುಡುಕಾಟದಾಗ ತೊಡಗಿಕೊಂಡರು.

ಬೂದುಗನ ಪ್ಲಾಸ್ಟಿಕ್ ಬೂಟುಗಳು...

ಸೊಪ್ಪಿದಂಟ ಕೆದರಿ ಕೆದರಿ ಹುಡುಕಿದ್ರ ತಾನಿಟ್ಟ ಜಾಗದಾಗ ಐದಾರ ಸಾರಿ ಸರಿಯಾಗಿ ನೋಡಿದ. ಮನಿಹಿಂದ, ಪಕ್ಕದ ತಿಪ್ಪಿಯೊಳಗಿನ ಹುಲ್ಲುಕಡ್ಡಿ ಕೆದರಿದ ಕೊಳಿಹಂಗೆ ಪ್ರಯೋಜನ ಆಗಲಿಲ್ಲಾ. ದೊಡ್ಡ ಮಾವನ ಮಗಳು ಪಿಲಾಣಿ ಮುಂದ ಗತ್ತಿಲೆ ಅಡ್ಡಾಡಬೇಕು ಅಂದ್ಕೊಂಡಿದ್ದು ಹುಸಿಯಾಯಿತ್ತಲ್ಲ ಅನ್ನೋದನ್ನ ನೆನಸಿಕೊಂಡೊಡನೆ ಬಹಳ ಸಂಕಟಾಗಿತ್ತು. ಮನಸಿನೊಳಗಿಂದ ಮರಿಯಾಗಲಾರದಾದವು, ಎಷ್ಟು ಕಷ್ಟ ಪಟ್ಟು ಸಾಟಿ ಬದ್ಲಿ ಮಾಡಿದೆ ಒಳ್ಳಗೊಳಗೆ ಅಳತೊಡಗಿದ. ಅವನ ಕಣ್ಣಿನ ನೆದರು ಎಲ್ಲಿ ಮಟ ಹೊಕ್ಕೈತೊ ಅಲ್ಲಿ ಮಟ ನೋಡದ ಅವನ ಬೂಟ್ಸ್ ಮಾತ್ರ ನಾಪತ್ತೆಯಾಗಿದ್ವು, ಕಾವಿಗ ಕುಂತ ಕೋಳಿ ಹ್ಯಾಟಿ ಮುಚ್ಚಿದ ಪುಟ್ಟಿ ಎತ್ತಿದ. ಕೊರ್ರೋ... ಅಂತ ಜೋರಾಗಿ ಹ್ಯಾಟಿ ಕೂಗಿದ್ಕ ಹೆದರಿ ಹಿಂದಸರದ, ಸಗಣಿ ಬಳಿತಿದ್ದ ಅವನ ಚಿಗವ್ವನ ಮಗ ಪತ್ರೇಶಿ ತಲಿಯಾಗಿಂದ ಸುರಿತಿರೊ ದನದ ಗಂಜಲ ಜಂಪರಿಗ ಒರಿಸಿದವನೆ ಹೊತ್ಲಗಳನ್ನ ಅಡ್ಡ ಕೈಯಿಂದ ಬಳಿಯೋದ್ರಾಗ ತೊಡಗಿದ್ದ ಮತ್ತೊಬ್ಬ ಬರ್ಲಿಂದ ನೆಲಾ ಪರಸಪರ ಗುಡಿಸಾಕ ಹತ್ತಿದ್ದ. ಬೂದಗ ಎಲ್ಲಾ ಪ್ರಯತ್ನಗಳ ನಂತರ ಕೋಳಿ ಗೂಡಿನೊಳಗ ಹೊಕ್ಕೊಂಡು ನೋಡೊ ನಿರ್ಧಾರ ತಗೊಂಡ ಕೊಳಿಗಳಿರೋದನ್ನ ನೋಡಿಯೂ ಒಳಗ ನುಸುಳಿದ ತಮ್ಮ ಶತ್ರು ಬಂದಿದ್ದೆ ಕೋಳಿಗಳೆಲ್ಲಾ ಕೊರ್ರ ಕೊರ್ರಂತ ಕೂಗಿದವು. ಒಂದೆರಡ ಕೋಳಿಗಳು ಹೆದರಿ ಅವನ ತಲಿಗ ಕುಕ್ಕಿದವು "ಯವ್ವ ಸತ್ನೆ" ಅಂತ ಹೊರಗ ಓಡಿದ. ಹೊರಗ ಬಂದಿದ್ದೆ ಕೈ, ಕಾಲು ತಲಿಯೊಳಗ ಬುಳು ಬುಳು ಅನ್ನತೊಡಗಿತು. ಹೊಸದಾಗಿ ಆರಂಭವಾದ ತೊಂದರೆಗೆ ಗಾಬರಿಯಾದವನೆ ಪರಪರಕೆರ್ಕೊಂಡ ಮಣ್ಣು ತುಂಬಿಕೊಂಡಿದ ತಲಿ ಮತ್ತೊಂದೀಟು ಕೇರಿಯ ತೊಡಗಿತು. ಒಂದಿಂಚು ಉದ್ದ ಇರೊ ಹೊಲಸು ತುಂಬಿದ್ದ ಊಗರೊಳಗ ಐದಾರು ಕೋಳಿ ಹೇನುಗಳು ತುಂಬಿಕೊಂಡಿದ್ದವು ಉಗರಿಂದ ಹೊರಗೆ ತಗದ ಕುಕ್ಕಿದ. ಎತ್ತಿನ ಗ್ವಾಂದ್ಲಿಯೊಳಗೇನಾರ ಮುಚ್ಚಿಟ್ಟಾನೇನಂತ ರಾತ್ರಿ ಎತ್ತುಗಳು ಸೊಪ್ಪಿನ ಮೇಲಿನ ರೌದಿಗಳನ್ನೆಲ್ಲಾ ಸೋಸಿ ಬರಿದಂಟ ಉಳಿಸಿದ್ದವು ಅವುಗಳನೆಲ್ಲಾ ಕೆದರಿ ನೋಡಿದ "ಎಲ್ಲಿ ಮುಚ್ಚಿಟ್ಟ ಬೋಸಡಿ ಮಗ ಬೆಕ್ಕಿನ ಕಣ್ಣೋನು" ಒಬ್ಬನೆ ಗೊಣಗಿಕೊಂಡ.

"ಬೂದಗ, ಲೋಬೂದುಗ ಎಲ್ಲದಿಯಲೋ ಭಾಡಕೌ ನನ ಮಗನೆ" ಅಂತ ಅವನವ್ವ ದಂಡಮ್ಮ ಕೂಗಿದಳು ಗ್ವಾಂದಿಯೊಳಗ ಕೋಳಿ ಕೆದರಿದಂಗ ಕೆದರ್ತಾ ನಿಂತೋನ್ನ ಹಿಡದ ಎಳದ ಮಕ ಮುಸಡಿ ನೋಡದೆ ನಾಕ ಬಾರ್ಸಿದ್ಲು. ಬೂದುಗ ಕಳ್ಕೊಂಡಿದ್ದ ಪಾಸ್ಟೀಕ್ ಬೂಟಿನ ಲೋಕದಿಂದ ಹೊರಗ ಬಂದಿದ್ದ. ವಾಸ್ತವ ತಿಳಿಯಾಕ ಮದ್ಲು ಅವನ ಗಿಂಡಿಸಣವ್ವ ಒಂದ

ತಾಟಿನ ಮೂಲಿಯೊಳಗ ನಾಕಕಾಳು ಒಗ್ಗರಣಿ ಮಂಡಕ್ಕಿ ಉದುರಿಸ್ಕೊಂಡು ಬಂದು ಅವನ ಎದುರಿಗಿಟ್ಟಳು. ಎರಡ ಸಲ ಬಾಯಿಯೊಳಗ ಬಿಸಾಡಿ ಮುರನೆ ಸಲಕ್ಕ ಕೈ ಒಯ್ದರ ತಾಟು ಖಾಲಿಯಾಗಿತ್ತು. ಮತ್ತೊಂದ ಮೂಲಿಯೊಳಗಿದ್ದ ಒಂದ ಕಾಳನ್ನ ಗೆಬರಿ ಬಾಯಿಯೊಳಗ ಹಾಕೊಂಡವನೆ ಅವನವ್ವನ ಮಾರಿ ನೋಡಿದ. ಅವನ ಕಣ್ಣೊಳಗಿನ ಅಶಿ ಅರಿತು ತನ್ನ ತಾಟಿನೊಳಗಿಂದ ನಾಕ ಕಾಳ ಎತ್ತಿ ಅವನ ತಟ್ಟಿಯೊಳಗ ಬಿಸಾಡಿದ್ಲು ಒಂದೊಂದೆ ಕಾಳುಗಳನ್ನ ಆರಿಸಿ ಆರಿಸಿ ಬಾಯಿಯೊಳಗಿಟ್ಟಕೊಳ್ಳ ತೊಡಗಿದ. ಪಕ್ಕದಾಗಿದ್ದ ಚರಗಿ ತಗೊಂಡು ಖಾಲಿ ಹೊಟ್ಟಿಯೊಳಗ ಸುರ್ಕೊಂಡ, ನೀರಿನ ಕೂಡ ಹೋಗಿದ್ದ ಗಾಳಿ ಹೊಟ್ಟೆಯೊಳಗಿಂದ ಹೊರಗ ಬಂದಿದ್ಕ ಅಬ್ ಅಂತೇಳಿ ತೇಕ ಹೊಡದ. ಗಿಂಡವ್ವ ಹೊಡಕ ಸಿಲಾವರಿ ಗ್ಲಾಸಿನೊಳಗೆ ಹಾಲಿಲ್ಲದ ಡಿಕಾಕ್ಸನ್ ಕೊಟ್ಲು. ಸುರ್ ಸುರಂತ ಬಾಯಿಂದ ಊಬಿ ಸುಡ ಸುಡೋದ ಬಾಯಿಗ ಸುರಿವಿಕೊಂಡವನೆ ನುಂಗಾಕ ಆಗದೆ ಒದ್ದಾಡಿದ "ಲೇ ಮೆಲ್ಲಕ ಕುಡಿಯಲೆ ಹಾಟಗಳ್ಳ" ಸ್ವಾಟಿಗ ತಿವದ್ಲು ಅವನವ್ವ. ತಿವಸ್ಕೊಂಡು ಸುಡಸುಡೋದ್ನ ಹೊಟ್ಟಿಯೊಳಗ ಸುರ್ಕೊಂಡು ಮತ್ತೆ ಕೊನೇಯ ಪ್ರಯತ್ನಕ ಬೂಟು ಹುಡುಕಾಕ ಅದರ ಖಯಾಲಿಯೊಳಗ ಕಳದ ಹೋದ.

ವಾರದ ಹಿಂದ ಕೆರಿ ಹಿಂದ ಕೋರಿಲೆ ಮಾಡ್ತಿರೊ ಹನ್ಮಂತ ಭಟ್ರ ಗದ್ದಿಯೊಳಗ ಕಬ್ಬಿನ ಬೀಜ ಹಾಕಬೇಕಂತ ಪಟ್ರಿಪುರದಿಂದ ಐನಾತಿ ತಳಿ ಕಬ್ಬಿನ ಬೀಜ ಹೆರ್ಕೊಂಡ ಬಂದು ಗುಡಿಸಲ ಮುಂದ ಕೆಡವಿ ಸುತ್ತಲು ರೌದಿ ಮುಚ್ಚಿದ್ರು. ಬೂದಗನ ಅಪ್ಪ ಪ್ರತ್ರೇಶಿ "ಲೇ ಊರಾನ ಹಡ್ರು ಅಡ್ನಾಡಿ ಅದಾವ ಕಣ್ಮುಚ್ಚಿ ಕಣ್ಣ ತೆಗಿಯೋದ್ರಾಗ ತಂದಿನ ಮಾಟ ಮಾಡಿ ಬಿಡ್ತಾವ ಮೈಯೆಲ್ಲಾ ಕಣ್ಣಾಗಿ ನೋಡು" ತಾಕತ ಮಾಡಿದ್ದ "ಆತಪ್ಪ ನೋಡ್ತೀನಿ" ಅಂದಿದ್ದ "ಏನ್ ನೋಡಿಯೋ, ಒಂದ ಬೀಜಕ ಆರೂವರಿ ಪೈಸ ಬಿದ್ದೈತಿ, ಯಾವನಾರ ಒಂದ ತುಂಡ ತಗೊಂಡಹ್ವಾದ್ನಂದ್ರ ನಿನ್ನ ಹೆಡಮುರಗಿ ಕಟ್ಟೋದು ಗ್ಯಾರಂಟಿ ಮಗನೆ" ಅಂಜಿಕೆ ಹಾಕಿ ಗದ್ದೆ ತಯಾರಿಗ ಹೋಗಿದ್ದ. ತಾಂಡೆದುರ್ಗವನ ಮುಂದಿರೊ ಗುಡಿಸಲು ಹುಡ್ರ ಆಟ ಆಡೊ ಜಾಗ, ಇಡಿ ಊರಿನ ಕುಂಟ, ಕುಲ್ಡ, ಹೆಳವ, ಸಾಲಿಗ ಹೋಗೋವ್ರು, ದನಕಾಯೋವ್ರು, ಕೂಲಿ ಮಾಡೋವ್ರು, ಸಂಬಂಳದ ಆಳುಗಳು ಬೆಲ್ಲಕ ಮುಕ್ಕರ್ರೊ ನೊಣದಂಗೆ ಮುಕ್ಕರಿದ್ರು, ಕಬ್ಬಿನ ರಾಶಿ ಸುತ್ಲು ಒಳ್ಳೆ ಸತ್ತ ದನಕ ಮುಕ್ಕರೊ ಹದ್ದಿನಹಂಗೆ ಕಲ್ಲ ಮೇಲೆ ನೆಲದ ಮೇಲೆ ದುರ್ಗವ್ವನ ಗುಡಿ ಕಟ್ಟಿಗ ಒಂದಿಷ್ಟು ಮಂದಿ, ಗಾರಿಕಟ್ಟಿ ಮೇಲೆ ಗುದ್ದವ್ವನ ಗುಡಿತಾವ ಒಂದಿಷ್ಟು ಹುಡ್ರು, ಸೇದೊ ಬಾವಿ ಕಟ್ಟಿ ಹತ್ಕೊಂಡ ಕುಂತೋರು ಒಂದ ತುಂಡ ಕಬ್ಬು ಸಿಕ್ಕರೆ ಅಂತ ವಿಚಾರ ಮಾಡ್ತಿದ್ರು. ಮ್ಯಾಗಳೋಣಿ ಚಿಂಗ, ಹಿಂದ್ಲೂರ ಬಾಣು, ಕಣದ ಮನಿ ಸಂದೂ, ಮುಂದಿನ ಮನಿ ಕೊಲಾರಿ, ಕುಂಟ ಸಿಯಾಳು, ಸೊಟ್ಟ ಯಂಕೇಶಿ, ಡೆಬರನ ಮಗಳು ಬರ್ಜಿ ಬೂದುಗನ ಜೊತಿಗಿನ ತಮ್ಮ ಹಳಿ ಸ್ನೇಹದ ದಿನಗಳನ್ನು ನೆನಪ ಮಾಡಿಕೊಡ್ತಾ ಇದ್ರು. ಗುಡಿಸಲೊಳಗಿಂದ ಬುತ್ತಿ ಕಟ್ಕೊಂಡು ಹೊರಗ ಬಂದ ಪತ್ರೇಶಿ, "ಲೇ... ಹೊಕ್ಕಿರಿಲ್ರೋ ನಿಮ್ಮವ್ವನ ಆರುವರಿ ಪೈಸಕ್ಕೊಂದ ಬೀಜ ಬಿದ್ದಾವ ನಮಗ" ಗದರಿಸಿದ. ಪ್ರತ್ಯೇಶಿ ಸಿಟ್ಟ ನೋಡಿದ್ದ ಹುಡ್ರೆಲ್ಲಾ ದಿಕ್ಕಾಪಾಲಾದ್ರು. ಕುಂಟಸಿಯಾಳುಗ ಎದ್ದೆಳಾಕ ಆಗದೆ ಅವನ ಪಕ್ಕದಾಗ ಕುಂತಿದ್ದ ಸೊಟ್ಟು ಯಂಕೇಶಿ ಮ್ಯಾಲ ಅಂಗಾತ ಬಿದ್ದ. ಅಡಗಿರೊ ಯಂಕೇಶಿ ಮಾತಾಡಾಕ ಆಗದೆ, "ಹೂಂ ಹೂಂ ಎಳಲೇ ಕುಂಟ ಅಂತ ಪಕ್ಕಿ ಪಕ್ಕಿಗೆ ತಿವಿಯತೊಡಗಿದ. ಆ

ಪುಗಸಟ್ಟೆ ಮನರಂಜನೆ ನೋಡಿದ ಹುಡ್ರೆಲ್ಲಾ, ಓ... ಅಂತ ಚಪ್ಪಾಳೆ ತಟ್ಟಿ ನಗತೊಡಗಿದ್ರು. ಕುಂಟಗ ಅವಮಾನ ಆತು. "ಥು ದನಕಾಯೊ ಸೂಳಿ ಮಕ್ಕಳ್ರ" ಬೋಯ್ಯುತ್ತ ಬೂದುಗನ ಹತ್ರ ಬಂಥವನೆ "ಲೇ ಬೂದುಗ ಯಾವನಾರ ಒಂದಗಣ್ಣು ತಗೊಂಡ್ರ ಎಕ್ಕಡದಿಂದ್ಲೆ ಹೊಡದ ಬಿಡು ಒಂದ ಕುರಿ ಕಡದ್ರೆನಾಗಂಗಿಲ್ಲ" ಅಂದ. ಸಲಕಿ ತರಾಕಂತ ಊರಾಗ ಹೋಗಿದ್ದ ಪ್ರತ್ರೇಶಿ ಗುಡಿಸಲ ಕಡೀಗ ಬಂದು "ಲೇ ಸರಿಗ ಕಾಯಲೇ, ದಾನ ಮಾಡಿ ಬಿಟ್ಟಿಯಾ ಮತ್ತ ಹುಷಾರು, ಹೋದವನೆ ನಿಮ್ಮವ್ವನ ಕಳಸ್ತೀನಿ" ಅಂದು ಗದ್ದಿ ಕಡೀಗ ಹೊಂಟ "ಹೂಂ ಯಪ್ಪ" ಅಂದು ಮೂಗಿನೊಳಗ ಉಸಿರಾಡಾಕು ಪುರಸತ್ತಿಲ್ದಂಗ ತುಂಬಿಕೊಂಡಿದ್ದ ಸಿಂಬಳಾನ ಜೋರಾಗ ಒಳಗ ಎಳ್ಕೊಂಡ ಅದು ಸಿದಾ ಗಂಟಲಿಗ ಹೋಗಿ ಸಿಕ್ಕೊಂತು, ಕೆಮ್ಮ ತೊಡಗಿದ. ದುರ್ಗವನ ಗುಡಿ ತಡಾದಿದ್ದ ಅವನಪ್ಪ ಅಲ್ಲಿಂದನೇ ಜೋರಾಗಿ ವದರಿ "ಯಾವಾನ ಕೂಟಾಗಾರು ಮಾತಾಡ್ಕೊಂತ ಕುಂತಿಯಲೇ ಮತ್ತ, ದುಬಾರಿ ಬೀಜ, ಮಂಗ್ಯಾನಂಗ ಆಕಡಿ ಈ ಕಡಿ ನೋಡ್ತಾ ಬೀಜ ತುಡಗಮಾಡ್ಸಿ, ಮನಿಯಾಗಿಂದ ದೊಡ್ಡಪಾಟ ತಂದು ಮುಚ್ಚಿ ಮ್ಯಾಲ ಕುಂತ್ಕೊ" ಅಂದ್ಕೊಂತ ಆನಿಕಾಲಗಳಿಗ ಹರಕ ಹವಾಯಿ ಚಪ್ಪಲಿಯೊಳಗಿಂದ ಕಲ್ಲು ಚುಚ್ಚಿದ್ಕ ಔಟ್ಕೊಂತ್ಲೆ ಹೊರಟ.

ಬೂದುಗನಪ್ಪ ಪ್ರತ್ರೇಶಿ, ಕರ್ಗಲ ದಾಟಿ, ದೀಪ ಮಲಿಕಂಬದ ಹಿಂದಿಂದ ಚುಂಗನ ಕಣದಾಟಿರಬೇಕು. ಹುಡ್ರಗುಂಪು ರಾಶಿ ಸುತ್ಲು ಬಂದು ಸೇರ್ಕೊಂಡು ತುಂಡ ಕಬ್ಬಿಗಂತ ನಾನಾನಮೂನಿ ಯೋಜನೆ ಹಾಕ ತೊಡಗಿದ್ರು. ಮೂಲಿ ಮನಿ ಮಲ್ಕ ಹೊಸ ಅಂಗಿ ತೊಟ್ಕೊಂಡು ದಾವಣಗೇರಿ ಹಾಸ್ಟಲೊಳಗ ಹೊಟ್ಟಿ ತುಂಬ ಮುದ್ದಿಹಾಕೋದು ಶನಿವಾರ ಮಂಗಳವಾರ ಮುಂಜಾನೆ ಅನ್ನ ಹಾಕೋದು, ವಾರಕ ಒಂದ ಸರ್ತಿ, ಗೋದಿ ಚಪಾತಿ, ಅಮೇರಿಕಾದ ಹಾಲಿನ ಪೌಡರಿನ ಮೊಸರು ತಿನ್ನೋದ ಕುರಿತು ಇಡಿ ಊರ ಹುಡುಗರ ಮುಂದೆ ದಿಮಾಕಿಂದ ಹೇಳ್ತಿದ್ದ. ಕೊಮಾರುಗ ಸಿಟ್ಟ ಬಂತು "ಇಲ್ಲಿ ಬಿಡ್ಲೆ ಮಾರಾಯ ಅದೇನ ಹಚ್ಕೊಂಡಿಯಾ, ಸೀಮ್ಯಾಗಿಲ್ದು ನೀ ಒಬ್ನೆ ದಾವಣಗೇರಿ ಕಂಡಿಲ್ಲ" ಅಂತ ಅವನ ಬಾಯಿ ಮುಚ್ಚಿಸಿದ. ಮಲ್ಕಾನ ಮಾವನ ಮಗಳು ಬರ್ಜಿ ಅಲ್ಲೆ ಇದ್ದಿದ್ಕ ಅವಮಾನ ಆದಂಗಾಗಿ "ನಾ ನನ್ನಪಾಡಿಗ ಅಂತಿದ್ರ ಇರ್ವಪ್ಪರ ಹಡಾ, ಇರ್ವೀಗೇನ ಅಕ್ಕೈತೊ" ಅನ್ಕೊಂತ ತನ್ನ ಹೊಸ ಚಣ್ಣ ಹೊಲಸಾದಿತಂತ ಸಾಲಿಮೂಲಿಯೊಳಗಿಂದ ಕಲ್ಲು ತಂದು ಮುಕಳಿ ಅಡಗಿಟ್ಕೊಂಡ ಕುಂತ. ಎಲ್ಲಾ ಹುಡ್ರು ಒಂದೊಂದ ಕಲ್ಲ ತಂದು ತಾವು ಕಬ್ಬಿನ ಬೀಜದ ರಾಶಿ ಪಕ್ಕ ಕುಂತ್ರು. ಬೂದುಗ ರಾಶಿಯೊಳಗಿಂದ ಒಂದ ದೊಡ್ಡ ತುಂಡು ಕಬ್ಬ ಎಳ್ಕೊಂಡವನೆ ಸಿಪ್ಪೆ ಸುಲಿದು ತಿನ್ನ ತೊಡಗಿದ, ಹುಡ್ರು ಅವನು ಎಮ್ಮಿ ಮಣಕದಂಗೆ ಬಾಯಿ ಆಡ್ಸಿ ರಸ ನುಂಗೋದನ್ನೇ ನೋಡತೊಡಗಿದ್ರು. ಕುಂಟ, ವಾರದ ಹಿಂದೆ ಅವರೂರಿಗ ಬಂದಿದ್ದ ಯಾಸಗಾರ್ರು ಹೇಳಿದ ಹನ್ಮಂತನ ಹಾಡನ್ನ ಹಾಡಿ ಹನ್ಮಂತನ ಹಂಗೆ ಲಂಕೆಗೆ ಜಿಗಯಾಕ ಹೋಗಿ ಕುಂಟಕಾಲು ಮೇಲ ಮಾಂಡ್ಕೊಂಡು ಮತ್ತೊಮ್ಮೆ ಬಿದ್ದ, ಹುಡ್ರು ಮತ್ತೊಮ್ಮೆ ಜೋರಾಗಿ ನಕ್ಕರು ಬೂದುಗ ಒಂದ ಚೀಪ ಸಹ ಕುಂಟನ ಕಡೀಗ ಬಿಸಾಡಲಿಲ್ಲಾ ಬಾಲ ಮುದರಿಕೊಂಡು ಗಾರಿಕಟ್ಟಿಗ ಅಂಡೂರಿದ. ಹುಡ್ರ ನಡವೆ ಕುಂತಿದ್ದ ಕೊಲಾಕಿ, ಕಿವಿಯಾಗ ಬಂದಿದ್ದ ನೀರನ್ನ ಒಂದ ಕಡ್ಡಿಯಿಂದ ಹೊರಗ ತಗದು ಬಿಸಾಡಿದ. ಅವನ ಪಕ್ಕ ಕುಂತಿದ್ದ

ಹುಡ್ರು "ಛೀ, ನಾ ಅದೇನ ನಾರಾಕ ಹತ್ಯತಿ ಅಂದ್ಕೊಂಡಿದ್ದೆ ಇವ್ನವ್ವ ಇವನ ಕಿವಿ ಸೋರಾಕ ಹತ್ತೈತ್ರಲೇ, ಲೇ ಬೂದುಗ ಓಡ್ಸೋ" ಅಂತ ಒಂದು ದಿನದ ನಾಯಕನಾಗಿರೊ ಬೂದುಗನಿಗೆ ಹೇಳಿದರು. "ಲೇ ಕಿವಿಸೊರ್ಕ ಹೊಕ್ಕಿ ಇಲ್ಲ, ಹೋಗಲೇ, ಲೇ ಕುಂಟ ಒಂದು ಕೋಲು ತಾರಲೇ ಹಂಗೆ ಹೋಗೋದಿಲ್ಲ" ಗದರಿಸಿದ "ಥು ಏನ್ ಕೆಟ್ಟವಾಸನಿ ಓಡಲೇ ನಿನ್ನವ್ವನ ಕಿವಿ ತೊಕ್ಕೊ ಹೋಗು" ಹಡಬ ಹತ್ತಿದ ನಾಯಿ ಓಡ್ಸೊ ಹಂಗ ಓಡ್ಸಾಕ ನೋಡಿದ. ಕೊಲಾಕಿಗ ಸಿಟ್ಟು ಬಂತು" ಹಂಗಾರ ನೀ ಬರ್ತಿ ಏನಲೇ ನಮ್ಮ ಎರಿ ಹೊಲದ ಶೇಂಗಾ ರಾಶಿ ಮಾಡೊ ಮುಂದ" ಅಂದ. "ಹುಂ, ನಿಂದೊಬ್ಬನ್ದೆ ಎರಿ ಹೊಲ ಇರೋದು. ಮಗನ ನಾವು ವಕೀಲರ ಎರಿ ಹೊಲ ತಂಗೊಂತೀವಿ ಹೊಗಲೆ" ಅವನಪ್ಪ ಅವ್ವ ಯಾವಾಗ್ಲೋ ಮಾತಾಡಿಕೊಂಡಿದ್ದನ್ನ ಹೇಳಿದ. ಕೊಲಾಕಿ ಬಾಯಿಯೊಳಗೆ ಬೊಯ್ಯುತ್ತ ಹೊಂಟ ಬಿಟ್ಟ. ಬೂದುಗನ ಕ್ಲಾಸಮೇಟ್ ಸಣ್ಣೀರ, "ಹೂಂ, ಏನ್ಲೆ ಬೂದಗ, ಸಾಲಿಗ ಬಂದಿಲ್ಲಂತ ಚೆನ್ನಪ್ಪ ಮೇಷ್ಟ್ರು ಕೇಳಾಕ ಹತ್ತಿದ್ರು. ಬಳ್ಳಿ ಬರ್ಕೊಂಡ ಬರಾಕ ಹೇಳ್ಯಾರ, ಯಾರ ಬರೆಯೋದಿಲ್ಲ ಮುಕಳಾಗಿಂದ ಕೈ ಹಾಕ್ಸಿ ಕಿವಿಹಿಡಸ್ತಾರಂತ, ನಾನು ಬರದ ಕೊಡ್ತಿನಿ ಒಂದ ತುಂಡ ಬಿಸಾಡಲೇ" ಮಸ್ಕಾ ಹೊಡದ "ಬ್ಯಾಡಪ್ಪ, ನಮ್ಮಪ್ಪ ಹೊಡಿತಾನ" ಬೂದುಗ ಸಾಗಹಾಕಾಕ ನೋಡ್ದ. "ಹಂಗಾರ ಮನ್ನಿನ್ಯಾಗ ನಾಕ ವಡಿಕೊಟ್ಟಿದ್ನಲ್ಲಾ ಅದು ಕೊಟ್ಟಬಿಡು" ಅಂತ ರಾಗ ಎಳದ ಸಣ್ಣೀರ. ಅವನ ಮಾತ ಕೇಳದವನಂಗೆ ಹಿಂದಕ ತಿರುಗಿ" ಯಾವನೊ ಅವನು ರಾಶಿ ಕಡೀಗ ಬರಾಕ ಹತ್ತರೋನು" ಅಂದವನೇ ಸಣೀರಗ ನೋಡಾಕ ಹೋಗ್ಲಿಲ್ಲಾ. "ಲೇ ಹುಡುಗ ನನ್ನ ವಡಿ ತಿಂದಿದ್ದು" ಮತ್ತೊಂದ ಸಲ ನೆನಪ ಮಾಡಿದ "ಹೊಗಲೇ ಮಾರಾಯ ದುಬಾರಿ ಬೀಜ ಇವು ನಿಂದೇನ ಹಚ್ಚಿ, ನೀ ಕೊಟ್ಟಿದ್ದು ಒಂದ ಪೈಸಾನು ಆಗೋದಿಲ್ಲಾ ಅಂತಾದ್ರಾಗ ಒಂದ ಕಬ್ಬು ಕೊಟ್ಟ ನಾ ಏನ ಮಾಡ್ಲಿ" ಮುಲಾಜಿಲ್ಲದೆ ಕೊಡವಿದ "ನಾಳೆ ಮತ್ತ ಕೊಡ್ತೀನಂತ" ಮತ್ತೊಂದ ಯತ್ನ ಮಾಡ್ದ ಸಣ್ಣೀರ "ನಾ ಕೊಡೊದಿಲ್ಲಾ ನಮ್ಮಪ್ಪಗೇನಾರ ತಿಳಿತಂದ್ರ ಚರ್ಮ ಸುಲಿತಾನ" ಸುಮ್ಮನಾದ "ನಿನ್ನ ಕಬ್ಬಬ್ಯಾಡ ನನ್ನ ವಡಿಕೊಡು" ಸಣ್ಣೀರ ಬಿಡದಂಗ ಬೆನ್ನಹತ್ತಿದ. "ನಾಳೆ ನಮ್ಮವ್ವತಾವ ಒಂದಪಾವರಾಗಿ ಇಸ್ಕೊಂಡು ವಡಿ ತಂದು ನಿನ್ನ ಮುಸಡಿ ಮ್ಯಾಲ ಬಿಸಾಡ್ತಿನಿ ಹೋಗು" ಅಂದ. ಸಣ್ಣೀರನ ಪಿತ್ತ ನೆತ್ತಿಗೇರ್ತು. "ಅವತ್ಯಾಕ ಆಸಿತೋರ್ಸ ಬೇಕಲೆ ನಿನ್ನವ್ವನ" ಅಂದ್ಕೊಂತಗಾರಿ ಕಟ್ಟಿ ಕಡೀಗ ಹ್ವಾದ. ಕುಂಟಗ ಇದ್ದಕ್ಕಿದಂಗೆ ಕಬ್ಬು ತಿನ್ನೊ ಆಶೆಯಾಗಿ, ಮೆಲ್ಲಗ ಅವನ ಮುಂದ ಹ್ವಾದವನೆ ದೈನ್ಯದಿಂದ ಅವನ ಕಡೀಗ ನೋಡ್ದ, "ಯಾಕ್ಲೆ ಕೈಯಾನ ಮುರಕರೊಟ್ಟಿಗ ಬಾಲ ಅಲ್ಲಾಡ್ಸೋ ನಾಯಿ ಹಂಗ ನಿಂತಿ" ಅಂದ ಬೂದುಗ, 'ಅಣ್ಣ' ಅಂತೇಳಿಬಂದ ಬೆಳ್ಳ ತೋರ್ಸಿ ಸನ್ನಿ ಮಾಡಿದ, "ಹೋಗಲೇ ಕುಂಟನನ ಮಗನೆ ಹೋಗತ್ಲಾಗ, ನನ್ನ ದೋಸ್ತು ಸಣ್ಣೀರಗ ಕೊಟ್ಟಿಲ್ಲ ನಾನು ಬಂದ ಬಿಟ್ಟೆ ಕಾಲ ಸೆಟಸ್ಕೊಂಡು" ತಿವದಂಗ ಹೇಳಿದ. ಕುಂಟಗ ತಡಿಯಾಕ ಆಗಲಿಲ್ಲಾ, "ಇವ್ನವ್ವನ ಒಂದ ತುಂಡ ಕಬ್ಬು ಕೊಡ್ಲಿಲ್ಲಾ ಮ್ಯಾಲಿಂದ ಕುಂಟ ಅಂತ ಬೋಯ್ತಿತಾನ", ಅಂದವನೆ ಅವನ ಹೆಗಲ ಮೇಲೆ ಕೈ ಇಟ್ಕೊಂಡ ನಿಲ್ಲಾಕ ಬಂದ ಕೊಮಾರಿ ಕೈ ತಗದ ಬಿಸಾಡಿ "ಕೈ ತಗಿಯೋ ಹಡ್ಸಿ ಮಗನೆ" ಗದರಿಸುತ್ತಲೆ ದುರ್ಗವನ ಗುಡಿ ಹಿಂದ ಹೊಂಟ.

ಡೆಬರನ ಮಗಳು ಬರ್ಜಿ ಅಷ್ಟೊತ್ತಿಂದ್ಲು ನಡಿ ತಿರೋದನ್ನ ನೋಡ್ತಾ ಸುಮ್ಮನೆ ಕುಂತಾಕಿ

ಒಂದ ಸಲ ಬೂದುಗನ ಕಡೀಗ ನೋಡಿ ನಕ್ಕಳು. ಬೂದುಗ ನಗಲಿಲ್ಲಾ "ಹೂಂ ನಾ ಹೊಗ್ಲೇನೊ ಮನಿಗ" ದಿಮಾಕಿಂದಲೇ ಹೇಳಿದ್ಲು "ಹೂಂ ಹೋಗು" ಅಂದ "ಬೂದುಗ ಅವತ್ತು ನಿಮ್ಮ ಪಟ್ಟಿ ಹೊಲ್ದ ಹತ್ರ ಎತ್ತ ಮೇಯಿಸಬೇಕಾರ, ತಗರಿ ಸಾಲು" ತಮ್ಮಿಬ್ಬರ ನಡುವೆ ನಡೆದ ರಹಸ್ಯ ಘಟನೆಯ ನೆನಪ ಮಾಡಿಕೊಡತೊಡಗಿದಳು. ಬೂದುಗ ನೆನಪಾದ್ರು, ನೆನಪಿಗ ಬರದೋನ ಹಂಗ ನಾಟ್ಕ ಮಾಡಿದ. "ನೆನಪಾತ' ಕೇಳಿದ್ಲು, ತಲೆ ಅಲ್ಲಾಡಿಸಿದ "ನಿನಗ ಈಗ ಹೆಂಗ ನೆನಪಾದೀತು, ಅವತ್ತು ನನ್ನ ಹಿಂದಿಂದ ಒಳ್ಳೆ ಬೆದಿಗ ಬಂದ ನಾಯಿ ಹಂಗ ಸುತ್ತಾಡಿ, ನಾ ಯಾಮ್ಯಾರಿಗ ಹೊಕ್ಕೀನೊ ಆ ಮ್ಯಾರಿಗ ಎತ್ತಗಳನ್ನ ಒಡಿಸಿಕೊಂಡ ಬಂದಿದ್ದು ಮರತಹೋತ" ಸಿಟ್ಟಿನಿಂದಲೆ ಕೂಗಿದ್ಲು. ಗಾರಿ ಕಟ್ಟಿ ಮೇಲಿದ್ದ ಸಣ್ಣೀರ "ಏನ್ಲೆ ಬೂದುಗ" ಅಂದ "ಏನೊ ಇಲ್ಲ ಬಿಡ್ಲೆ"ಅಂತ ವಿಷಯ ಬೆಳಸಾಕ ಹೋಗಲಿಲ್ಲಾ ಇನ್ನ ಇಕಿ ಇಲ್ಲೆ ಇದ್ರ ಮರ್ಯಾದಿ ತಗಾತಾಳ ಅಂದವನೆ "ಓ, ಅದಾ ನೆನಪಾತು" ಅಂದವನೆ ಸುಮ್ಮನಾದ "ಹಂಗಾರ ಬಿಸಾಕ ಒಂದ ತುಂಡು" ಅಂದ್ಲು.

ಒಂದು ತುಂಡ ಬಿಸಾಡಿದ್ರ, ಇವ್ರೆಲ್ಲಾ ಮುಕ್ಕರ್ತಾರ ಅಂದವನೆ, "ಬರ್ಜಿ ನೀ ಈಗ ಹೋಗು ಆ ಮ್ಯಾಲ ಬಾ" ಅಂತ ಅಕಿ ಕಿವಿಯಾಗ ಹೇಳಿದ. ಅಕಿ ದುರ್ಗವನ ಗುಡಿ ಹಿಂದ ಹೋಗಿ ನಿಂತ್ಲು ಅಷ್ಟೊತ್ತಿಗಾಗ್ಲೆ ಬೂದುಗಗ ಒಂದ ಯೋಚ್ನೆ ಬಂತು, ಒಂದ ತುಂಡ ತಕ್ಕೊಂಡವನೆ ಹರಕ ಚಣ್ಣದೊಳಗ ಮುಚ್ಕೊಂಡು ಓಡಿ ಹೋದ. "ಬರ್ಜಿ ಇಕ", ಅಂತ ಬಿಸಾಡಿ ವಾಪಸಾದ, ಬರ್ಜಿ ತುಂಡ ಕಬ್ಬು ಸಿಕ್ಕ ಖುಷಿಯೊಳಗ ಬೂದುಗನಿಗ ಏನೊ ಹೇಳಾಕಂತ ವಾಪಸ ಬಂದ್ಲು "ಎಯ್, ನಿನ್ನ ಲಂಗದಾಗ ಮುಚ್ಕೊ" ಅಂದ. ತುಂಡನ್ನ ಲಂಗದೊಳಗ ಮುಚ್ಕೊಂಡು, ಅವನ ಅತ್ರ ಬಂದು "ಬೈಗಸರಿ ಕೊಡಿಸರದ ಕಡೀಗ ಬಾ" ಅಂದಾಕಿನೆ, ಮನಿಗ ಓಡಿದ್ಲು. ಅದನ್ನೆ ಕಾಯ್ಕೊಂತಿದ್ದ ಕುಂಟ ಇದ್ದಕಿದ್ದಂಗೆ ಕುಂಟ್ಕೊಂತ ಪ್ರತ್ಯಕ್ಷನಾದ "ನಿಮ್ಮವ್ವಗ ಹೇಳ್ತೀನಿ ತಡಿ, ಬರ್ಜಿಗ ಯಾಕ ಕಬ್ಬು ಕೊಟ್ಟೆ" ಅಂದ, "ಹೂಂ ಹೇಳಹೋಗು ನಮ್ಮವ್ವನನಗೇನು ಮಾಡೊದಿಲ್ಲ" ಅಂತ ಅಂಜಿಕಿ ಇಲ್ದೊರಂಗ ಹೇಳಿದ ಬೂದುಗ "ಹುಡುಗಿಗಾದ್ರ ಕೊಡ್ತಿ, ನಮಗ ಕೊಡೊದಿಲ್ಲ ಅಲಾ" ಸಣೀರ ರಾಗ ಎಳ್ಕೊಂತ ಎದ್ದು ಬಂದ. ನಿಮ್ಮದೊಳ್ಳೆಕಾಟ ಆತ್ರಲೇ, ಲೇ ಕುಂಟ ನೀ ಒಂದ ಗಣ್ಣು, ಸಣ್ಣೀರಗ ಒಂದ ಗಣ್ಣಕೊಡು ತಗೊ ಅಂತ ತುಂಡು ಬಿಸಾಡಿದ. ದುರ್ಗವನ ಕಟ್ಟಿ, ಬಾವಿಕಟ್ಟಿ ಕಡಿಗ ಕುಂತು ಹರಟೆ ಹೊಡಿತಿದ್ದೋರಿಗ ಕೊಟ್ಟದ್ದು ಗೊತ್ತಾಗಲಿಲ್ಲಾ, ಕುಂಟ-ಸಣ್ಣೀರ ತಗೊಂಡು ಸಾಲಿ ಕಡೀಗ ಒಡಿದ್ರು.

ಮದ್ಯಾನ ಸಾಲಿ ಕೂಡ್ತು. ಒಂದಿಷ್ಟು ಹುಡ್ರು ಓಡಿ ಹೊಂಟ್ರು. ಮತ್ತೊಂದಿಷ್ಟ ಮಂದಿ,; "ಲೇ ಚೆನ್ನಪ್ಪ ಮೇಷ್ಟ್ರು ಇಲ್ಲ ಬಿಡ್ರಲೇ ಯಾಕ ಹೆದರಬೇಕು" ಅಂತ ಕುಂತಲ್ಲಿಂದ ಮ್ಯಾಲೇಳಾಕ ತಯಾರಿರಲಿಲ್ಲಾ ಒಸ ಹುಡ್ರು, ತಿನ್ನೋರ ಬಾಯಿ ನೋಡಿದ್ರ ಏನ ಪ್ರಯೋಜನ ನಡಿರಲೇ, ಅಂದವರೆ ಕೆರಿ ಏರಿಕಡೀಗ ಆಟಕ ಓಡಿದ್ರು. ಕೆರಿ ಯೊಳಗ ಬಲಿಯನ್ನ ಹಾಕಿ ಮೀನ ಹಿಡಿಯಾಕ ಬಂದಿದ್ದ ಔಟ ಬಿಲಾಣಿನ ಮಗ ಬಸಣ್ಣೆ ಬಲೆ ಬಿಟ್ಟೆರೋ ಅವರಪ್ಪಗ ಬುತ್ತಿ ತಗೊಂಡ ಹೊಂಟೋನು ಕಬ್ಬಿನರಾಶಿ ನೋಡಿದವನೆ ಗಕ್ಕಂತ ನಿಂತ. ಸ್ವಲ್ಪ ಹೊತ್ತು ಸುಮ್ಮನೆ ನಿಂತ ಇಡಿ ವಾತಾವರಣ ತಿಳ್ಕೊಂಡ ಬೂದುಗ ಬೆರಕಿಅದಾನ ಅಂದವನೆ ಹತ್ರ ಬಂದು "ಲೇ ಬೂದುಗ

ಒಂದ ಔಲಮಟ್ಟಿಗ ಎಷ್ಟು ತುಂಡ ಕೊಡ್ತಿಯಲೆ" ಆಶಿ ತೋರ್ಸಿದ "ಔಲ ತಂಬಾರಲೆ ನೋಡೋಣ" ಅಂದ. ಬಿದ್ದ ಬಕರಾ ಅಂದವನೆ " ಈಗ ಹೊಂಟೇನಿ ಹಿಂದಗಡಿಸ್ಸೇರಿ ಕೊಡ್ತಿನಿ ಎಷ್ಟೊಂತ ಮಾತಾಡಿಕೊಡು" ಆ ಮ್ಯಾಲ ಹಳ್ಳ ಹಿಡ್ಸಿದ್ರಾತು ಅಂದ್ಕೊಂಡಿದ್ದ. ಬೂದುಗ ಅವನಿಗಿಂತ ಬುದ್ಧಿವಂತ "ಮಗನ ನಾ ಏನ ಕಿವಿಯಾಗ ಹೂ ಇಟ್ಕೊಂಡೀನಿ ಅಂತ ತಿಳಿದಿ ಏನು ನಮ್ಮಪ್ಪ ಎಲಬ ಮುರದಾನು ಸುದ್ದಿ ತಿಳಿದ್ರ ನಿನ್ನ ಔಲುಬ್ಯಾಡ ನೀನು ಬ್ಯಾಡ ನಡಿ" ಖಂಡ ತುಂಡಾಗಿ ಮಾರಿಮ್ಯಾಲ ಹೊಡದೋಣ ಹಂಗೆ ಅಂದ ಬಸಣ್ಣಿ ಮತ್ತೊಂದ ಆಶಿ ತೋರ್ಸಿದ "ಲೇ ಬೂದುಗ ಹೋದವಾರ ದಾವಣಗೇರಿಯಿಂದ ತಂದಿರೊ ಈ ಬೂಟುಗಳಿಗ ಎಷ್ಟು ತುಂಡ ಕೊಡ್ತಿ" ಕೇಳಿದ.

ಅವನವ್ವ ಮುಂಜಾನಿ ಹೇಳಿದ ಮಾತು ನೆನಪಾತಾ " ಬ್ಯಿಯಿಗಸರಿಗ ಗಡಾನ ಕೆಲ್ಸ ಮುಗದ್ರ ದಂಡೂರಿಗಾರ ಹೋಗಿ ಬರ್ತಿನಿ ಬೂದುಗನ್ನ ಕರ್‍ಕೊಂಡು, ನಮ್ಮ ಹಿರಿಯಣ್ಣನ ಮೈಯಾಗ ಪಾಡಿಲ್ಲಂತ" ಬೂದುಗ ಹುರುಪಾದ ಬಸಣ್ಣಿ ಮುಂದ ತೋರಿಸಿದ್ರ ಮಗ ಕಬ್ಬು ಹೆಚ್ಚಾಗಿ ಕೇಳ್ತಾನಂತ "ಹೂಂ ಎಷ್ಟು ಕೊಡಾಕ ಹೇಳಲೆ" ಗಂಭೀರವಾಗೆ ಅಂದ. "ನಾಕ ತುಂಡ" ಅಂದ ಬಸಣ್ಣಿ "ನಾಕ ತುಂಡ ಬಹಳ ಆದ್ವು" ಅಂದವನೆ ಯೋಚನೆ ಮಾಡ್ದ, ಕಾಪು ಮಾವನ ಮಗಳು ಪಿಲಾಣಿಗ ತೋರಿಸಬೇಕು. ನಿಮ್ಮೂರಾಗ ಯಾಂವಾನಾರ ಹಾಕ್ಯಾನೇನು ಬೂಟು ಅಂತ ಕೇಳಬೇಕು ಹೆಂಗಾನ ಮಾಡಿ, ಇವನ್ನ ಹೊಡ್ಕೊಳ್ಳಾಕ ಬೇಕು ಅಂದ್ಕೊಂಡು "ಎಲ್ಡ ತುಂಡ ಕೊಡ್ತೀನಿನೋಡಪ್ಪ" ಅಂತ ಬಿಗುವಾಗೆ ಹೇಳಿದ. "ಹೋಗ್ಲೆ, ಅಲ್ಲೇನ ಬಿಸಾಡದ್ದನ ತಂದೀನಿ ಅಂತ ತಿಳದಿ ಮನ್ನಿನ್ಯಾಗ ನಮ್ಮಪ್ಪನ ಕುಟಾಗ ಮೀನ ಮಾರಾಕ ಹೋಗಿದ್ನಲ್ಲಾ ಅವಾಗ ದುಡ್ಡ ಕೊಟ್ಟು ಸೆಕೆಂಡ್ ಹ್ಯಾಂಡ್ ತಂದೀನಿ", ಅನ್ಕೊಂತ ಮುಂದ ಹ್ವಾದ. ಸುಡು ಬಿಸಲಾಗ ಹತ್ತ ಮೈಲಿ ನಡಿಯೋದು ಕೆಂಧೂಳಾಗ ಕಾಲ ಭಗ ಭಗ ಅಂತಾವ ಹೋದ ಸರ್ತಿ ಹೋದಾಗ ಅವ್ವ ಬತ್ತಿತಪ್ಲ ಕಾಲಿಗ ಕಟ್ಟಿದ್ಲು ಒಂದ ತುಂಡ ಹೆಚ್ಚೇನ ಕಮ್ಮಿ ಏನು ತಗೊಂಡ್ರಾತಂತ. "ಬಾರ್‍ಲೆ, ಹೊಂಟೆ ಬಿಟ್ಟೆಯಲ್ಲ", ಕರದ "ನೀ ಕೇಳಿದಷ್ಟಕ್ಕೆ ನಾಕೊಡೋದಿಲ್ಲ" ಗಟ್ಟಿಯಾದ ಬಸಣ್ಣಿ "ಸರಿ ಮೂರ ತುಂಡಿಗ ಕೊಂಡಗಿದ್ರ ಕೊಡು ಇಲ್ಲಕ್ರ ನಡಿ" ಅಂದ. "ತತ್ತಾರಲೇ ಮಾರಾಯ ಹಿಡ್ಕೊಂಡಿದ್ದೆ ಹಿಡ್ಕೊಂತಿರಿ" ಅಂದವನೆ ಮೂರು ತುಂಡು ಅವನ ಕಡೀಗ ಬಿಸಾಡಿದ. ಬಸಣ್ಣಿ ಗಬಕಂತ ಎತ್ಕೊಂಡವನೆ ಕಾಲಿನ ಬೂಟ್ಸು ಕಳಚಿ ಬೂದುಗನಿಗೆ ಕೊಟ್ಟ ಬುತ್ತಿ ಗಂಟ ಎತಗೊಂಡು ಗುದ್ದವ್ವನ ಗುಡಿದಾಟಿದವನೆ "ಹ್ವಾದ್ವು ಬಿಡು, ಯಾವಾನೋ ಬಿಟ್ಟ ಹೋಗಿದ್ದನ್ನ ಮೆಟ್ಕೊಂಡ ಬಂದಿದ್ದೆ ಪುಕ್ಸಟಿ ಬಂದಿದ್ವು ಮೂರ ತುಂಡ ಕಬ್ಬಾದ್ರು ಸಿಗ್ತು" ಅನ್ಕೊಂತ ಕಬ್ಬು ಸುಲದು ತಿನ್ಕೊಂತ ಹೊಂಟ.

ಬೂದುಗ ಬೂಟಗಳನ್ನ ಕೈಯಾಗ ಹಿಡದು ನೋಡಿದ "ಪಾಡದವ ಬಿಡು, ಒಂದ ಮೂಲಿ ಹರದೈತಿ ಆದ್ರ ಏನಾಗೋದಿಲ್ಲ" ಕೆಳಗ ಬಿಸಾಕಿ ಕಾಲಗ ಹಾಕ್ಕೊಂದ ನೋಡಿದ. ಸುತ್ತ ತಿರುಗಿ ನೋಡಿದ ಕುಂಟ ಬರಾಕ ಹತ್ತಿದ್ದ" ಹೂಂ, ಹೆಂಗದಾವಪ್ಪ ಕುಂಟಣ್ಣಾ" ದಿಮಾಕಿಲೇ ಕೇಳಿದ. ಒಂದ ಬಾಯಿ ಕಬ್ಬು ತಿನ್ನಾಕ ಸಿಕ್ಕೀತು ಅಂತ "ಎಯ್ ಭಾರಿಪಾಡ ಅದಾವ ಬಿಡು" ಅಂತ ಮರಹತ್ತಿಸಿದ. ಬೂದುಗನೇನು ಒಂದು ತುಂಡು ಕೊಡಲಿಲ್ಲಾ ಕುಂಟನಿಗ ತಡಿಯಾಕ ಆಗಲಿಲ್ಲಾ, ಹಿಂಗ ಕೇಳಿದ್ರ ಕೋಡಾಂವ ಅಲ್ಲ ಅಂದವನೆ ಯಣ್ಣಾ "ದಂಡೂರ ನಿಮ್ಮ ಸಾನಿ ಊರಿಗ ಇವತ್ತೆ ಹೊಂಟಿ ಏನು? ಹಂಗಾರ ನಿಮ್ಮ ಮಾವನ ಮಗಳ ಮುಂದ

ಮಿಂಚುತಿ ಬಿಡು" ಸುಮ್ಮನಾದ. "ಹೌದಲೆ ಅದಕ್ಕೆ ಅಲ್ಲೇನ ತಗೊಂಡಿರೋದು" ಅಂತೇಳಿ ತಗೊಂಡಿರೋದನ್ನ ಸಮರ್ಥಿಸಿಕೊಂಡ. 'ಅಣ್ಣ ಒಂದ ಬಾಯಿನಾರ ಕೊಡ್ತಿಯಾ" ಬಾಯಿ ಬಿಟ್ಟೆ ಕೇಳಿದ ಬೂದುಗ "ಅದಕ್ಕ ಹವಾ ಹೊಡಿಯಾಕ ಹತ್ತಿದ್ದೇ ತಗೋ" ಅಂದವನೆ ಬಂದ ಬಾಯಿಯಿಂದ ಚೀಪು ಸುಲಿದು ಕೊಟ್ಟು ಸಾಗಹಾಕಿದ. ಬೂದುಗನ ಅವ್ವ ತಲಿಮ್ಯಾಲ ಸಗಣಿ ಪುಟ್ಟಿ ಹೊತ್ಕೊಂಡ ಸೀವಾಬಾಯನಗುಡಿ ದಾಟಿ ತಿದ್ದಂಗೆ "ಲೋ, ಬೇವರ್ಸಿ ಯಾವನ್ನೆ ಅವನು" ಕೂಗಿದ್ದೆ ತಡ, ಕುಂಟ ಕಾಲು ಮೀಟ್ಕೊಂತ ಓಡಿದ. ಹುಡ್ರೆಲ್ಲಾ ಎದ್ದೋಡಿದ್ರು. "ಯಾರ್ಯಾರಿಗ ಕಬ್ಬ ಕೊಟ್ಟೆ", ಕೇಳಿದ್ಲು. "ಇಲ್ಲಬೇ ನಾಯಾರಿಗೂ ಕೊಟ್ಟಿಲ್ಲ" ಅಂದ್ಕೊಂತ್ಲೆ ಬೂಟಗಳನ್ನ ಪಾಟಿನ ಕೆಳಗ ತುರುಕಿದ. "ನಾ ಒಳಗ ರೊಟ್ಟಿ ಸುಡ್ತೀನಿ, ಒಂಟಿಕೊಂಬಿನ ಎಮ್ಮಿ ಬಂದ್ರ ಸಾಲಿ ಪಕ್ಕದ ಗೂಟಕ ಮುಗ್ದಾಣ ಹಾಕು. ಕಲ್ಯಾಣಿ ಆಕಳು ಬಂತಂದ್ರ ಗ್ವಾಂದ್ಲಿ ಪಕ್ಕದ ಗೂಟಕ್ಕ ಬಿಗಿ" ಅಂತೇಳಿ ತಲಿಮ್ಯಾಲಿನ ಪುಟ್ಟಿ ಇಳವಿ ಹೊಂಟವಳನ್ನ ತಡದು ಕೂತೂಹಲ ತಡಿಯಾಕ ಆಗದೆ "ಯವ್ವ ಬೇ ನಾಳಿಗ ಮಾವನೂರಿಗ ಹೋಗನಂದಿದ್ದೆ" ರಾಗ ಎಳೆದ. "ಹ್ವಾರೆ ಬಹಳ್ಳೈತಿ, ನಿಮ್ಮ ದೊಡ್ಡಮಾವನ ಮೈಯಾಗ ಪಾಡಿಲ್ಲಂತ, ನೋಡ್ಕೊಂಡಾರ ಬರಾನಂದ್ರ ಆಗವಲ್ದ, ನಾಳಿಗ ಕಬ್ಬ ತುಳದ್ರ ಹೋಗಾನಂತ" ಒಳಗಹ್ವಾದ್ಲು.

ಬೂದಗ ಸಾಲಿಯೊಳಗ ಕೊಟ್ಟಿದ್ದ ಅಂಗಿಚೆಣ್ಣನ ಸರಿಯಾಗಿ ಸವಳ ಮಣ್ಣಿಗ ನೆನಾಹಾಕಿ ಕೆರಿಯಾನ ನೀರಾಗ ತೊಳದ ಒಣಗಿಸಿ ಅವನ ಹಿರಿಯತ್ತಿಗೆ ಪೆಟಾರಿಯೊಳಗ ಮಡಚಿ ಇಟ್ಟಿದ್ದ. ಇದ್ದಕ್ಕಿದಂಗೆ ಅರಿವಿ ನೆಪ್ಪಾತು" ನಾಳಿ ಮುಂಜಾನಿ ಹೊಸ ಅರವಿ ಹಾಕ್ಕೊಂಡ ಬೂಟು ಮೆಟ್ಕೊಂಡು ಹ್ವಾದ್ರ ಅಕಿ ದಂಗಾಗಬೇಕು ಹ್ವಾದ ಸಾರಿ ಹೋಗಿದ್ದಾಗ ಹಾಳ ಓಣಿದಾರಿಯೊಳಗ ಅದೇನ ಮರಳು, ಬೆಂಕಿ ಕೆಂಡದ ಮ್ಯಾಲ ಕಾಲಿಟ್ಟಂಗ ಆಗತಿತ್ತು ಆ ಬುದ್ನಾನ ಹೊಲ ತಡಾಯೊ ಮಟ್ಟಾನು ಅದೇ ಮರಳು ಅವ್ವ ತಾವರಿಕಿ ತಪ್ಲತಗೊಂಡು ಕಾಲಿನ ಪಾದಕ್ಕೆ ಕಟ್ಟಿದ್ಲು. ಹೊದ ಸಲ ಮುಂಗಾರಿನ್ಯಾಗ ಮಳಿ ಬಿದ್ದು, ಅಪ್ಪ ಪಟ್ಟಿ ಹೊಲಕ ಕೆರಿಯಾನ ಕರಿ ಜೇಡಿ ಹೇರಿದ್ದು ನೆನದು ಕಾಲ ಇಡಾನ ಮೆತ್ಕೊಂಡು ಪ್ಯಾಟ್ಯಾನ ಹೆಂಗಸರ ಹಾಕ್ಕೊಳ್ಳೊ ಹೈಹಿಲ್ದ ಎಕ್ಕಡದಂಗ ಕಾಣ್ತಿದ್ದು ಅಂತಾವಾದ್ರ ಪಾಡಾಗತಿತ್ತು" ಎಲ್ಲೋ ಹೋಗಿದ್ದ ಬೂದುಗ "ಹೂಂ ಇಪ್ಪಟ್ಟೇನ ಬಿಡು ಬೂಟ ಅದಾವ, ಅಕೀನ ಕರ್ಕೊಂಡು ಊರ ಮುಂದಿನ ಕಾಡಿಗ ಹೋಗಿ ಕಾರಿಹಣ್ಣು, ಬಾರಿಹಣ್ಣು, ಕವಳಿಹಣ್ಣು, ಹರ್ಕೊಂಡ ಬಂದು ತಿನ್ನ ಬಹುದು" ಗಂಭೀರ ಆಲೋಚನೆಯೊಳಗ ಮುಳುಗಿದ್ದ ಬೂದುಗ, ಸಣ್ಣೀರ ಅವನ ಮುಂದ ನಿಂತು ಮೈಸೂರ ಪಾಕ ಕಡದಿಂದ ಎಚ್ಚರಾದ. "ಬೂದುಗ, ಇವತ್ತ ತಂದಾನ ಹುಸೇನಿ, ಏನ್ ಸಕತ್ ಅದಾವಂದ್ರ ಆಹಾ, ಕಣ್ಣು ಮುಚ್ಚಿ ಸುಖಪಡ್ತಾ ತಿಂತಿರೋದ ನೋಡಿ ಬಾಯಿಯೊಳಗ ಬಂದ ಚೆಂಬಿನಷ್ಟು ಉಗಳನ್ನ ಒಂದ ಸಲ ಗುಳುಂ ಅಂತ ನುಂಗಿದ" ಯಾರು ಇಲ್ಲದಿದ್ರ ಒಂದ ತುಂಡ ಕಬ್ಬ ಕೊಟ್ವಾದ್ರು ಮೈಸೂರ ಪಾಕಿನ ರುಚಿ ನೋಡಬಹುದಿತ್ತಲ್ಲ ಹಳ ಹಳಿಸಿದ ಬೂದಗ. ಬೂದಗನ ಮೇಲಿನ ಸೇಡನ್ನ ತೀರಿಸ್ಕೊಂಡವನೆ ಸೀದಾ ಮನಿಗೆ ಓಡಿದ ಸಣ್ಣೀರ.

ಕೂಲಿ ಆಳ ಗದ್ದಿಗ ಕಳಿಸಿ, ದನಕರ ಬಿಟ್ಟು ಅಂಗಳ ಗುಡಿಸಿ ಮನಿ ಬಿಟ್ಟಾಗ ಹೊತ್ತು ನೆತ್ತಿ ಮ್ಯಾಲ ಬಂದಿತ್ತು. ಮುಂಜಾನಿಂದ ಚಡಪಡಿಸುತ್ತಿದ್ದ ಬೂದುಗ ಇಡಿ ಊರಾಗ ಒಂದ ರೌಂಡ್ ಬೂಟ ಹಾಕ್ಕೊಂಡ ಹೋಗಿ ಬಂದ. ಸಣೀರ, ಕುಂಟ, ಗ[illegible], ಪ್ಪೋಚಿ, ಎಲ್ಲರಿಗೂ

ತಾನು ಊರಿಗ ಹೊಂಟಿರೋದನ್ನ ಹೇಳಿ ಬಂದಾಗ ಎಲ್ಲಾರೂ ಸೇರಿ ಆಡಾನಂತ ಮಾತಕೊಟ್ಟು ಬಂದಿದ್ದ. ಅವನವ್ವ ಇನ್ನೂ ಕೆಲ್ಸ ಮಾಡ್ತಿರೋದ ನೋಡಿ ಬ್ಯಾಸತ್ತು ಮತ್ತೊಂದು ಸಲ ಹೋದ "ಯಾಕ್ಲೆ ಇನ್ನೂ ಹೋಗಿಲ್ಲ" ಕುಂಟ ಕೇಳಿದ್ಕ "ಎಯ್ ನಮ್ಮವ್ವ ಒಂದ ಐತಲ್ಲ, ಆಕಳ ಎಮ್ಮಿ ಹಾಲ ಹಿಂಡಿ ಒಲಿಮ್ಯಾಲಿಟ್ಟು ಕಾಸಾಕ ಹತ್ಯಾಳಲೆ ಮಾರಾಯ, ಅದನ್ನ ಮ್ಯಾಲಿಟ್ಟು ಹೆಪ್ಪ ಹಾಕಿ ಹೋಗಾನಂದಾಳ" ಅಂತ ಅವನ ಅಸಮಾಧಾನ ತೋರ್ಸಿದ.

ಕೆಲ್ಸ ಬಗಸಿ ಮುಗಿಸಿ ಅವನವ್ವ ಹೊಂಟ ನಿಂತಳು, ಬೂದುಗ ಎಲ್ಲೂ ಮೂಲಿಯೊಳಗ ತೂತಾದ, ಮ್ಯಾಲ ಹಿಡಿಯಾಕ ಹಿಡಕೈ ಇಲ್ಲದ ಹೊಗಿ ಹಿಡಿದು ಕರ್ರಗಾಗಿ ಒಂದ ನಮೂನಿವಾಸನಿ ಹೊಡಿತಿರೊ ಗೊಬ್ಬರ ಚೀಲದಿಂದ ಮಾಡಿದ ಪ್ಲಾಸ್ಟಿಕ್ ಬ್ಯಾಗನ್ನ ಮಡಚಿ ಹಿಡ್ಕೊಂಡಿದ್ದ. ತಲಿಯಾಗಿಂದ ಕೈ ಎಣ್ಣಿ ಸೋರಿ ಕಪಾಳಕ್ಕ ಬಂದಿತ್ತು. ಉಸರಾಡಕ ಒಂದ ಸಣಜಾಗ ಬಿಟ್ರ ಎರಡೂ ಮೂಗಿನೊಳಗ ಸಿಂಬಳ ಹಿಕ್ಕಿ ಗಟ್ಟಿತ್ತು. ಅಂವ ಆಗಲೆ ಕೀರನ ಕಣದಾಟಿ ಚೌಡವ್ವನ ಗುಡಿಗ ಬಂದಿದ್ದ ಒಂದು ಸಲ ತಾನು ಹಾಕ್ಕೊಂಡಿದ್ದ ಬೂಟಗಳನ್ನ ನೋಡಿದ. ದನ ಗದಮಿಕೊಂಡ ಹೊಂಟಿದ್ದ. ಲುಕ್ಕ, ಬುದುಗನ್ನ ನೋಡಿ "ಏನ್ಲೇ ಮದವಿಗಂಡಾಗಿ ಎಲ್ಲೊ ಹೊಂಟಿಯಲ್ಲ" ಅಂದ, ಥು, ನಿನಮಂಜಾಳಾಗ "ಎಲ್ಲಿಗಂತ? ಕೇಳಿದೆಯಾ, ಆತ ಬಿಡು" ಒಂದಹೆಜ್ಜೆ ವಾಪಾಸಾದ, ದುಂಡಮ್ಮ ಅವಸರದಿಂದಲೇ ನಡದು ಬಂದ್ಲು, "ನಡಯಲಾ, ಹೊತಾಗತೈತಿ" ಅಂದಾಕಿನೆ ಜೋರಾಗಿ ನಡೆಯತೊಡಿಗಿದ್ಲು, ಬೂದುಗ ದುಂಡಮ್ಮನ ಹಿಂದಿಂದ ಓಡೋನ ಹಂಗ ನಡಿಯತೊಡಗಿದ" ಹೊತ್ತ ಮುಳಗೋದ್ರಾಗ ಮಾವನೂರಿಗ ಹೊಕ್ಕೀವಿ ಬಿಡಬೆ" ಅಂದವನೆ ಹುಲ್ಲು ಇರೋ ಹತ್ರನೇ ನಡಿಯ ತೊಡಗಿದ. ಅವನ ಕಾಲಿನ ಬೂಟುಗಳು ಕಡ್ ಕಡ್ ಅನ್ನೋದನ್ನ ಕೇಳ್ದಾಕಿನ" ಎನ್ಲಾ ಯಾರದೊ ಬೂಟ ಹಾಕ್ಕೊಂಡಿಯಲ್ಲ" ಕೇಳಿದ್ಲು ದುಂಡಮ್ಮ. "ಅದು" ಮಾತು ಗಂಟ್ಲಾಗ ಉಳ್ಕೊಂತು ಅವನವ್ವ ಮತ್ತೊಂದ ಸಾರಿ ಕೇಳಾಕ ಹೋಗಲಿಲ್ಲಾ, ಬಂಡಿ ಅಡ್ಡಾಡಿರೊ ದಾರಿ ನಡಕ್ಕ ನಡಿಯಾಕ ಹೋಗಿ ಮುಗ್ಗರಿಸಿ ಬಿದ್ದ ಬಿಟ್ಟ "ನೋಡನಡಿಯಲೇ ಹಲ್ಲ ಮುರ್ಕೊಂಡಿ" ಗದರಿಸಿದ್ಲು.

ನೆಲ್ಲೂರುನಾಗಲಾಪುರ ದಾಟಿ ಕೊರಚರ ಹಟ್ಟಿಗ ಬರೋದ್ಕು, ಹೆಂಡ ಹೆರ್ಕೊಂಡು ದ್ಯಾಮನ ಕತ್ತಿ ಬರಾಕು ಬರಾಬರಿ ಆತು. ದುಂಡಮ್ಮನ ಬಾಯಾಗ ನೀರ ಬರ ತೊಡಗಿತು. ದ್ಯಾಮನ ಕತ್ತಿ ನಿಲ್ಲಿಸಿದಾಕಿನೆ ಬುಡ್ಡಿ ಚೀಲ ತಗದು ಹನೆಲ್ಡಾಣಿ ಕೊಟ್ಟು ಬೋಣಗಿ ಮಾಡಿ ಬಾಟಲಿತಗೊಂಡು ಬಾಯಿಗ ಬಲಗೈ ಅಡ್ಡ ಹಿಡದಾಕೀನ ಉಸರ ಬಿಡದಂಗ ಗಟ ಗಟ ಸುರ್ಕೊಂಡು "ಹಾಳ ಮನಿಯೋನು ಪೌಡರ್ ಹೆಚ್ಚಗಿ ಹಾಕ್ಯಾನ, ದ್ಯಾಮಣ್ಣ ಇನ್ನೊಂದು ಅರ್ಧಕೊಡು" ಅಂದಾಕೀನ ಎಂಟಾಣಿಕೊಟ್ಲು. ಒಂದುವರಿ ಬಾಟಲ ಹೆಂಡ ಹೊಟ್ಯೆಯೊಳಗ ಬಿದ್ದಿದ್ದೆ ಮಾತಗಳು ತೊದಲತೊಡಗಿದವು. ಯಾಕ ಕುಡಿತಾರ? ಕುಡಿದರ ಏನಾಗತೈತಿ? ಯೋಚನೆ ಮಾಡ್ದ. ಸೀರಿ ಎತ್ತಿ ನಡಕ ಸಿಗಸಿದಾಕೀನ "ನಡಯಲ ಊರ ಇನ್ನೇನ ದೂರ ಇಲ್ಲ". ಅಂದವಳೆ ಹುರುಪಿಂದ ನಡದ್ಲು. ಹಳ್ಳದಪಕ್ಕದ ದೊಡ್ಡ ಆಲದ ಮರ ದಾಟಿರಬೇಕು ಅವನ ಚಿಗವ್ವ ಗಿಂಡಪ್ಪ", ಯಕ್ಕ ಅವಸರದಾಗ ಊರಿಗ ಹೊಂಟಿಏನು? " ಅಂತಂದು ಕೇಳಿದ್ಲು "ದೊಡ್ಡಣ್ಣನ ಮಾತಾಡಿಸಿ ಬರಾನಂತ ಹೊಂಟೇನ ತಂಗಿ ಅಡ್ಡಮಳಿಹೊಡದ್ರ ಅಂಡೂರಕ ವ್ಯಾಳೆ ಸಿಗೋದಿಲ್ಲ" ಅಂದು ಮುಂದಕ ನಡದ್ಲು "ನೀ ಏನಷ್ಟ ಸಾವುಕಾರ್ತಿ, ಸಾವುಕಾರ ಮನಿಗ

ಹೊಕ್ಕಿ ನಮ್ಮಂತ ಬಡವರ ಮನಿಗ ಬರ್ತಿ ಏನು?" ಅಂತ ತನ್ನ ಅಸಾಹಾಯಕತೆ ತೋಡಿ ಕೊಂಡ್ಲು "ಕುಡದೆ ನಿಷೆದಾಗ ಗಿಂಡವ್ವ ಅಂದದ್ದು ತಲೀಗ ಹತ್ತು. ನಾಳಿಗ ಹೊಕ್ಕೀನಿ ಇವತ್ತ ನಿನ್ನ ಮನಿಯಾಗ ಉಳದರ ಆತ ನಡಿ "ಅಂದ್ಲು ಬೂದುಗಗ ಯಾಕೊ ಸರಿ ಕಾಣಲಿಲ್ಲಾ, ಗಡಾನ ಹೋಗಿ ಬೂಟ ತೋರಿಸಬೇಕಂತ ಅಂದ್ಕೊಂಡಿದ್ದ ಅವನ ಕನಸು ನುಚ್ಚ ನೂರಾತು. ತಲಿಗಿಮಿಗಿಮಿ ತಿರಗದಂಗಾತು, ಗಿಂಡವ್ವ ಮತ್ತ ಅವನವ್ವ ಹಳೆಕಾಲದ ಮಾತ ತಕ್ಕೊಂಡು ಮಾತಾಡ್ತಾ ಹರದಾರಿ ದೂರ ಹೋಗಿದ್ರು, ಬೂದುಗ ಮಾತ್ರ ಮನಸ್ಸಿನೊಳಗೆ ಮಂಡಗಿ ತಿನ್ನತೊಡಗಿದ.

ಗಿಂಡವ್ವ ಮಾತ್ರ ಯಾವತ್ತು ಬರದ ಓರಿಯಕ್ಕ ಮನಿಗಬಂದಿದ್ದೆ ತನ್ನ ಪುಣ್ಯ ಅಂದ್ಕೊಂಡು ಊರನಾಯ್ಕನ ಮನಿಯಿಂದ ಒಂದ ಸೇರ ರಾಗಿ ಹಿಟ್ಟ ತಂದು ಮುದ್ದಿ ಮಾಡಿ ಹಾಕಿದ್ಲು, ಎರಡ ತತ್ತಿ ತರ್ಸಿ, ಸಾಂಬೇರ ಎರಿಯಾಗಿಂದ ಕದ್ಕೊಂಡಕಡ ಬಂದಿದ್ದ ಉಳ್ಳಾಗಡ್ಡಿ ಕೊಯ್ಯುದು ಎಣ್ಣೆಯಿಲ್ಲದೆ ಒಗ್ಗರಣೆ ಹಾಕಿ ಮುದ್ದಿಮ್ಯಾಲನೆಂಜಿಕೊಂಡ ಒಂದ ಮುದ್ದಿನುಂಗಿ ಮಲಗಿದ.

ಬೂದುಗ ವಾಸ್ತವಕ ಬಂದ. ರಾತ್ರಿ ಹೆಂಡದ ಅಮಲಿನ್ಯಾಗ ಉಳ್ಕೊಂಡಿದ್ದು ನೆನಸ್ಕೊಂಡು ಸಂಕಟ ಪಡ್ತಿದ್ಲು ಅವನವ್ವ, ಬೂದುಗನ ಹುಡುಕಾಟ ಕಂಡಾಕಿನ ಹಿಗ್ಗಾಮುಗ್ಗ ಗುದ್ದಿದ್ಲು ಬೂದುಗ ಪ್ಲಾಸ್ಟಿಕ್ ಬೂಟಗಳನ್ನ ನೆನಪಮಾಡ್ಕೊಂಡು ಲಬ್, ಲಬ್ ಅಳತೊಡಗಿದ. ಅವನ ಬೂಟಕದ್ದ ಬೆಕ್ಕಿನ ಕಣ್ಣಿನ ಹುಡುಗ ಖುಷಿಯಿಂದ ಅವನ ಮುಂದ ಬಂದು "ಲೇ ಬೂದುಗ ನಾನ ರಾತ್ರಿ ಅನ್ಲಿಲ್ಲಾ ನಿನಗ" ಅಂತ ಹಂಗಿಸಿದ "ಯವ್ವ ಇವನ ಕದ್ದಾನ" ಅಂತ ಹೇಳಬೇಕು ಅನಿಸಿತು ಮತ್ತ ಹೊಡಿತಾಳ ಅಂದ್ಕೊಂಡವನೆ ಎದಿಯಾನ ಮಾತು ನುಂಗಿಕೊಂಡು ಹಿಂದಕ ತಿರಗಿ ನೋಡದಂಗ ಕೈಚೀಲ ಹೆಗಲಿಗೇರಿಸಿ ಹೊಂಟಬಿಟ್ಟ.

ಕೊಂಯ್ಯ ಮತ್ತು ಧೋತ್ರ

ಎಲ್ಲಾ ಕಡೀಗ ಹುಡುಕಾಟ ನಡೆದಿತ್ತು. ದೊಡ್ಡ ದನಿ ಮಾಡದೆ ಬರಿ ಸನ್ನೆ ಮಾಡ್ತಾ ಒಬ್ಬರಿಗೊಬ್ಬರು ಅಲ್ಲಿ ಇಲ್ಲಿ ಅಂತೇಳಿ ಓಡಾಡತೊಡಗಿದ್ದರು. ಹ್ಯಾಪಮಾರಿ ಹಾಕ್ಕೊಂಡು ತಿಥಿ ಊಟ ಉಣ್ಣೋರಿಗ ಉಣ್ಣಾಕ ಬಡಸಾಕ ಪತ್ತಿದ್ದನೊ ದೊಡ್ಡಮನಿ ಕಡೀಗ ಸನ್ನಿ ಮಾಡಿ ಕಳಸ್ತಾ ಒಂದ ಹೆಜ್ಜಿ ಕಣದ ಕಡೀಗ ಓಡಿ ಹೋಗಿ ನೋಡಿಬಂದ ಬಾಣು ದೊಡ್ಡಪ್ಪ, ಸಂಕಣ್ಣಿ ಹಿರಿಮಾಮ, ಚಿಟ್ಟು, ಸಾವಕ್ಕ, ಬಾಗಿ ಅತ್ತಿಗಿ, ಮನಿ ಮಂದಿ ಹುಡುಕಿದ್ದೆ ಹುಡುಕಿದ್ದು, "ಏಲ್ಹೋತು ಹಾಳಾದ್ದು" ದೊಡಪ್ಪ ಕೇಳಿದ. ಯಾರು ಮಾತಾಡೋ ಗೋಜಿಗ ಹೋಗಲಿಲ್ಲಾ "ದನದ ಮನಿಯೊಳಗ ಯಾರಾರು ಇಟ್ಟು ಬಂದ್ರೇನ ಮತ್ತ" ಅಂದವನೆ ದನದ ಮನಿ ಕಡೀಗ ಓಡಿಹೋದ.

ನಮ್ಮಪ್ಪನ ಅಪ್ಪ ಅಂದ್ರ ನನ್ನಜ್ಜ ಚೇಂಬೂರಜ್ಜ ತೀರ್‍ಕೊಂಡಿದ್ಕ ದೊಡ್ಡ ಮನಿತನದ ಮರ್ಯಾದಿ ಪ್ರಶ್ನೆ ಅನ್ನೋಹಂಗ, ಹೆಣ ಸುಟ್ಟ ಹನ್ನೆಲ್ಡನೇಯ ದಿನ ತಿಥಿ ಊಟ ಸುತ್ತ ಯಾರೂ ಮಾಡಿರಬಾರದು ಹಂಗ ಮಾಡಾನಂತ ಗುಲ್ಬರ್ಗಾದಿಂದ ಬಂದ ನಾನು ಅಂದಿದ್ಕ ಅಪ್ಪ ದೊಡಪ್ಪ ಸೋಮಿಕಾಕ, ಜಗ್ಗೇಶಿ ಕಾಕ, ಸೇರ್‍ಕೊಂಡು ಭಾರಿ ಏರ್ಪಾಟು ಹಮ್ಮಿಕೊಂಡಿದ್ವಿ. ಚೆಂಬೂರಜ್ಜನ ಹಳೇ ಫೋಟೋ ಹಾಕಿ ಒಂದು ಕಾರ್ಡು ಪ್ರಿಂಟ್ ಆತು. ಗಂದೂರ ಜಿಲ್ಲೆಯ ಲೋಕಲ್ ನ್ಯೂಸ್‌ಪೇಪರ ಆದ ಗಂದೂರ ಟೈಮ್ಸ್‌ನಲ್ಲಿ ಶಿವಗಣಾರಾಧನೆ ಕಾಲಂನಲ್ಲಿ ಜಾಹಿರಾತು ಕೊಟ್ಟು ಬಂದೆ. ಮೂಲಿಮುಕ್ಕಟ್ಟಿನೊಳಗಿರೊ ನಮ್ಮ ಬೀಗರಿಗ ಸುದ್ದಿ ತಿಳಿಯಲಿ ಅಂತೇಳಿ ಎಲ್ಲಾ ವ್ಯವಸ್ಥೆಗಳನ್ನ ನಾನೇ ಖುದ್ದು ಮುಂದ ನಿಂತ್ಕೊಂಡೆ ಮಾಡಿದ್ದೆ. ಒಂದು ವಾರದಷ್ಟು ರಜೆ ಮುಂದುವರಿಸಿ ಎಲ್ಲಾದಕ್ಕೂ ನಾನೇ ಕಾರಣ ಅನ್ನೋರಂಗೆ ಅಡ್ಡಾತೊಡಗಿದ ಯಂಕಪ್ಪ. ವ್ಯವಸ್ಥೆ ಏನೋ ಗಡದ್ದಾಗೆ ಆಗಿತ್ತು ದುತ್ತರಗಿಯಿಂದ ರಾಂಭಟ್ಟ, ಯಂಕಟ್ರಮಣ ಭಟ್ಟ, ಅಡಗಿ ಮಾಡಾಕ ಏಳತಾಸು ಮುಂಚೆ ಬಂದೋರೆ ಮಂಡಿಕ್ಕಿ ಒಗ್ಗರಣೆ ಹಾಕೊಂಡು ಮೇದು ಕೇಟಿ ಚಾಯ್ ಮಾಡ್ಕೊಂಡು ಕುಡದು ಅಡಗಿಗ ಅಣಿಯಾಗಿ ಇಡಿರಾತ್ರಿ ಕಣ್ಣು ಮುಚ್ಚದಂಗ ಬಾರಾಡಿ ಅಡುಗೆ ಮಾಡಿದ್ರು, ತಿಥಿ ದಿನ ಪೂಜಿ ಮಾಡಿ ನಸುಕಿನೊಳಗ ಬಂದು ಕುಂತಿದ್ದ ಹರಿಯಾರ, ದಾವಣಗೇರಿಗ ಕೂಲಿಗ ಹೋಗೋ ಮಂದಿಗ ಬಡಸಾಕಂತೇಳಿ ಪೂಜಿ ಮಾಡಿ ಇನ್ನೇನು ಹುಡ್ರು ಏಳಾಕು, "ಯಣ್ಣ ನನ್ನ ಧೋತ್ರ ಎಲ್ಲಪ್ಪೋ, ಕಡೀಗ ಜಳಕ ಮಾಡ್ಸಿದ್ದು ಇಲ್ಲೇ ಅಲ್ಲೇನು?" ಅಂದ್ಕೊಂತ ಬಂದೇ ಬಿಟ್ಲು, ಅಗಸರ ದೊಂಡಿ, ಪದ್ಧತಿ ಪ್ರಕಾರ ಸ್ಮಶಾನದಾಗಿನ ಕೊಬ್ರಿ ಹೆಣದ ಮ್ಯಾಲ ಬಿಸಾಡಿದ ಪುಡಿಗಾಸು, ಅದು ಇದು ಸಾಮಾನು ಅವರಿಗ ಹೋದ್ರು, ಸತ್ತೋರ ಹಾಸಿಗಿ, ಕಡಿಗ ಉಟ್ಟಧೋತ್ರ ಅಗಸರ ಮನಿಗ ಸೇರಬೇಕು.

ಕೊನಿಗ ಜಳಕ ಮಾಡ್ಸಿ ಬಿಟ್ಟ ಜಾಗಾದಾಗಿನ ಧೋತ್ರ ಹನ್ನೆಲ್ಡ ದಿನದ ಮಟ ಅಲ್ಲೇ ಬಿದಿರಾಕು. ಹನ್ನೆಲ್ಡ ದಿನದ ನಂತರ ಅಗಸರ ಮನಿಮುಂದಿ ಬಂದಿ ತಗೊಂಡ ಹೋಗಾಕು. ಅಗಸರ ಮನಿಯಿಂದ ಯಾರಾದ್ರು ಬಂದು ಒಯ್ಯದಿದ್ರ "ಏನಲೇ ಅಗಸ ಮುಕಳಾಗ ಸೊಕ್ಕೇನು ಮಗನ, ನಮ್ಮಪ್ಪನ ಧೋತ್ರ ಆಟ ಬ್ಯಾಡಾತೇನು ನಿನಗ? ನಾವೇನು ಕಮ್ಮಿ ಮಾಡೀವಿ ನಿನಗಂತ" ಹಿಗ್ಗಾಮುಗ್ಗಿ ಬೊಯ್ಯುತ್ತಿತ್ತು ಮಂದಿ. ಕಡಿ ಧೋತ್ರ ಅಗಸರಿಗೇನಾರು ಸಿಗಲಿಲ್ಲಾಂದ್ರ "ಥೂ, ಇವನವ್ವನ, ಜುಗ್ಗನನ್ನಮಗ ಅಗಸಗ ಕೊಡೋ ಧೋತ್ರಾನು ಬಚ್ಚಿಟ್ಕೊಂಡ ಏಳಪಾಪದೋನು, ಯಾರು ಮುಟ್ಟಿಸ್ಕೋಬ್ಯಾಡ್ರಿ, ಅವನು ಕುಲಗೆಟ್ಟೋನು" ಅಂತೇಳಿ ಇಡೀ ಊರಿಗ ಸಾರಿಬಿಡ್ತಿದ್ದ.

ದೊಂಡಿ ಬಂದು ಡಿಮ್ಯಾಂಡ್ ಇಟ್ಟದ್ದೆ ದೊಡ್ಡಪ್ಪ, ಅಪ್ಪ, ಅಜ್ಜನ ಕುಂದ್ರಿಸಿ ಜಳಕ ಮಾಡಿಸಿದ ಕಲ್ಲಾಗ ಹೋಗಿ ನೋಡಿದ್ರು ಧೋತ್ರ ಕಾಣಲಿಲ್ಲ. ದೊಡಪ್ಪಗ ಹೆದರಿಕಿಯಾತು. ಮದ್ಲೆ ಹರಕಬಾಯಿ ಹೆಂಗಸಿಕಿ, ಅಕಿ ಗಂಡ ಚಂದ್ರ ಬಂದಿದ್ರ ಪಾಡಿತ್ತು. "ಇಲ್ಲಲ್ಲೇ ಚಂದ್ರ ಎಲ್ಲೋ ಐತಿ ಹುಡುಕಿಸಿ ಇಡ್ತೇನಿ" ಅಂದಿದ್ರ ತಿಳ್ಕೊಂಡು "ಆತ ಹೇಳ ಕಾಕ ಅದೆಲ್ಲಿಗೆ ಹೋಕೈತಿ" ಅಂದು ಉಂಡು ಹೊಕ್ಕಿದ್ದ. ಇಕಿ ಮಂಡ ಹೆಂಗಸು, ಊರಮಂದಿ ಮುಂದಮಾನ ಕಳಿತಾಳ ಅಂದವನೆ ಅರಬಾಡಿಸಿ ಹುಡುಕ ತೊಡಗಿದ. ದೊಡ್ಡಪ್ಪನ ಅಡ್ಡಾಟದ ರೀತಿ ನೋಡಿ ಗಾಬರಿ ಆತು. "ಯಪ್ಪ ಏನಾತು. ಹಿಂಗ್ಯಾಕ ಅರಚಾಡ್ಯಾಕತಿ" ಅಂತೇಳಿ ಓಡಿಹೋದೆ. "ಏನಿಲ್ಲಲೇ ತಮ್ಮಾ ನಿಮ್ಮಜ್ಜನ ಹರಕ ಧೋತ್ರ ಒಯ್ಯಾಕ ಬಂದಾಳ ದೊಂಡಿ, ಕಾಣವಲ್ಲದ" ಅಂದವನೆ 'ಸಿಗ್ತೇನ' ಅಂತೇಳಿ ಜೋಕಿ ದೊಡವನ ಕಡೀಗ ಮಾರಿ ಮಾಡಿ ಕೇಳಿದ. ಅಲ್ಲೇ ಇವ್ನ ಆ ಹರಕ ಧೋತ್ರಕ ಇಟೊಂದು ತಲಿಕೆಡಿಸಿಕೊಂಡು ಹುಡುಕೋದ ಏನೈತಿ ಅನಿಸಿತು. "ಯವ್ವ ಮದ್ಲ ಹೋಗು ಮಂದಿಗ ಉಣ್ಣಾಕ ಏರ್ಪಾಟು ಮಾಡು. ಧೋತ್ರ ಇಲ್ಲೇ ಎಲಾರು ಇದ್ದೀತು. ಎಲ್ಲಿಗೂ ಓಡಿ ಹೋಗೋದಿಲ್ಲಾ. ಅಮ್ಯಾಕ ಹುಡುಕಾನಂತ" ಅಂದೆ. "ಏ, ಹಂಗ ಅನಬ್ಯಾಡೊ ತಮ್ಮ, ಯಂಕಣ್ಣ ದಂಡ ಕೊಡ ಬೇಕಾದೀತು. ಹರಕ ಧೋತ್ರ ಕೊಡಾಕು ಇಲ್ಲಿಕ್ರ ನಮ್ಮ ಮನಿನ ಊರಿಂದ ಹೊರಗ ಹಾಕ್ತಾರು" ಅಂದ್ಲು ನನಗೇನು ಅಂತ ತಲಿಬುಡಾನೆ ಅರ್ಥ ಆಗಲಿಲ್ಲಾ ಅಕಿ ಮಾರಿ ನೋಡಿ ದೊಂಡಿ ಕಡೀಗ ಹೊಂಟೆ.

ದೊಂಡಿ ಸುತ್ತೆಲ್ಲಾ ಹುಡುಕೋರ ಹಿಂದಿಂದ ಗುಮಾನಿಯಿಂದ ಓಡಾಡತೊಡಗಿದಳು. ಬೇಕಂತ ಬಚ್ಚಿಟ್ರೋ ಹ್ಯಾಂಗಂತ ಅನುಮಾನ ವ್ಯಕ್ತಪಡಿಸಿದ್ಲು, ಅಲ್ಲಾ ಒಂದ ಹರಕು ಧೋತ್ರದ ಹಿಂದ ಇಷ್ಟೊಂದು ಮಂದಿ ಗಂಟ ಬಿದ್ದಾರಲ್ಲಾ ಏನಿದ್ದ ಇದರ ಮಹಿಮೆ ಅಂದ್ಕೊಂಡವನೆ ಅಕೀನ ಕೇಳಾಕಂತೇಳಿ ಹೊರಟೆ. "ಏನಬೆ, ಮುದುಕ ಸಾಯೋ ಮುಂದ ಇಡಿ ಧೋತ್ರನ ಚೂರು ಚೂರು ಮಾಡಿದ್ದ ಅದನ್ನ ತಗೊಂಡ ನೀ ಏನ ಮಾಡ್ತಿ? ಎಲ್ಲಾರು ಇದ್ದೀತ ಬಿಡು" ಅಂತ ಸಮಾಧಾನದ ಮಾತು ಹೇಳಿದ "ಯಂಕಪ್ಪಾ ಏನು ಹಿಂಗಂತಿಯಾ, ಹಂಗ ನೋಡಿದ್ರ ನನ್ನ ಧೋತ್ರ ಕೊಟ್ಟು ಆಮ್ಯಾಕ ಊಟಕ ಕುಂದ್ರಸೋಹಂಗಾಗಬೇಕು. ನಾ ಏನೋ ನಮ್ಮ ಮನಿ ಅಂತೇಳಿ ಸುಮ್ಮಗ ಅದೀನಿ ಆಟ" ಅಂದ್ಲು ನನಗ ಮತ್ತೂ ಅನುಮಾನ ಆತು. "ಅಲ್ಲಾ ಒಂದ ಹಳೆ ಧೋತ್ರಕ ಹಿಂಗ ಆಡ್ತಿ ಅಲ್ಲಬೇ ಒಂದು ಪಕ್ಷ ಎಮ್ಮಿಗಿಮ್ಮಿ ತಿಂದ ಹೋದ್ರ ಏನ್ಮಾಡ್ತಿ" ಅಂತೇಳಿ ಕೇಳಿದೆ. "ನನ್ನ ಜೀವನದಾಗ ಎಷ್ಟೋ ಸೂತಕದ

ಮನಿ ನೋಡಿನಿ. ನಿನ್ನಂಗ ಮಾತಾಡೋದನ್ನ ಕೇಳೇ ಇಲ್ಲ ಬಿಡು. ಎಲ್ಲೂ ಎಮ್ಮಿ ತಿಂದಿಲ್ಲಾ, ಜಳಕ ಮುಗದಿಂದ ಧೋತ್ರ ದಬ್ಬಿ ಸಗಣಿ ಪುಟ್ಟಿಯೊಳಗ ಮುಚ್ಚಿಟ್ಟು ನಾವು ಬರೋ ದಾರಿಯನ್ನ ಕಾಯಿತಿರ್ತಾರ. ನೀ ಆಟೊಂದ ಕಲ್ತು ಉಪಯೋಗಿಲ್ಲ ನೋಡು" ಅಂತೇಳಿ ನನ್ನ ಮರ್ಯಾದಿಗ ಕೈ ಹಾಕಿದ್ಲು. "ಏನಬೇ ಏನೋ ಹಿರಿಯೋಳಂತ ಮರ್ಯಾದಿ ಕೊಟ್ರ ಮೈಮ್ಯಾಲ ಬರಾಕ ಹತ್ತಿಯಲ್ಲಾ ಹೋಗಹೋಗು ಮಂದಿ ಊಟ ಆಗ್ಲಿ ಆಮ್ಯಾಕ ಹುಡುಕಿಸಿ ಇಟ್ಟಿರ್ತೀನಿ" ಅಂತ ಗದರಿಸಿದೆ. "ಯಂಕಪ್ಪ ಏನಂತ ತಿಳ್ಕೊಂಡಿ ದೊಡ್ಡವನಿದ್ರ ನಿಮ್ಮ ಮನೀಗ, ನಾ ಏನು ಭಿಕ್ಷ ಬೇಡಾಕ ಬಂದಿಲ್ಲಾ ಏನು, ನಿಮ್ಮಂತ ಪಾಪದ ಮಂದಿ ಸ್ವರ್ಗಕ್ಕೆ ಹೋಗಲಿ ಅಂತ ನಿಮ್ಮ ಪಾಪ ತೊಳಿತೀವಲ್ಲಾ ಅದು ನಮ್ಮ ತೆಪ್ಪು" ಅಂದವಳೇ ಎದ್ದು ದೊಡ್ಡಪ್ಪನ ಹುಡುಕಿಕೊಂಡು ಹೊಂಟಳು.

ಸ್ವರ್ಗದ ಕಲ್ಪನೆ ವಿಚಿತ್ರವಾಗಿ ಕಾಣ್ತು. ಈ ಮಂದಿ ತಲಿಯೊಳಗ ಏನೆಲ್ಲಾ ವಿಚಿತ್ರಗಳು ತುಂಬ್ಯಾವಲ್ಲಾ ಅನಿಸಿತು. ದೊಡಪ್ಪನ ಕರ್ಕೊಂಡ ನನ್ನ ತಾವ ಬಂದ್ಲು. "ಯಂಕಪ್ಪ, ಅದೊಂದು ನಂಬಿಕೆ. ಇದು ನಿನ್ನೆ ಇವತ್ತಿಂದಲ್ಲಾ ಈ ಸಮಾಜದಾಗ ಇವೆಲ್ಲಾ ಬೇಕು ಅಂತೇಳಿ ನಮ್ಮ ಹಿರಿಯರು ಮಾಡಿರೋದು. ನಾವು ಮಾಡಿದ ಪಾಪವನ ತೊಳದು, ಶಾವು ಉಡೋದರಿಂದ ನಮಗ ಸ್ವರ್ಗ ಸಿಗತೈತೊ ಹುಚ್ಚಪ್ಪ. ಇದನ್ನ ಯಾ ಪುಸ್ತಕಾನು ಹೇಳಿಕೊಡಂಗಿಲ್ಲಾ" ನನ ತಲಿ ಹಾಳಾತು. "ಯಪ್ಪ, ನಿಂಗ ಬುದ್ದಿ ಕೆಟ್ಟೈತೇನು? ಇವನ್ನೆಲ್ಲಾ ನಮ್ಮನ್ನ ನಂಬಿಸಾಕಂತಂದು ಮಾಡಿರೊ ವ್ಯವಸ್ಥಿತ ಸಂಚು. ಸ್ವರ್ಗ ನರಕ ಎಲ್ಲು ಇಲ್ವೆ ಇಲ್ಲಾ. ನೀಯಾಕ ಸತ್ಯವನ್ನ ನಂಬೋದಿಲ್ಲಾ ಅಂತ ಅರ್ಥ ಆಗ್ತಿಲ್ಲಾ ನನಗ" ನಾನು ದೊಂಡಿಯನ್ನ ನೋಡಿದೆ. ದೊಡಪ್ಪ ವಾದಕ್ಕ ಇಳಿತಾನಂತ ಹೆದರಿದೆ. "ಏನೋ ತಮ್ಮಾ ನಾ ಅಂತು ನಿನಷ್ಟು ಶಾಣ್ಯಾ ಅಲ್ಲಾ ಏನೋ ನಮ್ಮಪ್ಪ ಹೇಳ್ತಿದ್ದ ತೊಂಡಿ ಲೆಕ್ಕಾಚಾರದ ಮ್ಯಾಲ ಹೇಳ್ತಿನಿ ಆಟೆ ನೋಡು" ಅಂದು ಹಿರೀಗೌಡ್ರು ಬಂದಿದ್ಕ ಓಡಿ ಹೊಂಟ.

ನಮ್ಮ ಮಾತು ಕೇಳಿಸಿಕೊಂಡಿದ್ದ ಗೌಡಗ ನನ್ನ ಮ್ಯಾಲ ವಿಪರೀತ ಸಿಟ್ಟ ಬಂದಿತ್ತು. "ಏನಪ್ಪಾ ಯಂಕಪ್ಪ ಬೋ ಪಸಂದಾಗೆ ಮಾತಾಡಿದೆ. ನಿಮ್ಮ ಮನಿನ ಊರ ಹೊರಗ ಹಾಕಾನೇನು. ಈ ಊರಾಗ ಹಿಂದಿಂದ ನಡಕೊಂಡ ಬಂದ ಆಚರಣೆಗಳನ್ನು ಮುಂದುವರಿಸಿಕೊಂಡೇ ಬಂದೀವಿ. ನೀನು ಹೊರಗಿನವ. ಈ ಊರಾಗ ಏಟ ದಿನ ಅದಿ ಹೇಳು. ನಮ್ಮ ಆಚರಣೆಗಳು ಬೇಕಪ್ಪ, ಇಲ್ದಿದ್ರ ಈ ಜಗತ್ತಿಗ ಉಳೀಗಾಲ ಇಲ್ಲಾ. ಏನಂದೆ ಈ ವ್ಯವಸ್ಥೆಯೊಳಗ ಎಲ್ಲಾನೂ ಬೇಕೆ ಬೇಕು " ಅವನ ಕಡ್ಡಿ ಮೀಸೆ ಹುರುಪುಗೊಳಿಸಿದ. "ಗೌಡ್ರ ನಾ ಏನ ಹೇಳಿದ್ರು ನಿಮ್ಮ ತಲಿಯಾಗ ಹೋಗೋದಿಲ್ಲಾ ಏನು, ಈಗ ಹೋಗ್ರಿ ಉಣ್ಣಾಕ ಬಂದೀರಿ ಮಾತಬ್ಯಾಡ್ರಿ" ಅಂತೇಳಿ ಸಾಗ ಹಾಕಾಕ ನೋಡಿದೆ. "ಹಂಗ್ಯಾಕ ಬ್ಯಾಸರ ಅಕ್ಕಿ ತಮ್ಮಾ ಬಿಸಿರಕ್ತ ನೀ ಏನ ಮಾಡಿ ಎಲ್ಲಾನು ಬದಲು ಮಾಡ್ತೀನಿ ಅಂತ ಹೊಂಟಬಿಟ್ಟೆ. ಅಂದ್ರ ನಮ್ಮಂತೋರು ಅದಕ್ಕ ಅವಕಾಸ ಮಾಡಿಕೊಡಂಗಿಲ್ಲಾ" ನೆಟ್ಟಗ ನನ್ನ ನೋಡಿದ. ಒಂದ ಹರಕ ಧೋತ್ರ ಈ ಪಡಿಪಾಟಲು ತಂದಿಡತೈತಿ ಅಂತ ಅನಿಸಿರಲಿಲ್ಲಾ ನಾನು ಮಾತಾಡಲಿಲ್ಲಾ. ಮುಂದಕ ಹೋದ ಗೌಡ್ರು, ಒಬ್ಬ ನರಪೇತಲ ಹುಡುಗನ್ನ ಅಂಗೈ ಹಿಡದು ಎಳ್ಕೊಂಡ ಬಂದು ನನ್ನೆದುರಿಗ ನಿಲ್ಲಿಸಿ, ಹೇಳಿದ "ಈ ಸಣಕಲ ವ್ಯಕ್ತಿ ದೊಡ್ಡ ಪೊಳ ಅಂಗಿ

ಹಾಕೊಂಡು ತಾನು ದಪ್ಪ ಆದೆ ಅಂದ್ರ ದಪ್ಪ ಆಗಾಕ ಸಾಧ್ಯವೇನು?" ಅಂದವನೆ ಸೀದಾ ಊಟದ ಖೋಲಿಗ ನಡೆದ. ಅಪ್ಪ ದೊಡ್ಡಪ್ಪ ಅವನ ಹಿಂದ ಕೈ ಕಟ್ಟಿಕೊಂಡು ಅದೇ ಮಾಮೂಲು ನಡ ಬಗ್ಗಿಸಿ ಅಂ ಹುಂ ಅನ್ಕೋಂತ ಅಡ್ಡಾಡ್ತಿದ್ರು. ಅವರನ್ನ ನೋಡಿ ಅಯ್ಯೋ ಅನಿಸಿತು.

ಆದ್ರ ಆ ಮುದಿಗೌಡ ಅಂದ ಹೋದ ಮಾತ ಮಾತ್ರ ಕಾಡತೊಡಗಿತು. ಏನು ಹಿಂಗಂದ್ರ, ಯಾಕ ನನಗ ಈ ಮಾತಂದ, ವಿಚಾರ ಮಾಡಿದೆ. ದೊಂಡಿ ಕಡೀಗ ನೋಡಿದೆ. ಧೋತ್ರ ಸಿಗೋ ಮಟ ಠಿಕಾಣಿ ಹೊಡದಿದ್ಲು. ತಲಿಕೆರ್‍ಕೊಂಡು ಬರೊ ಹೋಗೋ ಮಂದಿ ನೋಡ ತೊಡಗಿದೆ. ಗೌಡಪ್ಪನ ಮಾತು ಕಿವಿಯೊಳಗ ಗುಂಯ್ ಗುಡಾಕತ್ತು ಯಾವದೋ ಒಂದು ಅರ್ಥ ಇಟ್ಟು ಹೇಳ್ಯಾನ ಬೆರಕಿ ಮುದುಕ ಅನಿಸಿತು. ನಮ್ಮ ಮಂದಿ ಅವನ ಹೊಲ್ದಾಗ ದುಡದು ಸಾವುಕಾರನ್ನ ಮಾಡಿ ಊರ ಗೌಡಕಿ ಪಟ್ಟ ಕೊಟ್ಟಾರಲ್ಲಾ ಅದಕ ಮಗ ಮಾತಾಡ್ತಾನ. ಎದ್ದ ಹೊರಟಿದ್ದೆ. ಇದ್ದಕ್ಕಿದ್ದಂಗೆ ಅವನ ಮಾತಿನ ಅರ್ಥ ನೆಪ್ಪಾತು. ಸಣ್ಣ ಜಾತಿಯವನು ಕಲ್ತು ದೊಡವನಾದಗಟ್ಟಿಗೆ ದೊಡ್ಡ ಜಾತಿಯವನಾಗಲಿಲ್ಲಾ! ಓ, ಎಂಥ ಬೇವರ್ಸಿ ಮುದಿಯಾ, ಅನಿಸಿತು. ಹಾಳಾಗಿ ಹೋಗ್ಲಿ ಅವನಂತ ತಲಿ ಇಲ್ಲದ ಮಂದಿ ನಿರ್ಮಿಸಿರೋದು ಈ ವ್ಯವಸ್ಥೆ ಒಂದು ಹರಕು ಧೋತ್ರ ಎಲ್ಲಾ ಹುಳುಕನ್ನು ಕೆದಕಿ ತಗಿತಲ್ಲಾ ಅಂತೇಳಿ ಕೆಟ್ಟ ಅನಿಸಿತು. ನಮ್ಮಪ್ಪ, ದೊಡಪ್ಪ ಈ ಊರಾನ ಮಂದಿ ತಾವು ಸರಿಸಮಾನಾಗಿ ದುಡಿದು ಜೀವನ ಮಾಡ್ತಿದ್ರು, ಡೊಗ್ಗಿ ಸಲಾಂ ಹೊಡಿಯೋದನ್ನ ಬಿಟ್ಟಿಲ್ಲಾ, ಇದೇನು ಗೌರವನೋ, ಅನಿವಾರ್ಯ ಎಂಬ ತಾಕಲಾಟ ನನ್ನೊಳಗೆ ಸುರು ಆತು.

ದೊಂಡಿ ಹಚ್ಚಿ ನಿಂತು ಬೊಯ್ಯಾಕ ಹತ್ತಿದ್ಲು "ಯಾ ಸೀಮಿ ಮಂದಿ ನೀವು, ಕೆಲ್ಸ ಬಗಸಿ ಬಿಟ್ಟು ಬಂದೀನಿ, ಗೌಡಪ್ಪರವೂ ರಾಶಿ ಅರವಿ ಅದಾವು. ಇವತ್ತ ಸಂಜಿಕ ವಾಪಾಸ ಕೊಡಾಕು. ನಾ ಯಾ ಘಳಗಿಗ ಬಂದ್ನೆಯವ್ವ, ಈ ಬ್ಯಾಡರಮಂದೀನ ಅಟು ಬ್ಯಾರೆ ಜನ ಅಂತಂದ್ರ ದರಕಾರ ಮಾಡೋದಿಲ್ಲ. ಗೌಡ್ರಿಗ ಸುದ್ದಿ ಮುಟ್ಟಿಸಿ ಮಾನಕಾಸಿನ ಪಂಚರ್ ಮಾಡಬಹುದು. ಆದ್ರ ಈ ಮನಿ ರಿಣ ಉಂಡೀವಿ ಅಂತಂದು ಬಿಡೋದು ಇವರಿಗೆ ಇದೆಲ್ಲಾ ತಿಳಿಯಂಗಿಲ್ಲಾ" ಅಕಿ ಕಡೀಗ ಯಾರು ನೋಡಾಕ ತಯಾರಿಲ್ಲಾ. ಸುತ್ತೆಲ್ಲಾ ಊರುಗಳಿಂದ ಮಂದಿ ಬರಾಕ ಹತ್ತು ಜನ ಜಾಸ್ತಿ ಆಗಿದ್ದಕ ಎಲ್ಲರೂ ಗಡಬಡಿಸ ತೊಡಗಿದ್ರೂ ಯಾರೊಬ್ಬರು ದೊಂಡಿ ಮಾತಿಗ ಲಕ್ಷ್ಯ ವಹಿಸಲಿಲ್ಲಾ ದೊಡಪ್ಪ ಮಾತ್ರ ಆ ಗಡಬಡಿ ನಡುವೆಯೂ ದೊಂಡಿಯ ಧೋತ್ರದ ಕಡಿಗ ಒಂದ ಕಣ್ಣಿಟ್ಟಿದ್ದ. ಮಂದಿನ ಉಣ್ಣಾಕ ಬಿಟ್ಟ "ದೊಂಡವ್ವ ಬೇಜಾರಾಗ ಬ್ಯಾಡ, ಇಲ್ಲೇ ಎಲ್ಲೋ ಐತಿ. ಮನಿ ಹೆಂಗಸರಿಗೆ ಹೇಳಿನಿ, ಹುಡುಕಾಕ ಹತ್ಯಾರ" ಅಂದ ಹೋದ. ನಮ್ಮವ್ವ ಬಂದ ಒಂದ ಮಾತ ಹೇಳಾನಂತ, ಬಾಯಿ ತಗಿಯಾಕು "ಏ ನಮ್ಮವ್ವ ನನತಾಯಿ ನಾ ಏನು ಭಿಕ್ಷಕ ಬಂದೋರಹಂಗ ಮಾಡ್ತಿರಲ್ಲಾ ಕೊಡೋದು ಕೊಟ್ಟಬಿಡ್ರಿ ಹೊಕ್ಕಿನಿ ಅತ್ಲಾಗ ಹಾಳಾಗಿ, ನಿಮ್ದು ದೊಡ್ಡ ಕಾಟ ಆತ ನೋಡು, ಹಿಂಗ ಯಾರು ಸತಾಸಲಿಲ್ಲಾ ನಿಮ್ಮ ಪಾಪ ದೊಡ್ಡದೈತಿ" ಅಂತ ತನ್ನ ಹಕ್ಕಿನ ಬಗ್ಗೆ ಮಾತಾಡಿದ್ಲು ಅವ್ವಗ ಯಾಕಾರು ಬಂದೀನೋ ಅನಿಸಿದ್ದೆ ಒಳಗ ಸೇರಿಕೊಂಡ್ಲು.

ದೊಡಪ್ಪ ಎಲ್ಲರಿಗೂ ಹುಡುಕಾಕ ಮತ್ತೊಂದು ಸಾರಿ ತಾಕಿತ್ತು ಮಾಡಿದ. ಕಲ್ಲು ಎತ್ತಿ, ಎತ್ತಿನ ಗ್ಯಾಂದ್ಲಿ, ಪಣತ, ದನಕರುಗಳಿಗೆ ಹುಲ್ಲಿಡೋ ಜಾಗ, ಸೊಪ್ಪಿಗೂಡು ಅಂತೇಳಿ ಒಂದ

ಜಾಗಾನು ಬಿಟ್ಟು ಬಿಡದೆ ಹುಡುಕಿಸಿದ, ಪ್ರಯೋಜನ ಆಗಲಿಲ್ಲಾ. "ಏ ಚೆನ್ನು ಏನ ನೆಲಾ ನುಂಗತೊ, ಇಲ್ಲಾ ಆಕಾಶ ತಗೊಂತು, ಏನ ಲಕ್ಷಿ ಇಲ್ಲದ ಮಂದಿ ತುಂಬ್ಕೊಂಡಾರ ಈ ಮನಿಯಾಗಂದ್ರ ನಾ ಹೇಳಾಕ ವಲ್ಲೆ ಬಿಡು" ಅಂತೇಳಿ ಹಿರಿಮಗನ ಮ್ಯಾಲ ಹರಿಹಾದ. ಯಾರು ತುಟಿ ಪಿಟಕನ್ನಲಿಲ್ಲಾ ನಾನು ಮುಂದ ಬಂದೋನೆ "ನೋಡ ದೊಂಡವ್ವ ಆದದ್ದ ಆತು. ಒಂದು ಹೊಸ ಧೋತ್ರ ತಗೊಂಡ ಹೋಗು. ಅದನ್ನ ಅಜ್ಜನ ಸುಡುಗಾಡಿಗ ಮುಟ್ಟಿಸಿ ತೊಳದು ನಿನ್ನ ಗಂಡಗ ಉಟ್ಕೊಳಾಕ ಕೊಡು ಅಂದೆ". ಅಕಿಗ ಮದ್ಲೆ ಸಿಟ್ಟು ಬಂದಿತ್ತು. "ಯಂಕಪ್ಪ ನಿನತಾವ ರೊಕ್ಕ ಐತಿ ಅಂತ ಮಾತಾಡಬ್ಯಾಡ, ರೊಕ್ಕ ನನ್ನ ಬಲ್ಲು ಐತೆ. ಯಾಕ ಪಾಪದ ಮಾತ ಆಡ್ತೀಯ. ಮುದಿಯನ ಹಳೆ ಪಂಚೆಯನ್ನ ತೊಳದು ಪಾಪ ಕಳದು ಪುಣ್ಯ ಕಟ್ಕೊಳ್ಳಾಣಂದ್ರ ನೀ ಇಲ್ಲದ್ದೆ ಮಾತಾಡ್ತಿಯಪ್ಪ. ನನಗಂಡನ ತಾವ ಧೋತ್ರ ಬಹಳ ಆದಾವು. ನೀ ಕೊಡಸೊ ಹೊಸ ಧೋತ್ರ ಉಡಾಕಂತೇಳಿ ಇಲ್ಲಾ" ಅಂತ ಕಡ್ಡಿ ಎರಡು ತುಂಡ ಮಾಡಿದಂಗ ಮಾತಾಡಿದ್ಲು.

ಇದೊಳ್ಳೆ ಗಾಚಾರ ಬಂತಲ್ಲ. ಅವಾಗ್ಲೇ ಧೋತ್ರನ ಕಲ್ಲಪುಟ್ಟಿಯಡಿಗ ಮುಚ್ಚಿಟ್ಟಿದ್ರ ಅಕ್ಕಿತು. ಸತ್ತ ದುಃಖದಾಗ ಏನಂತ ನೋಡ್ತಾರ. ಅವರವರ ಪಾಡು ಅವರವರಿಗೆ ಆಗಿರೊ ಹೊತ್ನಾಗ ಇವತ್ತು ಇಂಥ ವ್ಯಾಳೆ ಬಂದಿತಂತ ಯಾರ ಕಲ್ಪನೆಯೊಳಗೂ ಇದ್ದಿರಲಿಕ್ಕಿಲ್ಲಾಬಿಡು ಅಂದು ಕೊಂಡೆ. ದಗದ ಮುಗಿಸಿ ಬಂದ ಕೇರಿ ಮಂದಿ ಸೀದಾ ಉಣ್ಣಾಕೆಂತೇಳಿ ಬಂದಿತ್ತು. ಎಲ್ಲಾರು ನುಗ್ಗಿ ಉಂಡು ಕೈ ತೊಳಿಯಾಕ ಹೊರಗೆ ಬರೋ ಹೊತ್ನಾಗ ಅಜ್ಜನ ಧೋತ್ರ ಗುರ್ತಿಡದಬಿಟ್ಟ ದೊಡಪ್ಪ, ಕೊಂಯ್ಯಾ, ಮುದುಕ ತೀರ್ಕೊಂಡ ದಿನ ಹಲಗಿ ಹೊಡಿಯಾಕ ಬಂದಿದ್ದ. ಅವನಿಗೆ ಉಟ್ಕೊಳ್ಳಾಕ ಧೋತ್ರ ಇಲ್ದಕ ಕೊಳಕ ಟವಲು ಸುತ್ಕೊಂಡಿದ್ದ ಅದು ತತಾನು ತೂತಾಗಿತ್ತು. ಮಂದಿ ಎಲ್ಲಾ ಮುದುಕನ ಹೆಣದ ಸಿಂಗಾರ ಮಾಡೊ ಗಡಿಬಿಡಿಯಲ್ಲಿದ್ದಾಗ ಅದೆಂಗ ಎಗರಿಸಿದ್ನೋ ಅಂತು ಅಗಸನ ಮನಿಗ ಹೋಗೋ ಧೋತ್ರ ಕದ್ದಿದ್ದ. ದೊಡ್ಡಪ್ಪಗ ನೆತ್ತಿ ಉರದ ಹೋತು. "ಥು ಸುಳೀಮಗ್ನೆ, ನಮ್ಮಪ್ಪನ ಧೋತ್ರ ಮುಟ್ಟಿ ನರಕಕ ಕಳಿಸಿದೆಯಲ್ಲೋ, ನನ್ನ ಕೇಳಿದ್ರ ಕೊರಾ ಹೊಸದೊಂದು ಧೋತ್ರಾನೆ ಕೊಟ್ಟಬಿಡ್ತಿದ್ದೆ" ಅಂದವನೆ ಎದಿಎದಿ ಬಡ್ಕೊಂಡ ಅಳತೊಡಗಿದ. ಗದ್ಲ ಕೇಳಿದ ಹಿರಿಮಾವ ಓಡಿ ಬಂದ. ಕೊಂಯಾ ಉಟ್ಟಿದ ಧೋತ್ರ ಮುದಿಯಂದು ಅಂತೇಳಿ ತಿಳಿದದ್ದೆ ಓಡಿಹೋಗಿ ನಾಕೆತ್ತಿನ ಬಾರ್ಕೋಲು ತಂದವನೆ ದನಕ ಹೋಡಿಯೊ ಹಂಗ ಹೊಡಿಯತೊಡಗಿದ. "ಹಾಳಾದ ಸೂಳಿಮಗ ಧೋತ್ರ ಮುಟ್ಟಿ ಮೈಲಿಗ ಮಾಡಿದ್ನೋ ಇವ್ನವ್ವನ. ದುಡದು ಕುಡಿತಾರ, ಒಂದ ಅರವಿ ತಗೊಳಾಗ ಆಗಂಗಿಲ್ಲಾ ಕಂಡೋರ ಅರಿವಿ ಮ್ಯಾಲ ಕಣ್ಣ ಹಾಕ್ತಾರಂತ" ಅಂದವನೆ ಮನಸಿಗೆ ಹ್ಯಾಂಗ ಬಂತೋ ಹಂಗ ಹೊಡದು ಅಂಗಾತ ಕೆಡವಿದ. ನೆರದ ಮಂದಿ ಗಾಬರಿಯಾಗಿ ನೋಡ್ತಿತ್ತು. ಯಾರು ಮುಂದ ಹೋಗಿ ಬಿಡಸಾಕ ತಯಾರಿಲ್ಲ. ಹಿತ್ಲಾಗ ಇದ್ದ ನನಗ ಸುದ್ದಿ ಮುಟ್ಟಿದ್ದೆ ಓಡಿ ಬಂದೆ. ಇನ್ನ ನಾಕ ಬಾರ್ಕೋಲು ಬಿಗದಿದ್ರ ಕೊಂಯ್ಯನ ಹೆಣ ಉರುಳುತ್ತಿತ್ತು. "ಏ ಮಾವ ಮನುಷ್ಯ ಸಜ್ಜದಿ ಇಲ್ಲಾ, ಏನ್ ಮಾಡಾಕ ಹತ್ತಿ ಅನ್ನೋ ಕಬರೈತೇನ ನಿನಗ ಬಿಡಿಲ್ಲಿ" ಅಂತ ತೆಕಮಾರಿ ಬಿದ್ದು ಬಾರ್ಕೋಲ ಕಸ್ಕೊಂಡು ದುಡ್ಕೊಂತ ಹೋಗಿ ಮನಿಯಾಗ ಕೂಡಿಟ್ಟೆ.

ನಾಚಿಕ್ಕೇಡು ಮಂದಿ ಉಣ್ಣಾಕ ಹೊಂಟಿತ್ತು. ನಾನು ಹೋದವನೆ ಕೊಂಯ್ಯನ್ನ ಎತ್ತಿ

ನೆತ್ತಿಗ ನೀರ ಸುರುವಿ ಬಾಯಿ ಅಗಲಿಸಿ ನೀರ ಹಾಕಿದೆ. ನಮ್ಮ ಮನಿ ಮಂದಿ ಗಾಭಾರಿಯಿಂದ ನೋಡಾಕ ಹತ್ತು ನಾನು ಅವರ ಕಡೀಗ ತಿರಸ್ಕಾರದಿಂದ ನೋಡಿದವನೆ ಕೊಂಯ್ಯಾನ ಅಂಗಾತ ಎತ್ಕೊಂಡ ಹೋಗಿ ಅವರ ಹಟ್ಟಿಗ ಮುಟ್ಟಿಸಿ ಅವನ ಮೈಮ್ಯಾಲ ಹ್ಯಾಂಗ ಹೊಡದಿದ್ನೊ ಮಾವ ಹಂಗಂಗೆ ಬಾಸಾಳ ಕಿತ್ಕೊಂಡ ಬಂದಿತ್ತು. ಕೊಂಯ್ಯನ ಹೇಣ್ತಿ ಚಿಕ್ಕಿ ಅವನ ಮಗಳು ತಿಮ್ಮಿ ಕೊಂಯ್ಯಾ ಉಳಿಯಂಗಿಲ್ಲಾ ಅಂತೇಳಿ ಎದಿ ಎದಿ ಬಡ್ಕೊಂಡ ಅಳ ತೊಡಗಿದ್ರು. 'ಹರಕ ಧೋತ್ರ ಸಿಕಿದ್ಕ ಹಿಗ್ಗಿಂದ ಉಟ್ಕೊಂಡು ಎ ಚಿಕ್ಕಿ ಪಾಡ ಕಾಣತೈತೇನೆ ಅಂತ ತೋರ್ಸಿ ಖುಷಿಪಟ್ಟೆಯಲ್ಲೋ ಕೊಂಯ್ಯಾ" ಅಂತ ಒತ್ತರಿಸಿ ಬಂದ ದುಃಖ ತಡಿಯಾಕ ಆಗದೆ ಬಾರಾಡಿ ಅಳಾಕ ಹತ್ಲು. ಹಟ್ಟಿ ಮಂದಿ ಜಮಾಯಿಸಿದ್ರು "ಯ್ಯಾನಾತು ಕೊಂಯ್ಯಾಗಂತ" ಹಟ್ಟಿ ಮುಂದಾಳು ಸರ್ಪ ಮುಂದ ಬಂದ. "ಮನ್ನೆ ಸತ್ನಲ್ಲ ಮುದಿಯಾ ಅವನ ಹರಕ ಧೋತ್ರ ತಂದು ಉಟ್ಕೊಂಡಿದ್ನ. ಅದಕ ಅಗಸರ ದೊಂಡಿಗ ಧೋತ್ರ ಸಿಗದಾತು. ನಮ್ಮ ಧೋತ್ರ ಯಾಕ ಕದ್ದಿ ಅಂತಂದು ಚರ್ಮ ಸುಲಿಯೋಗಂಟ ಹೊಡ್ದಾರೋ ಯಪ್ಪಾ" ಅಂತೇಳಿ ಚಿಕ್ಕಿ ಅವನ ಪಾದಕ ಬಿದ್ದು ಅಳಾಕತ್ಲು. ನನಗ ಕೆಟ್ಟ ಅನಿಸಿತು. "ಸುಮ್ನಾಗ ಯಾಕ ಅಳ್ತಿ ಆ ಬ್ಯಾಡರ ಮಂದಿನ ಹಿಂಗ, ಬೋಸೊಕ್ಕಿನ್ಯಾರು. ಎದಿಯಾಗ ಹೃದಯಾ ಇಲ್ದೋರು. ಯ್ಯಾಪಾಟಿ ಹೊಡ್ದಾನ, ಮನುಷ್ಯ ಅಂತ ತಿಳ್ಕೊಂಡಾನೋ ದನಗಿನಾಂತ ತಿಳ್ಕೊಂಡಾನ" ಸರ್ಪ ಗುಡುಗಿದ. "ಯಾಕೋ ಮುದ್ಕ ಮುಕಳಾಗ ಹಲ್ಲ ಬಂದಾವೇನು. ಜಾತಿ ಹಿಡದು ಮಾತಾಡೋ ತಾಕತ ಬಂತೇನು" ಅಂತ ಗದರಿಸಿದೆ. "ಯಪ್ಪಾ ತೆಪ್ಪಆತು, ನೀವು ಇಲ್ಲೇ ಅದಿರೇನ್ರೀ, ಸಂಕಟ ತಡಿಯಾಕ ಆಗದೆ ಹೊಟ್ಟಿ ಒಳಗಿಂದ ಹೊರಗ ಬಂದಬಿಟ್ತು ನನ್ನ ಕ್ಷಮಾಮಾಡ್ರಿ" ಅಂತ ನಮ್ಮಜ್ಜಗಿಂತ ಸಣ್ಣೋನಿರಬೇಕು ಸರ್ಪ ಉದ್ದಕ ನನಕಾಲೀಗ ಬಿದ್ದ ನನ್ನ ಅಸಲಿತನ ಹೊರಗ ಬಿದ್ದಿದ್ದು ನನಗೆ ಕಳವಳ ಉಂಟ ಮಾಡಿತ್ತು. ನಾನು ಪಕ್ಕ ಮೂಲಭೂತವಾದಿ ಆದ್ರು ಮನುಷ್ಯರೆಲ್ಲಾ ಒಂದೇ ಅನ್ನೋ ಸೋಗು ಹಾಕ್ಕೊಂಡು ಅಡ್ಡಾಡ್ತೀದೀನಿ ಅನಿಸಿತು. ಯಾಕೋ ಬೇಜಾರಾತು, ಮುದುಕ ಸರ್ಪನ ಹಿಡಿದು ಮೇಲೆತ್ತಿದೆ. ಆತನ ಎದಿಯೊಳಗ ಹೆದರಿಕೆ ಮಡುಗಟ್ಟಿತ್ತು. ತಾನು ಬ್ಯಾಡ ಅಂದೆ ಅನ್ನೋ ಒಂದೇ ಒಂದು ಮಾತು ಹೊರಕ ಬಿತ್ತಂದ್ರ ಮುಂಜಾನಿ ಆಗೋದ್ರಾಗ ತಮ್ಮ ಹಟ್ಟಿ ಒಂದು ಮನೀನೂ ಇರಂಗಿಲ್ಲಾ ಅಂತೇಳಿ ಥರಥರ ನಡಗತೊಡಗಿದ.

ಬಹಳ ಹೊತ್ತಿನತನಕ ನಾನು ಅವರ ಹಟ್ಟಿ ತಾವ ಕುಂತಿದ್ದೆ. ಕೊಂಯ್ಯಾನ ಮೈಮ್ಯಾಲಿನ ಗಾಯಕ ಅರಿಶಿನಪುಡಿ ಜೇನುತುಪ್ಪ ಹಚ್ಚಿದೆ. ಆದ್ರೂ ಮನಸಿಗ ಸಮಾಧಾನ ಆಗಲಿಲ್ಲ. ನಾನು ಏಟ ಪ್ರಯತ್ನ ಪಟ್ರು ನನ್ನೊಳಗಿನ ತನ್ನತನ ಹೊರಗ ಹಾಕಿಬಿಟ್ಟಿದ್ದೆ. ಮನಸ್ಸಿನ ಕಳವಳ ಹೆಚ್ಚಾಯಿತು. ಕೊಂಯ್ಯಾ ಬದಕತಾನೋ ಇಲ್ಲೋ ಅನ್ನೋ ಆತಂಕ. ಒಂದು ಹರಕ ಧೋತ್ರಕ್ಕ ನಮ್ಮ ನಮ್ಮೊಳಗಿನ ಮಂದಿಯೇ ಪರದಾಡೋದು ಕಂಡು ನನಗ ಬೇಜಾರಾಗಿತ್ತು ಸಾಲದಕ ನಾನು ನನ್ನ ಅಹಾಂನ್ನ ಹೊರಹಾಕಿದ್ದೆ. ನನ್ನೊಳಗೆ ಅಪರಾಧಿ ಭಾವನೆ ಕಾಡಾಕಹತ್ತು ಸರ್ಪಜ್ಜನ ತಾವ ಹೋಗಿ ಆತನ ಕಾಲು ಹಿಡ್ಕೊಂಡೆ "ಯಜ್ಜ ನನ್ನ ಬಾಯಿಂದ ಬರಬಾರದಾಗಿದ್ದ ಮಾತುಗಳು ಬಂದ್ವು, ಈ ಅಂತರದೊಳಗೆ ನನಗೆ ನಂಬಿಕೆ ಇಲ್ಲಾ ನನಗ ಉಳದಿದ್ದ ಇದೊಂದೆ ದಾರಿ. ಆ ಒಂದು ಕ್ಷಣ ನನ್ನ ಮನಸ್ಸಿನೊಳಗ ನಾನು ಮನುಷ್ಯ, ಬರಿ

ಮನುಷ್ಯ ಅನ್ನೋದು ಮರೆತುಹೋಗಿತ್ತು ನನ್ನ ಕ್ಷಮಿಸು" ಅಂತೇಳಿ ನನ್ನ ಅಳಲನ್ನು ತೋಡಿಕೊಂಡೆ. "ಯಪ್ಪಾ ಬಿಡ್ರಿ ನನಕಾಲ ಪಾಪ ಬರತೈತಿ ನಿಮಗ ನನ್ನಂತೋನ ಕಾಲ ಮುಟ್ಟಿದ್ರ" ಅಂತೇಳಿ ಕೊಸರಕೊಂಡ. ನಾನು ಒಳಗೊಳಗೆ ಒದ್ದಾಡತೊಡಗಿದೆ ಎಂಥ ಕೆಲ್ಸ ಆಗಹೋತು ಅಂದುಕೊಳ್ಳತೊಡಗಿದೆ.

ರಾತ್ರಿ ಎಂಟಕ ಮಂದಿ ಉಣ್ಣಾಕ ಬರೋದು ನಿಂತಿತ್ತು. ಮಂದಿ ಹೋದಿಂದ ಮನಿಯಾನಾರೆಲ್ಲಾ ಉಂಡು ಅದಮ್ಯಾಲ ದೊಂಡಿ ಹಿಂತಿರುಗಿ ಬಂದ್ನು. "ಯಪ್ಪ ಮುದುಕನ ಆತ್ಮ ಇಲ್ಲೆ ಸುತ್ತಾಡಕ ಹತ್ಯತಿ. ಒಂದ ಕೆಲ್ಸ ಮಾಡ್ರಿ, ಕೊಂಯ್ಯಾ ಉಟ್ಟಿರೋ ಧೋತ್ರ ಇಳವಿ ಊರತಡಾದು ಸಣ್ಣ ಹುಡ್ರ ಸ್ಮಶಾನದ ತಾವ ಒಯ್ದು ಸುಟ್ಟು ಹಾಕ್ರಿ. ಹಂಗಾರ ಮುದಿಯನ ಆತ್ಮ ಮ್ಯಾಲ ಹೊಕೈತಿ" ಅಂದಾಕಿನ ಹೊಂಟಹೊದ್ನು. ದೊಡಪ್ಪ, ಅಪ್ಪ, ಮಾವ ಕೈಯಾಗ ಹಿಡಿದಿದ್ದ ಎಲಿ ಹಿಡ್ಕೊಂಡು ಬಾಯಾನ ಅಡಕಿ ಜಗಿತ ಹರಿಜನ ಹಟ್ಟಿಗ ಓಡಿದ್ರು.

ಮಂದಿ ಓಡಿ ಬರೋದನ್ನ ನೋಡಿದ ಹಟ್ಟಿ ಮಂದಿ ಕೈಯಾಗ ಬಡಗಿ ಹಿಡ್ಕೊಂಡು ಒಂದ ಕಡೀಗ ಜಮಾಯಿಸಿದ್ರು. "ಲೇ ತಮ್ಮಾ ಸಾಯೋದ ಒಂದ ದಿನ ಹುಟ್ಟೋದ ಒಂದ ದಿನ, ಅವರೇನಾರು ಮೈ ಕೈ ಮುಟ್ಟಿದ್ರ ಹಾಕ್ಕಿ ಬಿಡ್ರಿ. ಎಟದಿನಾಂತ ಹಿಂಗೆ ಅವಮಾನ ತಾಳ್ಕೊಂಡ ಬದಕೋದು. ಏನೋ ಉಡಾಕ ಇಲ್ದಕ ಹೆಣದ ಮ್ಯಾಲಿನ ಧೋತ್ರ ಉಟ್ಕೊಂಡಾನ, ಏನ ತೆಪ್ಪಾತು. ಎಮ್ಮಿ, ಆಕಳ ಸತ್ತಾಗ ಪಸಂದಾಗೆ ಮಾತಾಡಿ ಎತ್ಕೊಂಡ ಹೋಗಾಕ ಅಂತಾರು. ಊರಾನ ಗೌಡ್ರ ಮಂದಿ ಅವರ ಮ್ಯಾಲ ಜಗಳಕ ಬಂದ್ರ ನಾವು ನೀವು ಅಣ್ಣತಮ್ಮಂದ್ರು ಇದ್ದಂಗ ನಮ್ಮ ನಮ್ಮೊಳ ಭೇದ ಯಾಕಂತಾರ, ಮೆಲ್ಲಗ ನಮ್ಮ ಗುಡ್ಲಿಗೆ ಬೆಂಕಿ ಇಡ್ತಾರೆ" ಅಂತ ಮಂದಿಗೆಲ್ಲಾ ತಿಳಿಸಿ ಹೇಳಿದ ಸರ್ಪ. ಹಟ್ಟಿಮಂದಿ ಹೂಂ ಅಂದವರೆ ಕೊಂಯ್ಯಾನ ಮನಿ ಮುಂದ ಬಂದು ನಿಂತ್ರು. ದೊಡಪ್ಪ, ಮಾವ, ತಮ್ಮಂದಿರೆಲ್ಲಾ ಮಂದಿ ನೋಡಿ ನಿಂತ್ರು. ಅಲ್ಲೆ ಇದ್ದ ನಾನು ಮುಂದಾಗಬಹುದಾದ ಅನಾಹುತ ಊಹಿಸಿದವನೆ ಮುಂದಕ ಬಂದೆ, "ಯಾಕ ಬಂದ್ರಿಲ್ಲಿ, ಕೊಂಯ್ಯಾನ ಹೆಣ ನೋಡಾಕೋ ಇಲ್ಲಾ ಅವನು ಉಟಿರೋ ಧೋತ್ರ ಮೈಲಿಗಿಯಾದ್ರೂ ತಗೊಂಡು ಹೋಗಾಕ. ಮನುಷ್ಯರ ರೂಪದಾಗಿರೊ ರಾಕ್ಷಸಮಂದಿ ನೀವು. ನಿಮ್ಮನ್ನ ಯಾವಾನು ಮನಿಯೊಳಗ ಬಿಡ್ತಾನು? ನೀವು ಯಾವ ಊರಿನ ಗೌಡಕಿ ಮಾಡೋರಂತ ನಿಮಗಿಂತ ಕೆಳಗಿರೋ ಮನುಷ್ಯನ ಹೆಣ ಬಿಳೋಹಂಗ ಹೊಡದ್ರಿ" ಸಿಟ್ಟಿಂದಲೆ ಹೇಳಿದೆ. ಮಂದಿ ಕೈಯಾಗಿನ ಬಡಗಿ ನೋಡಿ ದೊಡಪ್ಪ ಹೆದರಿದ್ರು. ಏಳೂರ ಜಗಳಗಂಟ ಮಾವ ಮಾತ್ರ "ಯಾಕೋ ಕಡಕ್ಕಾಗಿ ಅವರ ಪರವಹಿಸಿ ಮಾತಾಡಕ ಹತ್ತಿ ನಿಮ್ಮಜ್ಜನ ಆತ್ಮ ಮ್ಯಾಲ ಹೋಗಿಲ್ಲಂತ ದೊಂಡಿ ಬಂದ ಹೇಳಿದ್ನು. ಕೊಂಯಾ ಉಟ್ಟಿರೋ ಧೋತ್ರ ಒಯ್ದ ಸುಡುಗಾಡಿನೊಳಗ ಸುಡಾಕಂತ, ಅದಕ ಬಂದ್ವಿ" ಅಂದ. ಏನಂತ ಹೇಳಾಕಂತ ತಿಳಿಲಿಲ್ಲಾ ಕೊಂಯ್ಯಾ ಎಚ್ಚರ ತಪ್ಪಿ ಬಿದ್ದಿದ್ದ ಧೋತ್ರ ಬಿಚ್ಚಾಕ ಮಂದಿ ಅವಸ್ರ ಮಾಡ್ಕೊಂತ ಮುಂದ ಬರ್ತಿದ್ರು. ನಾ ಎಷ್ಟ ಹೇಳಿದ್ರು ಈ ಮಂದಿಗೆ ತಿಳಿಯೋದಿಲ್ಲಾ ಅಗಸರ ದೊಂಡಿ ನಮ್ಮೆಲ್ಲು ಜಾತಿಗಿಂತ ಶ್ರೇಷ್ಠಳು ಅಂತ ತೋರಿಸಿಕೊಳ್ಳಾಕ ಹುಡಿರೋ ನಾಟಕ ಅಂತ ನನಗೆ ತಿಳಿತು. ಇನ್ನಮ್ಯಾಲ ಹೆಣದ ಮೇಲಿನ ಬಟ್ಟಿ ಈ ಮಂದಿ ಮುಟ್ಲೆಬಾರದು ಆ ಪರಿ ಮಾಡಾಕ ಹೂಡಿರೋ

ಮತ್ತೊಂದು ನೆಪ. ಇದನ್ನ ಹೆಂಗ ಮಾಡಾಕ, ಅಂತೇಳಿ ಯೋಚನೆ ಮಾಡ್ದೆ. ಸದ್ಯಕ ತಲಿಗ ಏನೂ ಹೊಳಿಲಿಲ್ಲಾ ಆದ್ರೂ ಈ ಮಂದಿ ತಲಿಯೊಳಗಿಂದ ನಂಬಿಕೆಯನ್ನ ಬೇಗಸಹಿತ ಕೀಳ ಬೇಕಂತ ನಿರ್ಧರಿಸಿದೆ. "ನಮ್ಮ ಪಡಿಪಾಟ್ಲಯಾ ನನ್ನ ಶತ್ರುಗೂ ಬ್ಯಾಡ್ರಪ್ಪ. ಹಾಳಾದ ದ್ಯಾವ್ರೂ ನಮ್ಮನ್ನ ಮನುಷ್ಯರಾಗಿ ಹುಟ್ಟಿಸೋದ್ಕಿಂತ ಪಶುಪಕ್ಷಿಯಾಗಾರು ಹುಟ್ಟಿಸಿದ್ರ ಪಾಡಿತ್ತು" ಅಂದ ಸರ್ಪ. ನಮ್ಮ ದೊಡ್ಡಪ್ಪನಲ್ಲಿ ಏನಾರು ಬದಲಾವಣೆ ಆಕ್ಕೈತೇನಂತ ನೋಡಿದೆ. ಅವನೇನು ದರಕಾರ ಮಾಡಲಿಲ್ಲಾ ಯಾರು ಮಾತಾಡೋ ಗೋಜಿಗ ಹೋಗಲಿಲ್ಲಾ "ಹಿಂಗ್ಯಾಕಂತಿ ಸರ್ಪಜ್ಜ. ಮನುಷ್ಯನ ತಿಳ್ಕೊಳಾಕ ಮನುಷ್ಯನಲ್ಲಿರೋ ಮನಸಬೇಕು" ಅಂದೆ. ಮಾವ-ದೊಡಪ್ಪಗ ಗಾಬರಿ ಆತು. ನಮ್ಮ ಮರ್ಯಾದಿ ತಗಿತಾನಂದವರೆ "ನೋಡ್ರಪ್ಪ ಇದ್ದ ವಿಷಯ ಹೇಳಿವ್ನಿ. ಇನ್ನೂ ಬೇಗನೆ ಧೋತ್ರ ಬಿಚ್ಚಿಕೊಡೋ ಜವಾಬ್ದಾರಿ ನಿಮ್ಮದು ಅಂದ ದೊಡಪ್ಪ" ಏನಾದರೂ ಹೂಂನೆ ಅನ್ನೋ ಮಂದಿ ಏನೂ ಮಾತಾಡಲಿಲ್ಲ. ಸುಖಾಸುಮ್ನೆ ಮೈ ಚರ್ಮ ಕಳ್ಕೊಂಡ ಕೊಂಯ್ಯಾನ ಪರಿಸ್ಥಿತಿ ದೊಂಡಿಗ ತಿಳಿಯಾಕಂತ ನಾನು, "ಅಜ್ಜನ ಆತ್ಮಾ ತಿರುಗಾಡೋದನ್ನ ನಾವು ನೋಡಾಕು. ಈ ಮಾತ ಹೇಳಿದೋರು ಬಂದು ಅದನ್ನು ತೋರಿಸಲಿ. ಆ ಮ್ಯಾಕ ಧೋತ್ರ ಬಿಚ್ಚಾನಂತ" ಅಂದು ನೆರದ ಹುಟ್ಟಿ ಮಂದಿ ಮಾರಿ ನೋಡಿದೆ. ನೆರೆದ ಮಂದಿಗ ಆಟ ಬೇಕಿತ್ತು ಎಲ್ರೂ ಹೌದು ಅಂದಬಿಟ್ರು. ದೊಡಪ್ಪ-ಮಾವ ಮಾರಿ ಮಾರಿ ನೋಡ್ಕೊಂಡ್ರು. ನನ್ನ ಸ್ವಭಾವ ತಿಳಿದಿದ್ದ ದೊಡಪ್ಪ ದೊಂಡಿನ ಕರಿ ಕಳಿಸಿದ.

ಹೇಳೋದೆನೊ ಒಂದು ಸಣ್ಣ ಸುಳ್ಳು ಹೇಳಿದ ದೊಂಡಿಗ ಬಾಯಿ ಒಣಗಿದಂತಾಗಿ ಮಾತು ಗಂಟಲೊಳಗ ಸಿಕ್ಕೊಂಡ್ತು. "ಹೇಳಬೇ ಹಡಬಿ ಗುಟ್ಟಿದಾಕಿ, ಮಂದಿ ಜೀವದ ಕೂಡ ಆಟ ಆಡ್ತಿ ನೀ ಏನೋ ಭಾರಿ ದೊಡ್ಡ ಕುಲದೊಳಂಗ ನಿನ್ನ ಬೇಳಿ ಬೇಯಿಸಿಕೊಳ್ಳಾಕ ಮುಗ್ಧ ಜನರಿಗೆ ಜಗಳ ಹಚ್ಚಿ. ಮಾತಾಡು, ತೋರ್ಸು ಮುದುಕನ ಆತ್ಮ ಎಲ್ಲೈತಿ ನೋಡಾನು" ಅಂದೆ. "ಅದು ಹೆಂಗೆಲ್ಲಾ ಕಾಣಂಗಿಲ್ಲಾ, ಹಿಂದಕ ಯಾರಿಗೂ ಹಿಂಗ ಆಗಿತಂತೆ ಅವರು ಹೇಳಿದ ಮಾತನ್ನ ಹೇಳಿದೆ ಆಟೇಯಾ. ನಾ ಎಲ್ಲಿ ಆತ್ಮ ನೋಡಿನಂತ ಹೇಳಿನಿ" ಅಂತೇಳಿ ಪಾರಾಗಾಕ ನೋಡಿದ್ಲು. ಮಾವ-ದೊಡಪ್ಪ ಆಕಿ ಪರ ವಹಿಸಿ ಮಾತಾಡಾಕ ನೋಡಿದ್ರು. ನಾನು ಒಪ್ಪಲಿಲ್ಲಾ. ಪರಿಸ್ಥಿತಿಯನ್ನು ತಿಳಿಸಿ ಹೇಳಿ ಮುಂದ್ಕ ಹಿಂಗಾಗದಂಗೆ ಮಾಡೋ ನಿರ್ಧಾರಕ ಬಂದೆ. ದೊಂಡಿ ಅಪರಾಧಿ ಹಂಗ ಮಾರಿ ಕೆಳಗ ಹಾಕಿದ್ಲು. "ಈಗಾರ ತಿಳಿತೇನ್ರಪ್ಪ, ನಮ್ಮೊಳಗೆ ವಿಷ ಹಾಕೋ ಮಂದಿ ಗುಟ್ಟು ತನಗ ಬರೋದು ಬ್ಯಾರೇರು ಪಡ್ಕೊಂಡಾರಂತ ದೊಂಡಿ ಆಡಿದ ನಾಟಕ. ನೀವು ಅಂದ್ಕೊಂಡಿದೆಲ್ಲಾ ಸುಳ್ಳು, ಸ್ವರ್ಗ-ನರಕ ಪಾಪ ತೊಳದು ಪುಣ್ಯ ಕೊಡೋದು ನಮ್ಮನ್ನ ನಂಬಿಸಿ ಮೋಸ ಮಾಡೋ ಆಟ" ಅಂತೇಳಿ ದೊಡ್ಡ ಭಾಷಣ ಶುರು ಮಾಡಿದ್ದೆ ನನ್ನ ಮಾತು ಎಷ್ಟು ಮಂದಿ ಅರ್ಥ ಮಾಡಿಕೊಂಡ್ರೊ ಏನ ಕಥಿಯೊ, ಅಷ್ಟೊತ್ತಿಗ ಕೊಂಯ್ಯಾ "ಯಪ್ಪ ಹೊಡಿಬ್ಯಾಡ್ರೋ ಉಡಾಕ ಇಲ್ಲದಕ ಹೆಣದ ಮ್ಯಾಲಿಂದು ಕೆಲ್ಸಕ ಬರಂಗಿಲ್ಲಾ ಅಗಸರು ಬರಾಕ ಮುಂಚೆ ನಾನೆ ಮುಟ್ಟಿದ್ರೆ ವಾಪಾಸ ಇಸ್ಕೊಳೊದಿಲ್ಲಾ ಅಂತಂದು ಉಟ್ಕೊಂಡೆ" ಅಂತ ಕನವರಿಸತೊಡಗಿದ.

ಅಷ್ಟೊತ್ತಿನ ತನಕ ಪಸಂದಾಗೆ ನನ ಮಾತ ಕೇಳ್ತಿದ್ದ ಮಂದಿ ಓಡಿ ಅವನಾತಾವ ಹೋದವರೆ "ಕೊಂಯ್ಯಾ ಎದ್ದೇನೋ, ಮದ್ಲು ಧೋತ್ರ ಬಿಚ್ಚು. ಹಿಂದ್ಗಡೆ ಎಲ್ಲಾ ಹೇಳ್ತಿವು"

ಅಂದವರೆ ಅನಾಮತ್ತಾಗಿ ಎತ್ತಿ ಅವನು ಬರೆ ಬತ್ಲ ಅದಾನನ್ನೋ ಖಬರಿಲ್ದೆ ಮುದುಕನ ಧೋತ್ರ ಬಿಚ್ಚಿ ಅಪ್ಪನ ಕಡಿಗ ಬಿಸಾಕಿದ್ರು. ಏನ ಮಾಡ್ತಾರ ಈ ಜನ ಅಂತ ತಿಳಿಲಿಲ್ಲಾ ಕೊಂಯ್ಯಾ ಬತ್ಲೆ ಬಿದ್ಕೊಂಡಿದ್ದ. ಸರ್ಪ ಬಂದವನೆ "ದೊಂಡವ್ವ ನಮ್ಮನ್ನ ಪಾರಮಾಡ್ದೆ ನನತಾಯಿ, ಆ ಮುದುಕ ದೆವ್ವ ಆಗಿ ನಮ್ಮ ಹಟ್ಟಿ ಮಂದಿನ ಕಾಡ್ತೊದ್ರಿಂದ ಬಚಾವ ಮಾಡ್ದೆ" ಅಂದ. ನನಗೆ ತಲಿ ಸುತ್ತಿ ಬಂದಂಗಾತು. ಇಷ್ಟೊತ್ತಿಂದ ತಿಳಿಸಿ ಹೇಳಾಕ ಹತ್ತಿನಿ ಆದ್ರು ಈ ಮಂದಿ! ನನಗ ನಾಚಿಕಿ ಆತು. ದೊಡಪ್ಪ-ಮಾವ, ನನ್ನ ಸೋದರರು ಕೆಕ್ಕರಿಸಿ ನೋಡಿದ್ರು. ದೊಂಡಿ ನನ್ನ ಮಾರಿಗ ತಿವಿದಂಗ ಕಿಲಕಿಲ ನಕ್ಕು ಹೊಂಟಹೋದ್ಲು. ನಾನ ಮಾತ್ರ ಅಲ್ಲೇ ಬಿದ್ದಿದ್ದ ಮುದುಕನ ಧೋತ್ರ-ಬತ್ಲೆ ಮಕ್ಕೊಂಡಿದ್ದ ಕೊಂಯ್ಯಾನ್ನ ನೋಡ್ದೆ. ಅವನ ಮೈಮ್ಯಾಲಿನ ಬಾಸಾಳಗಳು ಮಾದು ನನ್ನ ಹೃದಯದ ಮ್ಯಾಲ ಮೂಡಿದಂಗಾಗಿ ನೋವು ಅನಿಸಿ ಕಣ್ಣು ಮುಚ್ಚಿದೆ. ಹಟ್ಟಿ ಮಂದಿ ಒಬ್ಬೊಬ್ಬರಾಗೆ ಖಾಲಿಯಾದ್ರು. ಕೊಂಯ್ಯಾ ಅವನ ಹೇಣ್ತಿ ಚಿಕ್ಕಿ ಅವನ ಮಗಳು ಮತ್ತ ನಾನು ಅಪರಿಚತರಂಗೆ ಬಹಳ ಹೊತ್ತು ಕುಂತಿದ್ವಿ. ಯಾರು-ಯಾರಿಗೂ ಸಂಬಂಧ ಇಲ್ದೋರ್ಹಂಗ.

ಕೊನೆಯ ಸಾಕ್ಷಿ

ಆ ಕಡೆ ಈ ಕಡೆಯಿಂದ ನೇರವಾಗಿ ಇರಿಯುತ್ತಿರೊ ನೋಟಗಳು, ಮತ್ತೊಂದು ಕಡೆಗೆ ಕೈಕಟ್ಕೊಂಡು ದೈನ್ಯತೆಯಿಂದ ನೋಡ್ತಿದ ಒಬ್ಬ ವ್ಯಕ್ತಿ ಕೊಳಕು ಅಂಗಿ ಹರಕು ಪ್ಯಾಂಟು ಹಾಕ್ಕೊಂಡು ಕೈಕಟ್ಟಿ ನಿಂತಿದ್ದ. ಯಾರೊ ವಿಚಿತ್ರ ಮನುಷ್ಯ ಬಂದ ಕೈಯಾಗ ಗದೆ, ಹಿಂದೊಂದು ದೊಡ್ಡ ಕ್ಯಾಣ-ಎಲ್ಲಿ ನೋಡಿದ್ದೆ ಈ ಮನುಷ್ಯನನ್ನ ತಲೆ ಕೆರ್ಕೊಂಡ ಯೋಚನೆ ಮಾಡಿದೆ. ನೆನಪಾಗಲಿಲ್ಲಾ, 'ಹಾಂ, ಹೌದು ಅಜ್ಜಿ ಸಾಯೋಕ ಮದ್ಲು ಯಮನ ಹತ್ರ ಹೋಗಿ ಅವನನ್ನ ಭೆಟ್ಟಿಯಾಗಿ ಮಾತಾಡಿಸಿ ಬಂದ ಕತೆ ಹೇಳ್ತಿದ್ಲು ಈತನೆ ಇರಬೇಕು' ಅಂದ್ಕೊಂಡೆ. ದೊಡ್ಡದೊಂದು ಪುಸ್ತಕದ ಮುಂದೆ ಕುಂತಿದ್ದ ಆ ವ್ಯಕ್ತಿಯೇ ಶ್ರೀಮಾನ್ ಚಿತ್ರಗುಪ್ತನಿರಬೇಕು ಅನಿಸಿತು. ಯಮಧರ್ಮ ಅಪ್ಪಣೆ ಕೊಡಿಸಿದ ಚಿತ್ರಗುಪ್ತರೆ ಸಭೆ ಆರಂಭವಾಗಲಿ ಎಂದು, "ಮಾ ಪ್ರಬು ಈತನು ಕರ್ನಾಟಕ ಸರ್ಕಾರದ ಕೆಎಸ್ಆರ್‌ಟಿಸಿ ಡಕೋಟಾ ಬಸ್ಸಿನ ಡ್ರೈವರ್ ಹುಸೇನಿ, ಒಂದು ಶುಭ ದಿನದಂದು ಹಲವಾಗಲು, ನಿಟ್ಟೂರು, ಸಬಾವುಟ್ ತಾಂಡ, ಸುತ್ತಮುತ್ತಲಿನ ಹಳ್ಳಿ ಜನರು ಈತನ ಬಸ್ಸನ್ನು ಹತ್ತಿದರು. ಆಗ ಹಲವಾಗಿಲಿನಿಂದ ಮದುವೆಗಂತ ಹೊಂಟಿದ ಒಂದಿಬ್ಬರು ದಂಪತಿಗಳು ಇದ್ದರು ಅವರೆ ಇವರು ನಾಣಯ್ಯ ಅಂತ" ನನ್ನ ಕಡೆಗೆ ಬೆಟ್ಟು ಮಾಡಿ ತೋರಿಸಿದರು ಚಿತ್ರಗುಪ್ತರು. ಇತನದೇನು ಸಮಸ್ಯೆ ನಾನು ಪಿಳಿ ಪಿಳಿ ಕಣ್ಣು ಬಿಡ್ತಾ ಇದ್ದೆ. ಜನ ನನ್ನನ್ನೆ ನೋಡ್ತಾ ಇದ್ದಾರೆ ಅನಿಸಿತು ಏನೊ ಹೇಳಬೇಕಂತ ಬಾಯಿ ತೆರದೆ. ಒಂದುವರೆ ಅಡಿಯ ಚೇಲನೊಬ್ಬ "ಸದ್ದು" ಅಂದ, ಚಿತ್ರಗುಪ್ತ ಕತೆಯನ್ನು ಮುಂದುವರೆಸಿದ "ಹುಸೇನಿ ಬಸ್ಸು ಎಂದಿನಂತೆ ಹರಪನಹಳ್ಳಿಯಿಂದ ಅಲ್ಲಲ್ಲೆ ನಿಂತು ನಿಂತು ಜುಕ್ಕಜುಲುಮಿಯಿಂದ ಮುಂದಕ್ಕ ಹೋಗ್ಲೊ ಬ್ಯಾಡವೊ ಅಂತ ಸಾಗ್ತಾಬಂತು. ಬರೊಮುಂದ ದಾರಿಯೊಳಗ ಎಷ್ಟು ನಟ್ಟು ಬೊಲ್ಟು ಕಳಚ್ಕೊಂಡ ಬಿದ್ವೋ. ಡ್ರೈವರ ಮಾತ್ರ ಕೈಯಾಗ ಜೀವ ಹಿಡಿದು ನಿಲ್ಸಿ ನಿಲ್ಸಿ ಸಮಧಾನ ಹೇಳ್ತಾ, ಮೈದಡವುತ್ತಾ, ಪುಸಲಾಯಿಸಿ, ಸಮಜಾಯಿಸಿ ತಗೊಂಡ ಬರ್ತಾ ಇದ್ದು". "ಈ ಅಧಮನ್ಯಾಕೆ ಇಂತ ಬಸ್ಸು ಹೊಡಿಬೇಕು" ಯಮಧರ್ಮ ಗುಡುಗಿದ. "ಹೆಗ್ಗ್ರಂಗಳ ಪ್ರಭಾವ ಮಾಪ್ರಭು" ಎಂದ ಚಿತ್ರಗುಪ್ತ. "ನಮಗೆ ಅರ್ಥ ವಾಗಲಿಲ್ಲಾ ತಮ್ಮ ಭಾಷೆ" ಯಮಧರ್ಮ ಕೇಳಿದ "ಅಯ್ಯೋ ಇವತ್ತಿನವರೆಗೆ ಭಾರತ ಖಂಡದೊಳಗ ಯಾರಿಗೂ ಅರ್ಥ ಆಗೆ ಇಲ್ಲಾ ಇನ್ನೂ ತಮಗೆಲ್ಲಿಂದ ಅರ್ಥವಾಗಬೇಕು" ಚಿತ್ರಗುಪ್ತ ಗೊಣಗಿಕೊಂಡ "ಹೂಂ ಮುಂದೆ" ಯಮಧರ್ಮ ಅಪ್ಪಣೆ ನೀಡಿದ "ಈ ಹುಸೇನಿ ಅವನ ಅಧಿಕಾರಿಗಳಿಗೆ ಹೇಳಿದ ಸಾಮಿ, ಇದು ಚೆನ್ನಾಗಿಲ್ಲಾ ಬ್ರೇಕ್ ಹಾಕಿದ್ರೆ ಗೇರ್ ಬೀಳುತ್ತೆ ಗೇರ್ ಹಾಕಿದ್ರೆ ಬ್ರೇಕ್ ಬೀಳುತ್ತೆ, ದಾರಿಯೊಳಗ ನೂರ ಸಲನಾರು ನಿಲ್ಲುತ್ತೆ ಅಂತ ಬಡ್ಕೊಂಡ,

ಲೇ ಹುಸೇನಿ ಬಸ್ಸ್ ಹತ್ತಿತಿಯೋ ಇಲ್ಲಾ ಪೆನ್ಷನ್ ತಗೊಂತಿಯಾ, ಕೆಎಸ್ಸ್‌ಆರ್‌ಟಿಸಿ ಅಂದ್ರೆನೆ ಹಿಂಗೆ ಇರೊ ಲಟಕೂರಿ ಬಸ್ಸುಗಳನ್ನು ಓಡಿಸಿಯೇ ಬಂಡ್ವಾಳ ಮಾಡ್ಕೊಬೇಕು. ಅಂತ ರೋಪ್ ಹಾಕಿ ಕಳುಹಿಸಿದ. ಹರಪನಹಳ್ಳಿ ಬಿಟ್ಟು ಜೈನರ ಬಸ್ತಿತಾವ ಬಂದು ಒಂದ ವಸ್ತಿ ಮಾಡ್ತು ಅನ್ನಿ ಆಮ್ಯಾಲ ದೊಡ್ಡ ತೆಂಬಕ ಬರೊ ಅಷ್ಟೊತ್ತಿಗೆ ಉಬ್ಬಸರೋಗ ಬಂದೋರ ಗತಿಲೆ ತೇಕಾಕ ಹತ್ತು. ಎತ್ತರದ ತೆಂಬಹತ್ತಿಸಲಿಕ್ಕೆ ನೂರಸಲನಾರು 'ಅಲ್ಲಾ' ಅಂದ್ರೆ ದೇವರು ಆತನ ಹೆಸರು ಹೇಳಿದ. ಅಂತನಹಳ್ಳಿಗ ಬರೊಹೊತ್ತಿಗ ನಿಸ್ತೂಕ ಆಗಿ ಸುಧಾರಿಸಿಕೊಂಡಿದ್ದೆ ಸಿದಾ ಓಡಿದ್ದು ನೀಲಗುಂದ ಕ್ರಾಸ್‌ದಾಟಿ ಹಲವಾಗಲ ಪೋಲಿಸ್ಟೇಷನ್ ಮುಂದಿನ ಹುಣಸಿಮರದ ಬುಡಕ ಬಂದು ವಿಶ್ರಾಂತಿ ತೆಗೊಳ್ತು. ಅಲ್ಲಿದ್ದ ಮೂವತ್ತ ನಲ್ವತ್ತ ಮಂದಿ ಭೂಮಿ ಮ್ಯಾಲಿರೊ ಸಿನೀಮಾ ಟೆಂಟ್‌ಗಳಿಗೆ ಒಮ್ಮೆಲೆ ನುಗ್ಗೊ ಹಂಗ ನುಗ್ಗಿದ್ರು. ಅದ್ರಾಗ ಹತ್ತದೋನೆ ನಮ್ಮನಾಣಯ್ಯ. ಆರಾಮದಿಂದಲೆ ತಂಟೆ ತಕಾರಿರಲ್ಲದೆ ಹೊಂಟಿತ್ತು, ತುಂಗಭದ್ರ ನದಿ ಏರಿ ಹತ್ತೊಮುಂದೆ ತಕರಾರ ತಗದು ಸಣ್ಣ ಹುಡುಗರು ಮೊಂಡ ಹಠ ಮಾಡೊಹಂಗೆ ದಿಬ್ಬ ಹತ್ತೊದ ಬಿಟ್ಟು ಇಳಿಜಾರಗುಂಟ ಕೆಳಗಿಳದು ಧಡ್‌ಂತ ಮುಗ್ಗಲೂರಿತು ಒಳಗಿದ್ದ ಮಂದಿ ಕಿಚೋ ಅಂತಂದ ಚೀರಿಕೊಂಡ್ರು. ಕೆಲವರ ನಡಮುರದ್ರ ಕೆಲವರ ತಲಿ ಹೊಡಿತು. ಮತ್ತೆ ಕೆಲವರವು, ಕೈ, ಕಾಲು ಉಳಕಿದವು. ಡ್ರೈವರ ತಾನ ಮಾಡದ ತಪ್ಪಿಗೆ ಯೋಚ್ನೆ ಮಾಡದೆ ಯರ್ರಾ ಬಿರ್ರಿಯಾಗಿ ತದಕೊ ಮಂದಿಯಿಂದ ತಪ್ಪಿಸಿಕೊಂಡ ಹಲವಾಗಲು ಸ್ಟೇಷನಿಗ ಹೋದವನೆ ಶರಣಾದ. ಆ ಊರಾಗಿದ್ದ ತರ್ಲೆ ವಕೀಲನೊಬ್ಬ ಮಂದಿನೆಲ್ಲಾ ಸೇರ್ಸಿ ಪೊಲೀಸ್ ಕಡಿಂದ ಪಂಚನಾಮೆ ಮಾಡ್ಸಿ ಕೇಸ ಜಡದು ಡ್ರೈವರ್ ಹುಸೇನಿದೆ ತೆಪ್ಪಂತ ದಾವೆ ಹೂಡಿದ. ಈಗ ಐದ ವರ್ಷಗಳಿಂದ ನಿರಪರಾಧಿ ಹುಸೇನಿ ಕೆಲ್ಸ ಕಳ್ಕೊಂಡು ತಿಂಗಳಿಗೊಮ್ಮೆ ಕೋರ್ಟು ಕಚೇರಿ ಅಂತಂದು ಅಲಿತಿದ್ದಾನೆ. ಇಂಡಿಯಾದ ಕೋರ್ಟುಗಳು ಕೇಸಗಳ ರಾಶಿ ಹಾಕ್ಕೊಂಡು ನಿದ್ದೆ ಮಾಡ್ತಾವೆ ಅನ್ನೋದು ತಮ್ಮ ನಜರಿಗೂ ಬಂದ ವಿಷಯಾನೆ, ಎಲ್ಲಾ ಮುಗದೀಗ ಕೊನೇಯ ಸಾಕ್ಷಿಯಾಗಿ ನಾಣಯ್ಯನ ಕರದಾರ. ಒಂದ ಕಡೆ ಅರ್ಧ ಇಂಚ ತಲಿಹೊಡ್ಕೊಂಡು ಪಟ್ಟು ಹಾಕಿಸಿಕೊಂಡೋರು ಇಪ್ಪತ್ತೈದು ಸಾವಿರಕ್ಕಾಗಿ, ಒಂದಿಂಚ್ಬು ತಲೆ ಹೊಡದು ಎರಡು ಸ್ಟಿಚ್ ಹಾಕಿಸಿಕೊಂಡೋರಿಗೆ ಐವತ್ತಸಾವಿರ, ಸೊಂಟ ಮುರ್ಕೊಂಡವರಿಗೊಂದ ಮೂವತ್ತು, ಕಾಲು ಕೈ ಮುರ್ಕೊಂಡವರಿಗೆ ಹತ್ತು ಸಣ್ಣ ಪುಟ್ಟ ತರಚಿದ ಗಾಯ ಆದವರಿಗ ಐದು ಹತ್ತು ಕನಿಷ್ಠ ಸಿಕ್ಕೇ ಸಿಗ್ತಾವಂತ ವಕೀಲ ಇಡೀ ಬಸ್ಸಿನ ಜನರಿಗೆ ಗಿಡ ಹತ್ತಿಸಿರೊದ್ಕ ಈ ಮಂದಿ ಪುಗಸಟ್ಟೆ ಸಿಕ್ಕಷ್ಟು ಸಿಗಲಿ ಅಂತಂದು ಅವನು ಕೇಳಿದ ಪೀ ಕೊಟ್ಟು ಕಾಯ್ತಿದ್ದಾರೆ. ದೂರದ ಊರಾಗ ನೌಕರನಾಗಿರೊ ಹಾಂ, ಕೇಂದ್ರ ಸರ್ಕಾರದ ನೌಕರ ನಮ್ಮ ನಾಣಯ್ಯ ಕಡೇಯ ಸಾಕ್ಷಿ" ಯಾರೊ ಮೈ ಹಿಡಿದು ಅಲ್ಲಾಡಿಸಿದ್ಕ ನಾಣಯ್ಯ ಗಡಿಬಿಡಿಯಿಂದ ಎಚ್ಚರಗೊಂಡ.

"ಯಾರದು ಎಬ್ಬಿಸಿದ್ದು" ಕಿರಚಾಡಿದ "ಐ ಗಡಾನೆ ಎದ್ದೇಳ್ರಿ ನಾಳೆ ಹರಪನಹಳ್ಳಿ ಕೋರ್ಟಿಗ ಹೋಗಾಕು ಹಿಂಗ್ಯಾಕ ಸತ್ತೊರ ಗತಿಲೆ ಮಕ್ಕೊಂಡಿರಿ" ಅಂದಾಕಿನೆ ಸ್ವಾಟಗ ತಿವದ್ಲು. "ಎಯ್, ಇನ್ನೊಂದೀಟ ಸುಮ್ಕಿರಬಾರದಿತ್ತೇನೆ ಯಮ ಅದೇನ ನಿರ್ಣಯ ಕೊಡ್ತಿದ್ದ ಅಂತ ಗೊತ್ತಾಗತಿತ್ತು ಅದರ ಮ್ಯಾಲ ನಾನು ಹೋಗಿ ಕೋರ್ಟಿನೊಳಗೆ ಮಾತಾಡ್ತಿದ್ದೆ" ಅಂದ.ಯಾವ ಯಮ ರೀ ಅವನು, ಮನ್ನೆ ನಿಮ್ಮ ತಮ್ಮ ಕೋರ್ಟಿನಲ್ಲಿ ದುಡ್ಡ ಬರುತ್ತೆ ಅಂತ ಹೇಳಿ ಟೆಲಿಗ್ರಾಂ

ಮಾಡಿದ ದಿನದಿಂದ ಬರಿನನ್ನ ತಾಳಿಸರದ ಯೋಚನೆ ಮಾಡ್ತಾ ಅದೀನಿ. ಪಕ್ಕದ ಮನೆ ಪುಂಡಲೀಕ ಭಟನ ಹೆಂಡ್ತಿ ಒಂದ ಸೊಟ್ಟ ತಾಳಿ ಸರ ಹಾಕ್ಕೊಂಡ ಅದೇನ ದಿಮಾಕ ಮಾಡ್ತಾಳೆ ಅಂತೀರಾ, ಅದೇನ ಸಿಮಿಯೊಳಗಿಲ್ಲದ ಸರ ಅಕೀನೆಕಂಡಾಳೊ ಏನೊ. ಅಕ್ಸಿಡೆಂಟ್‌ನಾಗ ನಿಮಗ ತಲಿಹೊಡದು ಬ್ಯಾಂಡೇಜ್ ಹಾಕಿತ್ತು. ನನಗೆ ಅಲ್ಲಲ್ಲಿ ತರಚಿದ ಗಾಯಗಳಾಗಿದ್ವು ಎರಡು ಸೇರಿದ್ರ ಒಂದ ತಾಳಿಸರ ಇಲ್ಲಾ ನೆಕಲೆಸ್ ಯಾವದಾರು ಒಂದಾಗುತೆ" ಅಂತೇಳಿ ಬಂಗಾರದ ಸರದಾಳಕ್ಕೆ ಇಳಿದಿದ್ಲು. ಅಕಿ ಮಾತ ಕೇಳಿ ಹಾಸಗಿ ಬಿಟ್ಟ ಗಡಿಬಿಡಿಯಿಂದ ಎದ್ದವನೆ "ಹಂಗೆಂಗ ಆಕೈತಿ, ನಾನು ಸಾಲಿ ಕಲಿಯೋ ದಿನದಿಂದ ಕನಸ ಕಾಣ್ತಾಅದೀನಿ ಒಂದ ಬೈಕ ತಗೋ ಬೇಕಂತ ದುಡ್ಡೇನಾರ ಬಂತಂದ್ರ ಹೋದ್ರ ಹೋಗಲಿ ಒಂದ ಹತ್ತ ಸಾವರ ಸಾಲ ಮಾಡಿ ಕೈಯಿಂದ ಹಾಕಿ ಬರೋ ಕೋರ್ಟ್‌ನ ದುಡ್ನ ಯಾರಿಗೂ ಹತ್ತ ಪೈಸಾ ಕೊಡದಂಗೆ ಗಾಡಿ ತಗೊಳಾಂವss" ಕಡ್ಡಿ ಮುರದಂಗ ಹೇಳಿದ. "ನನ್ನ ಸರಕ್ಕಿಂತ ನಿಮ್ಮ ಸೈಕಲ್ ಮೋಟರ ದೊಡ್ಡದ, ಇಲ್ಲಾ ಮದ್ವಿಯಾಗಿ ಎಂಟು ವರ್ಷ ಆತು ಎರಡು ಮಕ್ಕಳ ತಾಯಿನೂ ಆದೆ ಒಂದ ಸಾಮಾನಾದ್ರು ತಂದಕೊಟ್ಟಿರೇನು? ನಮ್ಮಪ್ಪನ ಮನಿಯಿಂದಲೆ ಸೀರಿ ತಂದ ಸಾಕಾಗಿ ಹೋತು" ಎಕ್ಸ್‌ಪ್ರೆಸ್ ರೈಲಿನಂಗ ಬಿಟ್ಲು ರೀಲನ್ನ, ನಾನು ಹೌಹಾರಿ ಅಕಿ ಹೇಳಿದ್ಕ ಹೂಂ ಅನ್ನೊ ಹಂಗ ಮಾಡಿದ್ಲು.

ಮುಂಜಾನೆ ಆರುವರಿ ಬಸ್ಸಿಗ ನಾನು ನನ್ನ ಹೇಣ್ತಿ ಮಗ ಮೂವರು ಹೊಂಟೆ ಬಿಟ್ವಿ, ಸಂಜೆ ಐದ ಗಂಟೆಗ ತುಂಬಲೂರ ತಲುಪಿದ್ವಿ. ಮಾರನೆ ದಿನ ಮುಂಜಾನೆ ಕೋರ್ಟು, ಕೋರ್ಟು ಅಂದ್ರ ಗಡಗಡ ನಡಕ ಬರ್ತಿತ್ತು ನನಗೆ ಯಾಕೊ ಅಪರಾಧಿಭಾವ ಕಾಡತೊಡಗಿತು. ಹರಪನಹಳ್ಳಿಗ ಹೋದಾಗ್ಲೆ ಒಬ್ಬ ಹಳೆ ಗೆಳೆಯ ಸಿಕ್ಕ. ನನಗೆ ಆಕ್ಸಿಡೆಂಟ್ ಆಗಿದ್ದು, ನನಗೆ ಮತ್ತ ನನ್ನ ಹೆಂಡತಿಗೆ ಗಾಯ ಆಗಿದ್ದು, ಆದಾಗ ಈಗಾಗಲೇ ಐದು ವರ್ಷಗಳಾಗಿರಬೇಕು. ನಾನು ಅದನ್ನ ಮರೆತೆ ಬಿಟ್ಟೇನಿ ಅಂತ ವಿವರಿಸಿದೆ. ಡಾಕ್ಟರ್ ಮುಂದೆ ರೋಗಿ ತನ್ನ ರೋಗ ಹೇಳೋಹಂಗೆ, ಎಲ್ಲಾ ಮೌನವಾಗೆ ಕೇಳಿದ ಆತ ಒಳಗ ಹೋಗಿ ಒಂದು ಇಂಚಪಟ್ಟಿ ತಂದು, ಗಾಯ ಒಂದಿಂಚ, ಎರಡಿಂಚ, ಗಾಯದ ಕುರುಹು ಇದೆಯಾ ಮಾಯವಾಗಿಬೆಯ್ಯ, ಕೆಲವು ಪ್ರಶ್ನೆ ಕೇಳಿದ ನಾನು ಅದಕ್ಕೆ ನಕಾರಾತ್ಮಕ ಉತ್ತರ ಕೊಟ್ಟೆ, ಬಹುಶಃ ಇದು ಫಲಿತಾಂಶ ನೀಡದ ಕೇಸು ಅಂದ್ಕೊಂಡವನೆ ಸ್ವಲ್ಪ ಹೊತ್ತು ಹಾಗೆ ಹೀಗೆ ಮಾತಾಡ್ಸಿ ಕೈಗೊಂದು ಬಿಲ್ ಕೊಟ್ಟ ನಾನು ಗಾಬರಿಯಿಂದ ಆತನ ಕಡೆ ನೋಡಿದೆ "ಐವತ್ತು ಕನ್ಸಲ್‌ಟೇಸ್ಸಿ ಫಿ" ಅಂದ. ತಲೆ ತಿರುಗಿ ಬಿಳೊ ಹಾಗಾಯ್ತು. "ನಾನು ಮಾತಾಡಿದ್ಕೆ ಐವತ್ತ ರುಪಾಯಿ ಕೊಡಬೇಕೆನ್ರಿ" ದಬಾಯಿಸಬೇಕು ಅಂದ್ಕೊಂಡೆ ಮೊದ್ಲೆ ವಕೀಲ ಮತ್ತ ಯಾವದಾದ್ರು ಕೇಸು ನನ್ನ ಮ್ಯಾಲ ಜಡಿದಾನು ಅಂದ್ಕೊಂಡವನೆ ನಲ್ವತ್ತೈದು ಆತನ ಕೈಯಾಗಿಟ್ಟು ಹಿಂದಕ್ಕ ತಿರುಗಿ ನೋಡ್ದಂಗ ಸೀದಾ ಕೋರ್ಟ ಕಡೀಗ ಹೊಂಟ್ವಿ. ಹರಪನಹಳ್ಳಿ ನಟ್ಟನಡಕಿದ್ದ ಕೋರ್ಟನ್ನ ಹಾಳ ಮನಿ ಜನ ಹೊಸದೊಂದು ಕಟ್ಟಡ ಕಟ್ಟಿ ಊರಾಚೆ ಮೂರ ಮೈಲಿದೂರ ಕಟ್ಟಿಸಿ ಅಡ್ಡಾಡೊ ಹಳ್ಳಿ ಮಂದಿ ನಾಯಿ ಜಗಳಕ್ಕೂ ಕೋರ್ಟು, ಕೋಳಿ ಜಗಳಕ್ಕೂ ಕೋರ್ಟು ಅಂತ ಪದೇ ಪದೇ ಬರೋದಾರ ತಪ್ಪಲಿ ಅಂತ ಯಾರೊ ಮಾಡಿರೋ ಪ್ಲಾನ್ ಅಂದ್ಕೊಂಡು ವಿಧಿ ಇಲ್ಲದೆ ನಡೆದೆ ಹೊಂಟ್ವಿ.

ಕೋರ್ಟಿನ ಕಾಂಪೌಂಡ್ ಒಳಗ ಕಾಲಿಡುತ್ತಿದ್ದಂಗೆ ಹೇಂಗೊ ನನ್ನ ಗುರ್ತಿಸಿದ ಡ್ರೈವರ

ಹುಸೇನಿ ನಿಜವಾಗ್ಲೂ ಕೊಳಕು ಹರಕು ಬಟ್ಟೆ ಉಟ್ಕೊಂಡು "ಸಾಬ್, ನಂದುಕೆ ಹೇಣ್ತಿದು ಮಕ್ಕಳ್ದು ಭವಿಷ್ಯ ನಿಮ್ದು ಕೈಯಾಗೈತೆ, ನೀವೆ ಕೊನೆ ಸಾಕ್ಷಿ, ನೀವು ಹ್ಯಾಂಗಂತಿರೊ ಹಂಗೆ ಜಡ್ಜ ಸಾಹೇಬ ನ್ಯಾಯ ಹೇಳ್ತಾನ ನನ್ನ ಉಳಸಿ" ಅಂತ ಹೇಳಿ ನನ್ನ ಕಾಲಿಗ ಬಿದ್ದು ಉರಳಾಡಿದ. ನನಗೆ ಕಕ್ಕಾಬಿಕ್ಕಿಯಾತು ಇಷ್ಟೊಂದ ಜನರ ನಡುವೆ ಮಜುಗರದಿಂದಲೆ ಬಿಡಿಸಿಕೊಂಡು "ಆಯ್ತು ಏಳಯ್ಯ" ಅಂದು ಒತ್ತಾಯದಿಂದ ಅವನಹತ್ರ ಬಿಡಿಸಿಕೊಂಡ ಒಳಹೋಗ್ತಿದ್ದಂಗೆ ನಮ್ಮ ಪರವಾಗಿ ವಾದ ಮಾಡ್ತಿರೊ ವಕೀಲ ಹಾಂಗೊ ನನ್ನ ಗುರುತಿಸಿ ಓಡಿ ಬಂದ "ನೋಡ್ರಿ ಮಿ" ಅಂದ ನಾನು "ನಾಣಯ್ಯ" ಅಂದೆ. "ಹೌದು ಅಂದಂಗೆ ನಾಣಯ್ಯ ಇಲ್ಲಿನೋಡ್ರಿ" ಅಂತ ತನ್ನ ಹಿಂದಿದ್ದ ಮಂದಿ ಕಡೀಗ ಕೈ ಮಾಡಿ ತೋರ್ಸಿದ. ಅರವತ್ತ ಮಂದಿ ಹರಿಶ್ಚಂದ್ರನ ದುಡ್ಡಿಗಂತ ಪೀಡಿಸಿದ ವಿಶ್ವಾಮಿತ್ರನ ಸಂತತಿಯಂತೆ ಕಂಡ್ರು. ಇಷ್ಟೊಂದು ಜನ ಬಸ್ಸಿನಲ್ಲಿದ್ರ ಅವತ್ತು ಆ ಅಪರಿಚಿತ ಮುಖಗಳಲ್ಲಿ ಅಂದಿನ ಆಕ್ರಂದನ ನೋಡಾಕ ಹವಣಿಸಿದೆ ಎಲ್ಲಾ ಮುಗ್ದ ಮುಖಗಳು ಮಾಯವಾಗಿ ಕೃತಕ ಮುಕಗಳಾಗಿದ್ವು. ಒಂದೊಂದು ಮುಖವು ನನ್ನ ಇರಿಯುತ್ತ "ಲೇ ಹುಡುಗ ಇವತ್ತ ಕೋರ್ಟನ್ಯಾಗ ಆ ಡ್ರೈವರಂದೇ ತಪ್ಪು ಅಂತ ಹೇಳು" ಜೋರಾಗಿ ಕೂಗಿದ "ಅವನಿಗೆ ಡ್ರೈವಿಂಗ್ ಬರೋದಿಲ್ಲಾಂತ ಹೇಳು" ಅವನು ಸರಾಯಿ ಕುಡಿದಿದ್ದ, ಅವನು ಕೋಮುವಾದಿ" ಒಂದೊಂದು ಮುಖಗಳು ವಿಕಾರವಾಗಿ ಕೂಗುತ್ತಿದ್ದವು ನನಗೆ ವಾಕರಿಕೆ ಬಂತು. "ನಾನು ತಪ್ಪ ಮಾಡಿದೆ ನನ್ನ ಹೇಣ್ತಿ ಮಾತ ಕೆಳ್ಕೊಂಡು ಬರಬಾರದಿತ್ತು" ಒಬ್ಬ ಮುದುಕ ನನ್ನ ಹತ್ರ ಬಂದವನೆ "ನೋಡ ಮಗ ಐದ ವರ್ಷ ಆತು ಕಾಯಕ ಹತ್ತಿರೋದು ಆಟು ದುಡ್ಡಬಂದ್ರ ಕಡಿಗಾಲದಾಗ ಪಾಡಾದಿತಂತ ಈ ವಕೀಲಗ ದುಡ್ಡ ಕೊಟ್ಟೇನಿ ನನ್ನ ಅನಾದಿ ಸಂಬಂಳದಾಗಿಂದ ಏನೇನು ಆಗ್ಲಿಲ್ಲ, ಹುಷಾರು" ಅಂದವನೆ ಮರಿಯಾದ. ಮತ್ತೊಬ್ಬ "ಸಾಹೇಬ್ರ ಇದೇ ದುಡ್ಡನ್ಯಾಗ ನನ್ನ ಇಬ್ಬರು ಹೆಣ್ಣು ಹುಡುಗಿಯರ ಲಗ್ನ ಮಾಡಬೇಕು ಅಂದ್ಕೊಂಡಿವ್ನಿ" ಅಂದು ಸರಿಯೊ ಹೊತ್ತಿಗೆ ಮತ್ತೊಬ್ಬ ಸರಾಯಿ ಕುಡದು ಘಾಟವಾಸನೆ ಹೊಡಿತ್ತಿದ್ದ ಬಂದವನೆ "ನೋಡು ತಮ್ಮಾ ಜೀವಮಾನದಾಗ ತುಂಡ ನೆಲ ಕಂಡೋನಲ್ಲಾ ಜಬ್ಬರಸಾಬಿ ಹೊಲ್ದಾಗಿಂದ ಅರ್ಧ ಎಕ್ಕರಿ ಹೊಲ ತಗೋಬೇಕು ಅಂದ್ಕೊಂಡಿನಿ ನೀ ಮಾತ್ರ ಮೋಸ ಮಾಡಬ್ಯಾಡ' ಅಂದ. ಏನ್ಮಾಡಕಂತ ತಿಳಿಲಿಲ್ಲಾ, ಒಂದ ಕಡೆ ವಕೀಲ ಮತ್ತೊಂದು ಕಡೆ ಈ ಜನ ನನ್ನ ಮ್ಯಾಲ ನಿಗಾ ಇಟ್ಟಿದ್ರು. ಆ ಕಡೆ ತನ್ನ ಅಸ್ತಿತ್ವವನ್ನೇ ಕಳ್ಕೊಂಡು ತನ್ನ ನಂಬಿದವರ ಒಡಲಿಗೆ ಕಿಚ್ಚು ಹಚ್ಚಲಿರೊ ಪರಿಣಾಮ ಕೇಳಿ ಹುಚ್ಚನಾಗಲಿರೊ ಹುಸೇನಿ. ನನ್ನ ಹೇಣ್ತಿ ಬಂದಾಕಿನೆ, "ಒಳಹೋಗಿ ಜಡ್ಜಸಾಬ ಮುಂದ ಸರೀಗ ನಿಂತ ಮಾತಾಡ್ರಿ. ಹಾಳಾದೋರು ನಿಮ್ಮನ್ನ ಬಿಟ್ಟು ನನ್ನಾರ ಹಾಕಿದ್ರ ಆ ಡ್ರೈವರಗ ಒಂದ ಗತಿ ಕಾಣಿಸ್ತಿದ್ದೆ. ರೀ ನೀವೇನಾರ ಎಡವಟ್ಟ ಮಾಡಿದ್ರಿ ನಿಮ್ಮನ ಏನ್ಮಾಡ್ತೆನಿ ನೋಡ್ರಿ" ತನ್ನ ತಾಕತ್ತಿನ ಪರಿಚಯ ಮಾಡಿಸಿದ್ಲು.

ಯಾವದು ಬ್ಯಾಡ ಅನಿಸಿ ಎಲ್ಲರನ್ನೂ ಬಿಟ್ಟು ದೂರ ಹೋಗಬೇಕು ಅನಿಸಿ ಎದ್ದವನೆ ಕೋರ್ಟಿನ ಹೊರ ಆವರಣಕ್ಕೆ ಹೊಂಟೆ. ವಕೀಲನ ಹಿಂದಿದ್ದ ಮಂದಿ ಗುಂಪು ಅದನ್ನೆ ಕಾಯ್ತಿದ್ದೋರಂಗೆ ನನ್ನ ಹಿಂದ ಬಂದು "ನೀ ಏನಾರು, ಆ ಸಾಬಿ ಪರ ಹೇಳ್ದಿ ಐದ ವರ್ಷದಿಂದ ಹ್ಯಾಂಗು ಕಾದೀವಿ, ಕೇಸು ಹೊಸಪೇಟೆ ಕೋರ್ಟಿಗ ಬೇಕಾರ ಹೋಗ್ಲಿ ನಿನ್ನ ಮಾತ್ರ ಏನ್ಮಾಡ್ತಿವೋ ಗೊತ್ತಿಲ್ಲಾ" ಆಳಿಗೊಂದ ಧಮಕಿ ಮಾತು ಹೇಳಿ ಹೋದ್ರು. ನಾನು ಅಂತರ್ಮುಖಿಯಾಗಿ

ಯೋಚನೆ ಮಾಡತೊಡಗಿದೆ. ಮುಗ್ದ ಮನಸ್ಸಿನ ಇನ್ನೂ ಮನುಷ್ಯತ್ವವನ್ನ ಜೀವಂತವಾಗಿಟ್ಟಿದ್ದ ಹಳ್ಳಿ ಜನ ಇವರೇನಾ? ಬಹಳ ಹೊತ್ತಿನ ಮಟ ಹಾಗೆ ಕುತ್ಕೊಂಡೆ ನನ್ನೊಳಗಿನ ಮೋಟರ್ ಬೈಕಿನ ಆಶೆ, ನನ್ನ ಹೆಂಡತಿಯ ತಾಳಿಸರ, ನೆಕ್ಲೆಸ್ಸು, ಕೋರ್ಟಿಂದ ದುಡ್ಡು ಬಂದರೆ ಹೊಲಕ್ಕೆ ಬೋರ ಹಾಕಿಸಬೇಕು ಒಂದು ಐದು ಸಾವಿರ ಕೊಡು ಮತ್ತೊಂದ್ಯೆನ್ನ ಎಲ್ಲಾದ್ರು ಜೋಡಿಸ್ತಿನಿ ಅಂದಿದ್ದ ತಮ್ಮ ಕಾಣದ ಆ ದುಡ್ಡಿಗಾಗಿ ಎಂಥೆಂಥ ಕನಸು ಕಾಣುತ್ತಿದ್ದೇವೆ ತಿಳುವಳಿಕೆ ಇರೊ ನಮ್ಮ ಪಾಡೆ ಹಿಂಗಿರಬೇಕಾರ ಯಾರದೊ ಹೇಳಿಕೆ ಮಾತು ಕೇಳಿ ಐದು ವರ್ಷಗಳ ಕಾಲ ಕನಸಿನ ಲೋಕದಲ್ಲೆ ಬದುಕಿರುವವರ ಕನಸು ನನ್ನಿಂದ ಭಗ್ನವಾಗುವುದನ್ನು ಖಂಡಿತ ಅವರು ಸಹಿಸೋದಿಲ್ಲಾ ಅಂತ ಗೊತ್ತಾಯ್ತು. ಡ್ರೈವರ ಹುಸೇನಿ ಸಣ್ಣ ಮಾರಿ ಮಾಡ್ಕೊಂಡು ಕೊರಿ ಬೀಡಿ ಎಳ್ಕೊಂತ ಮತ್ತೊಂದ ಸರ್ತಿ ನನ್ನ ಕಣ್ಣ ಮುಂದೆ ಹಾದ. ತನ್ನದಲ್ಲದ ತಪ್ಪಿಗೆ ಈ ಮನುಷ್ಯ ಬೀದಿ ಪಾಲಾಗ್ತಾನಲ್ಲ. ಇವನನ್ನೆ ನಂಬಿರೊ ಹೇಣ್ತಿ, ಮಕ್ಕಳು ವಿನಾಕಾರಣ ಬಲಿಯಾಗ್ತಾರೆ ನನ್ನ ಅಸಹಾಯಕ ಸ್ಥಿತಿಗೆ ಮರುಗಿದೆ "ಛೆ, ಬರಬಾರ್ದಿತ್ತು", ಯೋಚಿಸಿದೆ. ಇಲ್ಲಿಂದ ತಪ್ಪಿಸಿಕೊಂಡ್ರೆ ಮತ್ತೊಂದಾಲೋಚನೆ ತಲಿಯೊಳಗ ಸುಳಿತು. ನನ್ನ ನೋಟಕ್ಕೆ ಕಾಣುಹಾಗೆ ನಿಂತಿದ್ದ ನನ್ನ ಹೆಂಡತಿ ಮಗ, ಹಲವಾಗಲ ಜನರ ನಡುವೆ ಇದ್ರು ನಾನೇನಾರ ಹಿಂಗ ಮಾಡಿದ್ರೆ ಈ ಜನ ಅವರಿಗೇನಾರ ತೊಂದ್ರೆ ಮಾಡಿದ್ರೆ ಆಲೋಚನೆ ಕೈ ಬಿಟ್ಟು ಸುಮ್ನೆ ಕುಂದ್ರಾಕ ನೋಡಿದೆ. ಯಾಕೊ ಮನಸು ಖಾಲಿ ಅನಿಸಾಕಹತ್ತು, ಯಾಕೆ ಈ ಹಾಳ ಮನುಷ್ಯ ಮತ್ತೊಬ್ಬರ ಸ್ವತಿಗೆ ಹೀಗೆ ಹಪಹಪಿಸ್ತಾನೆ. ಬಸ್ಸು ಬಿದ್ದಿದ್ದು ಐದ ವರ್ಷದ ಹಿಂದೆ ನಾನು ಆ ಘಟನೆಯನ್ನ ಸಂಪೂರ್ಣವಾಗೆ ಮರ್ತಿದ್ದೆ ಆದ್ರ ಅದಿನ್ನು ಹಾಗೆ ಇದೆ ಅಂತ ಗೊತ್ತಾಗಿದ್ದೆ ತಮ್ಮನ ಟೆಲಿಗ್ರಾಂ ಬಂದ ನಂತರ. ಬಸ್ಸು ಬಿತ್ತು ಹಲವಾಗಲ ದವಾಖಾನೆಯೊಳಗ ಡಾಕ್ಟರ್ ಟ್ರೀಟ್ ಮೆಂಟ ಕೊಟ್ರು. ಪೊಲೀಸ್ ಕೇಸು ಆಯ್ತು ಅದ್ರಲ್ಲಿ ಡ್ರೈವರ್ ಹುಸೇನಿದೇನು ತಪ್ಪಿಲ್ಲಾ ಅನ್ನೋದು ಅಲ್ಲಿ ನೆರೆದ ಜನರಿಗೂ ಗೊತ್ತು. ಬಸ್ಸಿನೊಳಗೆ ಬಿದ್ದ ಮಂದಿಗೂ ಗೊತ್ತು. ಗುಜರಿಗ ಹಾಕೊ ಬಸ್ಸನ್ನ ರೂಟ್ ಬಸ್ಸ ಅಂತ ಹಾಕಿದ್ದು, ಮೊದಲನೇ ತಪ್ಪು, ಅದರ ಕ್ಲಚ್ಚು, ಬ್ರೇಕ್ ಸರಿಯಾಗಿವೆಯೇ ಅಂತ ಚೆಕ್ ಮಾಡದೆ ಅದು ಹಳ್ಳಿ ರಸ್ತೆಗೆ ಬಿಟ್ಟಿದ್ದು ಎರಡನೇ ತಪ್ಪು, ಅದನ್ನ ಮಾಡಿದೋನು ಯಾರು ಡಿಪೊದಲ್ಲಿ ಫ್ಯಾನಿನ ಕೆಳಗೆ ಕುಂತ ಮ್ಯಾನೇಜರ್, ಅವನು ಈ ರೀತಿ ಗುಜರಿ ಬಸ್ಸು ಕಳಿಸಾಕೆ ಒತ್ತಾಯ ಮಾಡ್ದೋರು ರೂಟಿನ ಜನ. ಐದ ನಿಮಿಷ ಬಸ್ಸು ಬರೋದ ತಡ ಆತಂದ್ರ ತಾಳ್ಮೆ ಗೆಟ್ಟು ತಾಯಿ-ಹೆಂಡ್ತಿ ಅಂತ ಬೊಯ್ಕಂತ "ಲೇ ಕಂಟ್ರೋಲರ ನಿಮ್ಮಪ್ಪಂದೇನಲೇ ಡಿಪೊ ಮಗನೆ ಗಾಳಿ ಕೆಳಗ ಕುಂತ್ಕೊಂಡು ಆರಾಮದಿಯಲ್ಲ ಅದಕ್ಕ ಸೊಕ್ಕ ಬಂದ್ಯೆತಿ, ಬಾ ನಮ್ಮೂರಿಗ ನಿನ್ನ ಸೊಕ್ಕ ಹೆಂಗ ಇಳಿತೈತಿ ನೋಡು" ಅಂತ ಬಾಯಿಗ ಬಂದಂಗ ಬೊಗಳಿ ಆತನ ಬಿಪಿ ಏರ್ಸಿ, ಅದನ್ನ ಕಂಡಕ್ಟರ್, ಡ್ರೈವರ್ ಮ್ಯಾಲ ಇಳಿಸ್ಕೊಳ್ಳೋ ಹಂಗ ಮಾಡೋರು ಜನರೆ ಅವರು ತಪ್ಪಿದಸ್ತರೆ. ಆದ್ರ ಈಗ ಆಗ್ತಿರೋದೆ ಬೇರೆ. ಒಬ್ಬ ಅಮಾಯಕನನ್ನ ಬಲಿಕೊಡಾಕ ಎಲ್ಲರೂ ಸೇರ್ಕೊಂಡಾರ. ಮಾತಾಡಕ ಬಿಡದ ಅಧಿಕಾರಿ ಫ್ಯಾನಿನ ಕೆಳಗ ಪೇಪರ ಒದ್ಕೊಂತ ತಲಿಗ ಹಚ್ಕೊಳದೆ ಆರಾಮದಿಂದ ಅದಾನ. ಅವನ ಅಪ್ಪಣೆ ಪಾಲಿಸಿದ ಹುಸೇನಿ ಡ್ರೈವರ ಐದ ವರ್ಷದಿಂದ ಕೆಲಸ ಕಳ್ಕೊಂಡು ಹೇಣ್ತಿ ಮಕ್ಕಳ ಜೊತಿಗ ಬೀಡಿ ಕಟ್ಟಾಕ ಹತ್ಯಾನ. ಯಾರ ಸರಿ, ಯಾರ ತಪ್ಪು

ಬಹಳ ಹೊತ್ತಿನವರೆಗೆ ಡೋಲಾಯಮಾನ ಸ್ಥಿತಿಯೊಳಗಿದ್ದೆ. ನನಗೆ ಪರಿಚಯವಿಲ್ಲದ ಪೊಲೀಸ್‌ನೊಬ್ಬ ಗಡಿಬಿಡಿಯಿಂದ ಓಡಿ ಬಂದು "ನಾಣಯ್ಯ ನೀವೆನಾ" ಅಂತ ಕೇಳಿದ. ಅವನು ಏಕ ವಚನದಿಂದ ಕರದದ್ದು ಯಾಕೊ ಸರಿ ಅನಿಸಲಿಲ್ಲಾ, ಆದ್ರು ಅಂವss ಪೊಲೀಸ್ ಸಂಸ್ಕೃತಿ ಇಲ್ಲದಂವss ಯಾರು? ಏನು? ಎತ್ತ ಅಂತ ವಿಚಾರಮಾಡದೆ ದುಡ್ಡಿಲ್ಲದವರ ಮೇಲೆ ಎಗರಾಡ್ತಾನೆ, ದುಡ್ಡಿದ್ದೋರು ಕಂಡ್ರ ನಾಯಿಹಂಗೆ ಬಾಲ ಅಲ್ಲಾಡಿಸ್ತಾನೆ ಅವನ ಜೊತಿಗೇನ ಹಾಳ ಹರಟೆ ಅಂದ್ಕೊಂಡಿದ್ದೆ. "ಹೌದಯ್ಯ ಏನಾಗಬೇಕಿತ್ತು" ಅಂದೆ ಮನುಷ್ಯ ಕಡಕ್ ಅದಾನಂತ ತಿಳ್ಕೊಂಡ್ನೊ ಏನೊ "ಬನ್ನಿ ಸಾ ಇವತ್ತಿನ ಕೇಸಿನ ಡಿಟೇಲ್ಸ್ ಕೊಡ್ತಿನಿ" ಒಂದ ರೂಂಗೆ ಕರ್ಕೊಂಡ ಹೋಗಿ ತಾವೇನ ಸುಳ್ಳ ಪಂಚನಾಮೆ ಮಾಡ್ಕೊಂಡ ಬಂದಿದ್ರೊ ಅದರ ಯತಾವತ ಕಾಫಿ ನನಕೈಯಾಗಿರಿಸಿ "ಓದ್ಕೊಳ್ರಿ ಸಾ, ಒಳಗ ಹೋಗಿ ಹಿಂಗೆ ಹೇಳಿ" ಅಂದ ನಾನು ಓದತೊಡಗಿದೆ ಓದುತ್ತಾ ಆಲೋಚನೆಯೊಳಗೆ ಇಳಿದೆ ಒಬ್ಬ ಅಮಾಯಕನಿಗೆ ಇಷ್ಟೊಂದು ಶತ್ರುಗಳಾ, ಯಾರಾದರೂ ಒಬ್ಬರು ನಿಜ ಏನು ಅಂತ ಅರಿಯೋ ಪ್ರಯತ್ನ ಮಾಡಿದ್ದಾರಾ, ವಕೀಲ ತನಗೆ ಸಿಕಬಹುದಾದ ಮೂವತ್ತೊ, ನಲವತ್ತು ಪರ್ಸೆಂಟೇಜ್‌ಗಾಗಿ ಹುಸೇನಿ ಒಬ್ಬ, ಅಪರಾಧಿ ಅಂತ ಘಂಟಾಘೋಷವಾಗಿ ಜಗಜ್ಜಾಹಿರಾತು ಮಾಡಿದ. ಇಪ್ಪತ್ತು ರೂಪಾಯಿ ಕಂಡ ಮಂದಿಗೆ ೨೦ ಸಾವಿರದ ಕನಸು ಕಾಣೋ ಯೋಗ ಕಲ್ಪಿಸಿದ ವಕೀಲನಿಗೆ ಕೃತಜ್ಞರಾಗಿ ಹುಸೇನಿಯೇ ಉದ್ದೇಶ ಪೂರ್ವಕವಾಗಿ ಬ್ರೇಕ್ ಹಾಕದೆ ಗಾಡಿಯನ್ನ ಬೀಳಿಸಿದ ಅಂತಂದು ಹಣ ಒಂದಕ್ಕಾಗಿಯೇ ಮನುಷ್ಯತ್ವ ಮಾರಿಕೊಂಡ ಹಳ್ಳಿಯವರು, ಹತ್ತೊ, ಇಪ್ಪತ್ತು ಭಕ್ಷೀಸ್ ಸಲುವಾಗಿ ಸತ್ಯವನ್ನು ಬೆಳಕಿಗೆ ತಾರದೆ ಸುಳ್ಳು ವರದಿ ಮಾಡಿ ಕೋರ್ಟಿಗೆ ಮುಟ್ಟಿಸೋದ್ರಲ್ಲಿ ಸಹಾಯ ಮಾಡಿದೊರೆ ಪೊಲೀಸರು ಹೀಗಿರುವಾಗ ನಾನೊಬ್ಬನೆ ಹರಿಶ್ಚಂದ್ರನಾದ್ರೆ? ಯೋಚಿಸಿದೆ. ಪೊಲೀಸ್ ಓಡಿ ಬಂದವನೆ "ಒದ್ಕೊಂಡ್ರಾ" ಇದ್ರಾಗ ಏನೈತಲ್ಲಾ ಅದಷ್ಟನೆ ವಕೀಲ ಮತ್ತು ಜಡ್ಜ್ ಸಾಹೇಬರ ಮುಂದೆ ಇಷ್ಟನೆ ಹೇಳಿ ಆಟೇಯ' ಅಂದ.

ಬೇಲಿಪ್ ಬಾಗಿಲೊಳಗೆ ನಿಂತ್ಕೊಂಡು ಮೂರ ಸಲ ನನ್ನ ಹೆಸರು ಕೂಗಿದ ಜೀವನಾದಾಗ ನಮ್ಮಪ್ಪನ ಆದರ್ಶನೊ, ಕೋರ್ಟಂದ್ರೆ ಹೆದರಿಕೆನೊ ಯಾವತ್ತು ಕೋರ್ಟಿನ ಆಸು ಪಾಸು ಹಾಯದ ನಾನು ಕೋರ್ಟಿನ ಕಟಕಟೆಯನ್ನ ಹತ್ತಿದ್ದೆ ವಕೀಲರಿದ್ರು. ಆ ಕಡೆ ಈ ಕಡೀಗ ಮಂದಿ ಕಿಕ್ಕಿರದು ನಿಂತಿತ್ತು. ಒಂದಕಡೆ ನನ್ನ ಹೇಣ್ತಿ ಮಕ್ಕಳ ಸುತ್ತ ನಿಂತಿದ್ದ ಹಲವಾಗಲ ಜನ ನೋಡಿದೆ. ಮತ್ತೊಂದ ಸಲ ನೋಡಾಕ ಧೈರ್ಯ ಸಾಲಲಿಲ್ಲಾ. ಆಣೆ ಪ್ರಮಾಣ ಆದ ಮೇಲೆ ಸರ್ಕಾರದ ಪರ ವಾದ ಮಾಡ್ತಿದ್ದ ವಕೀಲ ಬಂದು ಏನೇನೊ ಪ್ರಶ್ನೆ ಕೇಳಿದ. ನಾನು ಎಲ್ಲವಕ್ಕೂ ಅಡ್ಡಗೋಡೆ ಮ್ಯಾಲ ದೀಪ ಇಟ್ಟಂಗೆ ಉತ್ತರಿಸಿದೆ. ನನ್ನ ಎದ್ರಿಗೆ ಕೈ ಮುಕ್ಕೊಂಡು ತಾನು ಮಹಾ ಅಪರಾಧಿ ಅನ್ನೋ ಹಂಗೆ ಹುಸೇನಿ ನಿಂತಿದ್ದ. ನನ್ನ ಕಡೀಗ ಆಗಾಗ ಧೈನ್ಯತಾ ಭಾವದಿಂದ ನೋಡಿ ಬದುಕಿಸು ಅಂತ ಹೇಳ್ತಿರೊ ಹಂಗೆ ಮಕದ ಭಾವವ್ಯಕ್ತಪಡಿಸ್ತಿದ್ದ. ನನ್ನ ಪರಿಸ್ಥಿತಿ ಅಡಕೋಲಿನಲ್ಲಿ ಸಿಕ್ಕೊಂಡ ಅಡಕಿ ಹಂಗಿತ್ತು. ತಲಿ ಇಲ್ಲದ ಮಂದಿ ಎಲ್ಲಾದಕ್ಕೂ ರೆಡಿಯಾಗಿ ಬಂದಾಗ ಹಣ ಅನ್ನೋ ಕಾಗದದ ಮುಂದ ಭಾವನಾತ್ಮಕತೆಗೆ, ಸಂಬಂಧಗಳಿಗೆ ಯಾವುದೇ ಅರ್ಥ ಇಲ್ಲ. ಅಂತಹದ್ದರಲ್ಲಿ ಸಂಬಂಧ ಸೂತ್ರಗಳಿಲ್ಲದ ಆ ಜನ ಸುಮ್ಮನೆ ಬಿಟ್ಟಾರೆಯೇ ತಲಿ ಕೆರ್ಕೋಂತ ನಿಂತೆ. ಅವತ್ತ ಕನಸಿನೊಳಗ ಕಂಡ ಯಮ, ಚಿತ್ರಗುಪ್ತ,

ಹುಸೇನಿ ಹಲವಾಗಲ ಜನ ನನ್ನ ಕಣ್ಣೆದುರಿಗೆ ಪ್ರತ್ಯಕ್ಷರಾದರು. ಅದೇ ವಾದ ಇಲ್ಲಿ ಮುಂದುವರಿದಂತೆ ಅನಿಸಿತು. ನನಗು ದುಡ್ಡಸಿಗುವಾಗ ಹುಸೇನಿ ಪರ ಹೇಳಬೇಕೆ? ನಾನು ಹುಸೇನಿ ವಿರುದ್ಧ ಮಾತಾಡಿದ್ರೆ ಹೊರಗ ಮಂದಿ ಮಾಲಿ ಹಾಕಿ ಸನ್ಮಾನಿಸುತ್ತಾರೆ ಹುಸೇನಿ ಪರ ಏನಾರು ಹೇಳಿದೆ ಕಲ್ಲುಗಳಿಂದ ಸ್ವಾಗತಿಸುತ್ತಾರೆ. ಏನಾದರು ಒಂದು ಹೇಳಲೇ ಬೇಕು. ತಾಕಲಾಟ ನಡದಿತ್ತು ಸರ್ಕಾರಿ ವಕೀಲ "ನೀವು ಬಸ್ಸಿನೊಳಗೆ ಇದ್ರೇನ್ರಿ" ಅಂತ ಕೇಳಿ ವಿಚಾರಿಸಿದಾಗಲೇ ವಾಸ್ತವಕ್ಕೆ ಬಂದಿದ್ದೆ. ಹಾಂ, ಹೌದು, ಇಲ್ಲಾ" ತಲೆ ಅಲ್ಲಾಡಿಸಿದೆ. ಹೊರಗಿಂದ ಜನ ಗಲಾಟೆ ಆರಂಭಿಸಿದರು. ನನ್ನ ಮೈ ಕಾವೇರ ತೊಡಗಿತು ಆಗಲೆ ನಾನು ಯಮುನ ಕನಸಿಂದ ಭೂಮಿಗೆ ಬಂದಿದ್ದು. ಆ ಯಮುನೇನೊ ಬಿಟ್ಟ ಆದ್ರೆ ಈ ಯಮ ಹಿಡ್ಕೊಂಡಿದ್ದ "ಮಿ. ನಾಣಯ್ಯ, ನೀವು ಬಸ್ಸಿನೊಳಗೆ ಕುಂತಿದ್ರೋ" ಕೇಳಿದ ವಕೀಲ "ಸಾ ನಾನು ನನ್ನ ಹೇಣ್ತಿ ಜೊತಿಗ ನಿಂತಿದ್ದೆ" ಉತ್ತರಿಸಿದ. "ಸರಿ ನೀವು ಬಸ್ಸನ ಯಾವುರಿಂದ ಹತ್ತಿದ್ರಿ", "ಹಲವಾಗಲು" ನನ್ನ ಉತ್ತರ. ವಕೀಲ ಮತ್ತೆ ಕೇಳಿದ "ಆವಾಗ ಈ ವ್ಯಕ್ತಿಯನ್ನ ನೋಡಿದ್ರಾ" ನೇರ ಪ್ರಶ್ನೆ. ಹುಸೇನಿ ಕಡೆಗೆ ನೇರವಾಗಿ ನೋಡಿದೆ "ಬಸ್ಸು ರಷ್ ಇತ್ತು ಅದು ಅಲ್ಲದೆ ಹಿಂದಿಂದ ಹತ್ತಿದ್ದು ಡ್ರೈವರ್ ಇವನೊ ಇಲ್ಲಾ ಬೇರೆಯವನೊ ಗೊತ್ತಿಲ್ಲಾ" ಸರ್ಕಾರಿ ವಕೀಲ ಅದನ್ನ ನೋಟ ಮಾಡ್ಸಿದ. ಅಂದಂಗೆ "ಈ ಡ್ರೈವರು ಬಸ್ಸು ಬೀಳಿಸಿದ್ನಲ್ಲಾ ಬೇಕಂತ ಬೀಳಿಸಿದ್ನ" ಮತ್ತೆ ಕೇಳಿದ ನೇರವಾಗಿ ಪ್ರತಿಯೊಬ್ಬರು ಜನ್ಮ ಜಾಲಾಡ ಬೇಕಂತ ಬಾಯಿ ಬಿಟ್ಟೆ ವಕೀಲ ಬಾಯಿ ಮೇಲೆ ಬೆರಳಿಟ್ಟು ಕಣ್ಣು ಕಿಸಿದ, ಹೊರಗಡೆಯಿಂದ ಒಂದಿಬ್ಬರು ಮುದುಕರು ಗುರಾಯಿಸಿದ್ರು, ನಾನು ತಣ್ಣಗಾದೆ. ಮುಂದ ಮಾತಗಳೇ ಹೊರಡದಂಗಾತು. ಅವನು ಕೇಳಿದಕ್ಕೆಲ್ಲಾ ಹೂಂ ಊಹುಂ ಅಂದ್ಕೊಂಡೆ ನಿಂತೆ ಜಡ್ಜ ಸಾಬ್ ಕೇಸನ್ನ ಮುಂದಕೆ ಹಾಕಿದ್ರು. ಕೊನೆ ಸಾಕ್ಷಿಯಾದ ನಾನು ಯಾರಿಗ ಒಳ್ಳೆದ ಮಾಡಿದ್ನೊ, ಯಾರಿಗೆ ಕೆಟ್ಟದ ಮಾಡಿದ್ನೊ ಗೊತ್ತಿಲ್ಲಾ ಆದ್ರು ನನ್ನ ಹೆಂಡತಿಗೆ ಮಾತ್ರ ದೊಡ್ಡ ನಿರಾಶೆ ಮಾಡಿದ್ದೆ. ಕೇಸ ಮುಗದಿಂದ ಕೆಎಸ್ಸಾರ್‌ಟಿಸಿಯವರು ಕೋರ್ಟ್ ಬಾಗಲಾಗ ಚೆಕ್ ಕೊಡ್ತಾರಂತ ಯಾರೊ ಹೇಳಿದ್ರಂತೆ ಅದಕ್ಕೆ ಸಜ್ಜಾಗೆ ಬಂದಿದ್ಲು. ಕೊನೆಯ ತೀರ್ಪನ್ನ ಒಂದು ತಿಂಗಳ ಕಾಲ ಮುಂದ ಹಾಕಿದ್ರು ಜಡ್ಜ ಅದೇನ ನಿರ್ಣಯ ಕೊಡ್ತಾನೊ ಗೊತ್ತಿಲ್ಲ. ನಾನ ಮಾತ್ರ ಹುಸೇನಿಗ ಅನ್ಯಾಯ ಮಾಡಬಾರದು ಅಂದ್ಕೊಂಡ ಹೊರ ಬರ್ತಿದಂಗೆ ಮಂದಿ ಸುತ್ತಗಟ್ಟಿದ್ರು 'ಲೇ ತಮ್ಮ ತಲಿಗಿಲಿ ಕೆಟ್ಟೈತಿ, ಡ್ರೈವರನ ಪರವಾದ ಮಾಡ್ತಿಯಲ್ಲಿ ನೀ ಏನ ಭಾರಿ ಶಾಣ್ಯ ಅಂದ್ಕೊಂಡಿ ಏನು' ಒಬ್ಬರಾದ ಮ್ಯಾಲ ಒಬ್ಬರಂತೆ ಮಾತಾಡ್ತಿದ್ರು. ನಾನು ಸಮಜಾಯಿಸಿ ಕೊಡಾಕ ಹೋದೆ ಅವರ ಪರ ವಕೀಲ ಬಂದು "ನೀವು ನಾ ಹೇಳಿದ್ಕ ಗಪ್ ಆದ್ರಲ್ಲಾ ಒಳ್ಳೆದಾತು ಇಲ್ಲಾಂದಿದ್ರ ಎಲ್ಲಾ ಹಾಳಾಗಿ ಹೊಕ್ಕಿತ್ತು. ನಾನಾಗ್ಲೆ ಜಡ್ಜ್ ಜೊತೆಗ ಮಾತಾಡಿ ಫಿಕ್ಸ್ ಮಾಡಿನಿ" ಅಂತ ನೆರದ ಮಂದಿಯೊಳಗ ಹೇಳಿದ್ಕ ಅವರೆಲ್ಲಾ ನಾನೆ ಕೇಸ ಗೆಲ್ಲಿಸಿದೆ ಅನ್ನೋ ಹಂಗ ನೋಡಿದ್ರು. ನನಗ ಬೇಕಾಗಿದ್ದೆ ಆಟು ಅಂದವನೆ ಬಿಡಿಓ ಆಫೀಸ್ ಹತ್ರದಿಂದ ಜನರ ಸಹವಾಸನೆ ಬ್ಯಾಡ ಅಂತೇಳಿ ಸುಣಗಾರ ಓಣಿ ಕಡೀಗ ಹೊಂಟ ಬಿಟ್ಟೆ.

ನನ್ನ ಹೆಂಡತಿ ಏನೇನೊ ಹಳಹಳಿಸ್ತಿದ್ಲು ನಾನು ಮಾತ್ರ ಮೌನವಾಗೆ ಹೆಜ್ಜೆ ಹಾಕ್ತಿದ್ದೆ. ನನ್ನ ಮಾತುಗಳು ಹುಸೇನಿ ಪರವಾಗೆ ಇದ್ದಾವು. ಅನ್ನೊ ನೆಮ್ಮದಿ ಒಂದ ಕಡೆಯಾದರೆ, ಯಾರದೊ ಮಾತನಂಬಿ ಕೋರ್ಟ್ ಅಲದಾಡ್ತಿರೊ ಈ ಜನ ಇಲ್ಲೇನೊ ಗೆದ್ದಾರು ನಾಕದಿನ

ಕುಡದು ತಿಂದು ದುಡ್ಡ ಹಾಳು ಮಾಡ್ಕೊಂಡಾರು ಅಮ್ಯಾಲ. ನನ್ನ ಕೊನೆಯ ಸಾಕ್ಷಿ ಆದ ಮೇಲೆ ಅದರ ನಿರ್ಣಯ ಏನಾಯ್ತು, ಹುಸೇನಿ ಏನಾದ, ಆ ಹಳ್ಳಿ ಜನರಿಗ ದುಡ್ಡುಸಿಗ್ತೆ, ಒಂದು ಗೊತ್ತಾಗಲಿಲ್ಲಾ, ನಾನ ಮಾತ್ರ ಹುಸೇನಿ ಮನಿ ಮುರದು ಸೈಕಲ್ ಮೋಟರಿನ ಮ್ಯಾಲ ಅಡ್ಡಾಡಲಿಲ್ಲಾವಲ್ಲಾ ಅನ್ನೋ ನೆಮ್ಮದಿಯಿಂದ ಇವತ್ತಿಗೂ ನನ್ನ ಆ ಸ್ಕೂಟರಿನ ಕನಸನ್ನ ಹಸಿ ಹಸಿಯಾಗೆ ಇಟ್ಕೊಂಡಿನಿ. ಬಂದಿತು ಕಾಲ ನನಗೂನುವೆ ಅನ್ನೋ ಭರವಸೆಯೊಳಗ, ಆದ್ರೆ ನನ್ನ ಕನಸೊಳಗ ನಡದಿದ್ದ ಯಮನ ತೀರ್ಪು ಏನಂತ ತಿಳಿಯಾಕ ಬಿಡದ ನನ್ನ ಹೇಣ್ತಿ ಮ್ಯಾಲ ಬಹಳ ಸಿಟ್ಟು ಬಂತು ಮತ್ತಿನ್ಯಾವಾಗರ ಬಿದ್ದಿತೇನು ಕನಸು ಅಂತ ಕಾಯಕ ಹತ್ತೀನಿ ಘಟನೆ ನಡೆದು ಹದಿನೈದು ವರ್ಷಗಳಾದ್ವು, ಯಮನು ಕಂಡಿಲ್ಲ ಅವನ ಶಿಷ್ಯ ಚಿತ್ರಗುಪ್ತನೂ ಕಂಡಿಲ್ಲ. ಅಜ್ಜಿ ಹೇಳಿದ ಕತಿ ಮಾತ್ರ ಅವಾಗ ಅವಾಗ ನನ್ನ ಮಗನಿಗ ಹೇಳ್ತಿರ್ತಿನಿ ಅನಿಕೇತನ ಯಮ ಯಾರು? ಹೆಂಗಿರ್ತಾನ? ಅಂತ ಕೇಳೊ ನೂರು ಪ್ರಶ್ನೆಗಳಿಗೆ ಅಜ್ಜಿಗ ಗೊತ್ತು ಅಂತ ಉತ್ತರಿಸಿ ಸಮಾಧಾನ ಪಡಿಸ್ತಿನಿ.

ಪಲಾಯನದಂದು....

ಕಬ್ಬಣರಂಟಿ ಹೊಡದು ಬಿಸಲು ನೆತ್ತಿ ಮೇಲೆ ಬಂದಿಂದ ಮ್ಯಾರಿಮ್ಯಾಲ ಎತ್ತಗಳನ್ನು ಮೇಯಾಕ ಬಿಟ್ಟು ಹಳೆದಿನಗಳ ಸಂಗತಿ ನೆಪ್ಪ ಮಾಡ್ಕೊಂಡು ಟೈಮ್‌ಪಾಸ್ ಮಾಡಾಕ ನೋಡಿದ ಬಂದೂಕ. ಯೂನಿರ್ವಸಿಟಿಯೊಳಗ ಕಷ್ಟಪಟ್ಟು ಎಂ.ಎ. ಪಾಸ ಮಾಡಿದ್ದು, ಅನ್ಯಾಯದ ವಿರುದ್ಧ ಚಳುವಳಿ ಮಾಡಿದ್ದು ಸಿದ್ಧಾಂತಕ ಕಟ್ಟುಬಿದ್ದು ಹೋರಾಡಿದ್ದು ದೊಡ್ಡ ದೊಡ್ಡ ಬಂದೂಕನ ಮೈಯಾಗ ಆವೇಷ ಉಕ್ಕಿ ಬಂತು ರಕ್ತ ಕೆಳಗಿಂದ ಮೇಲೇರಿ ಮೈಕಾವು ಎದಿ ಹೊಡ್ತ ಜೋರಾತು. ಅವನ ಕೈಯಾನ ಕರಿ ಎತ್ತು ಮುದಿಯ ಕೊಸರಿಕೊಂಡು ಮ್ಯಾರಿ ಪಕ್ಕದ ಬ್ರಾಂಬ್ರ ಹೊಲದಾಗಿನ ಏಣಗ್ಯಾರ ಜ್ವಾಳಕ್ಕ ಬಾಯಿ ಹಾಕಿಂದ ತಾನಿರೋದು ಹೊಲದಾಗ ಅನ್ನೋದ ಅರವಿಗ ಬಂತು. "ಎಯ್, ನಿನ್ನವ್ವನ ಮುದಿಯ ಮ್ಯಾರಿಮ್ಯಾಲ ಈಡಾಗಿ ಬೆಳದಿರೊ ಹುಲ್ಲಮೇಯೋದ ಬಿಟ್ಟು ಜ್ವಾಳಕ ಬಾಯಿಹಾಕ್ತಿ" ಅಂದವನೆ ಮುಗದಣ ಅಳಕೊಹಂಗ ಜೋರಾಗಿ ಜಗ್ಗಿದ. ಪಕ್ಕಂಭಟ್ಟ ಅರವತ್ತೆಕ್ಕರೆ ಎರಿ ಹೊಲದ ಸುತ್ತಲು ಇದ್ದ ಮಂದಿ ತಮ್ಮ ಮ್ಯಾರಿ ಸಂಬಂಧ ರೋಸಿಹೋಗಿದ್ರು, ಎಲ್ಲಾ ಕಡಿಗು ಒಂದ ಅಕ್ಕಡಿ ಹೊಲ್ದಾಗ ತನ್ನ ಗಡಿಕಲ್ಲು ಐತಂತ ಒತ್ತಿ ಒತ್ತಿ ಸಣ್ಣ ಹುಡ್ರ ಸೊಂಟದ ಮೇಲಿನ ಉಡದಾರದಷ್ಟು ಮ್ಯಾರಿ ಬಿಟ್ಟಿದ್ದ. ಮಾಗಿಕಾಲಕ್ಕ ಎತ್ತುಗಳ ಮೇಯಿಸೋದು ತೊಂದರಿ ಆಗಿ ಮಂದಿ ಪಕ್ಕಂಭಟ್ರಿಗ ಶಾಪ ಹಾಕ್ತಿದ್ರು. ಹೆಚ್ಚೆನಾರ ಮಾತಾಡಿದ್ರ "ಲೇ, ಮುಕಳಾಗ ಜಿಗಟಿದ್ರ ನಂದ ಅರವತ್ತ ಎಕ್ಕರಿ ಹೊಲ ಕುಂತಲೇ ನೀನಾರ ಖರೀದಿಗ ತಗೊ ಇಲ್ಲಕ್ರ, ಈಗಿಂದಿಗೆ ನಿನ್ನ ಪುಟಗೋಸಿ ಐದ ಎಕ್ಕರಿದು ರೇಟ ಹೇಳು' ಅಂತಂದು ಸಾವುಕಾರಿಕಿದವಲತ್ತ ತೋರಿಸ್ತಿದ್ದ. ಅದಕಂತ್ಲೆ, ಅವನ ಮ್ಯಾರಿಮ್ಯಾಲ ಯಾರು ಎತ್ತ ಮೇಯಿಸ್ತಿರಲಿಲ್ಲಾ, ಬಂದೂಕ ಊರಿಗ ಬಂದಿಂದ ಅವನ ಅಣ್ಣಂದಿರು ಎಷ್ಟೇ ಬ್ಯಾಡ ಅಂದ್ರು "ನೀವು ಮನೀಗ ಹೋಗ್ರಿ, ಭಟ್ರು ಬರ್ಲಿ ನನ್ನತಾವ ಮಾತಾಡ್ಲಿ" ಎಲ್ಲರನ್ನೂ ಸಾಗಹಾಕಿ ಸಣ್ಣ ಹುಡುಗಿನೊಬ್ಬನನ್ನು ಉಳಿಸಿಕೊಂಡ್ತಿದ್ದ. ಓದಿದ್ದ ಮುಗದರು ಸರ್ಕಾರದ ಕೆಲ್ಸಕ ಅರ್ಜಿ ಹಾಕಿ ಸಾಕಾಗಿ ಸರ್ಕಾರದಾಗ ನೌಕರಿನೇ ಖಾಲಿ ಇಲ್ಲಾಂತ ತಿಳ್ಕೊಂಡು ಬೊಂಡಯ್ಯ ಅನ್ನೋ ಪ್ರೈವೇಟ್ ಕಾಲೇಜು, ಆ ಪಾರ್ಟಿ ಸಬ್‌ಜಟ್ಟಿಗೊಬ್ಬರಿರೊ ಜಾಗದಾಗಿ ಐದೈದ ಮಂದಿಯನ್ನು ನೇಮಿಸಿಕೊಂಡು ನಿನಗೂ ನೌಕರಿ ಕೊಡಸ್ತಿನಿ. ಬರಿ ಐವತ್ತ ಸಾವಿರ ತಂದಕೊಡು, ಎಪ್ಪತ್ತಸಾವರ ಕೊಡಂತ ಪಾರ್ಟಿಗಳನ್ನು ನೋಡಿ ಬೋಳಿಸಿ ಎಲ್ಲರಿಗೂ ಚಂಬ ಹಿಡಿಸಿದ್ದ, ಮಾತ ಮಾರಿಕೊಳ್ಳೋ ಮಾಸ್ತರ ನೌಕರಿ ಬೊಂಡಯ್ಯ ಕೊಟ್ಟಿಂದ ತನ್ನ ಇಡಿ ಜೀವನದ ಮಹತ್ವಾಕಾಂಕ್ಷೆಗಳೆಲ್ಲಾ ಇಡೇರಿದವು ಅಂತ ಹುಡುಗರ ಮುಂದೆ ಪುಸ್ತಕದ ಅರ್ಥ ತನ್ನ ವೈಯಕ್ತಿಕ ಅರ್ಥ ಸೇರಿಸಿ ಚಚ್ಚಿ ಹಾಕಿ ಒಳ್ಳೆ ಮೇಷ್ಟ್ರ ಅನಿಸಿಕೊಂಡಿದ್ದ. ಬೊಂಡಯ್ಯನ ಇನ್ನೂರೈವತ್ತು ಹೊಟ್ಟಿಗು ಸಾಲ್ತಿರಲಿಲ್ಲಾ. ಖೋಲಿ

ಬಾಡಗಿಗೂ ಸಾಲದೆ ಊರಾಗ ಕೂಲಿನೊ ನಾಲಿನೊ ಮಾಡಿಕೊಂಡು ಬದುಕಿದರ ಮರ್ಯಾದಿನಾರ ಉಳದೀತಂತ ಯಾರಿಗೂ ಹೇಳದೇ ಕೇಳದೆ ಸಿಟಿ ಬಿಟ್ಟು ಹಳ್ಳಿ ಸೇರಿದ.

ಬಂದೂಕ ತನ್ನ ಊರು ಪಿರಾಪುರಕ್ಕೆ ಬಂದ ಸೇರಿದ ಇಪ್ಪತ್ತ ಮಂದಿ ಇರೊ ದೊಡ್ಡ ಸಂಸಾರದಾಗ ನೆಲೆನಿಲ್ಲಾಕ ಬಡದಾಡ ತೊಡಗಿದ ಮಾಡಾಕ ಹೊರೆ ಇಲ್ಲದೆ ಖಾಲಿ ಪುಕ್ಕಟೆ ಮಂದಿ ಲೀಸ್ಟ್‌ಗೆ ನಾಲಾಯಕ್ಕಾಗಿ ಸೇರ್ತಿರೋ ತಮ್ಮನ ಮ್ಯಾಲ ಎಲ್ಲಿಲ್ಲದ ಸಿಟ್ಟು ಮಾಡಿಕೊಂಡಿದ್ದ ಅವನ ಹಿರಿಯಣ್ಣ ಸಂಕೋಪನ ಹೇಣ್ತಿ 'ಜಾಲಿಕಂಟಿಕಡದು ಓದಿಸಿದ್ರಿ, ಉಣ್ಣಾಕ ಕೂಳಿಲ್ಲದಿದ್ರೂ ಯಾದಕ್ಕೊ ಕೇಳಿದ್ಕ ನಿಮ್ಮಪ್ಪ ಮನಿಯಾಗ ಮಕ್ಕಳದಾವನೋದನ್ನ ಮರೆತು ರೊಕ್ಕ ಕೊಟ್ಟು ಕಲ್ಸಿದ್ರಲ್ಲಾ ಏನ್ ಕಡದ ಕಿಸಿದ' ಅಂತೇಳಿ ಬಂದೂಕನ ಮೇಲಿನ ಸಿಟ್ಟ ತಗೊಂಡ ಹೋಗಿ ಸಣ್ಣ ಪುಟ್ಟ ಮಕ್ಕಳ ಮ್ಯಾಲ ತಗಿತಿದ್ಲು.

ಯಾರ ಮೈಕ ಹಚ್ಚಿ ಒದರಿದ್ರು ಏನಾಗೊದಿಲ್ಲ. ಅಂದ್ಕೊಂಡು ಒಂದಿಕಿವಿಂದ ಕೇಳಿ ಮತ್ತೊಂದ ಕಿವಿಯಾಗಿಂದ ಬಿಟ್ಟಿದ್ದ ಬಂದೂಕ, ಸೂಟು ಬೂಟ ಹಾಕ್ಕೊಂಡು ತಮ್ಮ ಮೇಷ್ಟುಗಳು ಪಾಠ ಮಾಡ್ತಿದ್ದ ಭಂಗಿಯೊಳಗ ಪಾಠ ಮಾಡ್ತಿರೊ ಹಂಗ ಕನಸ ಕಾಣ್ತಾ ಅಂದೋರಿಗೂ ಅನ್ನದೋರಿಗೂ ಅನಸರಿಸಿ ಕೊಂಡು ನಡಿತ್ತಿದ್ದ. ಬ್ಯಾಸಗಿ ಬಂತಂದ್ರ ಊರಾಗಿದ್ದ ಬಾವಿ ಒಣಗತ್ತಿತ್ತು. ಹಬ್ಬ ಬಂತಂದ್ರ ಮಂದಿ ನೀರಿಗಂತ ನಸಕಿನ ನಾಕ ಗಂಟೀಗೆ ಕೈಯಾಗ ಲಾಟೀನ್ ಹಿಡಿದು ನೀರ ಸೇದೊರಾಟ್ಟೆ, ಕರ ಕರ ಸದ್ದ ಮಾಡಬಾರದಂತ ಕಾಳಜಿಯಿಂದಲೇ ಮೆತ್ತಗ ಎಳದು, ತನ್ನ ಚಾಳಿ ಬಿಡದ ಕಡಗ ಕೊರ್ರೋ ಮರ್ರೋ ಅಂತ ಸದ್ದ ಮಾಡಿ ಇಡಿ ಊರಿನ ಮಂದಿ ನಿದ್ದಿ ಹಾಳ ಮಾಡಿತ್ತು.

ಬಂದೂಕ ಎಚ್ಚರಾಗಿದ್ದ, ಅವನವ್ವ ಜೋಡವ್ವ ನೀರಸೇದಾಕ ಎಲ್ಲಾ ಮಂದಿನ ಎಬ್ಬಿಸಿಕೊಂತ ಬಂದಿದ್ಲು, ಗಂಡ ಪಕ್ಕಣ್ಣ, ಇದ್ದ ಕೊರಿ ಬೀಡಿಗ ಬೆಂಕಿ ಹಚ್ಕೊಂಡು ದಮ್ಮ ಎಳೆಯತೊಡಗಿದ. ಜೋಡವ್ವ ಹೆಣ್ಣು ಗಂಡು ಅನ್ನದೇ ಇಡೀ ಮನಿ ಮಂದಿಯನ್ನು ಎಬ್ಬಿಸಿದ್ರೂ ಯಾರೊಬ್ಬರು ಎಳಲಿಲ್ಲಾ ಹಿರಿಮಗನ ಮಗ ಪೀಟೂನ ದುಬಟಿ ಎಳದು "ಎಳಲೇ ಸೊಂಬೇರಿ, ನೀರ ಸೇದ್ಕೊಂಡ ಬರ್ರಿ ಮುಂಜಾನಿ ಏನು ಉಚ್ಚಿ ಹೊಯ್ಕಂಡ ಕುಡಿತೀರೇನು" ಗದರಿಸಿದ್ಲು. "ಹೋಗಬೇ ಅತ್ಲಾಗ ನನ್ನ ನಿದ್ದಿಯಾಕ ಹಾಳ ಮಾಡ್ತಿ. ಸಾಲಿಕಲತು ನೌಕರಿ ಇಲ್ಲದೇ ಪುಕ್ಕಟೆ ಉಣ್ತಾನಲ್ಲ ಅವನಿಗ ಹೋಗಿ ಎಬ್ಬಿಸಹೋಗು ಯಾ ಹ್ಯಾರೆ ಮಾಡ್ವಿದ್ರು ನೀರಾದ್ರು ಸೇದ್ಕೊಂಡ ಬರ್ಲಿ" ಅಂದವನೆ ದುಬಟಿ ಕಸ್ಕೊಂಡು ಮಲಗಿದ. ಬಂದೂಕಗ ಪಿತ್ತ ನೆತ್ತಗೇರಿತ್ತು "ಯಾಕಲ್ಲೆ ಬದ್ಮಾಷ್ ಸೂಳಿಮಗನೆ ನಿಮ್ಮಪಂದ ದುಡಿಮಿ ಉಣ್ಣಾಕ ಹತ್ತಿನೇನು" ಸೊಂಟ ಮುರಿಯೋ ಹಂಗ ಜಾಡಿಸಿ ಒದಿಬೇಕು ಅನಿಸಿತು. ಮಾತಾಡಕ ಬಾಯಿ ಬರಲಿಲ್ಲಾ ಎಳಾಕ ಆಗದೆ ಮಗ್ಗಲು ಬದಲಿಸಿ ಮಲಗಾಕ ನೋಡಿದ. "ಹಾಳ ಮನಿಯೋರ ಕೈ ತೊಕ್ಕೊಂಡ ಬೆನ್ನ ಹತ್ಯಾರ ನನ ಮಗನ ಹಿಂದ, ನೌಕರಿ ನ ಬಿದ್ದಾವೇನ ಯಾರ ಕೇಳಿದ್ರು, ಅವನ ಕಡೀಗ ಬಟ್ಟು ಮಾಡಿ ತೋರಿಸ್ತಾವ" ಮಗನ ಪರ ವಹಿಸಿ ಮಾತಾಡಿದ್ಲು. ಕೈಯಾಗಿನ ಕೊರಿ ಬೀಡಿ ಬೆಳ್ಳ ಸುಟ್ಟಿಂದ ಬೀಡಿ ಮುಗದದ್ದ ಖಾತ್ರಿಯಾತು ಪಕ್ಕಣ್ಣಗ. ಅವನ ಹಿಂದಿನ ಕಲ್ತಹುಡ್ರು, ಪೊಲೀಸು, ಮೇಷ್ಟ್ರು ಅಂತ ನೌಕರಿ ಹಿಡಿದ್ರು, ಈ ಸೂಳಿ ಮಗ ಅದೇನ ಓದಿದ್ನೊ ಮುದುಕನಾದ್ರು ನೌಕರಿನೇ ಸಿಗವಲ್ಲು. ಸಾಲಿಗಿಲಿ ಕಲ್ತನೊ ಇಲ್ಲಾ ಕೊಟ್ಟ ದುಡ್ಡನೆಲ್ಲಾ ಚೈನಿ

ಮಾಡಿ ಕೈ ಬಿಸ್ಕೊಂತ ವಾಪಾಸಾದ್ನೊ ಯಾರಿಗೊತ್ತು" ಮನಸಿನ್ಯಾಗ ಎಷ್ಟೋ ದಿನಗಳಿಂದ ಅನ್ನಬೇಕು ಅಂದ್ಕೊಂಡಿದ್ದನ ಹೇಳಿದ. "ನಿಮಗೂ ಮಾಡಾಕ ಕೆಲ್ಸ ಇಲ್ಲ, ನನ ಮಗ ದೊಡ್ಡ ಸಾಲಿಯೊಳಗ ಕಲ್ತಾನ, ಅವನ ಓದಿಗ ತಕ್ಕಂತ ನೌಕರಿ ನೋಡ ಬ್ಯಾಡೇನು, ಅವನದು ನಸೀಬ ತಿರಗಲಿ ಎಲ್ಲಾ ಸರಿ ಹೊಕ್ಕೈತಿ" ಮಗನನ್ನ ಪರ ಒಕಾಲತ್ತು ಮಾಡಾಕ ನೋಡಿದ್ನು, ಎಲ್ಲಾ ಮಾತು ಕೇಳಿಸಿಕೊಂಡಿದ್ದ ಹಿರೆ ಸೊಸಿ ನಿಂಬಮ್ಮಗ ತಡಿಯಾಕ ಆಗಲಿಲ್ಲಾ "ಈ ಹಾಳ ಮನಿಯಾಗ ನನ ಗಂಡ ಮಕ್ಕಳು ಜೀತದಾಳಗಳಗ್ಯಾರ, ಇಟೀಟ ಮಕ್ಕಳು ಥಳಿಯಾಗ ಸಗಣಿ ಕಸ ಬಳಿ ಬೇಕು, ಉಳದೋರು ಹೊತ್ತ ನೆತ್ತಿ ಮ್ಯಾಲ ಬರೊ ಮಟ ಮಕ್ಕೊಬೇಕು. ಕಡದ್ರ ಮೂರ ತುಂಡ ಆಗೋ ಹಂಗ ಮೈ ಬೆಳಸ್ಕೊಂಡ ಅದೇನ ಕಡದು ತರ್ತಾರೋ, ನಿಮ್ಮ ಪಾಲಿಗ ಬರೊ ಒಂದು ತುಂಡ ನೇಲಾನ ತಗೊಂಡ ಹೊರಗ ನಡೀರಿ ಅವರ ದಿರ್ಬೇವು ಅವರೆ ಉಣವಲ್ರು ಒಡ್ಕೊಂಡ್ರು ನನ್ನ ಮಾತ ಕೇಳವಲ್ಲ" ಜೋರಾಗಿ ಮನಿಯಾನ ಮಂದಿಗ ಕೇಳೊ ಹಂಗೆ ಸುರು ಹಚ್ಕೊಂಡಿದ್ಲು. ಬಂದೂಕ ಮತ್ತ ಅವನ ತಮ್ಮ ವಿಠೂ ಮಾರಿ ಮಾರಿ ನೋಡಿಕೊಂಡ್ರು "ಹೂಂ ಸುರು ಆತ ನೋಡಪ್ಪ ಮೈಕು, ಇನ್ನ ಉಗಾದಿ ಹಬ್ಬದಾಗ ಕುಸ್ತಿಯಾಡಿ ಉಣ್ಣೋರು ಉಣ್ಣೋದು ಉಪಾಸಿರೋರು ಉಪಾಸಿರೋದು ಆಗೋದೂ ಏನು ಇಲ್ಲಾ" ಎಸ್ಸೆಲ್ಸಿಯೊಳಗ ಹತ್ತ ಸಲ ಫೇಲಾಗಿ ಕಡೀಗು ಪಾಸ ಮಾಡಾಕ ಆಗದೆ ಮನಿ ಸೇರಿ ಊರಾಗಿನ ಜಗಳ ತರ್ತಿರೊ ವಿಠೂ ಗೊಣಗಿದ. ಬಂದೂಕ ಎದ್ದವನೆ ಸೀದಾ ಚರಗಿ ತಂಗೊಂಡು ಮೈಲ ದೂರ ಬಯಲ ಕಡಿಗ ಹೊಂಟಬಿಟ್ಟ. ವಿಠೂ ಎದ್ದಿದ್ದ ಖಾತ್ರಿ ಮಾಡ್ಕೊಂಡ ನಿಂಬಮ್ಮ ಮಾತ ನಿಲ್ಸದ್ಲು, ಇಡಿ ಮನಿ ಮಂದಿ ಮಾತಿಗ ಎದರಾಡಿದ್ರು ವಿಠೂಗ ಮಾತ್ರ ಚಕಾರ ಹೇಳೊ ತಾಕತ್ತಿರಲಿಲ್ಲಾ ಲಿಂಬಮ್ಮಗ ಆಕಿ ಕಳ್ಳ ವ್ಯವಹಾರದ ಇಡಿ ಪಟ್ಟಿಯನ್ನೇ ತನ್ನ ಹತ್ರ ಇಟ್ಕೊಂಡಿದ್ದ. ಅದಕಂತ್ಲೆ ಅವನ್ನ ಕಂಡವಳೆ ಬಾಲ ಸುಟ್ಟ ಬೆಕ್ಕಿನಂಗ ಆಗ್ತಿದ್ಲು. ಇಡಿ ಮನಿ ಮಂದಿ ಅವನಂದ್ರ ಅಂಜತಿದ್ರು. ಬಂದೂಕನ್ನಂತು ಯಾರು ಕೇರ್ ಮಾಡ್ತಿರಲಿಲ್ಲಾ, ಅವನೊಬ್ಬ ಕೆಲ್ಸಕ ಬಾರದ ಹುಚ್ಚ ಮನುಷ್ಯನ್ನ ಮಾಡಿದ್ರು. ಪಿರಾಪುರದ ಕೆಲಮಂದಿ ಬೋ ಕಲ್ತಾನಂತ ಗೌರವ ಕೊಡ್ತಿದ್ರು, ಇನ್ನ ಕೆಲವರು ಯಾವದೊ ಪ್ರಾಣಿ ಅಂತ ತಮ್ಮ ಪಾಡಿಗ ತಾವು ಇರ್ತಿದ್ರು. ಬರ್ತಾ ಬರ್ತಾ ಬಂದೂಕಗ ಬದುಕು ಬ್ಯಾಸರಿಕೆ ತರಿಸಿತ್ತು. ಕಾಲೇಜಿನೊಳಗೆ ಮೇಷ್ಟ್ರುಗಳು ಹೇಳಿ ಕೊಟ್ಟು ಸಿದ್ಧಾಂತಗಳೆಲ್ಲಾ ಹುರುಳಿಲ್ಲದ ವಿಚಾರಗಳು ಅನಿಸತೊಡಗಿದವು. ಸಮಾನತೆ, ಆದರ್ಶ ರಾಜ್ಯ ಸಾಧ್ಯವಿಲ್ಲದ ಸಂಗತಿಗಳಾಗಿದ್ದವು. ತನ್ನ ವಿದ್ಯೆಗೂ ಬದುಕಿಗೂ ಸಂಬಂಧವಿಲ್ಲ ಅನ್ನೋದು ಸ್ಪಷ್ಟವಾಗತೊಡಗಿತು. ಆಗಲೆ ಅವನು ತನ್ನಿಂದಾಗದ ಎಲ್ಲಾ ಕೆಲಸಗಳನ್ನು ಮಾಡಲು ಆರಂಭಿಸಿದ. ನಡು ರಾತ್ರಿ ಚಂದ್ರ ಮುಗಿಲೊಳಗೆ ಬಂದೊಡನೆ ನಾಕೆತ್ತಿನ ಕಬ್ಬಿಣದ ರಂಟಿ ಹೊಡಿಯಾಕ ಎಲ್ಲರಿಗಿಂತ ಮದ್ಲು ಎದ್ದು ಹೊಗ ತೊಡಗಿದ. ಮನಿಯೊಳಗ ಹೆಂಗಸರು ಉಲ್ಟಾಸಿದಾ ಮಾತಾಡೋದಕ ಮಧ್ಯಾಹ್ನ ಎತ್ತಗಳ ಮೈ ತೊಳದು ಮೇಯಿಸಿಕೊಂಡು ರಾತ್ರಿ ಮನಿ ಸೇರೋದು ಮತ್ತ ನಡುರಾತ್ರಿ ಎದ್ದು ರಂಟಿಗ ಹೋಗೋದನ್ನ ರೂಢಿ ಮಾಡಿಕೊಂಡ.

ಅಷ್ಟಾದ್ರೂ ತೃಪ್ತಿ ಇಲ್ಲದ ಅವನ ಹಿರಿ ಅತ್ತಿಗೆ, ಮೂರ ಹೊತ್ತು ಹೊಟ್ಟೆ ಹಿಡ್ಕೊಂಡ ಮಲಗ ಬಿಡ್ತಿದ್ಲು. ವಾರಕ ನಾಕದಪ ಆಸ್ಪತ್ರಿಗ ಹೋಗ್ತಿದ್ಲು. ಆಕಿ ಮೂರಸಲ ಹೋಗೋದನ್ನ ಕಂಡ ಉಳದ ಹೆಂಗಸರು ವಾರಕ್ಕೆ ಎರಡ ಸಲ ಆಸ್ಪತ್ರಿಗಂತ ಅಡ್ಡಾಡ ತೊಡಗಿದ್ರು. ಪಕ್ಕಣ್ಣ

ಹುಚ್ಚ ಹಿಡಿದೋರ ಹಂಗ ಹಿಗ್ಗ ಮುಗ್ಗ ಜಾಡಿಸ್ತಿದ್ದ ಆದ್ರೂ ಹೆಂಗಸರು ಹದ್ದುಬಸ್ತಿಗ ಬರಲಿಲ್ಲಾ. ಬಂದೂಕ ಮಾತ್ರ ಎತ್ತ ಮೇಯಿಸೊ ಮುಂದ ತಾನು ಕಲ್ತಿದ್ದನೆಲ್ಲಾ ಎತ್ತಗಳಿಗ ಹೇಳಿ ಖುಷಿ ಪಡ್ತಿದ್ದ. ಜಗತ್ತಿನ ಎಲ್ಲಾ ಸಿದ್ಧಾಂತಗಳು ನೆನಪಾಗ ತೊಡಗಿದವು. ಅರಿಸ್ಟಾಟಲ್, ಪ್ಲಾಟೋ, ಲೆನಿನ್, ಭಗವಾನ್ ಬುದ್ಧ, ಜಗತ್ತಿನ ಬದಲಿಸಲಿಲ್ಲಾ ನನ್ನಿಂದೇನಾದಿತು- ಮನಸ್ಸಿಗೆ ಬರೊ ವಿಚಾರಗಳನ್ನೆಲ್ಲಾ ನೆನಪು ಮಾಡಿಕೊಳ್ಳ ತೊಡಗಿದ. ಅವನು ಕಾಲೇಜಿನಲ್ಲಿದ್ದಾಗ ದೊಡ್ಡ ಶ್ರೀಮಂತರ ಹುಡ್ರು ಹುಡುಗಿಯರ ಹಿಂದೆ ಸುತ್ತುತ್ತಿದ್ದ ಕಂಡು ಬಾಯಿಯೊಳಗ ಜೊಲ್ಲು ಸುರಿಸುತ್ತಿದ್ದ ಅವನ ಗುಂಪಿನೊರ ಮಾತ ಕೇಳಿ ನಕ್ಕಿದ್ದು, ಅದ್ಯಾವನೊ ಪಾಟೀಲ ಅನ್ನೊ ಬಕ್ಕ ತಲಿಯೋನು ನಮ್ಮ ಕ್ಲಾಸಿನ ಹುಡುಗಿಯನ್ನ ಪ್ರೀತಿ ಮಾಡ್ತಿನಿ ಅಂತ ಅಕಿ ತಿರುಗಿ ನೋಡದಿದ್ರು, ಹಿಂದೆ ಮುಂದೆ ಸುತ್ತಾಡಿ ನಾನು ತರಗತಿ ಸೆಕರೆಟರಿ ಆಗಿದ್ಕ ಕುಡ್ಕೊಂಡು ಮಧ್ಯರಾತ್ರಿ ಒಂದ ಗಂಟೆಗ ಬಂದು "ರೀ ಬಂದೂಕಪ್ಪ, ಯಾವಾನಾರು ನನ್ನ ಹುಡಿಗಿಗ ಲೈನ ಹೊಡಿತಾನೇನ್ರಿ, ನನ್ನ ಮುಂದೆ ಹೇಳ್ರಿ ನನ್ನ ಮಕ್ಕಳನ್ನ ಹುಟ್ಟಲಿಲ್ಲಾಂತ ಅನಿಸಿಬಿಡ್ತಿನಿ". ಎರಡ ಮೂರ ಸಲ ಬಂದು ಒದರಾಡಿ ಹೋಗಿದ್ದ. ನಾನು ಅವನ ರೂಮಿನಗ ಹೋಗಿ ದಮ್ ಹಾಕಿಂದ ಕಡದ ಹತ್ರ ತುರಿಸಿಕೊಳ್ಳದಂಗ ಸುಮ್ಮನಾಗಿದ್ದ. ಅದೇ ಹುಡಗಿಗಾಗಿ ಮತ್ತೊಬ್ಬ ಹುಚ್ಚ ಸುಮ್ಮನೆ ಅಕಿಮನಿಯವರಿಗ ಹೋಗ್ತಿದ್ದ. ಅಕಿ ಬಂದ ತಕ್ಷಣ ಎದ್ದು ನಿಂತು ಹಲ್ಲ ಕಿರಿಯೋದು ಅವಳ ಗಮನೆ ಸೆಳೆಯೊ ನಾಟಕ ಮಾಡ್ತಿದ್ದ. ಯಾನ ಸ್ಟ್ರಾಟಿಜಿಗಳು ಕೆಲಸ ಮಾಡದಿದ್ದಾಗ ಕಟ್ಟ ಕಡೆಗೆ ನಮ್ಮೆಲ್ಲೆಲ್ಲಾ ಕಲೆ ಹಾಕಿ "ನೋಡ್ರಲೆ ಚಂದನ ಬಂದ ತಕ್ಷಣ ನಿವೆಲ್ಲಾ ಸೇರಿ ನನ್ನ ನಂಜೂರು ಹತ್ತಿ ಫ್ಯಾಕ್ಟರಿ ಮಾಲಿಕರೆ, ಅಂತ ಹೊಗಳಬೇಕು, ಜಮೀನ್ದಾರು ಅಂತ ಕರೀಬೇಕು" ಅಂತ ದೋಸೆ, ಕಾಫಿ ಕುಡಿಸಿ ಹೇಳಿಕೊಳ್ಳುತ್ತಿದ್ದ. ಎಲ್ಲಾನು ನೆನಪು ಮಾಡಿಕೊಂಡು ನಗುತ್ತಿದ್ದ ಬಂದೂಕ.

ಹಾಳ ಮನುಜರಿಗಿಂತ ಎತ್ತಗಳೆ ಎಷ್ಟೋ ಮೇಲು. ಎಷ್ಟ ಭಾರ ಹಾಕಿದ್ರು ಬೇಡ ಅನ್ನದೇ ಎಳಿತಾವ ಬಂದ ಹೊಸದರಲ್ಲಿ ಈ ಕೆಲಸಕ್ಕ ಮನಸು ಒಗ್ಗಿಕೊಳ್ಳದಿದ್ದಾಗ ಹಿರಿಯತ್ತಿಗೆ ಎಂಥೆಂಥ ಮಾತಗಳನ್ನ ಹೇಳಿ ಚುಚ್ಚುತ್ತಿದ್ಲು, ಈ ಮೂಕ ಪ್ರಾಣಿಗಳು ಯಾರ ಹತ್ರ ಹೋಗಿ ಹೇಳ್ಯಾವು. ನಾನು ಈಗೀಗ ಈ ಎಲ್ಲರಂತೆ ಆಗ್ತಾ ಅದೀನಿ ಅನಿಸಿದಾಗ ದಿನಕ್ಕೊಂದು ಬಾರಿ ಸ್ನಾನಮಾಡಿಕೊಂಡು ಒಗದು ಇಸ್ತ್ರಿ ಮಾಡಿರೊ ಅರವಿ ತೊಟ್ಟು ಮದ್ಲ ಬೆಂಚಿನ ಮೇಲೆ ಕುಂತು ಪಾಠ ಕೇಳಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡಿದಾಗ ಪಟ್ಟಖುಷಿ ನೆನಪಾಗಿ ಮನಸಿಗೆ ಕಸಿವಿಸಿಯಾಯಿತು. ಬಡತನ ಅಸಹಾಯಕತೆ, ಲಂಚಕೊಡದೆ ಸಿಗದ ನೌಕರಿ, ಬೊಂಡಯ್ಯನ ಬಂಡತನ, ತನ್ನ ಮನೆಯಲ್ಲೇ ಸಿಗದ ಗೌರವ ಎಲ್ಲವೂ ಅವನನ್ನ ಅಂತರ್ಮುಖಿಯನ್ನಾಗಿ ಮಾಡಿದ್ದು. ಬದುಕಿನ ನೊಗವನ್ನ ಕಳಚಿಕೊಂಡು ಓಡಿಹೋಗಬೇಕು ಅನಿಸಿತು. ಎಲ್ಲಿ? ತನಗಾಗಿ ಅಳುವವರಾರು ಯಾರಿದ್ದಾರೆ, ಅವ್ವ ಅಪ್ಪನಾಕದಿನ ಕಳಕಳಿ ಮಾಡ್ತಾರೆ ಆ ಮೇಲೆ ಎಲ್ಲ ಸಹಜವಾಗಿ ಬಿಡುತ್ತದೆ ಎಂದುಕೊಂಡವನೆ ಗಳೆ ಹೊಡ್ಕೊಂಡು ಮನಿಗ ಹಿಂದಿರುಗಿದ.

ಹತ್ತ ಮೈಲಿ ದೂರ ಹೋಗಿ ಬಂದು ಕೂಲಿ ಮಾಡಿದ್ರು ಸಾವುಕಾರ್‍ರ ಸಾಲ ಹರಿತಿರಲಿಲ್ಲಾ ಹೊಟ್ಟೆ ತುಂಬಿದರ ಅರವಿ ಕಾಣ್ತಿರಲಿಲ್ಲಾ ಪರಿಸ್ಥಿತಿ ಸಹಿಸಿಕೊಳ್ಳಾಕ ಆಗದ ಪೀರಾಪುರದ ಮಂದಿ ಕಾಫಿ ಸೀಮಿಗ ಹೊಂಟಿದ್ರು. ಮುದುಕರು, ಹುಡುಗರು ಸಣ್ಣೋರು, ದೊಡ್ಡೋರು, ಅನ್ನದೆ ಕೆಲವು ಮಂದೀನ ಬಿಟ್ಟು ಪಿರಾಪುರಕ್ಕೆ ಪೀರಾಪುರಾನೆ ಗುಳೆಕಿತ್ತಿತ್ತು. ಮುಂಜಾನಿ

ನಸಕಿನೊಳಗ ಎದ್ದು ರೊಟ್ಟಿ ಮಾಡ್ಕೊಂಡು ಎರಡ ಮೂರ ಮೆಣಸಿನ ಕಾಯಿ, ಬೆಳ್ಳುಳ್ಳಿ ಕಿವುಚಿಕೊಂಡು ಅಂಗೈಯೊಳಗ ಎಲ್ಡ ರೊಟ್ಟಿ ಹಿಡ್ಕೊಂಡು ನೀರು ಇಲ್ಲದ ದಾರಿಯೊಳಗೆ ಉಣ್ತಾ ಹೋಗಿ ಬೆಂದೂರ ಕೆನಲ್ ನೀರು ಕುಡದು ಮದ್ಯಾಹ್ನದ ಹನಮಾನ್ ಗಾಡಿ ಬರೊ ಮಟಾನೂ ಅಂಡ ಭೂಮಿಮ್ಯಾಲ ಊರದೆ ಭತ್ತದ ಗದ್ದಿಯೊಳಗ ನಡ ಬಗ್ಗಿಸಿ ಕೆಸರೊಳಗ ಕಾಲು ಕೀಳ್ತಾ ಸಾಕಾಗಿ ಅರ್ಧ ಗಂಟೆ ಕುಂತು ಕೈಗ ಸಿಕ್ಕಿದ್ದ ಒಣರೊಟ್ಟಿ ತುಂಡಗಳನ್ನ ಗಂಟಲಿಗ ತುರಕಿ ಎದ್ರ ಮತ್ತ ಸಂಜೆ ಐದರ ಕರ್ನಾಟಕ ಗಾಡಿ ಟೈಮಿಗ ಸರಿಯಾಗಿ ಕೆಲ್ಸ ಬಿಟ್ಟು ಕಾಲು ಕೈ ತೊಳಿಯೋದ್ರಾಗ ಮಕ್ಕರ ಗೌಳ ಆಗಿ ಹೊಕ್ತಿತ್ತು. ಅಲ್ಲಿಂದ ನಡೆದು ಮನಿಸೇರೋದ್ರಾಗ ಸವರಾತ್ರಿಯಾಗತ್ತಿತ್ತು. ಎಷ್ಟ ದುಡದ್ರು, ಸಿಗತಿದ್ದು ಹದಿನೈದ ರೂಪಾಯಿ ಕೂಲಿ. ಇದನ್ನೆಲ್ಲಾ ಕಂಡು ಬೇಸತ್ತ ಮಂದಿ ಟೋಪು ಮೇಸ್ತ್ರಿ ಹತ್ರ ಎಲ್ಡ ಸಾವರ ಮೂರ ಸಾವರ ಸಾಲ ತಗೊಂಡು ನಾಕ ತಿಂಗಳು ಕಾಫಿ ತ್ವಾಟದಾಗ ಬೀಜ ಹರಿಯಾಕ ಹೊಂಟ ನಿಂತಿದ್ರು. ಮನಿ ಮಂದಿಗ ಬ್ಯಾಸರಾಗಿದ ಬಂದೂಕನ ತಲಿಯಾಗ ಕಾಫಿ ಸೀಮಗಾಡಿ ಹತ್ತೊ ಆಲೋಚನೆ ಬಂದಿದ್ದೆ ಮನಿಗ ಹೋಗಿ ಅವರ ಮನಿಯಿಂದ ಹೊಂಟಿದ್ದ ಮೂವರೊಳಗ ಒಬ್ಬ ನನ್ನ ಬ್ಯಾಡಂತ ಉಳಿಸಿ ತಾನು ಹೋಗುವುದಾಗಿ ತಿಳಿಸಿದ. ಜೋಡವ್ವ, ಪಕ್ಕಪ್ಪ ದಂಗಾದ್ರು. "ಬ್ಯಾಡ ಮಗ ನೀ ಎಲ್ಲಿ ಮಾಡಿ ಆ ಕೆಲ್ಸ, ನಿನಂತೋರಿಗ ಆಗಾಣಲ್ಲ ಹೊಕ್ಕಾರ ಬಿಡ ಅವರು" ತಡಿಯಾಕ ಯತ್ನ ಮಾಡಿದ್ರು ಬಂದೂಕ ತನ್ನ ನಿರ್ಧಾರಕ್ಕ ಅಂಟಿಕೊಂಡಿದ್ದ. "ಇಲ್ಲಾ ನನಗ್ಯಾಕೊ ಇಲ್ಲಿ ಸರಿ ಬರಾಕ ಹತ್ತಿಲ್ಲ ಇಲ್ಲಿ ದುಡಿಯೋದನ್ನೆ ಅಲ್ಲಿಗ ಹೋಗಿ ದುಡಿತೀನಿ, ನನ ಬಗ್ಗೆ ನೀವೇನು ಕಾಳಜಿ ಮಾಡೋದ ಬ್ಯಾಡ, ನಿಮ್ಮ ಮಗ ಬಂದೂಕ ಏನೂ ಕಲ್ತಿಲ್ಲಾಂತ ತಿಳ್ಕೊಂಡ ಬಿಡ್ರಿ ನಾ ಇಲ್ಲದ್ದೆ ಅಂದ್ರ ಬಹಳ ಮಂದಿಗ ಕಸಿವಿಸಿಯಕೈತಿ" ಅಂದವನೆ ಇದ್ದ ಲುಂಗಿ ಪಂಚೆ ಹಳೆ ಅಂಗಿಗಳನ್ನ ಚೀಲದೊಳಗ ತುರಕಿಕೊಂಡು ಹೊಂಟ ನಿಂತ. ಬಂದೂಕ ಲಾರಿ ಹತ್ರ ಬಂದಾಗ ಟೋಪು ಮೇಸ್ತ್ರಿಗ ಗಾಬರಿಯಾಗಿತ್ತು. "ಅಲ್ಲ ಬಂದೂಕಣ್ಣ ನಿನ್ನಂತ ಕಲ್ತೋನಿಗ ಅದೆಲ್ಲಾ ಆಗಂಗಿಲ್ಲಾ" ಅಂದ. ಅವರೆಲ್ಲರ ಮಾತುಗಳನ್ನ ಮೀರಿ, ಬೀಕಿ ಅವನ ಮನಸಿನೊಳಗ ಪ್ರವೇಶಿಸಿದ್ಲು, ಬೀಕಿ ನಿಜವಾಗಿಯೂ ಕಾಡಿನ ಚಲುವೆ, ಈ ಚೆಲುವನ್ನ ಕೆಂಪಸಹನ್ಮ ನ ಹಳ್ಳಿಯ ಕೋದಂಡಯ್ಯ ವಿಕಾರಗೊಳಿಸಿದ ಸುದ್ದಿ ಇಡಿ ಪೀರಾಪುರಕ್ಕೆ ಗೊತ್ತು. ಮುಗ್ಧ ಬದುಕಿನ ಅಂತರಾಳವನ್ನೇ ಕೆದಕುವ ಕೇಡಿ ಶ್ರೀಮಂತರು ನಿಜವಾದ ಖಳನಾಯಕರು. ನಮ್ಮ ಜನರ ಕನಸುಗಳ ಮೇಲೆ ಕಲ್ಲು ಬಿಸಾಡುವ ಜನ ಬದುಕನ್ನ ಅರ್ಥ ಮಾಡಿಕೊಳ್ಳಕ ಸಾಧ್ಯವೆ.

ಮೇರಿ ಕಾಫಿ ಎಸ್ಟೇಟ್ ತಲುಪಿದಾಗ ಹನ್ನೊಂದ ಗಂಟೆಯಾಗಿತ್ತು. ಬ್ಯಾರೆ ಊರಿಂದ ಮಂದಿ ಬಂದು ತಮಗೆ ಬೇಕಾದ ಲೈನ್‌ಗಳನ್ನ ಆರಿಸಿಕೊಂಡಿದ್ರು, ಕೆಳಗಿನ ಲೈನ್‌ನಲ್ಲಿ ಐದಾರು ಹಂದಿ ಗೂಡಿನಂತ ರೂಂಗಳು ಖಾಲಿ ಇದ್ದವು. "ಸದ್ಯ ಎಲ್ಲರೂ ಈ ಲೈನಿಗ ಹೋಗ್ರಿ ನಾ ಮ್ಯಾನೇಜರು ರೈಟರ್ ಕೂಡ ಮಾತಾಡಿ ಬೇರೆ ಕಡೀಗ ವ್ಯವಸ್ಥೆ ಮಾಡ್ತಿನಿ ಅಂದಟೋಪು ಮೇಸ್ತ್ರಿ ಮಂದಿ ಗೊಣಗಿಕೊಂಡೆ ಸಾಮಾನು ಇಳಸಿ ತಮಗ ಬೇಕಾದ ಜಾಗ ಹಿಡಿಯಾಕ ಓಡಿದ್ರು. ಅವನ ಪಕ್ಕ ನಂದು, ಅಕಿ ಪಕ್ಕ ನಂದು, ನಾನು ಅಲ್ಲೆ ಸುರುಆಯ್ತು ಬಂದೂಕನಿಗೆ ಹೊಸದೊಂದು ಲೋಕದ ಪರಿಚಯವಾಗಿತ್ತು. ಮೈ ಕೊಂಯ ಭಳಿ ಬಾಗಲಿಲ್ಲಾ

ಕಿಟಕಿ ಇಲ್ಲದ ಈ ಮನಿಯೊಳಗ ಪ್ರಾಣಿಗಳಂತೆ ಐವತ್ತು ನೂರ ಮಂದಿ ಬೀಜ ಹರಿಯುವ ಕೆಲಸ ಮುಗಿಯೊವರಿಗೂ ಹ್ಯಾಂಗ ಕಾಲ ಕಳದಾರು ಅನ್ನೊ ಯೋಚನೆ ಬಂತು "ಓ ಇವು ಕಾಫಿ ತೋಟದ ಸ್ಲಮ್‌ಗಳು, ಬಡವರ ಬದುಕು ಸಿಟಿಯಾಗದರೇನು, ಹಳ್ಳಿಯೊಳಗಾದ್ರೇನು, ಕಾಫಿ ತೋಟದಲ್ಲಾದರೇನು ಒಂದೇ. ಈ ದೇಶದೊಳಗ ಎಂಥ ಅನ್ಯಾಯ ನಡಿತಾ ಇದೇ" ಆಲೋಚನೆ ತುಂಡಾತು. ಪೀರಾಪುರದ ಬೀಕಿ ಬಂದೂಕನ ಹೆಂಗಾನ ಮಾಡಿ ಬುಟ್ಟಿಗ ಹಾಕ್ಕೊ ಬೇಕಂದಾಕಿನ ಅವನ ಕಡಿಯವರು ಹಿಡಿದ ಜಾಗದ ಪಕ್ಕದಲ್ಲೇ ಒಲಿ ಹಾಕಿದ್ಲು. ಅವನೊಬ್ಬನೆ ನಿಂತಿದ್ದು ನೋಡಿ, "ಎನ್ ಯೋಚನೆ ಮಾಡ್ತಿದಿ ಈ ಗುಡ್ಡದಾಗ ಉಡಿಕಟ್ಟಿ ಬೀಜ ಹರಿಯೋದ ಹೆಂಗಂತಾನ ನಾ ಅದೀನಲ್ಲ ನಿನಗ ಹೇಳಿಕೊಡ್ತಿನಿ, ನನ್ನ ಪಕ್ಕದಾಗ ಸಾಲ ಹಿಡಿ" ಅವನ ಉತ್ತರಕ ಕಾದ್ಲು ನಕ್ಕು, "ಆತ ಬಿಡು ಕಲಸವಂತೆ' ಅಂದವನೆ ಅವಳ ಮುಗ್ಧ ಸೌಂಧರ್ಯವನ್ನ ದಿಟ್ಟಿಸಿದ ತಾನು ಓದುವಾಗ ಕಾಲೇಜಿನಲ್ಲಿದ್ದ ಹುಡುಗರಿಗೆ ಹೋಲಿಸಲು ಹವಣಿಸಿದ ಅವರ‍್ಯಾರು ಇವಳ ಸಮಕ್ಕೆ ಬರಲಿಲ್ಲಾ "ಮಾವ" ಕೂಗಿದ್ಲು. ಗಾಬರಿಯಿಂದ "ಏನು" ಅಂದ ಬಂದೂಕ "ರಾತ್ರಿ ಹೇಳ್ತಿನಿ ಬಿಡು" ಅಂದಾಕಿನೆ ಯಾರೊ ಬಂದಿದ್ಕ ಓಡಿದ್ಲು. ಬಂದೂಕ ಗೊಂದಲದಾಗ ಸಿಕ್ಕಿ ಹಾಕ್ಕೊಂಡ, ಒಂದ ಕ್ಷಣ ಗಲಿಬಿಲಿಗೊಂಡ ಬೀಕಿ ಯೋಚನೆಯಿಂದ ಹೊರಗ ಬರಬೇಕಂದ ಕೊಂಡವನೆ ತೋಟದೊಳಗ ಒಂದಿಷ್ಟು ದೂರ ನಡದ. ಗುಡ್ಡದ ಇಳಿಜಾರಿನೊಳಗೆ ಸುಂದರವಾಗಿ ಜೋಡಿಸಿರೊ ಹಂಗಿದ್ದ ಮರಗಳು ಅದ್ಭುತವಾಗಿ ಕಂಡವು.

ಟೋಪು ಹಿಂದಿಂದ ಕೂಗಿ ಎಚ್ಚರಿಸಿದ" ನೋಡ ಬಂದೂಕಣ್ಣ ನೀ ಸಾಲಿ ಕಲ್ತಿರೋನು ನಿನಗಲ್ಲದಿದ್ರೂ ನಿನ್ನ ವಿದ್ಯೇಗ ನಾ ಬೆಲಿ ಕೊಡ್ತೀನಿ" ನೀ ಬೀಜ ಹರಿಯೋದ ಬ್ಯಾಡ ಆಳಗಳ ಹಿಂದ ಲೆಕ್ಕ ಬರ‍್ಕೊಂಡ ಅಡ್ಯಾಡು ನಂಗೂ ಲೆಕ್ಕ ಬರಂಗಿಲ್ಲಾ ಸರಿಯಾಗಿ ನೋಡು" ಅಂದು ಲೆಕ್ಕದ ಪುಸ್ತಕ ಕೈಗಿಟ್ಟ ಏನೋ ಹೇಳಾಕಂತ ಬಾಯಿತಗದ, ಟೋಪ್ಪು ಕೇಳಲಿಲ್ಲಾ, ಅವನ ಆಳಗಳಿದ್ದ ಲೈನಿಗ ಹೋಗಿಬಿಟ್ಟ. ಬಹಳ ಹೊತ್ತಿನ ಮಟ ಕಾಡಿನ ನಡಕ ಮೈಮರತು ನಿಂತ.

ಮಂದಿ ಗಡ ಬಿಡಿಯಿಂದಲೈನಿಗ ಬಂದು ಹಾಜರಾಗಿದ್ರು. ಟೈಮ್ ಅಂದ್ರೆ ಟೈಮು ಯಾವಾನಾರು ಸರ್ಕಾರಿ ನೌಕರನ ಹಂಗ ಎರಡ ಮೂರ ಗಂಟೆ ತಡವಾಗಿ ಬಂದ್ರಂತು ತೋಟ ಬಿಟ್ಟೆ ಹೊರಗ ಹಾಕ್ತಿದ್ರು. ಐದೇ ಐದ ನಿಮಿಷ ತಡ ಆದ್ರ ಅರ್ಧ ಹಾಜರಿ ಕಡಿತ್ತಿದ್ದರು. ಹೊತ್ತು ಮುಂಚೆ ಹಾಜರಿಗ ನಿಂತ ಬಿಡ್ತಿದ್ರು. ರೈಟರು ಲೆಕ್ಕ ಮಾಡಿ ಚೀಲ ಸೊಂಟಕ ಬಿಗಿಯಾಕ ಹಗ್ಗ ಕೊಡ್ತಿದ್ದ, ಪೀರಾಪುರದ ಬೊಂಬ "ನನಗ ಬುದ್ಧಿ" ಅಂತೇಳಿ ಮುಂದ ನುಗ್ಗಿದ. ರೈಟನೊಬ್ಬ ಕೈಯಾಗಿದ್ದ ಟೈಯರ್ ತಗೊಂಡ ಅಂಡಮ್ಯಾಲ ಬಾರ‍್ಸಿದ. ಬಂದೂಕಗ ಪಿತ್ತ ನೆತ್ತಿಗೇರಿತು ತಪ್ಪಿಲ್ಲದಿದ್ರು ಯಾಕ ಹೊಡದ? ಯೋಚನೆ ಮಾಡ್ತಿದ್ದ "ಎಯ್ ಎಲ್ಲಾ ಕೇಳ್ರಲೇ, ಇಲ್ಲಿ ನಾವ ಹೇಳ್ದಂಗೆ ಕೇಳಬೇಕು, ಯಾವನಾರು ಗಾಂಚಾಲಿ ಮಾಡಿದ್ರಿ, ಮಕ್ಕಳ್ರ ನಿಮ್ಮ ಹೆಣ ಸಹಿತ ನಿಮ್ಮ ಊರಗಳಿಗ ಹೋಗಂಗಿಲ್ಲ" ಅಂತ ಗದರಿಸಿದ. ಬಂದೂಕಗ ಐದವರ್ಷದ ಹಿಂದೆ ಹೆಣವಾಗಿದ್ದ ಅವನ ಗೆಳೆಯ ಗಣಪೂ ನೆನಪಾದ. ಬ್ಯಾಸಗಿಗ ಬೀಜ ಹರಿಯಾಕ ಬಂದೋನು ಪೀರಾಪುರಕ್ಕೆ ಬಂದು ಹಬ್ಬ ಮುಗಿಸಿ ವಾಪಸ್ ಹೋದೋನ ಅರ್ಧ ಹೆಣ ಗುರ್ತಿಸಿ ಅಲ್ಲೆ ಕಟಿಗಿ ಆರಿಸಿ ಸುಟ್ಟು ಎರಡ ಕೋಳಿ ತಂದು ದಿನ ಮಾಡಿದ್ರಂತೆ. ಆ ನೆನಪು ಇಡಿ ಊರನ್ನ ತಲ್ಲಣಗೊಳಿಸಿತ್ತು. ಅವನಿಗಿಂತ ಎರಡ ತಿಂಗಳ ಮುಂಚೆ ಮತ್ತೊಬ್ಬ ಕಾಫಿ ಸೀಮಿ

ಕೂಲಿ ಆಳು ಸತ್ತ ಹೋಗಿದ್ದ. ಅದಕ್ಕೆಲ್ಲಾ ಇವರೆ ಕಾರಣ ಅಂತ ಅವನಿಗೆ ತಿಳಿತು. ಎಂಥ ಮೋಸ ನಡಿತಾ ಇದೆ ಇಲ್ಲಿ, ನಮ್ಮ ಪೀರಾಪುರದಷ್ಟೇ ಅಲ್ಲ ಕೊಂಡ್ಲಿಯಲ್ಲೂ ಇಬ್ಬರ ಮೂವರು ಸತ್ತ ಹೋದ್ರಂತೆ. ಈ ಅನ್ಯಾಯದ ವಿರುದ್ಧ ಧ್ವನಿ ಎತ್ತೋನ ಯಾರು ಇಲ್ಲ, ಯೋಚನೆ ಮಾಡ್ತಿದ್ದೋನ 'ಏಯ್ ಕೊಲಮೇಸ್ತ್ರಿ ಲೆಕ್ಕ ಸರಿಯಾಗೈತ' ಅಂದ 'ಹೌದು ಸರಿಯಾಗೈತಿ' ಅದೇ ದಾಟಿಯೊಳಗೆ ಉತ್ತರಿಸಿದ. ರೈಟರ್‌ಗೆ ಆಶ್ಚರ್ಯಯಾತು ಹೆಚ್ಚ ಮಾತಾಡದೆ ಆಳಗಳನ್ನ ಲೈನಿಗ ಬಿಟ್ಟ ಬರಾಕ ಹೋದ್ರು. ಬಂದೂಕನ ತಲಿಯೊಳಗೆ ರೈಟರ್‌ಗಳ ಧರ್ಪದ ಮಾತಗಳೇ ತುಂಬಿಕೊಂಡಿದ್ದವು. ಎಂಥ ಹೀನಾಯ ಪರಿಸ್ಥಿತಿ, ಮನುಷ್ಯರನ್ನು ನಾಯಿಗಳಿಗಿಂತ ಕಡಿಯಾಗಿ ನೋಡುವ ಮನುಷ್ಯರಿದ್ದಾರಲ್ಲಾ ಈ ಪ್ರಜಾಪ್ರಭುತ್ವದಲ್ಲಿ ಇಲ್ಲಿ ಒಂದೇ ವರ್ಗದ ಮಂದಿ ಇರೋದು, ಶ್ರೀಮಂತ ಶೋಷಕ ಫ್ಯೂಡಲ್ ವರ್ಗ. ಸರ್ಕಾರ, ಬಡವರ ಬಾಯಿ ಹೊಡೆದು ಅವರ ರಕ್ತದಿಂದ ಬಂಗಲೆ ಕಟ್ಟಿಸಿಕೊಂಡು ಹತ್ತು ಸಾವಿರ ಎಕ್ಕರೆಗಳಷ್ಟು ಬೆಟ್ಟಗಳ ಸಾಲುಗಳಲ್ಲಿ ಬ್ರಿಟೀಷರು ಬಿಟ್ಟು ಹೋದ ಪ್ಲಾಂಟೇಷನ್‌ಗಳನ್ನ ತಮ್ಮದಾಗಿಸಿಕೊಂಡು ಮತ್ತೊಬ್ಬರ ಸಂಪತ್ತಿನಿಂದ ಬದುಕಿರೊ ಈ ನೀಚ ಕಾಫಿ ಎಸ್ಟೇಟಿನ ಕಳ್ಳ ಖದೀಮ ಸೂಳಿ ಮಕ್ಕಳ್ರು ಸರಿಯಾಗಿ ಕೂಲಿ ಕೊಡೋದಿಲ್ಲ ಮುಂಜಾನಿಂದ ಸಂಜೆ ಮಟ ದೋಕಿಸಿಕೊಳ್ತಾರ ಈ ಅನ್ಯಾಯದ ವಿರುದ್ಧ ಈ ಅವಿದ್ಯಾವಂತ ಕೂಲಿಗಳೇನು ಮಾತಾಡ್ತರ. ಮೇಸ್ತ್ರಿ ಅನ್ನೋ ಬೇವಕೂಫ್, ತನಗೆ ಸಿಗುವ ಕಮಿಷನಿಗೆ ತಲೆ ಹಿಡಿಯಲು ಮುಂದಾಗ್ತಾನ ಇವರ ಈ ದರ್ಪ ಕೊನೆಯಾಗೋದ್ರು ಯಾವಾಗ? ರೈಟರೊಬ್ಬ ಅವನ ಹಿಂದೆ ಬಂದು ನಿಂತಿರೋದು ಅವನಿಗ ಗೊತ್ತಾಗಲೇ ಇಲ್ಲಾ "ಲೇ ಕೋಲ್‌ಮೇಸ್ತ್ರಿ ನಿನ್ನ ಆಳ ಸರಿಯಾಗಿ ಕೆಲ್ಸ ಮಾಡಾಕ ಹತ್ಯಾರೇನಂತ ನೋಡೋದ ಬಿಟ್ಟ ಹಿಂಗ ನಿಂತ್ರ ನಿಮ್ಮಪ್ಪ ಬಂದು ಎಲ್ಸ ನೋಡ್ತಾನೇನು" ಜೋರಬಾಯಿ ಮಾಡಿವದರಿಂದ" ಎಯ್ ರೈಟರ್ರೆ ಬಾಯಿ ಬಿಗಿಡಿಹಿದ ಮಾತಾಡು, ಇಲ್ಲಿ ಯಾರು ನಿರ್ಗತಿಕರು ಬಿಕ್ಷೆ ಬೇಡೋರಲ್ಲ, ನೀವು ರೊಕ್ಕ ಕೊಡ್ತಿರಿ ನಾವು ಕೆಲ್ಸ ಮಾಡ್ತಿವಿ ಆಟೇಯ ನಿನಗ ಆ ಅಧಿಕಾರ ಇಲ್ಲ" ಅಷ್ಟೆ ಜೋರಾಗಿ ಪ್ರತಿಕ್ರಿಯಿಸಿದ. ಮಂದಿ ಕೆಲ್ಸ ನಿಲ್ಸಿ ನೋಡ ತೊಡಗಿದ್ರು, ಮೇಸ್ತ್ರಿ ಒಡೋಡಿ ಬಂದ. "ಬಂದೂಕಣ್ಣ, ಇದು ಕಾನೂನು ಕಟ್ಟಲೆ ಅನ್ಯಾಯ, ನ್ಯಾಯದ ಬಗ್ಗೆ ಮಾತಾಡೊ ಜಾಗ ಅಲ್ಲ, ನೀ ಸುಮ್ಮನಾಗು ಇಲ್ಲಿ ಸಾವುಕಾರನೆ ರಾಜ, ಈ ರೈಟರುಗಳೇ ಸೇನಾಪತಿ, ಸೈನಿಕ ಎಲ್ಲರು ಇವರ ಹುಕುಂ ನಡಿಯೋದು ನಮ್ಮ ಮಾತಗಳಿಗ ಬೆಲಿ ಇಲ್ಲ ನೀ ಕಲ್ತಿರೋನು ನಾ ಹೆಚ್ಚ ಹೇಳೋದಿಲ್ಲ ನೀನ ತಿಳ್ಕೊ" "ಅಲ್ಲ ಟೋಪು ಅವನೇನ ಉಪಕಾರಕ್ಕೆ ಕೆಲ್ಸ ಮಾಡಿಸಿಕೊಳ್ತಾನ ಕೆಲಸ ಮಾಡೋರಿಗ ಮರ್ಯಾದಿನ ಇಲ್ಲಾ ಅನ್ನು, ನಾವೇನು ಗತಿ ಗೆಟ್ಟು ಇಲ್ಲಿ ಹ್ವಾರೆಕ ಬಂದಿಲ್ಲಾ ಅಲ್ಲೂ ಸಾಕಷ್ಟು ಹ್ವಾರೆ ಐತಿ ಆದ್ರ, ನಮ್ಮ ಹಿರಿ ಮಂದಿ ದುಡ್ಡಿನಾಶಿಗ, ಹೆಂಡ ಕಂಡದಾಶಿಗ ರುಚಿ ನೋಡ್ಕೊಂಡು ಕಾಫಿ ಸಿಮಿಗ ಬರೋದ ರೂಢಿ ಮಾಡ್ಕೊಂಡಾರ" "ನೀ ಏನೇ ಹೇಳು ಇಲ್ಲಿ ಅವರೇ ನಿರ್ಣಯ ಮಾಡೋರು ನಮ್ಮದೇನು ಕೆಲಸ ಕಾಸು ಆಟೇಯ, ಬಂದ ಕೆಲ್ಸ ಮುಗಿಸಿಕೊಂಡು ನೆಟ್ಟಗ ಊರ ಮುಟ್ಟಿದ್ರ ಆತು, ನೀ ಹೆಚ್ಚ ಕಮ್ಮಿ ಮಾಡಬ್ಯಾಡ ಈ ಮಂದಿ ಏನ ಮಾಡಾಕು ಹೇಸಂಗಿಲ್ಲಾ ನಮ್ಮೂರ ಗಣಪೂ ಏನಾದ ಅನ್ನೋದ ಕೇಳಿರಾಕ ನೀನು ಯಾಕ ಬೇಕು ಹಳ್ಳಿ ಹಾಳಾದ್ರೇನ, ಡಿಲ್ಲಿ ಪಟ್ನಾದರೇನು ನೆಳ್ಳ ನೋಡಿ ಬದುಕಿದರಾತು" ಎಲ್ಲಿ ಮಟ ಈ ಅನ್ಯಾಯ ನಡದೀತು, ಸ್ವಾತಂತ್ರ್ಯ ಬಂದ

ಮ್ಯಾಲ ಇಂತ ಜಮೀನ್ದಾರರೆಲ್ಲಾ ಮಟಾಸ್ ಆಗಿ ಹೋದ್ರು ಅಂತಹ ಮಹಾರಾಜರುಗಳೆ ನಮ್ಮಂಗ ಸಾಮಾನ್ಯರಾಗಿದ್ದಾರೆ. ಅವರ ವಂಶಜರೆಲ್ಲಾ ರಾಜರಾಗಿದ್ದೋರು, ಇವತ್ತು ಕೇರ್ ಆಫ್ ಫುಟ್‌ಪಾತ್ ಆಗಿದ್ದಾನೆ. ಇನ್ನು ಇವರ್ದೇನ ಮಹಾ. ವಾದ ಮಾಡಿದ. ಮಂದಿ ತಮ್ಮ ಪಾಡಿಗ ತಾವು ಬೀಜ ಹರದು ಕೈ ಕಾಸಿಗಂತೇಳಿ ಹೆಚ್ಚಿಗೆ ಹರದು ಕತ್ತಿ ಹೊರೊಹಂಗೆ ಬೆಟ್ಟದ ಮೇಲಿಂದ ಬೀಳದಂಗೆ ಹೊತ್ತೊಂಡ ಬರ್‍ತಿದ್ರು. ಯಾವಾನಾರು ಆಯ ತಪ್ಪಿ ಬಿದ್ದನೋ ಬೆಟ್ಟದ ಬುಡಕ್ಕೆ ಹೆಣವಾಗಿರ್‍ತಿದ್ದ. ಜೀವದ ಮೇಲಿನ ಆಶಿ ಮರತು ದುಡಿತಾ ಇರೋದನ್ನ ನೋಡಿದ ಬಂದೂಕನಿಗೆ ಮರಕ ಬಂತು. ನಾವಿಲ್ಲದಿದ್ದರ ಮತ್ತೊಬ್ಬ ಬಂದೇ ಬರ್‍ತಾನ ಬರೋರೆಲ್ಲ ವ್ಯವಸ್ಥೆಯನ್ನು ಒಪ್ಪಿಕೊಂಡೆ ಬರೋದು ಕೊಲೆ ಬಸವನ ಹಂಗ ತಲಿಯಾಡಿಸೋದು ಒಂದೇ ಅವರಿಗ ಗೊತ್ತಿರೋದು, ಈ ಜನ ತಿಳಿಯೋದ ಯಾವಾಗ. ನನ್ನ ಎದಿಯಾಗಿನ ಹೋಯಿದಾಟ ಕಮ್ಮಿ ಆಗಲಿಲ್ಲಾ, ಈ ಮಂದಿತಾವ ಮನ ಮಾನಿ ದುಡ್ಡ ಐತಿ ಇವರಿಗ ಕಾನೂನು, ಪೊಲೀಸರು ಏನು ಮಾಡೋದಿಲ್ಲ. ಇಜೆಂಥ ಬದುಕು ಅಂತೀನಿ, ಈ ಜನ ಕೊಲ್ಲಾಕ ಹುಟ್ಟಿರೊ ಹಂಗೈತಿ. ಸರಿಯಾಗಿ ಕೂಲಿ ಕೊಡೊದಿಲ್ಲ, ಮೇಸ್ತ್ರಿ ಬಾಯಿಗ ಬೆಣ್ಣೆ ಒರಿಸಿ ಗದರಿಸಿ ಕಳಿಸಿಬಿಡ್ತಾರ ಅನ್ಯಾಯ ಸಹಿಸಿಕೊಂಡಿರೊ ಈ ಕೂಲಿಕಾರ ಮಂದಿ ಬದುಕಿದ್ದಾರ ಅನ್ನೋ ಅನುಮಾನ ಬರಾಕ ಹತ್ತೈತಿ, ಎಲ್ಲಿ ಮಟ ಕೂಲಿ ಮಂದಿ ಹಕ್ಕ ಕೇಳೋದಿಲ್ಲವೊ ಅಲ್ಲಿವರಿಗ ಈವರ ಉಪಟಳ ಇದ್ದಿದ್ದೆ. ಇಲ್ಲಾ ಇದಕೊಂದ ಗತಿ ಕಾಣಸಾಕಬೇಕು. ಯೋಚನೆ ಮಾಡ್ತಾ ಲೈನ್ ಕಡೀಗ ಹೊಂಟ. ಕಾಫಿ ಸೀಮಿ ಕೆಲ್ಸ ಹಿಡಿಸೀತೇನು' ಹೇಳಾಕ ಹಿಂದ ಮುಂದೆ ನೋಡಿದ" ನೋಡು ಟೋಪು ಮಾಡೊ ಕೆಲ್ಸ ಎಂಥಹದಾದ್ರೆನು ಮಾಡಾಕ ಮನಸು ಬೇಕು. ನಾನು ಸಾಲಿ ಕಲಿತೀನಿ ಅನ್ನೋದನ್ನ ಮರೆತು ಯೋಚನೆ ಮಾಡು ಅವಾಗ ನಿನಗೆ ತಿಳಿತೈತಿ" ಅಂದವನೆ ಲಾರಿ ಹತ್ತಿ ಯಾರೋ ಅಡ್ಡ ಹಾಕಿದ್ದ ಜ್ವಾಳದ ಚೀಲದ ಮೇಲೆ ಕುಂತ್ಕೊಂಡ. ಮಂದಿ ಗುಸುಪುಸು ಮಾತಾಡಿಕೊಳ್ಳ ತೊಡಗಿದರು. ಟೋಪು ಮೇಸ್ತ್ರಿ ಲಾರಿ ಹತ್ತಿ " ಬಂದೂಕಣ್ಣಾ ನೀ ಒಳಗ ಹೋಗಿ ಡ್ರೈವರ್ ಪಕ್ಕ ಕುಳಿತುಕೋ ಈ ಮಂದಿಯೊಳಗ ಕುಂದ್ರಾಕ ಆಗೋದಿಲ್ಲ, ನಮಗೆಲ್ಲಾ ಅದು ರೂಢಿಯಾಗಿ ಹೊಗ್ಯೆತಿ ಅಂದ ಬಂದೂಕನ ಮೇಲಿನ ಗೌರವ ವ್ಯಕ್ತಪಡಿಸಿದ. " ನೋಡು ನನಗೆ ಅದೆಲ್ಲಾ ಹಿಡಸೋದಿಲ್ಲ, ನನಗ ನನ್ನ ಪಾಡಿಗ ಬದಕಾಕ ಬಿಡು ಈ ಮರ್ಯಾರ್ದಿ, ದೊಡ್ಡಸ್ಥಿಕೆ ಬಗ್ಗೆ ಆಸಕ್ತಿನ ಇಲ್ಲಾ ಈಗ ನಾನೊಬ್ಬ ಸಾಮಾನ್ಯ ಕೂಲಿಯವನು ನೀನು ದುಡ್ಡ ಸಾಲ ಕೊಟ್ಟ ಧಣಿ ಮತ್ತೊಬ್ಬ ಧಣಿತಾವ ದುಡಿಸಾಕ ಒಯ್ಯಾಕ ಹತ್ತಿ ಅಷ್ಟೇಯ" ಟೋಪು ಮೇಸ್ತ್ರಿಗ ಅದೇನ ತಿಳಿತೊ ಬಂದೂಕನ ಸುದ್ಧಿಗ ಬರದಂಗೆ ಗಪ್ಪಾದ. ಆದ್ರ ನಮ್ಮೂರ ಸುತ್ತಲ ಐದ ಹಳ್ಳಿಯೊಳಗ ಹೆಚ್ಚಾಗಿ ಕಲ್ತೋನಂದ್ರ ಬಂದೂಕ ಒಬ್ಬನೆ ಅವನು ಉಡಿಕಟ್ಟಿ ಬೀಜ ಹರಿಯೋದಂದ್ರ ನಾಚಿಕ್ಕೇಡು, ನಮ್ಮೂರ ಮರ್ಯಾದಿ ಪ್ರಶ್ನೆ. ಲೈನ್‌ನೊಳಗ ಯಾವದಾದ್ರು, ಬ್ಯಾಕಿದೆ ಕೆಲ್ಸ ಕೊಡಿಸಿದ್ರಾತು, ಅಂತೋಣಿ ಮ್ಯಾನೇಜರಿಗೆ ಓದಿದೋರಂದ್ರೆ ಬಹಳ ಇಷ್ಟ ತನ್ನ ಆಲೋಚನೆಯೊಳಗೆ ಮುಳುಗಿದ ಟೋಪು.

ಬಂದೂಕನ ಮನಿಮಂದಿ ಎಗರಾಡತೊಡಗಿದ್ರು. ನೋಡ ತಮ್ಮಾ ನಿನಗ್ಯಾರ ಬಾ ಅಂತ ಅಂದಿರಲಿಲ್ಲಾ ನಮ್ಮ ಹಿಂದ ಬಂದಿ ಬಾಯಿ ಮುಚ್ಕೊಂಡ ಮೇಸ್ತ್ರಿ. ರೈಟರು, ಮ್ಯಾನೇಜರ್ ಅಂತೋಣಿ ಹೇಳದ ಕೇಳ್ಕೊಂಡು ಸುಮ್ಮನೆ ಇರೋದ ಕಲಿ, ದುಸರಾ ಮಾತಾಡ್ದಿ ಅವರೇನ

ಮಾಡ್ತಾರೊ ಅದಕ್ಕ ನೀನ ಹೊಣೆಗಾರ ಅಂದು ಹೆದರಿಸಾಕ ನೋಡಿದ್ರು. ಬಂದೂಕ ಅವರ ಮಾತ ಕೇಳೊ ಗೋಜಿಗ ಹೋಗಲಿಲ್ಲಾ ಅವರ ಹತ್ರ ಮಾತಾಡಾಕ ಹೋಗದೆ ಸುಮ್ಮನೆ ಉಂಡು ಎದ್ದಿದ್ದ. ಲೈನಿನ ಹೊರಗ ಉದ್ದಕೆ ಹಾಸ್ಕೊಂಡ ಮಂದಿ ಬೀದ್ಕೊಂಡಿದ್ರು ಬಂದೂಕ ಮಂದಿಯಿಂದ ದೂರ ಒಬ್ಬನೆ ಹಾಸ್ಕೊಂಡ ಮಲಗಿದ್ದ. ಬೀಕಿಗ ನಿದ್ದಿನ ಬರ್ಲಿಲ್ಲಾ, ಎಲ್ರೂ ಮಲಗಿದ ಮೇಲೆ ಎದ್ದಾಕೀನ ಅವನ್ನ ಹತ್ರ ಬಂದ್ಲು ನಿದ್ದಿ ಇಲ್ಲದೆ ಹೊಳ್ಳಾಡತ್ತಿದ್ದ ಅವನಿಗ ಹೆದರಿಕೆಯಾತು. ಯಾವಾದಾರ ಹೆಣ್ಣ ದೆವ್ವ ಏನಾರ ಗಂಟ ಬಿತ್ತೇನು ಅನ್ನೋ ಅನುಮಾನ ಸುರು ಆತು, ಕಣ್ಣ ಬಿಟ್ಟು ನೋಡ್ತಾನ ಬೀಕಿ, "ಯಾಕ ನಿದ್ದಿ ಬರ್ಲಿಲ್ಲಾ" ಕೇಳಿದ್ಲು "ನೀಯಾಕ ಬಂದೆ' ಗಾಬರಿಯಿಂದಲೇ ಕೇಳಿದ. "ನಿನ್ನತಾವ ಮಾತಾಡಕ, ನೋಡುಮಾವ ಈ ಜನ ಕೆಟ್ಟೋರು ಮೇಸ್ತ್ರಿ ಅದಾನಲ್ಲ ಅವನು ತಾಯಿಗಂಡ ಸೂಳಿಮಗ ಅವನನ್ನ ನಂಬಾಕ ಹೋದಗಿದಿಯಾ, ನಮ್ಮೂರ ಮಂದಿ ಸಾಯೋದ್ರಾಗ ಅವನ ಕೈವಾಡ ಐತಿ ಅದಕ್ಕ ನಾ ಹೇಳ್ತಿನಿ ನೀ ಇಲ್ಲಿರೋ ಮಟಾನು ಯಾರತಂಟಿಗ ಹೋಗಬ್ಯಾಡ ನನಗ ಮಾತ ಕೊಡು" ಅಂತ ಕೈ ಚಾಚಿದ್ಲು ಮಾಗಿಯ ಛಳಿ ಮೈ ಕೊರಿಯಾಕ ಹತ್ತಿತ್ತು. ಪಕ್ಕದಲ್ಲಿ ಹರೆಯದ ಹುಡುಗಿ ಬಂದೊಡನೆ ಅವಳ ಬೆಂಕಿಯಿಂದ ಇಡಿ ಮೈ ಕಾವೇರಿತು. ನಾನು ಕೈ ಮೇಲೆ ಕೈ ಇಟ್ಟಿದ್ದೆ ಮುಂದೇನಾಯ್ತೊ ಮುಂಜಾನೆ ನಾ ಎದ್ದಾಗ ನನ್ನ ಹಾಸಿಗೆ ಮೇಲೆ ಅವಳ ಕೂದಲುಗಳು, ಹೂಗಳು ಮುದುಡಿ ಬಿದ್ದಿದ್ದವು.

ತರಾತುರಿಯಿಂದಲೇ ಮಂದಿ ಸಾಲ ಹಿಡಿಯಾಕ ಅಡ್ಡಾಡತೊಡಗಿದ್ರು. ಯಾವನೊ ಒಬ್ಬ ಮಂದಿ ಒಳಗ ಕಾಲ ಇಟ್ಟಿಂದ ಓಡಿ ಬಂದ ಅವನನ್ನ ಹೊರಗಡೆ ನಿಲ್ಲಿಸಿದ್ರು. ರೈಟರುಗಳು ಬೇಕಂತ್ಲೆ "ಅವನು ಹೊತ್ತಿಗ ಮುಂಚೆನೆ ಬಂದಾವ ಲೈನಿಗ ಸೇರ್ಸಿ ಹಾಜರಿ ತಗೋಳ್ರಿ" ಅಂದೆ, ಇದು ನಿಮ್ಮಪ್ಪಂದ ತ್ವಾಟ ಏನೋ ಬೇವರ್ಸಿ ನನಮಗನೆ ನಿನ್ನೆಯಿಂದಲೇ ನಿನ್ನ ಸೊಕ್ಕ ನೋಡ್ತಾ ಅದೀವಿ ದಿನಕ ದಿನಕ್ಕೂ ಹೆಚ್ಚಾಗಾಕ ಹತ್ಯೈತಿ ನಿನಗೇನು ಮೈಮ್ಯಾಲ ಖಬರೈತಿಲ್ಲಾ" ಇಬ್ಬರ ಮೂವರು ಅವನ ಮೈಮೇಲೇರಿ ಬಂದ್ರು. ನೀವ ಹಿಂಗ ಮೇಲೇರಿ ಬಂದ್ರ ಹೆದರ್ತಿನಿ ಅಂದ್ಕೊಂಡ್ರ ಅದು ನಿಮ್ಮದು ಧೊಡ್ಡ ತಪ್ಪು, ನಿಮ್ಮಂತ ಎಷ್ಟೋ ಮಂದೀನ ಕಂಡೀನಿ ಅಂತೇಳಿ ನುಗ್ಗಿ ಹೋದ.

ಬಾಯಿಗ ಬಾಯಿ ಹತ್ಕೊಂತು, ಮಂದಿ ಕೆಲ್ಸಕ ಹೋಗೊದಿದ್ದರಿಂದ ಅವರು ಮಾತಾಡ್ತಾ ಹೋದ್ರು, ಅವನು ಮಾತಾಡ್ತಾನೆ ವಾಪಾಸಾದ. ಏನ ದಿಮಾಕು ಈ ಸೂಳೆ ಗಂಡ್ರಿಗೆ ಇದೇನ ಪ್ರಧಾನ ಮಂತ್ರಿ ಪದವಿ ಅಂದ್ಕೊಂಡಾರ್ರೊ ಹ್ಯಾಂಗಂತ. ಇದು ಈ ಜನರ ತಪ್ಪು ಹಿಂಗ ಮೈಮ್ಯಾಲ ಏರಿ ಬಂದಾಗ ಜಾಡಿಸಿ ಒದ್ದು ಎದಿಕೀಲ ಮುರದಿದ್ರ ಹಿಂಗೇನು ಆಗ್ತಾನೆ ಇರ್ಲಿಲ್ಲಾ. ಅವನು ಮುಂದೆ ಹೋಗ್ತಿದ್ದ ಹಿಂದ ನಾಲ್ಕು ಜನ ರೈಟರು ಒಂದಿಬ್ಬರು ಕೂಲಿಯವರು ತಮ್ಮ ಕೈಯಾಗಿದ್ದ ರಬ್ಬರ್ ಮುಚ್ಚುಗಳಿಂದ ಒಮ್ಮೆಂದೊಮ್ಮೆಗೆ ಹೊಡೆಯತೊಡಗಿದರು. ನಿರೀಕ್ಷೆ ಮಾಡದೆ ಉಂಟಾದ ಆಕ್ರಮಣವನ್ನ ತಪ್ಪಿಸಿಕೊಳ್ಳಾಗ ನೋಡ ನೋಡತ್ತಿದ್ದಂಗೆ ರಬ್ಬರ್ ನಿಂದ ರಪರಪ ಹೊಡ್ತಗಳು ತಲೆ ಕಾಲು ಮುಖಕ್ಕೆ ಬಿದ್ದವು. ಗಾಬರಿಯಾದ ಅವನು ಯೋಚನೆ ಮಾಡೋದನ್ನ ಕಳ್ಕೊಂಡು ನೆಲಕ್ಕುರುಳಿದ. ಇನ್ನೇನ ಅವರು ಮುಗಿಸ್ತಾರ ನನ್ನ ಅಂದವನೆ ಪಕ್ಕದಾಗಿದ್ದ ಒಂದು ಕಟ್ಟಿಗೆ ತುಂಡನ್ನ ಎತ್ಕೊಂಡವನೆ ಆರ ಜನಕ್ಕೂ ಸರಿಯಾಗಿ ಬಾರಿಸಿದ. ಹೆಂಗಾದ್ರು ನಾನು ಸಾಯೋನೆ ಒಂದಿಬ್ಬರನ್ನಾರು ಕೊಂದ

ಸಾಯಬೇಕಂತ ಆಲೋಚನೆ ಮಾಡಿದವನೆ ತಲಿ ಮಕ ಮುಸಡಿ ಏನೂ ನೋಡದೆ ಬಾರಿಸಿದ. ಕಾಫಿ ತೋಟದ ಹಳೆ ಹೆಂಗಸರ ಸಹವಾಸ ಮಾಡಿ ಮಾಡಿ ಕಸಿ ಮಾಡಿರೊ ಬೀಜದ ಹೋರಿಯಂತ ಕೊಂಗರ ರೈಟರುಗಳು ಹೊಡ್ತ ಬಿದಿದ್ದೆ ತಡಿಯಾಕ ಆಗದೆ ದಿಕ್ಕಾಪಾಲಾಗಿ ಓಡಿದರು. ಅವನ ಕೈಗ ಸಿಕ್ಕ ಕೂಲಿಗಳು "ತಪ್ಪಾತಣ್ಣಾ, ನೀವು ನಮ್ಮ ಹಿಂದ ಬರ್ಲಿಕ್ರ ತ್ವಾಟದಿಂದ ಓಡಿಸ್ತೀವಿ ಅಂತ ಹೆದರಿಸಿ ಕರ್ಕೊಂಡು ಬಂದ್ರು" ಅಂತೇಳಿ ಅಂಗಲಾಚಿದರು. ಅವರದೇನು ತಪ್ಪಿಲ್ಲ ಅನಿಸಿ ಅವರನ್ನ ಓಡಿಸಿದ.

ಸುದ್ಧಿ ಇಡೀ ತ್ವಾಟಕ್ಕೆ ಮುಟ್ಟಿತ್ತು. ಟೋಪು ಮೇಸ್ತ್ರಿ ನನ್ನ ಅಪರಾಧಿ ಮಾಡಿದ್ದ, ನಾನು ರೈಟರ್‌ಗಳ ತಪ್ಪನ್ನ ಪ್ರತಿಭಟಿಸಿದೆ. ಅಂತೋನಿ ಮ್ಯಾನೇಜರ್ ಗನ್ ಹಿಡ್ಕೊಂಡ ಬಂದು ಹೆದರಿಸಿದ. ಕೂಲಿ ಆಳಗಳೆಲ್ಲರಿಗೂ ನನದು ತಪ್ಪಿಲ್ಲಾಂತ ತಿಳಿದಿದ್ದಕ್ಕ ಎಲ್ಲರೂ ನನ್ನ ಪರವಾಗಿ ಕೆಲ್ಸಕ್ಕ ಹೋಗದಂಗ ಕುಂತ್ರು. ಜೋಸೆಫ್ ಸಾವುಕಾರ ಬರ್ಲಿ ಆ ಮ್ಯಾಲ ನಾವು ಕೆಲ್ಸಕ ಹೋಕ್ಕೀವಿ ಅಂತ ಒಂದೇ ಹಟ ಹಿಡಿದು ಕುಂತ್ರು. ಮ್ಯಾನೇಜರ್ ರೈಟರ್ ಪರಿಪರಿಯಾಗಿ ಬೇಡಿಕೊಂಡ್ರು ಕೆಲ್ಸ ಬಗಿ ಹರಿಲಿಲ್ಲಾ. ಮ್ಯಾನೇಜರ್ ಯಜಮಾನರಿಗೆ ಫೋನ್ ಮಾಡಿದ. ಎಸ್ಟೇಟಿನ ಮಾಲೀಕ ಜೋಸೆಫ್ ತೋಟದಿಂದ ಇಪ್ಪತ್ತ ಕಿಲೋಮೀಟರ್ ದೂರದ ಪಟ್ಟಣದಲ್ಲಿ ವಾಸವಾಗಿದ್ದ ಸುದ್ಧಿ ಮುಟ್ಟಿದ್ದೆ ಅರ್ಧ ಗಂಟೆಯೊಳಗ ಹಾಜರಾದ. ಎರಡು ಕಡೀಗ ವಿಚಾರಣೆ ಮಾಡಿ, ಮ್ಯಾನೇಜರ್, ರೈಟರ್‌ಗಳಿಗೆ ಬೋಯ್ದು, ಟೋಪು ಹಾಗೂ ಬಂದೂಕನನ್ನು ಕುಂದ್ರಿಸಿಕೊಂಡು ಸಿದಾ ಮುಂಪೇಟೆಗೆ ಹೊರಟ, ಮನೆಯೊಳಗೆ ಊಟ ಮಾಡಿಸಿ ಅವನ ಓದು ಬರಹ ಕೇಳಿ ದಂಗಾದ ಜೋಸೆಫ್ "ನೀನು ನಮ್ಮ ಧರ್ಮದವನಾಗಿದ್ರೆ ಇಷ್ಟೊತ್ತಿಗೆ ಅಮೇರಿಕಾದಲ್ಲಿ ಇರ್ತಿದ್ದೆ ಬಂದೂಕ" ಅಂದ "ಏನ ಮಾಡೋದ ಸಾವುಕಾರ್ರೆ ಹಾಳ ಈ ಹಿಂದೂ ಧರ್ಮದಾಗ ಹುಟ್ಟೋದ ಹುಟ್ಟಿ ದೊಡ್ಡ ತಪ್ಪಾತು"

ಅವನಿಗಾಗಿರೊ ಅವಮಾನ ಹೊರಗ ಹಾಕಿದ "ಇಡಿ ಜಗತ್ತಿನಾಗ ಪ್ರಭಲ ರಾಷ್ಟ್ರಯಾವದು" ಜೋಸೆಫ್ ಕೇಳಿದ "ಅಮೆರಿಕಾ, ಇಂಗ್ಲೆಂಡ್, ಜರ್ಮನಿ ಮುಂತಾದವುಗಳು" ನಾನು ಮುಗ ಸಾಕ ಮುಂಚೆನೆ "ಅಲ್ಲಿರೋದು ಕ್ರೈಸ್ತ ಧರ್ಮ, ಇಡೀ ಜಗತ್ತಿನ ರಕ್ಷಕ ಏಸು ಪ್ರಭು, ಅದಕ್ಕೆ ಹೆಚ್ಚೆಚ್ಚು ಜನರು ಈ ಧರ್ಮಕ್ಕೆ ಬರ್‍ತಾ ಇದ್ದಾರೆ. ಇಲ್ಲಿ ನೆಮ್ಮದಿ ಇದೆ ಎಲ್ಲಾ ಕಷ್ಟಗಳನ್ನು ಪಾರ ಮಾಡೊ ದೇವರಿದ್ದಾನೆ. ನೋಡು ನೀ ಏನು ಯೋಚನೆ ಮಾಡಬೇಕು ಏಸು ಒಳ್ಳೆಯದನ್ನು ಮಾಡ್ತಾನೆ. ಆತ ಹೇಳುತ್ತಲೇ ಇದ್ದ ನಾನು ಅದ್ಯಾವುದರ ಪರಿವೆಯೇ ಇಲ್ಲದೆ ಅವನ ಮಾತಿನ ಒಳ ಮರ್ಮ ಅರಿಯೋ ಯತ್ನ ನಡೆಸಿದ್ದೆ "ಟೋಪು, ಮ್ಯಾನೇಜರಿಗ ಹೇಳು ಬಂದೂಕನಿಗೆ ಆಫೀಸಿನಲ್ಲೇ ಕೆಲ್ಸ ಕೊಡಬೇಕಂತ ಅಲ್ಲೇ ಮ್ಯಾನೇಜರ್ ಮನಿಯೊಳಗೆ ಉಳ್ಕೊಳ್ಳೋ ವ್ಯವಸ್ಥೆಯನ್ನ ಮಾಡಬೇಕಂತ ಹೇಳು" ಅಂತ ಡ್ರೈವರಿಗೆ ಹೇಳಿ ಕಾರು ಕಳುಹಿಸಿದ. ಬಂದೂಕ ಯಾವದೋ ಒಂದು ಕೂಟದೊಳಗೆ ಸಿಕ್ಕಿ ಹಾಕಿಕೊಳ್ತಿರೊ ಹಾಗೆ ಅನಿಸತೊಡಗಿತು. ಬಾಯಿ ಬಿಟ್ಟ ಯಾರೊಂದಿಗು ಹಂಚಿಕೊಳ್ಳಲಾಗದ ಸಂದಿಗ್ದತೆ ಬೀಕಿ ಹತ್ರ ಹೇಳೋಣ ಅಂದ್ರೆ ಮ್ಯಾನೇಜರ್ ಮನೆಯೊಳಗೆ ವಾಸ "ಎಯ್ ಟೋಪು, ನನಗ್ಯಾಕೊ ಸರಿಯಾಗ್ತಾ ಇಲ್ಲಾ ನಾನು ತ್ವಾಟ ಬಿಟ್ಟು ಹೋಗಬೇಕಂದ ಕೊಂಡೀನಿ" ಅವನ ಮಕ ನೋಡಿದ. "ಬಂದೂಕಣ್ಣಾ ಯಾಕಿಂಗಂತೀಯಾ, ಈಗ ಸಾವು ಕಾರರೆ ಒಳ್ಳೆಯ ಕೆಲ್ಸ ಕೊಟ್ಟಾರ ಅದನ್ನ ಬ್ಯಾಡ ಅಂತಿಂತುಲ್ಲಾ

ನಾ ಏನ ಹೇಳ್ಲಿ" ಮಸ್ಕಾ ಹೊಡದ "ಆದ್ರೋ ನನಗೆ ಈ ಜನರ ಮೇಲೆ ಅನುಮಾನ ಬರ್ತಾ ಇದೆ" ವೇಗವಾಗಿ ಓಡ್ತಿರೊ ಕಾರಿನ ವೇಗ ರಸ್ತೆ ಮೇಲಿನ ಗಿಡ ಮರಗಳನ್ನ ವೇಗದಿಂದ ಮರಿ ಮಾಡ್ತಿರೋದನ್ನೇ ಗಮನಿಸ ತೊಡಗಿದ. "ಛೇ, ಜೋಸೆಫ್ ಸಾವುಕಾರ್ರು ದೇವರಂತ ಮನುಷ್ಯ, ಮೋಸ ಅಂದ್ರ ಗೊತ್ತಿಲ್ಲ ಅವರು ಹಂಗ ಮೋಸ ಮಾಡೋರಲ್ಲ ನನ ಮಾತ ಕೇಳು ಸಾಧ್ಯವಾದರ ನೀ ಅವರ ಹೇಳಿದಂಗೆ ಕೇಳಿದ್ರ ಗೌರ್ಮೆಂಟ್ ನೌಕರಿ ಬೇಕಾರ ಕೊಡಸ್ತಾರೆ" ಅಂದ. ಸುತ್ತಲು ಭದ್ರವಾಗಿಯೇ ಬೇಲಿ ನಿರ್ಮಾಣವಾಗ್ತಾ ಇದೇ ಅನಿಸಿತು. ಅದರೊಳಗೆ ಈ ಟೋಪನ ಕೈವಾಡನೂ ಇದೆ ಅಂತ ಸೂಕ್ಷ್ಮವಾಗೆ ತಿಳಿತು. ಪೀರಾಪುರದಾಗೊಮ್ಮೆ ಐವತ್ತ ಮಂದಿಯನ್ನ ಕ್ರಿಸ್ತಾನ್ ಧರ್ಮಕ್ಕೆ ಮತಾಂತರ ಮಾಡಿಸ್ತೀನಿ ಅಂತ ಒಂದ ತಿಂಗಳ ಕಾಲ ಪಾದ್ರಿಗಳನ್ನ ಕರೆಯಿಸಿ ಏನೇನೊ ಉಪಾಯ ಮಾಡ್ಸಿದ್ನಂತೆ ಆದ್ರ ಅವನ ಯೋಜನೆ ಫಲಕಾರಿಯಾಗಲಿಲ್ಲ. ಮಂದಿ ಸರಿಯಾಗಿ ಮುಂಜಾನೆ ತಿಂಡಿಗ ಸೇರ್ತಿದ್ರು ಅದಾಗಿ ಅರ್ಧ ಗಂಟೆಗೆ ಇಡೀ ಸಭೆ ಖಾಲಿಯಾಗ್ತಿತ್ತು. ಮತ್ತೆ ಊಟದ ಹೊತ್ತಿಗೆ ಮತ್ತೆ ಮಂದಿ ಹಿಂಡಾಗಿ ಸೇರಿ ಬಿಡ್ತಿದ್ರು. ಜೋಸೆಫ್ ಟೋಪುನ ಮೇಲೆ ಸಿಟ್ಟಾಗಿದ್ರು. ಒಬ್ಬ ನರ ಪಿಳ್ಳೆ ಧರ್ಮ ಬಿಡಲಿಲ್ಲಾ ಐದಾರ ವರ್ಷದ ಹುಡುಗರಿಗೆ ಕ್ರಾಸ್ ಮಾರಿ ಐವತ್ತ ರೂಪಾಯಿ ಲಾಭ ಮಾಡಿಕೊಂಡು ಊರ ಬಿಟ್ಟಿದ್ರು. ಬಂದ ಧರ್ಮ ಗುರು ಟೋಪು ಕುಟುಂಬ ಮತ್ತು ಅವನ ನಾಕೈದ ಮಂದಿ ಆಳುಗಳನ್ನ ಒತ್ತಾಯದಿಂದ ಮತಾಂತರ ಮಾಡಿದ್ರು. ಟೋಪು ಅದೇ ಸೇಡ ಇಟ್ಕೊಂಡು ಲಕ್ಷಗಟ್ಟಲೆ ಹಣ ಕಮಾಯಿಸಿದ್ದ. ತಾನು ಸಾವಕಾರನ ಹತ್ರ ಬಚಾವ್ ಆಗಾಕ ಸಾಲಿ ಹುಡುಗರ ಮೇಲೆ ಹಾಕಿ ಸುಮ್ಮನಾದ. ಅದನ್ನೇ ಕಾಯ್ತಿರೊ ಇವರು ಅದನ್ನೇನಾರು ತಗೊಂಡು ನನ್ನ ಬಲಿಪಶು ಮಾಡಾಕ ನೋಡಾಕ ಹತ್ತಿರೊ ಹಂಗ ಅನಿಸಿತು.

ಮ್ಯಾನೇಜರ ಅಂತೋನಿ ಗೇಟನ ಹತ್ರ ಕಾಯ್ತಿದ್ದ. ಬಂದೂಕಪ್ಪ ಬನ್ನಿ ಎಂದು ಸ್ವಾಗತಿಸಿದ್ರು. ಮನೆಯೊಳಗೆ ಆಫೀಸು ಅಲ್ಲೇ ಅವನ ವಾಸಕ್ಕೆ ರೂಂ ತೋರಿಸಿದ. ಬಂದೂಕಗ ಅಳಕುಂಟಾಗಿತ್ತು. ಹೋಗುವುದು ಸುಲಭದ ಮಾತಾಗಿರಲಿಲ್ಲ. ಆಗೋದ ಆಗ್ಲಿ ಗಟ್ಟಿ ನಿರ್ಧಾರ ಮಾಡಿ ಆಫೀಸ ಕೆಲಸಕ್ಕೆ ಸೇರಿದ. ತನ್ನೊಬ್ಬನನ್ನೇ ಬಿಟ್ಟು ಅವನು ತಾಸ ಗಟ್ಟಲೆ ಹೊರಗ ಹೋಗ್ತಿದ್ದ ಅವನ ಮಗಳು ರೀಟಾ ಸಲುಗೆಯಿಂದ ಅವನ ಹತ್ರ ಮಾತಾಡಿ ಅವನ್ನನ್ನ ಪ್ರೀತಿಸೊ ನಾಟಕ ಮಾಡಿದ್ಲು, ರೀಟಾ ಸುರಸುಂದರಿಗೆ ತನ್ನ ಕಾಲೇಜಿನ ದಿನಗಳು ನೆನಪಾದವು. ಹುಡುಗರು ಇಂಥ ಹುಡಿಗಿಯರಿಗಾಗಿ ಹಿಂದ ನಿಲ್ತಿದ್ರು. ಆದ್ರ ಮಂಗಳೂರನೊಳಗ ಎಂ.ಎ. ಮಾಡಿರೊ ಹುಡುಗಿ ನಾನಾ ನಮೂನಿ ಪ್ರಯತ್ನದಿಂದ ಅವನನ್ನ ಬುಟ್ಟಿಗ ಹಾಕೊ ಯೋಜನೆ ತಯಾರಿಸಿದ್ಲು.

ಅವನಿಗೆ ಗೊತ್ತಿಲ್ಲದೆ ರೀಟಾಳ ಸಂಗ ಮಾಡಿದ್ದ ಅವನು ತೋಟಕ ಬಂದು, ಆಗ಼್ೆ ನಾಕು ತಿಂಗಳಾಗಿದ್ವು ಊರ ಮಂದಿ ಮನಿಗ ಹೋಗಾಕ ತಮ್ಮ ಪೆಟಾರಿಗಳನ್ನ ಸಜ್ಜು ಮಾಡ್ಕೊಂಡು ತಮಗ ಬರ ಬೇಕಾಗಿರೊ ರೊಕ್ಕದ ಲೆಕ್ಕಕ್ಕ ಮ್ಯಾನೇಜರ್ ಅಂತೋನಿ ಮನಿ ಮಂದ ಕುಂತ್ಕೊಂಡಿದ್ರು. ಅವನ ಮನಿಯೋರು ಬಂದವರೆ "ಲೇ ನೀ ಊರಿಗ ಬರ್ತಿಯೋ ಇಲ್ಲಾ ಇಲ್ಲೆ ಯಾವದಾರು ಕ್ರಿಸ್ತಾನ್ ಹುಡಿಗಿ ಮದ್ವಿಯಾಗಿ ಖಾಯಂ ಠಿಕಾಣಿ ಹೂಡ್ತಿಯೋ" ಚುಚ್ಚಿ ಮಾತಾಡಿದ್ರು. "ಯಾಕ ನಾ ಏನು ಇಲ್ಲೆ ಇರಾಕಂತ ಬಂದಿನೇನು ನಾಳೆನೆ ನಿಮ್ಮ

ಹಿಂದ ಬರ್ತಿನಿ ನನ್ನ ಸಾಮಾನು ತುಂಬಿಕೊಳ್ರಿ" ಅಂದ. ಮಂದಿ ಎಲ್ಲಾ ತ್ವಾಟ ಬಿಡೊ ತರಾತುರಿಯಲ್ಲಿದ್ರು ಅಂತೋನಿ ಅವನನ್ನ ಸರಿಯಾಗೆ ಸಿಗಸಿಹಾಕಿ ಎಲ್ಲಾ ದಾರಿಗಳನ್ನ ಬಂದ್ ಮಾಡಿದ್ದ. ಇದ್ರಾಗ ಟೋಪುನ ಕೈವಾಡ ಎಷ್ಟು ಐತಿ ಅಂತ ತಿಳಿತು. ಆದ್ರು ಅವನೇನು ಮಾಡುವ ಹಾಗಿರಲಿಲ್ಲಾ, ತನ್ನ ಮನಿಯೋರಿಗೆ ಅವನೆ ಸುಳ್ಳ ಹೇಳಿದೆ "ನೀವು ನಡೀರಿ ನಾನು ನಾಳೆ ಬರ್ತೀನಿ" ಅಂದ. ಯಾವಾಗಾರ ಬಾ ನೀ ಬಂದು ಅಲ್ಲಿ ಮಾಡೋದು ಆಟೇ ಐತಿ" ಗದರಿಸಿದ್ರು. ಅಲ್ಲಿಯ ಮಾನಸಿಕ ಹಿಂಸೆಯಿಂದ ಇದೇ ಒಳ್ಳೆಯದು ಅನಿಸಿತು. ಆದ್ರ ತನ್ನ ತಾಯಿ ಬೇರನ್ನ ಕತ್ತರಿಸಿಕೊಳ್ಳೋದು ಸಹಿಸಿಕೊಳ್ಳಲಾರದಷ್ಟು ನೋವನ್ನ ಕೊಟ್ಟಿತು. ತಾನು ಹುಟ್ಟಿ ಓಡಾಡಿದ ಊರು ಇನ್ನೂ ಮೇಲೆ ತನ್ನ ಪಾಲಿಗೆ ಇಲ್ಲವಾಗುತ್ತಿದೆ ಎಂಬ ಸತ್ಯ ತಲೆಯೊಳಗ ಬಂದಾಗ ಅವನ ಹೃದಯ ನಿಂತಂತಾಗಿ ಉಸಿರು ಬಿಗಿ ಹಿಡಿದು ಒಬ್ಬೊಬ್ಬರಾಗೆ ಊರಿಗೆ ಹೊಂಟವರ ಕಡೆಗೆ ನೋಡಿ ಕೈ ಬೀಸಿದ. ರೀಟಾ ಅದೇ ಎಂದಿನ ಮೋಹಕ ನಗೆ ಬೀರಿ ಅವನ್ನನ್ನ ಒಳಗೆ ಎಳೆದೊಯ್ಯಲು ಹವಣಿಸಿದಳು.

ಒಂದು ಘಟನೆಯ ಸುತ್ತ

ನಿನ್ನ ನೆನಪು ಬಂದಾಗ ನಿಜವಾಗಿಯೂ ನಾನು ತೆರೆದ ಪುಸ್ತಕವನ್ನು ಮುಚ್ಚಿ ಬಿಡುತ್ತೇನೆ. ಏಕೆಂದರೆ ನೀ ನನ್ನ ಜೀವನದಲ್ಲಿ ಒಂದು ಕತೆಯಾಗಿ ನಿಂತಿರುವಿ. ನನ್ನ ಜೀವನವನ್ನು ಒಂದು ಕಾದಂಬರಿಯಾಗಿ ಮಾಡಿ ಬಿಟ್ಟಿದ್ದಿ. ಯಾವುದೇ ಪುಸ್ತಕ ಓದಿದರೂ ಅದರ ಪುಟಗಳಲ್ಲಿ ನಾನು ನೀನು ಇರುತ್ತೇವೆ. ಬಹಳ ಬೇಸರಗೊಂಡಾಗ ನನ್ನ ಮಂಚದ ಮೇಲೆ ಮಲಗಿಕೊಂಡ ಭೂತ ಕಾಲದ ನೆನಪುಗಳ ಮೆಲಕು ಹಾಕುತ್ತೇನೆ. ಮಂಚದ ಮೇಲಣ ಸೊಳ್ಳೆ ಪರದೆ ಗೋಡೆಯನ್ನು ಮರೆ ಮಾಡಿದೆ. ಓ! ವಾಸ್ತವದಲ್ಲಿ ನಾನು ನೀನು ಹೀಗೆ ಅಲ್ಲವೆ. ಒಂದೇ ತರಗತಿಯಲ್ಲಿ ಓದುತ್ತಿದ್ದರೂ ನಾ ನಿನ್ನ ಸರಿಯಾಗಿ ನೋಡುವ ಸ್ವತಂತ್ರ ನನಗಿರಲಿಲ್ಲಾ. ಪಕ್ಕದಲ್ಲಿ ಜೇಡನ ಬಲೆಯ ಎಳೆ ಇಳಿ ಬಿದ್ದಿತ್ತು. ಅದನ್ನು ಹತ್ತುತ್ತಿದ್ದ ಜೇಡ ಮೇಲೇರಲು ಹವಣಿಸುತ್ತಿತ್ತು. ಆದರೆ ಏಕೋ ಕೆಳಗೆ ಬರುತ್ತಿತ್ತು, ತನ್ನ ಬಲೆಯಲ್ಲಿ ಸಿಕ್ಕಿ ಬಿದ್ದ ಪ್ರಾಣಿಯನ್ನು ತಿನ್ನಲು ಆತುರ ಅದಕ್ಕೆ ಆದರೆ ಹತ್ತಲು ಆಗುತ್ತಿಲ್ಲಾ. ನನ್ನ ಸ್ಥಿತಿ ಜೋಡವೋ ಅಥವಾ ಬಲೆಯಲ್ಲಿ ಸಿಲುಕಿದ ಕೀಟ ಎಂಬುದು ನನಗೆ ಅರ್ಥವಾಗಿಲ್ಲ. ಅರ್ಥವಾಗದ ನಿನ್ನೆ ನಾಳೆಗಳನ್ನು ನಾನು ನೀ ಹೋಗಂದಿನಿಂದ ಮರೆತು ಬಿಟ್ಟಿದ್ದೇನೆ. ನಿನ್ನೆ ಮೊನ್ನೆಯಿಂದ ನಾನು ಕನಸು ಕಾಣುವುದನ್ನೇ ನಿಲ್ಲಿಸಿ ಬಿಟ್ಟಿದ್ದೇನೆ. ಏಕೆಂದರೆ ಎಷ್ಟು ಸುಂದರವಾಗಿದ್ದ ನಿನ್ನ ಮುಖ ಈಗ ನಗೆ ಬಹಳ ಕ್ರೂರಿಯಾಗಿ ಕಾಣುತ್ತಿದೆ. ನಿನಗೆ ಗೊತ್ತಿರಬಹುದು. ಗಂಡಿನ ಹೃದಯ ಹೆಣ್ಣಿನ ಹೃದಯಕ್ಕಿಂತ ಬಹಳ ಮೃದುವೆಂದು. ಇತ್ತೀಚೆಗೆ ನಾನ ಎಲ್ಲ ಹೆಣ್ಣನ್ನು ದ್ವೇಷಿಸುತ್ತೇನೆ. ಅವರ ಮೇಲೆ ಸೇಡು ತೀರಿಸಿಕೊಳ್ಳಲು ನೋಡುತ್ತೇನೆ.

ಅಂದು ನಾನು ಬೇಕಂತ ಮಾಡಿದವನಲ್ಲ. ನನಗೆ ಪ್ರೋತ್ಸಾಹ ಕೊಟ್ಟಿದ್ದು ನಿನ್ನ ಮಾತುಗಳು. ನಿನ್ನ ಜಿದ್ದು, ನಾನು ರಾಜು ಚಾಕಲೇಟ್ ಕೊಟ್ಟು ಫೂಲ್ ಮಾಡುತ್ತಿದ್ದಿದ್ದೇನೋ ನಿಜ. ಆಗ ನಿನ್ನ ಬಗ್ಗೆ ನನಗೆ ಗೌರವ ಭಾವನೆ ಇತ್ತು. ನಾನು ಹಾಡಿದಾಗಲೆಲ್ಲಾ ನೀನು ಕಾಂಪ್ಲಿಮೆಂಟ್ಸ ಕೊಡುತ್ತಿದ್ದೆ. ಅದಕ್ಕೆ ನೀನು ಒಳ್ಳೆಯ ಹುಡುಗಿ ಅಂತ ತಿಳಿದುಕೊಂಡಿದ್ದೆ. ನಿನ್ನ ಮಿತ ಬಾಷೆ ನನಗೆ ಬಹಳ ಹಿಡಿಸಿತು. ನಾನು ಊರಿಂದ ಬಂದಾಗಲೇ ನನ್ನ ಬಲೆಗೆ ಹಾಕಿಕೊಳ್ಳಲೋ ಅಥವಾ ಹಳ್ಳಿ ಗುಗ್ಗು ಮಾಡಲೋ ಕೆಲವು ಹುಡುಗಿಯರು ನಾಟಕ ಆಡಿದ್ದರೂ ಪಾಪ ಅವರಿಗೇನು ಗೊತ್ತು. ನಾನೇ ಒಬ್ಬ ನಾಟಕಕಾರ ಅನ್ನೋದು. ಅವರು ಯಾರು ಅಂತ ತಿಳಿದಾಗಲೇ, ನೀ ನನಗೆ ಇಷ್ಟವಾಗಿದ್ದು, ನಮ್ಮ ಸ್ನೇಹವಾಗುವುದಕ್ಕಿಂತ ಮುಂಚೆ ನಿಜವಾಗಿಯೂ ಮುಗ್ಧನಿದ್ದೆ. ನಾನು ಬಹಳ ಹುಡುಗರಿಂದ ಬೈಯ್ಯಿಸಿಕೊಂಡಿದ್ದೆ. ನನ್ನ ಮುಗ್ಧತೆಗಾಗಿ ಆದರೆ ವಿಧಿ ಲಿಖಿತವೋ ಏನೋ ಅಂದು ನಾನು ಮೊದಲ ಬಾರಿಗೆ ತಪ್ಪು

ಮಾಡಿದೆ. ಅದೇ ನನ್ನ ಜೀವನದಲ್ಲಿ ಮುಳ್ಳಾಗುತ್ತೇ ಎಂದು ನಾನು ನಂಬಿಇಲಿಲ್ಲಾ. ಅದಾದ ಖುಷಿಯೊಳಗೆ ನಿನಗೆ ತಿಳಿಸಿದ್ದೆ. ನಾನು ಗೋವಾಕ್ಕೆ ಹೊರಟಿದ್ದೇನೆ ಎಂದು ನೆನಪಿರಬೇಕು. ಅರೆ ಹಾಂ. ನಾನು ಮೊದಲು ಮಾಡಿದ ತಪ್ಪು ಕ್ಷಮಿಸಲು ಅರ್ಹವಾದದ್ದು ಏಕೆಂದರೆ ಪ್ರಕೃತಿದತ್ತವಾದ ತಪ್ಪನ್ನು ಮಾಡಿದ್ದೆ. ನಾನು ಈ ತಪ್ಪನ್ನ ಮಾಡಲು ನೀ ನೂರಕ್ಕೆ ತೊಂಭತ್ತೊಂಬತ್ತು ಭಾಗ ಕಾರಣ. ಮೇಡಂ, ನನ್ನ ಪುಟ್ಟಿಯ ಜೊತೆಗೆ ಕಳುಹಿಸಿದಾಗ ನೀನು ನನ್ನ ಹಿಂದೆ ಏಕೆ ಬಂದೆ, ಅದು ಹೋಗಲಿ ಹುಡುಗಿಯರು ನಕ್ಕಾಗ ನೀ ಏಕೆ ಒಂದು ತರ ಮಾಡಿಕೊಂಡೆ, ಇದು ಒಂದು ಹೆಣ್ಣು ಒಂದು ಗಂಡಿನ ಸ್ತ್ರೀ ಹಕ್ಕು ಬಳಸುವ ತಂತ್ರ ಎಂದು ನಾನು ಎಲ್ಲೋ ಕೇಳಿದ್ದೆ. ಅದು ಹೋಗಲಿ, ಒಳಗೆ ಕುಳಿತಾಗ ಹುಚ್ರ ಹಾಗೆ ಅವರಿಗೊಂದು ಹೂ. ಇವರಿಗೊಂದು ಹೂ ಕೊಟ್ಟೆ, ಹೋಗಲಿ ಸುಮ್ಮನೆ ಕೂಡಲಿಲ್ಲಾ. ನನ್ನ ಕೈಯಲ್ಲಿ ಕೊಟ್ಟು ಅದನ್ನು ಮುಂದೆ ಇಡಲು ಹೇಳಿದೆ. ನಾನು ಹೋಗಲು ಮನಸಿಲ್ಲದೇ ತೊಳಲಾಡುತ್ತಿರುವ ಪರಿಸ್ಥಿತಿಯಲ್ಲಿದ್ದಾಗ ನೀನೇ ಸಹಾಯ ಮಾಡಿ ಹೋಗಲಿ ಬಿಡು ಅಂದೆ. ನಾವಿಬ್ಬರು ಕುಳಿತ ಪರಿಸ್ಥಿತಿ ಹೇಗಿತ್ತು ಹೇಳು. ಅದರಲ್ಲಿಯೂ ನಿನ್ನ ಬ್ಯಾಗಿನ ಮೇಲೆ ನನ್ನ ಕೈಯ ನನ್ನ ಬೆರುಗಳಿಗೆ ಆಗಾಗ್ಗೆ ತಾಗುವ ನಿನ್ನ ಬೆರಳುಗಳು ಈ ವಿಚಿತ್ರ ವರ್ತನೆಯನ್ನು ನಾನು ಏನೆಂದು ಅರ್ಥ ಮಾಡಿಕೊಳ್ಳಲಿ. ಅವನು ಯಾವದೋ ಆಟವಾಡಿಸಿದಾಗ ನೀನು ಕೂಗುತ್ತಿದ್ದೆ. ಬೇಗ ಬೇಗ ಎಂದು. ನಿನ್ನ ಧ್ವನಿಯಲ್ಲಿಯಕಂಪನ ಏನನ್ನು ಸೂಚಿಸುತ್ತಿತ್ತು. ಹೀಗೆ ನೀನು ಅರಿತು ಅರಿತು ಮಾಡಿದ ತಪ್ಪು ನನ್ನ ಜೀವನವಿಡಿ ಕೊರಗಿಸುತ್ತಿದೆ ಗೊತ್ತಾ. ಗೋವಾದಲ್ಲಿ ಪ್ರವಾಸ ಮನಸ್ಸಿಲ್ಲದೆ ನಡೆದಿತ್ತು ನಿನಗಾಗಿ ನಾನು ಆನೆಯನ್ನು ತೆಗೆದುಕೊಂಡಿದ್ದೆ. ಜೀವಂತದಲ್ಲಾ ಕಲ್ಲಿನದು ಏಕೆಂದರೆ ನಿನ್ನ ಸೈಜಿಗೆ ಸರಿಯಾಗುತ್ತೆ ಎಂದು ನನಗೆ ಒಂದು ದೌರ್ಬಲ್ಯವಿದೆ. ಅದು ನನ್ನ ನಿನ್ನ ಕತೆಯನ್ನು ದುಃಖಾಂತಕ್ಕೆ ತಳ್ಳಿತು. ನಾನು ಖುಷಿಯಿಂದ ಎಲ್ಲವನ್ನೂ ನನ್ನ ಗೆಳೆಯರಿಗೆ ಹೇಳಿಬಿಟ್ಟೆ. ಆದರೆ ಅದು ಮಹಾನ್ ಗ್ರಂಥದ ಕತೆಯಂತೆ ಇಷ್ಟು ಬೇಗ ಕಾಲೇಜಿನಲ್ಲಿ ಹರಡುತ್ತದೆ ಎಂದುಕೊಂಡಿರಲಿಲ್ಲಾ. ಗೋವಾದಿಂದ ಬಿಟ್ಟು ಬೇಗ ಬಂದು ನಿನ್ನ ನೋಡುವೆನೋ ಎಂದುಕೊಂಡು ನನ್ನ ಗೆಳೆಯರಿಂದ ಬೇರೆಯಾಗಿ ಒಂದು ದಿನ ಮುಂಚಿತವಾಗಿ ನಿನ್ನ ನೋಡಲು ಬಂದಿದ್ದೆ. ಆದರೆ ಅಂದು ನೀ ಕ್ಲಾಸಿನಲ್ಲಿ ಕಾಣಲಿಲ್ಲಾ ಅದನ್ನು ಏನುಂತ ತಿಳಿದುಕೊಳ್ಳಲಿ ಅದೂ ಕಾಲೇಜಿಗೆ ಬಂದು ಕ್ಲಾಸಿಗೆ ಬರಲಿಲ್ಲಾ, ರಾಜುಗೆ ಎಲ್ಲಾ ಗೊತ್ತಿತ್ತು. ಅವನೇ ಹೇಳಿದ ಹೀಗೆ ಎಂದು. ಆದರೆ ನನಗೆ ಏನು ಮಾಡಲು ತೋಚಲಿಲ್ಲ. ನನಗೆ ಒಂದೂ ಅರ್ಥವಾಗದೇ ಒಂದು ವಾರವನ್ನೇ ಕಳೆದೆ. ಆದರೆ ಅದು ಸ್ವಲ್ಪ ಸ್ವಲ್ಪವಾಗಿ ಬಯಲಿಗೆ ಬೀಳುತ್ತಿತ್ತು. ನನ್ನ ನಿನ್ನ ಸಂಬಂಧವನ್ನು ಕುರಿತು ರಂಗೇರಿಸಿತ್ತು. ಕತೆಗೆ ನಾನು ನಿಜವಾಗಿ ಬಹಳ ಹೆದರಿದ್ದೆ. ನಿಮ್ಮ ಅಂಕಲ್‌ಗೆ ತಿಳಿದು ನನ್ನ ಜೀವನ ಹಾಳಾಗುತ್ತೆ ಅಂತ. ಆದರೆ ಹಾಗಾಗಲಿಲ್ಲ. ಬದಲಾಗಿ ನನ್ನ ಗೆಳೆಯರು ನನ್ನ ಹೆಸರು ನಿನ್ನ ಎದುರಿಗೆ ಕೂಗಿ ನಿನ್ನ ಮನಸ್ಸನ್ನು ನೋಯಿಸಿದ್ದರು ಎಂಬುದು ತಿಳಿತಾ ಬಂತು. ನಾನು ನಿಸ್ಸಹಾಯಕನಾಗಿದ್ದೆ. ಆಗ ಏನೂ ಮಾಡಲು ತೋಚದೇ ನಿನ್ನ ಹಿಂದೆ ಸುತ್ತುತ್ತಿದ್ದೆ. ಹುಚ್ಚನಾಗಿ ಅಲ್ಲ ಏನೋ ಹೇಳಬೇಕೆಂದಿದ್ದೆ. ಬರೆದು ತಿಳಿಸಲು ನಿನ್ನ ನೋಟ್ಸ ಕೇಳಿದೆ ಎಲ್ಲಿ ಕೊಟ್ಟೆ ನೀ ಇಲ್ಲಾ ಎಂಬ ಸಣ್ಣ ಸುಳ್ಳನ್ನು ಹೇಳಿ ನನ್ನ ಸಾಗು ಹಾಕಿದ್ದೆ. ನೀ ಬಂದಾಗ ಒಬ್ಬಳೇ ಇದ್ದಾಗ

ಏನಾದರೂ ಮಾತಾಡಬೇಕೆಂದಿದ್ದೆ. ಆದರೆ ನಿನ್ನ ಗೆಳತಿ ಓ ಅವಳನ್ನು ನೋಡಿದರೆ ಇಂದಿಗೂ ನನಗೆ ಹೆದರಿಕೆಯಾಗುತ್ತೆ. ಅವಳು ಸದಾ ನಿನ್ನ ಜೊತೆಗೆ ಇರುತ್ತಿದ್ದಳು. ಮತ್ತೊಬ್ಬಳು ನನಗೆ ಏನೋ ಒಂದು ಮಾತು ಹೇಳಿದಳು. ಹೀಗೆ ನೀನು ಸುತ್ತುವರಿಯಲ್ಪಟ್ಟಿದ್ದೆ. ನಿನಗೆ ಯಾವ ಚಿಂತೆಯೂ ಇರಲಿಲ್ಲಾ. ಆದರೆ ನೀ ಎಷ್ಟು ಬೇಗ ಬದಲಾದೆ ಗೊತ್ತಾ. ನಾ ಯಾಕೆ ಹಿಂದೆ ತಿರುಗುತ್ತಿದ್ದೆ ಎಂಬುದು ನೀ ಅರ್ಥ ಮಾಡಿಕೊಳ್ಳಲಿಲ್ಲಾ ನನಗೆ ಗತ್ತು. ನಿನಗೆ ಬಹಳ ನೋವಾಗಿದೆ. ಅಂತ. ಏಕೆಂದರೆ ನನ್ನ ಗೆಳೆಯರು ತಪ್ಪು ಮಾಡಿದ್ದರು. ಆದರೆ ಬುದ್ಧಿವಂತೆ ಅಂತ ತಿಳಿದಿದ್ದ ನೀನು ಅವರಿಗಿಂತ ದೊಡ್ಡ ತಪ್ಪು ಮಾಡಿದೆ. ಒಂದು ಮನೆಗೆ ನಾವೆಲ್ಲರೂ ಹೋಗಿದ್ದೆವು ಆಗ ನೀವು ನನ್ನ ವಿರುದ್ಧ ಮನಸ್ಸಿಗೆ ಗಾಯವಾಗುವ ಚುಟುವಟಿಕೆಗಳನ್ನು ಆರಂಭಿಸಿದ್ದೆ. ಅಂದೇ ನಾನು ನನ್ನ ಭವಿಷ್ಯತ್ತನ್ನು ಊಹಿಸಿಕೊಂಡೇ ಮುಂದೆ ಹೀಗೆ ಆಗುತ್ತದೆ ಎಂದು ಮೊನ್ನೆ ಪ್ರೊಫೆಸರ್ ಹ್ಯಾಮ್ಲೆಟ್, ನಾಟಕ ಮಾಡುವಾಗ ನಾಯಕ ಹ್ಯಾಮ್ಲೆಟ್ ಹೇಳುವ ಮಾತು ಹೇಳಿದರು. ನಿನಗೆ ಗೊತ್ತಿರಬೇಕು. Fraility thy name is woman.

ಎಷ್ಟು ಸತ್ಯ ಗೊತ್ತಾ ಅದು. ನನ್ನ ಜೀವನದಲ್ಲಿ ನೀನು ವಿಷ ಮುಳ್ಳಾಗಿ ನಿಂತಿದ್ದಿದ್ಯಾ, ನಿನ್ನಲ್ಲಿ ಮಾಯವಾಗುತ್ತಿರುವ ಪ್ರತಿಯೊಂದು ಬದಲಾವಣೆಗಳು ನನ್ನ ಮೆದುಳನ್ನು ಹರಿದು ತಿನನುತ್ತಿವೆ. ನೀ ಬೇಕಾದವರೊಂದಿಗೆ ಮಾತಾಡು, ನನಗೆ ಚಿಂತೆ ಇಲ್ಲ. ಅಥವಾ ನೀ ಬೇರೆಯವರ ಜೊತೆಗೆ ಮದುವೆಯಾಗು, ಈ ಜನ್ಮದಲ್ಲಿ ನನ್ನೊಂದಿಗೆ ನಿನ್ನ ಮದುವೆ ಸಾಧ್ಯವಿಲ್ಲಾ. ಆ ಕಾರಣ ನನಗೂ ನಿನಗೂ ಈಗ ನಡುವೆ ಭೂಮಿ ಆಕಾಶದ ಅಂತರದ ಕಂದರಗಳಿವೆ. ಅದನ್ನು ದಾಟಿ ಬರಲು ಸಾಧ್ಯವಿಲ್ಲಾ. ಆದರೆ ನನ್ನ ಜೀವನ ಬೇರೆ ಯಶಸ್ಸುಗಳಿಗೆ ಕಂಟಕವಾಗಿರುವೆ. ಹೇಳು ನಾನೊಬ್ಬನೇ ತಪ್ಪು ಮಾಡಿದ್ದೇನೆಯೇ? ಹಾಗೆ ಮಾಡಿದರೆ ನಾನು ಕ್ಷಮೆ ಕೇಳಲೂ ಸಿದ್ಧ. ಆದರೆ ನಿನ್ನಲ್ಲಿ ಮೂಡಿರುವ ಮೌಢ್ಯವನ್ನು ನಾನು ಹೇಗೆ ಹೋಗಲಾಡಿಸಲಿ. ನನ್ನನ್ನು ಕ್ರೂರಿಯನ್ನಾಗಿ ಮಾಡಬೇಡ. ನಿನ್ನ ಸೇಡನ್ನು ಬೇರೆ ಅಮಾಯಕ ಹೆಣ್ಣುಗಳ ಮೇಲೆ ಹಾಕಲು ಬಿಡಬೇಡ. ಆದರೆ ನನ್ನ ಮನಸ್ಸಿನಲ್ಲಿ ಒಂದು ಮೊಳಕೆಯನ್ನು ಇಂದು ಚಿಗುರಿಸಿದೆ. ನಾನು ಒಳಗೆ ಬಂದಾಗ ಡೆಸ್ಕ ಮೇಲೆ ಕುಳಿತಿದ್ದ ನೀನು ಕೆಳಗಿಳಿದೆ. ನಾನು ಬಂದೇ ಅಂತಲು ಅಥವಾ ಪ್ರೊಫೆಸರ್ ಬಂದರೂ ಅಂತಲು ನಾನು ಮಾತ್ರ ನನಗಾಗಿ ಅಂತ ತಿಳಿದಿದ್ದೇನೆ. ನಿನ್ನ ಗೆಳತಿಯರಿಗೆ ನನ್ನ ಗೆಳೆಯರು ಏನೇನು ಹೇಳಿರಬಹುದು. ಗಂಡಸಿನ ಸಹಜ ಪ್ರವೃತ್ತಿಯಿಂದ ಇರಬಹುದು. ನೀನು ನನ್ನ ನೋಡದಿದ್ದರೂ ಪರವಾಗಿಲ್ಲಾ, ಪ್ರೀತಿಸುವುದೂ ಬೇಡ. ಆದರೆ ಪ್ರಗತಿಗೇ ಅಡ್ಡಗಾಲು ಹಾಕಬೇಡ, ನಿನ್ನ ನೆನಪಿನ ಬೇಗುದಿಯಲ್ಲಿ ನಾನು ಬೇಯುತ್ತೇನೆ. ಅದು ನನಗೆ ಸಣ್ಣಂದಿನಿಂದಲೇ ರೂಢಿಯಾಗಿದೆ. ಆದರೆ ನೀ ಸುಖವಾಗಿರು. ಕೆಲವೇ ತಿಂಗಳಲ್ಲಿ ಶಾಶ್ವತವಾಗಿ ಅಗಲಲಿದ್ದೇವೆ. ಅಲ್ಲಿಯವರೆ ಗಾದರೂ ನಿನ್ನ ದ್ವೇಷವನ್ನು ಕಡಿಮೆ ಮಾಡು. ನಾನು ನೋಡಿಯಾದರೂ ತೃಪ್ತಿ ಪಡುತ್ತೇನೆ ಇಷ್ಟೇ ನನ್ನ ಕೋರಿಕೆ.

ಶಾಂತನಾಯ್ಕ ಶಿರಗಾನಹಳ್ಳಿ ಕತೆ ಮತ್ತು ನಾಟಕಗಳ ರಚನೆಯಲ್ಲಿ ಸಿದ್ಧಹಸ್ತರಾಗುತ್ತಿದ್ದಾರೆ. ಅವರು ನಗರ ಕೇಂದ್ರಿತ ಬದುಕನ್ನು ಬದಿಗಿಟ್ಟು ಇದುವರೆಗೂ ಜನಸಮುದಾಯಕ್ಕೆ ಸಿಕ್ಕದ ಸಣ್ಣಪುಟ್ಟ ಸಮುದಾಯಗಳ ಬದುಕನ್ನು ಅನಾವರಣ ಮಾಡುವ ದಿಕ್ಕಿನಲ್ಲಿ ತೊಡಗಿದ್ದಾರೆ. ಇಲ್ಲಿರುವ ಕತೆಗಳು ಲಂಬಾಣಿ ಜನಾಂಗದ ವಿವಿಧ ಜೀವನಕ್ರಮಗಳನ್ನು ಬದುಕಿನ ನಂಬಿಕೆಗಳನ್ನು ಆಧುನಿಕ ಸಮಾಜಕ್ಕೆ ಹೊರಳುತ್ತಿರುವ ಬಗೆಗಳನ್ನು ಚಿತ್ರಿಸುತ್ತವೆ. ಈ ಕತೆಗಳ ಅನಾವರಣದಲ್ಲಿ ಕತೆಗಾರ ಶಾಂತನಾಯ್ಕ ಜೀವನ ಪ್ರೀತಿಯ ಸಫಲತೆಯನ್ನೂ ಅದರ ವಿಫಲತೆಯನ್ನೂ ಚಿತ್ರಿಸುತ್ತಿದ್ದಾರೆ. ಈ ಜನಾಂಗದ ಪುಟ್ಟ ಪ್ರಪಂಚದ ವಿಸ್ಮಯಗಳನ್ನು ಕತೆಗಳ ಮೂಲಕ ನಿರೂಪಿಸುತ್ತ ತಾನೊಬ್ಬ ಸೂಕ್ಷ್ಮ ಕಥಾನಿರೂಪಕನೆಂಬುದನ್ನು ಸ್ಥಿರಗೊಳಿಸುತ್ತಿದ್ದಾರೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಸಿವಿಜಿ ಪಬ್ಲಿಕೇಷನ್ಸ್

ISBN 81-89344-89-7

Rs. 90